# ಅಧ್ಯಾಯ-೧೩

# ಸಾಹಿತ್ಯ ಮತ್ತು ಸಂಸ್ಕೃತಿ




ಕರ್ನಾಟಕದ ಸಾಂಸ್ಕೃತಿಕ ಪರಂಪರೆಯು ಶ್ರೀಮಂತವೂ, ವೈವಿಧ್ಯಪೂರ್ಣವೂ ಆಗಿದ್ದು 'ಬಹುಮುಖ ಸಂಸ್ಕೃತಿ' ಎಂದು ಹೆಸರು ಪಡೆದಿದೆ. ಕನ್ನಡ ಸಾಹಿತ್ಯದಲ್ಲಿ ದೊರೆತಿರುವ ಪ್ರಥಮ ಕೃತಿ ಸುಮಾರು ೯ನೇ ಶತಮಾನದ್ದಾಗಿದೆ. ಈ ಆಧುನಿಕ ಕಾಲಮಾನದಲ್ಲಿ ತಮ್ಮ ಸಾಹಿತ್ಯಿಕ ಸೃಜನಶೀಲ ಪ್ರತಿಭೆಗಾಗಿ ಎಂಟು ಜನ ಮಹನೀಯರು ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ. ರಾಜ್ಯದ ಇತರ ಸ್ಥಳೀಯ ಮುಖ್ಯ ಭಾಷೆಗಳಾದ ತುಳು ಮತ್ತು ಕೊಡವ ಭಾಷೆಗಳಲ್ಲಿಯೂ ಸಾಹಿತ್ಯಕ ಚಟುವಟಿಕೆಗಳು ಗಮನಾರ್ಹವಾಗಿವೆ. ಕನ್ನಡ ಪತ್ರಿಕೋದ್ಯಮದ ಚರಿತ್ರೆಯು ಕ್ರಿ.ಶ ೧೮೪೩ರಷ್ಟು ಹಿಂದಿನಿಂದಲೇ ಆರಂಭವಾಗಿ, ಅನೇಕ ಸಾಧನೆಗಳನ್ನು ಮಾಡಲಾಗಿದೆ.

ಕರ್ನಾಟಕವು ವೈವಿಧ್ಯಮಯ ವಿಶಿಷ್ಟ ವ್ಯಕ್ತಿತ್ವಗಳನ್ನು ಚಾರಿತ್ರಿಕವಾಗಿ ಪ್ರಸಿದ್ಧಿಗೊಳಿಸಿದೆ. ಕರ್ನಾಟಕದ ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಈ ನಾಡಿನಲ್ಲಿ ಉಗಮಗೊಂಡು, ಭಾರತದ ಸಂಗೀತಕ್ಷೇತ್ರದ ನಕಾಶೆಯಲ್ಲಿ ಉಜ್ವಲ ಗುರುತನ್ನು ಮೂಡಿಸಿವೆ. ನಾಟಕ, ಸಿನಿಮಾ, ನೃತ್ಯ ಹಾಗೂ ಕಲಾ ಕ್ಷೇತ್ರಗಳಲ್ಲಿಯೂ ಕನ್ನಡಿಗರು ಗಣನೀಯ ಸಾಧನೆ ಮಾಡಿದ್ದಾರೆ. ಯಕ್ಷಗಾನವು ಜಾನಪದ ಕಲೆಯೂ ಹೌದು, ಶಿಷ್ಟ ಕಲೆಯೂ ಹೌದು. ಇದೊಂದು ಉತ್ಕೃಷ್ಟ ಕಲೆಯಾಗಿ ಜನಮನದಲ್ಲಿ ಅರಳುತ್ತಿದೆ. ರಾಜ್ಯದ ಜಾನಪದ ಕಲಾಪರಂಪರೆಯೂ ಕೂಡ ವರ್ಣರಂಜಿತವಾಗಿದೆ. ಇಂತಹ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶಿವರಾಮಕಾರಂತ, ಕುವೆಂಪು, ಡಾ.ರಾಜಕುಮಾರ್, ಮಾಯಾರಾವ್, ಮಲ್ಲಿಕಾರ್ಜುನ್ ಮನ್ಸೂರ್, ಟಿ. ಚೌಡಯ್ಯ, ಕೆ.ಕೆ. ಹೆಬ್ಬಾರ್, ಪಂಡಿತ್ ಭೀಮಸೇನ ಜೋಷಿ, ಗಂಗೂಬಾಯಿ ಹಾನಗಲ್, ಬಿ.ವಿ.ಕಾರಂತ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಮುಂತಾದವರು ದಿಗ್ಗಜಗಳಾಗಿ ಶೋಭಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದ ಸಾಂಸ್ಕೃತಿಕ ಸಾಧನೆಗಳ ಸಮೀಕ್ಷಾ ದರ್ಶನವನ್ನು ನೀಡುವ ಪ್ರಯತ್ನ ಮಾಡಲಾಗಿದೆ.

## ಸಾಹಿತ್ಯ ಕ್ಷೇತ್ರ

### ಕನ್ನಡ ಸಾಹಿತ್ಯ

ಕನ್ನಡವು ದಕ್ಷಿಣ ಭಾರತದ ಪ್ರಮುಖ ಭಾಷೆಗಳಲ್ಲಿ ಒಂದು. ಸಾವಿರಾರು ವರ್ಷಗಳಿಂದ ಈ ಭಾಷೆಯನ್ನು ಜನರು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸುತ್ತಾ ಬಂದಿದ್ದಾರೆ. ಅದರ ಒಂದು ರೂಪವೇ ಸಾಹಿತ್ಯ ರಚನೆ. ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಪ್ರಾಚೀನತೆಯಿದೆ. ನಿರಂತರವಾಗಿ ಹರಿಯುತ್ತಿರುವ ಈ ಸಾಹಿತ್ಯ ವಾಹಿನಿಯನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ೧)ಪಂಪಪೂರ್ವಯುಗ ೨)ಪಂಪಯುಗ ೩) ಬಸವಯುಗ ೪) ಕುಮಾರವ್ಯಾಸಯುಗ ೫) ಆಧುನಿಕ ಯುಗ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸುವುದು ವಾಡಿಕೆ.

### ಪಂಪಪೂರ್ವ ಯುಗ

ಕನ್ನಡ ಸಾಹಿತ್ಯ ಕ್ರಿಸ್ತಶಕದ ಆರಂಭದಿಂದಲೂ ಇದ್ದಿರಬೇಕೆಂದು ಹಲವು ವಿದ್ವಾಂಸರ ಅಭಿಮತ. ಬೌದ್ಧರು ಕನ್ನಡದ ಆದಿಕವಿಗಳೆಂದೂ ಬೌದ್ಧಧರ್ಮದ ನಾಶದೊಂದಿಗೇ ಬೌದ್ಧ ಗ್ರಂಥಗಳೂ ನಾಶವಾಗಿದ್ದಿರ ಬೇಕೆಂದೂ ವಿದ್ವಾಂಸರು ಊಹಿಸಿದ್ದಾರೆ. ಕನ್ನಡ ಭಾಷೆ ಸಾಹಿತ್ಯದ ರೂಪದಲ್ಲಿ ಪ್ರಪ್ರಥಮವಾಗಿ ಕಾಣಿಸಿಕೊಂಡಿರುವುದು ಸದ್ಯಕ್ಕೆ ತಿಳಿದಿರುವಂತೆ ಹಲ್ಮಿಡಿಯ ಶಾಸನದಲ್ಲಿ. ಇದರ ಮಂಗಳ ಶ್ಲೋಕ ಸಂಸ್ಕೃತದಲ್ಲಿದ್ದು, ಉಳಿದುದೆಲ್ಲ ಕನ್ನಡ ಲಿಪಿಯಲ್ಲಿ ಗದ್ಯ ರೂಪದಲ್ಲಿದೆ. ಭಾಷಾ ಶೈಲಿ ಸಂಸ್ಕೃತ ಪ್ರಚುರವಾಗಿ ಪ್ರೌಢವಾಗಿದೆ. ಇದನ್ನು ನೋಡಿದರೆ, ಇದಕ್ಕೂ ಪೂರ್ವದಲ್ಲಿಯೇ ಕನ್ನಡ ಸಾಹಿತ್ಯ ಸಾಕಷ್ಟು ಬೆಳೆದಿರಬೇಕೆಂದೂ ಈ ಶಾಸನ ಹುಟ್ಟುವ ವೇಳೆಗೆ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಗಾಢವಾಗಿದ್ದಿರಬೇಕೆಂದೂ ಊಹಿಸಲು ಅವಕಾಶವಿದೆ.

ಹಾಗೆಯೇ ಪ್ರಾಚೀನಕಾಲದ ಇತರ ಹಲವು ಶಾಸನಗಳೂ ಅತ್ಯಂತ ಕಾವ್ಯಮಯವಾಗಿವೆ. ಸು. ೭ನೆಯ ಶತಮಾನದ ಬಾದಾಮಿಯ ಶಾಸನ ಕಪ್ಪೆಅರಭಟ್ಟ ಎಂಬ ಕಲಿಯ ಶಕ್ತಿ ಸಾಹಸಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಅಚ್ಚಕನ್ನಡ ಛಂದಸ್ಸಾದ ತ್ರಿಪದಿಯಲ್ಲಿರುವ ಈ ಶಾಸನ ಸುಂದರ ಭಾವಗೀತೆಯಂತಿದೆ. ಸುಮಾರು ಇದೇ ಕಾಲದಲ್ಲಿಯೇ ಹುಟ್ಟಿದ ಶ್ರವಣಬೆಳಗೊಳದ ಶಾಸನವೊಂದು ನಂದಿಸೇನನೆಂಬ

ಜೈನಮುನಿಯ ವೈರಾಗ್ಯವನ್ನು ಹೃದಯಂಗಮವಾಗಿ ವರ್ಣಿಸುತ್ತದೆ. ಕವಿಹೃದಯವುಳ್ಳ ಇಂಥ ಶಾಸನಕರ್ತೃಗಳು ಕಾವ್ಯಕರ್ತೃಗಳಾಗಿಯೂ ಇದ್ದಿರಬಹುದು.

ಈಗ ದೊರಕಿರುವ ಕೆಲವು ಕನ್ನಡ ಗ್ರಂಥಗಳಲ್ಲಿ ಹಲವು ಕನ್ನಡ ಕೃತಿಕಾರರ ಪ್ರಸ್ತಾಪ ದೊರಕುತ್ತದೆ. ಅಂಥ ಕೆಲವು ಕೃತಿಕಾರರನ್ನು ೭, ೮, ೯ನೆಯ ಶತಮಾನದವರೆಂದು ತೀರ್ಮಾನಿಸಬಹುದು. ಆದರೆ ಅವರ ಗ್ರಂಥಗಳು ಯಾವುವೂ ದೊರಕಿಲ್ಲ. ಗಂಗರಾಜನಾದ ಸೈಗೊಟ್ಟ ಶಿವಮಾರ ಗಜಾಷ್ಟಕವನ್ನು ಕನ್ನಡದಲ್ಲಿ ಬರೆದಿದ್ದನೆಂದೂ ಅದು ಓವನಿಗೆಯೂ, ಒನಕೆವಾಡೂ ಆಗಿದ್ದು ಜನಪ್ರಿಯವಾಗಿತ್ತೆಂದೂ ತಿಳಿದುಬರುತ್ತದೆ. ಇದು ದಾಖಲೆಗೊಂಡಿರುವ ಮೊಟ್ಟಮೊದಲ ಕನ್ನಡ ಜನಪದ ಕಾವ್ಯ.

ಈಗ ನಮಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಕವಿರಾಜಮಾರ್ಗ ಮೊಟ್ಟಮೊದಲನೆಯದು. ನೃಪತುಂಗನ ಆಸ್ಥಾನಕವಿ ಶ್ರೀವಿಜಯ ಇದರ ಕರ್ತೃ. ಇದು ಕನ್ನಡ ಭಾಷೆ ವ್ಯಾಕರಣ ಅಲಂಕಾರಗಳನ್ನು ನಿರೂಪಿಸುವ ಬಹುಮುಖ್ಯವಾದ ಲಕ್ಷಣ ಗ್ರಂಥವಾಗಿದ್ದು ಕನ್ನಡಿಗರ ಕೈಪಿಡಿಯಂತಿದೆ. ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಇದರ ಕರ್ತೃ ಆಡಿರುವ ನುಡಿಗಳು ಅತ್ಯಮೂಲ್ಯವಾಗಿವೆ. ಕವಿರಾಜಮಾರ್ಗಕಾರ ತನ್ನ ಗ್ರಂಥದಲ್ಲಿ ತನಗಿಂತ ಹಿರಿಯರಾದ ವಿಮಳೋದಯ, ಅಸಗ, ಗುಣವರ್ಮ, ಗುಣನಂದಿ, ನಾಗಾರ್ಜುನ, ಜಯಬಂಧು, ದುರ್ವಿನೀತ ಮುಂತಾದ ಕವಿಗಳನ್ನು ಹೆಸರಿಸಿದ್ದಾನೆ. ಆದರೆ ಅವರ ಕೃತಿಗಳಾವುವೂ ದೊರೆತಿಲ್ಲ. ಇದೇ ಗ್ರಂಥದಲ್ಲಿ ಕನ್ನಡ ಕಾವ್ಯ ಪ್ರಕಾರಗಳಲ್ಲಿ ಉನ್ನತ ಗುಣವುಳ್ಳ ಗದ್ಯಪದ್ಯ ಸಂಮಿಶ್ರಣದ ಪ್ರಕಾರವನ್ನು 'ಗದ್ಯಕಥೆ' ಎಂಬ ಹೆಸರಿನಿಂದ ಪ್ರಾಚೀನ ಆಚಾರ್ಯರು ರಚಿಸಿದ್ದಾರೆ ಎಂದು ಹೇಳಿದೆ. ಅಲ್ಲದೆ ಕನ್ನಡಕ್ಕೇ ವಿಶಿಷ್ಟವಾದ ಚತ್ತಾಣ ಮತ್ತು ಬೆದಂಡೆಗಳಂಥ ಪದ್ಯಕಾವ್ಯಪ್ರಕಾರಗಳಿದ್ದುವೆಂದೂ ಇದರಲ್ಲಿ ಪ್ರಾಚೀನರಾದ ಕವಿಗಳು ಕೃತಿರಚನೆ ಮಾಡಿದ್ದರೆಂದೂ ತಿಳಿಯುತ್ತದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿದಾಗ ಕನ್ನಡ ಸಾಹಿತ್ಯ ಬಹುಶಃ ಕ್ರಿಸ್ತಶಕದ ಆರಂಭದಲ್ಲಿ ಪ್ರಾರಂಭವಾಗಿ ಐದು ಆರು ಶತಮಾನಗಳ ವೇಳೆಗಾಗಲೇ ಸಮೃದ್ಧಿಯಾಗಿ ಬೆಳೆದುಕೊಂಡು ಬಂದಿರಬಹುದೆಂದು ಹೇಳಬಹುದಾಗಿದೆ.

### ಪಂಪಯುಗ

ಕನ್ನಡ ಸಾಹಿತ್ಯ ಪರಂಪರೆಯ ಪ್ರಥಮ ಘಟ್ಟವಿದು. ಪಂಪನಿಂದ ಬಸವಣ್ಣನವರೆಗೆ ಈ ಯುಗದ ವ್ಯಾಪ್ತಿಯಿದೆ. ಕನ್ನಡ ಸಾಹಿತ್ಯ ತಡೆಯಿಲ್ಲದೆ ಹರಿದುಕೊಂಡು ಹೋಗಿರುವುದು ಹತ್ತನೆಯ ಶತಮಾನದಿಂದ ಮುಂದೆ. ಈ ಯುಗದ ಪ್ರಮುಖ ಕೊಡುಗೆಯೆಂದರೆ ಚಂಪೂಕಾವ್ಯಗಳು. ಈ ಯುಗದಲ್ಲಿ ಪಂಪ, ರನ್ನ, ಪೊನ್ನ – ಈ ಮೂವರು ಮಹಾಕಾವ್ಯಗಳನ್ನು ರಚಿಸಿ ಮಹಾಕವಿಗಳು ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ೧೦ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಪಂಪ ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿದ್ದಾನೆ. ಚಾಳುಕ್ಯ ಅರಿಕೇಸರಿಯ ಆಸ್ಥಾನದಲ್ಲಿ ಕವಿಯೂ ಕಲಿಯೂ ಆಗಿದ್ದ ಈತ ಕಾಲದ ದೃಷ್ಟಿಯಿಂದ ಮಾತ್ರವಲ್ಲ, ಯೋಗ್ಯತೆಯ ದೃಷ್ಟಿಯಿಂದಲೂ ಕನ್ನಡದ ಆದಿಕವಿ. ಚಂಪೂ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ಅದು ಸುಮಾರು ಎರಡು ಮೂರು ಶತಮಾನಗಳ ಕಾಲ ಪ್ರಭಾವೀ ಸಾಹಿತ್ಯ ಮಾಧ್ಯಮವಾಗಿ ಬಳಕೆಯಾಗುವಂತೆ ಮಾಡಿದವನು ಈತ. ಚಂಪೂ ಪರಂಪರೆಯಲ್ಲಿ ಲೌಕಿಕ ಧಾರ್ಮಿಕ ಎಂಬ ಎರಡು ರೀತಿಯ ಕಾವ್ಯಮಾರ್ಗಗಳಿಗೆ ಪಂಪನೇ ಮೊದಲಿಗನೆನ್ನಬಹುದು. ಈತನ ಎರಡು ಕಾವ್ಯಗಳಾದ ವಿಕ್ರಮಾರ್ಜುನವಿಜಯ ಹಾಗೂ ಆದಿಪುರಾಣಗಳಿಗೆ ಕ್ರಮವಾಗಿ ವ್ಯಾಸರ ಮಹಾಭಾರತ ಮತ್ತು ಜಿನಸೇನಾಚಾರ್ಯರ ಪೂರ್ವಪುರಾಣಗಳು ಆಕರ ಗ್ರಂಥಗಳು.

ಪಂಪನಂತೆಯೇ ಜೈನಧರ್ಮಾನುಯಾಯಿಗಳಾದ ಮತ್ತಿಬ್ಬರು ಕವಿಗಳು ಪೊನ್ನ ಮತ್ತು ರನ್ನ. ಆಸ್ಥಾನಕವಿಗಳಾದ ಇವರಿಬ್ಬರೂ. ಪಂಪನಂತೆಯೇ ತಮ್ಮ ಕಾವ್ಯಗಳಲ್ಲಿ ಒಂದನ್ನು ಧರ್ಮಕ್ಕೂ ಮತ್ತೊಂದನ್ನು ಲೌಕಿಕಕ್ಕೂ ಮೀಸಲು ಮಾಡಿದ್ದಾರೆ. ಲೌಕಿಕ ಕಾವ್ಯಗಳಲ್ಲಿ ಆಯಾ ಕವಿಗಳ ಪೋಷಕರು ಪುರಾಣಪುರುಷರ ವೇಷವನ್ನು ಧರಿಸಿ, ಆಯಾ ಕಾವ್ಯಗಳ ನಾಯಕರಾಗಿ ಮೆರೆದಿದ್ದಾರೆ. ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿಕೃಷ್ಣನ ಆಸ್ಥಾನಕವಿಯಾಗಿದ್ದ, ಕವಿಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದ ಪೊನ್ನನ ಶಾಂತಿಪುರಾಣ ಜೈನ ಧಾರ್ಮಿಕ ಗ್ರಂಥ. ಈತನ ಭುವನೈಕ ರಾಮಾಭ್ಯುದಯ ಪೂರ್ಣವಾಗಿ ಲಭ್ಯವಿಲ್ಲ. ರನ್ನನೂ ಪಂಪನ ಮೇಲ್ಪಂಕ್ತಿಯಲ್ಲಿ ಕಾವ್ಯರಚನೆ ಮಾಡಿದವನಾದರೂ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಈತನ ಸಾಹಸಭೀಮವಿಜಯಕ್ಕೆ (ಗದಾಯುದ್ಧ) ಪಂಪನ ಕೃತಿಯೇ ಪ್ರಮುಖ ಆಕರವಾದರೂ ರನ್ನನ ವ್ಯಕ್ತಿತ್ವದ ಅಚ್ಚು ಈ ಕಾವ್ಯದಲ್ಲಿ ಮೂಡಿಬಂದಿದೆ. 'ಅಜಿತ ಪುರಾಣ' ಈತ ರಚಿಸಿದ ಜೈನ ಧಾರ್ಮಿಕ ಗ್ರಂಥ.

'ವಡ್ಡಾರಾಧನೆ' ಇದೇ ಕಾಲದಲ್ಲಿ ರಚಿತವಾದ ಒಂದು ವಿಶಿಷ್ಟ ಕೃತಿ. ಶಿವಕೋಟ್ಯಾಚಾರ್ಯ ಇದರ ಕರ್ತೃ. ಗದ್ಯದಲ್ಲಿರುವ ಈ ಕೃತಿ ಈಗ್ಗೆ ಸಹಸ್ರ ವರ್ಷಗಳ ಹಿಂದಿನ ಭಾಷಾಸ್ವರೂಪಕ್ಕೂ ಜನಜೀವನಕ್ಕೂ ಕನ್ನಡಿ ಹಿಡಿಯುತ್ತದೆ. ಸರಳ ಸುಂದರ ಶೈಲಿ, ಪ್ರಾಸಾದಿಕ ಗುಣ, ಕಥನಕಲೆ – ಇವು ಈ ಕೃತಿಯ ವೈಶಿಷ್ಟ್ಯಗಳು. ಜೈನ ತತ್ವಗಳ ವಿಶೇಷತೆಗಳನ್ನು ವಿವರಿಸುವ ಹತ್ತೊಂಬತ್ತು ಕಥೆಗಳನ್ನು ಒಳಗೊಂಡ ಈ ಕೃತಿ ಕನ್ನಡ ಗದ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ಈ ಕಾಲದ ಮತ್ತೊಬ್ಬ ಹಿರಿಯ ಕವಿ ಒಂದನೆಯ ನಾಗವರ್ಮ. ಕರ್ನಾಟಕ ಕಾದಂಬರಿ, ಛಂದೋಂಬುಧಿಗಳು ಈತನ ಗ್ರಂಥಗಳು. ಮೊದಲನೆಯದು ಬಾಣಭಟ್ಟನ ಸಂಸ್ಕೃತ ಕೃತಿಯ ಅನುವಾದವಾದರೆ ಎರಡನೆಯದು ಕನ್ನಡದ ಮೊಟ್ಟ ಮೊದಲ ಛಂದೋಗ್ರಂಥ. ಈ ಕಾಲಘಟ್ಟದಲ್ಲಿ ಕಾವ್ಯಗಳ ಜೊತೆಯಲ್ಲಿ ಹಲವು ಶಾಸ್ತ್ರ ಗ್ರಂಥಗಳೂ ಕಾಣಿಸಿಕೊಂಡವು. ಚಾವುಂಡರಾಯನ ಲೋಕೋಪಕಾರ ಇಂಥ ಒಂದು ಗ್ರಂಥ. ಜ್ಯೋತಿಷ್ಯದಿಂದ ವಿಷವೈದ್ಯದವರೆಗೆ ಹಲವಾರು ವಿಷಯಗಳನ್ನು ಈ ಗ್ರಂಥ ಒಳಗೊಂಡಿದೆ. ಚಂದ್ರರಾಜನ ಮದನತಿಲಕ ಎಂಬ ಕಾಮಶಾಸ್ತ್ರವೂ ಶ್ರೀಧರಾಚಾರ್ಯನ ಜಾತಕತಿಲಕವೆಂಬ ಜ್ಯೋತಿಷ್ಯ ಗ್ರಂಥವೂ ಇದೇ ಜಾತಿಗೆ ಸೇರಿದ ಶಾಸ್ತ್ರಗ್ರಂಥಗಳು. ನಾಗವರ್ಮಾಚಾರ್ಯನ ಚಂದ್ರಚೂಡಾಮಣಿಶತಕ ಕನ್ನಡದ ಮೊಟ್ಟಮೊದಲ ಶತಕ ಗ್ರಂಥವಾಗಿದೆ. ಮೇಲಿನ ಕವಿಗಳಲ್ಲಿ ಶ್ರೀಧರಾಚಾರ್ಯನನ್ನು (ಜೈನಕವಿ) ಬಿಟ್ಟರೆ ಉಳಿದವರೆಲ್ಲ ವೈದಿಕ ಕವಿಗಳು. ಒಂದನೆಯ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಯಾಗಿದ್ದ ದುರ್ಗಸಿಂಹ ಪಂಚತಂತ್ರವೆಂಬ ಗದ್ಯಕೃತಿಯನ್ನು ಬರೆದಿದ್ದಾನೆ.

ಇದರ ಕಥೆಗಳು ಇಂದಿನ ಮಕ್ಕಳಿಗೂ ಅಚ್ಚುಮೆಚ್ಚು. ಹೊಯ್ಸಳ ಒಂದನೆಯ ಉಲ್ಲಾಳನ ಆಸ್ಥಾನ ಕವಿಯಾಗಿದ್ದ ನಾಗಚಂದ್ರ ತನ್ನನ್ನು ತಾನು 'ಅಭಿನವಪಂಪ' ನೆಂದು ಕರೆದುಕೊಂಡಿದ್ದಾನೆ. ಈತ ಮಲ್ಲಿನಾಥಪುರಾಣ ಹಾಗೂ ರಾಮಚಂದ್ರಚರಿತಪುರಾಣಗಳೆಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ಮೊದಲನೆಯದು ಜೈನರ ೧೯ನೆಯ ತೀರ್ಥಂಕರರ ಕಥೆಯಾದರೆ ಎರಡನೆಯದು ಜೈನ ಪರಂಪರೆಯ ರಾಮಾಯಣದ ಕಥೆ. ವೈದಿಕ ದೃಷ್ಟಿಗಿಂತ ಭಿನ್ನವಾಗಿ ಇಲ್ಲಿ ಚಿತ್ರಿಸಲಾಗಿರುವ ರಾವಣನ ವ್ಯಕ್ತಿತ್ವ ಆಕರ್ಷಕವಾಗಿದೆ.

ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ರಾಜಾದಿತ್ಯನ ವ್ಯವಹಾರಗಣಿತ, ಕೀರ್ತಿವರ್ಮನ ಗೋವೈದ್ಯ, ಜಗದ್ದಳ ಸೋಮನಾಥನ ಕಲ್ಯಾಣಕಾರಕ, ಉದಯಾದಿತ್ಯನ ಉದಯಾದಿತ್ಯಾಲಂಕಾರ, ಎರಡನೆಯ ನಾಗವರ್ಮನ ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ವಸ್ತುಕೋಶ ಮೊದಲಾದ ಗಮನಾರ್ಹ ಶಾಸ್ತ್ರಗ್ರಂಥಗಳು ರಚಿತವಾದವು.

ನಂತರದ ಕಾಲದಲ್ಲಿ ಕಂಡುಬರುವ ನಯಸೇನ, ಬ್ರಹ್ಮಶಿವ ಮೊದಲಾದ ಜೈನಕವಿಗಳು ಸಂಸ್ಕೃತ ಭೂಯಿಷ್ಠವಾದ ಮಾರ್ಗೀ ಶೈಲಿಯನ್ನು ಬಿಟ್ಟು ಸುಲಲಿತ ದೇಶೀ ಶೈಲಿಯಲ್ಲಿ ಕೃತಿರಚನೆ ಮಾಡತೊಡಗಿದರು. ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯ ಪರೀಕ್ಷೆ ಈ ಮಾದರಿಯಲ್ಲಿ ರಚಿತವಾದ ಮುಖ್ಯ ಗ್ರಂಥಗಳು. ಇವೆರಡರಲ್ಲಿಯೂ ಆ ಕಾಲದ ಜನಜೀವನದ ಚಿತ್ರಣ ಪ್ರಭಾವಶಾಲಿಯಾಗಿ ಮೂಡಿಬಂದಿದೆ.

**ಬಸವಯುಗ:**

ಹನ್ನೆರಡನೇ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕವು ಅತ್ಯಂತ ದೊಡ್ಡದಾದ ಒಂದು ಸಮಾಜೋ– ಧಾರ್ಮಿಕ ಚಳುವಳಿಗೆ ಸಾಕ್ಷಿಯಾಯಿತು. ಅದೇ ಶರಣ ಚಳುವಳಿ ಅಥವಾ ವೀರಶೈವ ಚಳುವಳಿ. ಜೈನಧರ್ಮದ ಅವನತಿ, ವೈದಿಕ ಧರ್ಮದ ಹಲವಾರು ಪಂಥಗಳಲ್ಲಿದ್ದ ಗೊಂದಲಗಳು, ಸಮಾಜದಲ್ಲಿದ್ದ ಎಲ್ಲ ರೀತಿಯ ತಾರತಮ್ಯ–ಮುಂತಾದವು ಈ ಚಳುವಳಿಯ ಹುಟ್ಟಿಗೆ ಕಾರಣವಾಯಿತು.

ಸರ್ವಸಮತೆಯನ್ನು ಸಾರಿದ ವೀರಶೈವಧರ್ಮ ಎಲ್ಲ ಜಾತಿ, ಮತ, ಪಂಥದ ಜನರಿಗೂ ತನ್ನ ಧರ್ಮಧ್ವಜದ ಅಡಿಯಲ್ಲಿ ಎಡೆಯಿತ್ತಿತು. ಗಂಡು ಹೆಣ್ಣುಗಳೆಂಬ ಭೇದಭಾವವಿಲ್ಲದೆ ಎಲ್ಲರೂ ಸತ್ಯ ಸಾಕ್ಷಾತ್ಕಾರಕ್ಕೆ ಅವಕಾಶ ಪಡೆದರು. ಬ್ರಾಹ್ಮಣನಿಂದ ಶೂದ್ರನವರೆಗೆ ಎಲ್ಲರೂ ಅನುಭಾವಿಗಳಾಗಿ ತಮಗೆ ಸ್ಫುರಿಸಿದುದನ್ನು ಅಭಿವ್ಯಕ್ತಿಸಿದರು.'ಆನು ಒಲಿದಂತೆ ಹಾಡುವೆ' ಎಂಬುದು ಇವರೆಲ್ಲರ ಬೀಜಮಂತ್ರವಾಯಿತು. ಛಂದಸ್ಸು, ಪ್ರಾಸ, ಯಾವುದರ ಹಂಗೂ ಇಲ್ಲದ 'ಕಾವ್ಯಾತ್ಮಕವಾದ ಗದ್ಯ' ವೆನಿಸಿದ ವಚನಗಳು ಇವರ ಅಭಿವ್ಯಕ್ತಿಯ ಮಾಧ್ಯಮವಾಯಿತು. ನೂರಾರುಜನ ವಚನಕಾರರು ಏಕಕಾಲದಲ್ಲಿ ಕಾಣಿಸಿಕೊಂಡರು. ಇವರು ಕಾಯಕಕ್ಕೆ ಮನ್ನಣೆಯನ್ನು ಕೊಟ್ಟರೇ ಹೊರತು ಜಾತಿಗಲ್ಲ, ಐಶ್ವರ್ಯಕ್ಕಲ್ಲ, ಅಧಿಕಾರಕ್ಕಲ್ಲ. ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಕೊಂಡಗುಳಿ ಕೇಶಿರಾಜ, ದೇವರದಾಸಿಮಯ್ಯ, ಜೇಡರದಾಸಿಮಯ್ಯ, ಸಕಲೇಶ ಮಾದರಸ ಮುಂತಾದವರು ಆರಂಭಿಕ ಕಾಲದ ವಚನಕಾರರೆಂದು ವಿದ್ವಾಂಸರ ಊಹೆ.

ವಚನಕಾರರ ಸಾಲಿನಲ್ಲಿ ಪ್ರಭುದೇವ ಅಥವಾ ಅಲ್ಲಮಪ್ರಭು ಅತ್ಯುನ್ನತ ಸ್ಥಾನವನ್ನು ಗಳಿಸಿದ್ದಾನೆ. ಈತನ ನುಡಿಗಳು ಪ್ರಾಮಾಣಿಕವಾದುವು, ಸತ್ಯನಿಷ್ಠವಾದುವು ನಿರ್ದಾಕ್ಷಿಣ್ಯವಾದವು. ಬಸವಣ್ಣ ಈ ಯುಗದ ಮಹತ್ತ್ವದ ವಚನಕಾರ. ಈತ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯದ ಕ್ರಾಂತಿಯ ನೇತಾರನೂ ಹೌದು. ಸಮಾಜದ ಕೊಳೆಕಸಗಳನ್ನು, ಅಂಧಕಾರ ಅಜ್ಞಾನಗಳನ್ನು, ಒರಕೋರೆಗಳನ್ನು ಕಂಡು ಬಸವಣ್ಣ ಕನಿಕರಯುಕ್ತವಾದ ರೋಷ ಉಕ್ಕಿ ಅವುಗಳನ್ನು ಖಂಡಿಸಿದ್ದಾನೆ. ಈತನ ಬೋಧನಾವಿಧಾನ ಸುಂದರವಾದ ಸಾಹಿತ್ಯದ ರೂಪದಲ್ಲಿದೆ.

ವೀರಶೈವ ಧರ್ಮದ ಉದಾರ ತತ್ತ್ವದಿಂದ ಮೂಡಿಬಂದ ಹಲವು ವಚನಕಾರ್ತಿಯರಲ್ಲಿ ಮಹಾದೇವಿಯಕ್ಕ ಅಗ್ರಗಣ್ಯಳು. ಬಸವಣ್ಣನ ವಚನಗಳಂತೆ ಈಕೆಯ ವಚನಗಳೂ ಸತ್ತ್ವಯುಕ್ತವಾಗಿ ಸಾಹಿತ್ಯಮಯವಾಗಿ, ಭಾವಗೀತೆಯ ಮಾಧುರ್ಯದಿಂದ ತುಂಬಿವೆ. ಮುಕ್ತಾಯಕ್ಕ, ಮಹಾದೇವಿಯಮ್ಮ, ಲಕ್ಕಮ್ಮ ಮೊದಲಾದ ವಚನಕಾರ್ತಿಯರ ಹೆಸರುಗಳೂ ಇಲ್ಲಿ ಸ್ಮರಣಾರ್ಹವಾದುವು.

ಚೆನ್ನಬಸವಣ್ಣ, ಆದಯ್ಯ, ಹಡಪದ, ಅಪ್ಪಣ, ಮಡಿವಾಳ ಮಾಚಯ್ಯ, ಸೊಡ್ಡಳಬಾಚರಸ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಮೇದರ ಕೇತಯ್ಯ, ಕೋಲ ಶಾಂತಯ್ಯ ಮೊದಲಾದ ಶರಣರು ತಮ್ಮ ವಚನ ರಚನೆಯಿಂದ ಕನ್ನಡದ ಆಧ್ಯಾತ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಮುಂದಿನ ಕಾಲಘಟ್ಟಗಳಲ್ಲಿಯೂ ಈ ವಚನ ಪರಂಪರೆಯು ಮುಂದುವರೆದಿರುವುದನ್ನು ನಾವು ಕಾಣಬಹುದು.

ಜಡ್ಡುಗಟ್ಟಿ ಹೋಗಿದ್ದ ಸಾಂಪ್ರದಾಯಿಕತೆಯ ಚೌಕಟ್ಟನ್ನು ಧಿಕ್ಕರಿಸಿ ಭಾವ, ಭಾಷೆ, ವಸ್ತು, ರೀತಿಗಳಲ್ಲಿ ಹಿಂದಿನ ಕಾವ್ಯಗಳಿಂದ ಭಿನ್ನವಾಗಿ ಸರ್ವತಂತ್ರ ಸ್ವತಂತ್ರವಾದ ಚಿರನೂತನತೆಯನ್ನು ಮೆರೆದು ಅದ್ಭುತ ಕ್ರಾಂತಿಯೊಂದನ್ನು ನಡೆಸಿ ಕನ್ನಡ ಸಾಹಿತ್ಯದಲ್ಲಿ ಹೊಸ ಸಂಚಲನವನ್ನು ಮೂಡಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾ ಕಲ್ಯಾಣ, ಶಿವಶರಣರ ರಗಳೆಗಳು ಇವು ಈತನ ಕಾವ್ಯಗಳು.

ಹರಿಹರ ಬಳಸಿದ ರಗಳೆಯ ಛಂದಸ್ಸು ಒಂದು ರೀತಿಯಲ್ಲಿ ಅಚ್ಚ ಕನ್ನಡದ್ದು. ಸಾಹಿತ್ಯದಲ್ಲಿ ಕ್ವಚಿತ್ತಾಗಿ ಬಳಕೆಯಲ್ಲಿದ್ದ ಆ ಛಂದಸ್ಸನ್ನು ಸಮಗ್ರ ಗ್ರಂಥರಚನೆಗೆ ಬಳಸಿಕೊಂಡ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ಸೋದರಳಿಯನಾದ ರಾಘವಾಂಕ ಮತ್ತೊಂದು ಶುದ್ಧ ದೇಶೀ ಛಂದಸ್ಸಾದ ಷಟ್ಪದಿಯನ್ನು ಕಾವ್ಯ ರಚನೆಗೆ ಬಳಸಿದ ಮೊದಲಿಗ. ವಾರ್ಧಕ ಷಟ್ಪದಿಯಲ್ಲಿ ಈತ ರಚಿಸಿದ 'ಹರಿಶ್ಚಂದ್ರ ಕಾವ್ಯ' ಒಂದು ಉತ್ಕೃಷ್ಟ ಕೃತಿ.

ಹರಿಹರ ದೇಶೀಶೈಲಿಯ ಹೊಸ ಹೆದ್ದಾರಿಯೊಂದನ್ನು ನಿರ್ಮಿಸುತ್ತಿರುವಾಗಲೇ ಹೆಚ್ಚು ಕಡಿಮೆ ಆತನ ಸಮಕಾಲೀನರೆನಿಸಿದ ನೇಮಿಚಂದ್ರ (ಲೀಲಾವತಿ, ನೇಮಿನಾಥಪುರಾಣ), ರುದ್ರಭಟ್ಟ (ಜಗನ್ನಾಥ ವಿಜಯ), ಅಗ್ಗಳ (ಚಂದ್ರಪ್ರಭಾ ಪುರಾಣ), ಆಚಣ್ಣ (ವರ್ಧಮಾನ ಪುರಾಣ), ಕವಿಕಾಮ (ಶೃಂಗಾರ ರತ್ನಾಕರ), ಬಂಧುವರ್ಮ (ಹರಿವಂಶಾಭ್ಯುದಯ, ಜೀವಸಂಬೋಧನೆ) ಮೊದಲಾದ ಕವಿಗಳು ಚಂಪೂ ಸಂಪ್ರದಾಯವನ್ನು ಮುಂದುವರೆಸುತ್ತಿದ್ದರು.

ಹದಿಮೂರನೇ ಶತಮಾನದ ಕವಿಗಳಲ್ಲಿ ಜನ್ನ ಅಗ್ರಗಣ್ಯನಾದವನು. ಈತನ ಅನಂತನಾಥಪುರಾಣ ಜೈನ ಪುರಾಣ ಪರಂಪರೆಯದು. ಇವನ ಮತ್ತೊಂದು ಕಾವ್ಯವಾದ ಯಶೋಧರ ಚರಿತೆ ತನ್ನ ಮನೋವೈಜ್ಞಾನಿಕ ಅಂಶಗಳಿಂದ ಇಂದಿಗೂ ಅಧ್ಯಯನ ಯೋಗ್ಯವಾಗಿದೆ. ಆಂಡಯ್ಯನ ಕಬ್ಬಿಗರಕಾವ ಸಂಸ್ಕೃತ ಪದಗಳನ್ನು ಬಳಸದ ಅಚ್ಚಗನ್ನಡದ ಕೃತಿ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ ಹಾಗೂ ಕೇಶಿರಾಜನ ಶಬ್ಧಮಣಿದರ್ಪಣಗಳು ಉಲ್ಲೇಖಾರ್ಹ ಕೃತಿಗಳು.

### ಕುಮಾರವ್ಯಾಸ ಯುಗ

೧೫ನೆಯ ಶತಮಾನದಿಂದ ೧೯ನೆಯ ಶತಮಾನದ ಆರಂಭದವರೆಗೆ ಅಂದರೆ ಆಧುನಿಕ ಯುಗದ ಆರಂಭಕಾಲದವರೆಗೆ ಈ ಯುಗದ ವ್ಯಾಪ್ತಿಯಿದೆ. ಈ ಯುಗದಲ್ಲಿ ಎಲ್ಲ ಧರ್ಮದ ಕವಿಗಳೂ ಕಾಣಿಸಿಕೊಂಡಿರುವುದು ಇನ್ನೊಂದು ವೈಶಿಷ್ಟ್ಯ. ಹಾಗೆಯೇ ಷಟ್ಪದಿ, ಸಾಂಗತ್ಯ, ತ್ರಿಪದಿ – ಈ ಎಲ್ಲ ಬಗೆಯ ಛಂದಸ್ಸೂ ಬಳಕೆಯಾಗಿದೆ.

ಹದಿನೈದನೇ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡ ಕುಮಾರವ್ಯಾಸನು ಮಹಾಕವಿ ಎಂಬ ಹೆಸರಿಗೆ ಪಾತ್ರನಾದವನು. ಗದಗಿನವನಾದ ಈತನ ನಿಜವಾದ ಹೆಸರು ನಾರಣಪ್ಪನೆಂದು. ಈತನಿಂದ ಮುಂದೆ ಆಧುನಿಕ ಕನ್ನಡ ಸಾಹಿತ್ಯ ಉದಿಸುವವರೆಗೆ ಬಂದ ಎಲ್ಲ ಕವಿಗಳೂ ಈತನ ಪ್ರಭಾವಕ್ಕೆ ಒಳಗಾಗಿದ್ದಾರೆ. ಸಂಸ್ಕೃತ ಮಹಾಭಾರತವನ್ನು ಸಂಗ್ರಹಿಸಿ ಅದರ ಮೊದಲ ಹತ್ತು ಪರ್ವಗಳನ್ನು 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಹೆಸರಿನಿಂದ ಭಾಮಿನಿ ಷಟ್ಪದಿಯ ರೂಪದಲ್ಲಿ ಕನ್ನಡಿಸಿದ್ದಾನೆ. ಇವನು ಮಹಾಭಾರತದ ಕಥೆಯನ್ನು ಹೇಳಹೊರಟಿದ್ದರೂ ತನ್ನ ಕಾವ್ಯ ಕೃಷ್ಣ ಕಥೆ ಎಂದಿದ್ದಾನೆ. ಇವರ ಭಾಷಾಶೈಲಿಗಳು ಅದ್ವಿತೀಯವಾದುವು ಮತ್ತು ಅನನುಕರಣೀಯವಾದುವು. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಕೀರ್ತಿಗೆ ಈತ ಪಾತ್ರನಾಗಿದ್ದಾನೆ. 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂದು ಕುವೆಂಪುರವರು ಮನದುಂಬಿ ಹಾಡುವಂತೆ ಮಾಡಿದ ಮಹಾಕವಿಯೀತ. ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ, ಚಾಮರಸನ ಪ್ರಭುಲಿಂಗ ಲೀಲೆ, ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಷಡಕ್ಷರ ದೇವನ ರಾಜಶೇಖರವಿಳಾಸ, ತ್ರಿಪದಿಗಳ ಮೂಲಕ ಸಮಾಜ ಸುಧಾರಣೆಗೆ ಯತ್ನಿಸಿದ ಸರ್ವಜ್ಞನ ವಚನಗಳು ಮುಂತಾದವು ಈ ಯುಗದ ಪ್ರಮುಖ ವೀರಶೈವ ಪರಂಪರೆಯ ಕೃತಿಗಳು. ದೇಪರಾಜನ ಸೊಬಗಿನಸೋನೆ ಕನ್ನಡದ ಮೊತ್ತ ಮೊದಲ ಸಾಂಗತ್ಯ ಕೃತಿ.

ಈ ಯುಗದಲ್ಲಿ ಕಾಣಿಸಿಕೊಂಡ ಒಂದು ಮಹತ್ತರವಾದ ಭಕ್ತ ಪಂಥವೆಂದರೆ ದಾಸ ಪಂಥ. ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಮಧ್ವಾಚಾರ್ಯರಿಂದ ಪ್ರೇರಣೆಗೊಂಡ ಈ ದಾಸಪಂಥವು ಹದಿನೈದನೆಯ ಶತಮಾನದಲ್ಲಿ ಹಬ್ಬಿ ಹರಡಿತು. ಅದನ್ನು ಆರಂಭಿಸಿದ ಕೀರ್ತಿ ಶ್ರೀಪಾದರಾಜರದು. ಇವರು ಕನ್ನಡ ಗೀತೆಗಳಿಗೆ ಆಧ್ಯಾತ್ಮಿಕ ತತ್ತ್ವಗಳ ಸ್ಥಾನಮಾನಗಳನ್ನು ಕಲ್ಪಿಸಿದರು. ಇವರ ಶಿಷ್ಯರಾದ ವ್ಯಾಸರಾಯರು ಮಠದ ಸ್ವಾಮಿಗಳು ಹಾಗು ರಾಜಗುರುವಾಗಿದ್ದು ಅನೇಕ ಸಂಸ್ಕೃತ ಗ್ರಂಥಗಳನ್ನೂ ನೂರಾರು ಕನ್ನಡ ಕೀರ್ತನೆಗಳನ್ನೂ ರಚಿಸಿದ್ದಾರೆ. ೧೬ನೆಯ ಶತಮಾನದಲ್ಲಿ ವ್ಯಾಸರಾಯರ ನೇತೃತ್ವದಲ್ಲಿ ಪುರಂದರದಾಸರು, ಕನಕದಾಸರು, ವಾದಿರಾಜರು ಮೊದಲಾದವರು ದಾಸವಾಙ್ಮಯವನ್ನು ಉಳಿಸಿ ಬೆಳೆಸಿದರು. ಪುರಂದರದಾಸ ಕನಕದಾಸರಂತೂ ದಾಸವಾಙ್ಮಯದಲ್ಲಿ ಅದ್ವಿತೀಯರಾಗಿ ನಿಂತರು. ಪುರಂದರದಾಸರು ಸಂಗೀತಶಾಸ್ತ್ರಕ್ಕೆ ನೀಡಿರುವ ಕೊಡುಗೆ ಅಸಾಮಾನ್ಯವಾದುದು. ಪಿಳ್ಳಾರಿಗೀತೆಗಳೆಂದು ಪ್ರಸಿದ್ಧವಾಗಿರುವ ಕೀರ್ತನೆಗಳು ಇವರವೇ. ಸಂಗೀತಕ್ಕೆ ಭಕ್ತಿಯುಕ್ತವಾದ ಸಾಹಿತ್ಯವನ್ನು ಒದಗಿಸಿದುದಲ್ಲದೆ 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ.

ಇವರ ಸಮಕಾಲೀನರೇ ಆಗಿದ್ದ ಕನಕದಾಸರು ಹಲವು ಕೀರ್ತನೆಗಳನ್ನು ಮಾತ್ರವೇ ಅಲ್ಲದೆ, ಮೋಹನ ತರಂಗಿಣಿ, ರಾಮಧಾನ್ಯ ಚರಿತ್ರೆ, ನಳಚರಿತ್ರೆ, ಹರಿಭಕ್ತಿಸಾರ ಎಂಬ ಕಾವ್ಯಗಳನ್ನು ರಚಿಸಿದ್ದಾರೆ. ವಾದಿರಾಜರು ಹಯವದನ ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿರುವರಲ್ಲದೆ ವೈಕುಂಠವರ್ಣನೆ, ಸ್ವಪ್ನಗದ್ಯ, ಲಕ್ಷ್ಮಿಯ ಶೋಭಾನೆ, ಭಾರತ ತಾತ್ಪರ್ಯನಿರ್ಣಯ ಟೀಕೆ ಮೊದಲಾದ ಗ್ರಂಥಗಳನ್ನೂ ರಚಿಸಿದ್ದಾರೆ. ಇವರ ಸಮಕಾಲೀನರಾದ ವೈಕುಂಠದಾಸರು ವೈಕುಂಠಕೇಶವ ಎಂಬ ಅಂಕಿತದಿಂದ ಹಲವು ಹಾಡುಗಳನ್ನು ಬರೆದಿದ್ದಾರೆ. ಮಂತ್ರಾಲಯದ ರಾಘವೇಂದ್ರತೀರ್ಥರೂ, ಪ್ರಸನ್ನ ವೆಂಕಟದಾಸ, ವಿಜಯದಾಸ, ಗೋಪಾಲದಾಸ ಮೊದಲಾದವರೂ ದಾಸಸಾಹಿತ್ಯದ ಹೊಳೆ ತಡೆಯಿಲ್ಲದೆ ಹರಿದುಕೊಂಡು ಹೋಗಲು ಸಹಾಯಕರಾದರು. ಈ ಹರಿದಾಸರ ಸಾಲಿನಲ್ಲಿ ಕಾಣಬರುವ ಮತ್ತೊಬ್ಬರ ಹೆಸರೆಂದರೆ ಜಗನ್ನಾಥದಾಸರದು. ಇವರು ಕೀರ್ತನೆಗಳನ್ನಲ್ಲದೆ ಹರಿಕಥಾಮೃತಸಾರವೆಂಬ ಷಟ್ಪದಿ ಗ್ರಂಥವನ್ನು ಬರೆದಿದ್ದಾರೆ. ಹರಿದಾಸ ಕೀರ್ತನೆಯ ರಚನೆ ಅಂದಿನಿಂದ ಇಂದಿನವರೆಗೆ ಬಂದು ಇಂದು ಕೂಡ ತಡೆಯಿಲ್ಲದೆ ಹರಿದುಕೊಂಡು ಹೋಗುತ್ತಿದೆ. ಪ್ರಸನ್ನ ವೆಂಕಟದಾಸರು, ಪ್ರಾಣೇಶವಿಠಲರು, ಗುರುಶ್ರೀಶ ವಿಠಲರು, ಶ್ರೀದವಿಠಲರು, ಹರಪನಹಳ್ಳಿ ಭೀಮವ್ವ, ಗುರುಜಗನ್ನಾಥ ವಿಠಲರು, ತಂದೆ ವೆಂಕಟೇಶ ವಿಠಲರು, ಅಂಬಾಬಾಯಿ ಮುಂತಾದ ಸುಮಾರು ೩೫೦ ಮಂದಿ ಹರಿದಾಸರ ರಚನೆಗಳು ಸದ್ಯಕ್ಕೆ ಲಭ್ಯವಿದೆ.

ಕುಮಾರವ್ಯಾಸ ಯುಗದ ವೈದಿಕ ಕವಿಗಳಲ್ಲಿ ಕುಮಾರವ್ಯಾಸನನ್ನು ಬಿಟ್ಟರೆ ನಮಗೆ ಕಾಣಬರುವ ಪ್ರಮುಖ ಕವಿ ಕುಮಾರವಾಲ್ಮೀಕಿಯೊಬ್ಬನೆ. ಈತ ರಾಮಾಯಣ ಕಥೆಯನ್ನು ಸರಳವಾದ ಭಾಷೆಯಲ್ಲಿ ನಿರೂಪಿಸಿದ್ದಾನೆ. ವಿಜಯನಗರದ ಕೃಷ್ಣದೇವರಾಯನ ಆಶ್ರಯದಲ್ಲಿದ್ದ ತಿಮ್ಮಣ್ಣಕವಿ ಕುಮಾರವ್ಯಾಸ ಬರೆಯದೇ ಬಿಟ್ಟ ವ್ಯಾಸಭಾರತದ ಭಾಗವನ್ನು ಕೃಷ್ಣರಾಯ ಭಾರತ ಕಥಾಮಂಜರೀ ಎಂಬ ಹೆಸರಿನಿಂದ ಬರೆದಿದ್ದಾನೆ.

ಷಟ್ಪದಿ ಕಾವ್ಯಗಳಲ್ಲಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಒಂದು ಪ್ರಮುಖ ಸ್ಥಾನ ಸಂದಿದೆ. ಈತ ಸಂಸ್ಕೃತದ ಜೈಮಿನಿ ಭಾರತದ ಕಥೆಯನ್ನು ಕನ್ನಡದಲ್ಲಿ, ವಾರ್ಧಕ ಷಟ್ಪದಿಯಲ್ಲಿ ಸುಂದರವಾಗಿ ಬರೆದಿದ್ದಾನೆ. ೧೭ನೇ ಶತಮಾನದಲ್ಲಿದ್ದ ಮಹಾಲಿಂಗರಂಗ ಸುಲಿದ ಬಾಳೆಯ ಹಣ್ಣಿನಷ್ಟು ಸರಳವಾದ ಕನ್ನಡದಲ್ಲಿ ಅನುಭವಾಮೃತ ಎಂಬ ಷಟ್ಪದಿ ಕಾವ್ಯವನ್ನು ರಚಿಸಿದ್ದಾನೆ. ಈ ಯುಗದ ಜೈನಕವಿಗಳಲ್ಲಿ ರತ್ನಾಕರವರ್ಣಿ ಅದ್ವಿತೀಯನಾದವನು. ಈತನ ಭರತೇಶ ವೈಭವ ಸಾಂಗತ್ಯದಲ್ಲಿ ರಚಿತವಾದ ಕನ್ನಡದ ಮಹಾಕಾವ್ಯಗಳಲ್ಲೊಂದು.

ಮೊದಲನೆಯ ತೀರ್ಥಂಕರನಾದ ವೃಷಭದೇವನ ಮಗನಾದ ಭರತನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ರಚಿಸಲಾಗಿರುವ ಈ ಕೃತಿಯಲ್ಲಿ ಭೋಗ-ಯೋಗಗಳ ಸಮನ್ವಯದ ಅದ್ವಿತೀಯ ಪ್ರತಿಪಾದನೆಯಿದೆ. ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕ, ರಾಜಾವಳೀ ಕಥೆಯನ್ನು ಬರೆದ ದೇವಚಂದ್ರ ಮುಂತಾದವರು ಈ ಯುಗದ ಅಂತ್ಯದಲ್ಲಿ ಕಂಡು ಬರುವ ಪ್ರಮುಖ ಜೈನ ಲೇಖಕರು. ಚಿಕ್ಕದೇವರಾಜರು ಸ್ವತಃ ಕವಿಗಳಾಗಿದ್ದರಲ್ಲದೆ (ಗೀತಗೋವಿಂದ) ತಿರುಮಲಾರ್ಯ (ಅಪ್ರತಿಮ ವೀರ ಚರಿತ), ಚಿಕ್ಕುಪಾಧ್ಯಾಯ (ದಿವ್ಯ ಸೂರಿ ಚರಿತೆ), ಸಂಚಿ ಹೊನ್ನಮ್ಮ (ಹದಿಬದೆಯ ಧರ್ಮ) ಮುಂತಾದ ಕವಿಗಳಿಗೆ ಆಶ್ರಯದಾತರಾಗಿದ್ದರು.

### ಆಧುನಿಕ ಯುಗ

ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಪತನಾನಂತರ ಮೈಸೂರು ಸಂಸ್ಥಾನವು ಬ್ರಿಟಿಷರ ನೇರ ಸಂಪರ್ಕಕ್ಕೆ ಬರುವುದರೊಂದಿಗೆ ಆಧುನಿಕಯುಗವು ಆರಂಭವಾಯಿತೆನ್ನ ಬಹುದು. ದೂರದ ಬಂಗಾಲದ ಶ್ರೀರಾಮಪುರದಲ್ಲಿದ್ದ ವಿಲಿಯಂ ಕ್ಯಾರಿಯು ೧೮೧೭ರಲ್ಲಿ ಪ್ರಕಟಿಸಿದ 'A Grammar of the Kurnata Language' ಕನ್ನಡದ ಮೊಟ್ಟಮೊದಲ ಮುದ್ರಿತ ಕೃತಿ. ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಾಸೆಲ್ ಮಿಷನ್ನಿನ ಕ್ರೈಸ್ತ ಪಾದ್ರಿಗಳು ಮುದ್ರಣ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದರು. ಮೊಗ್ಲಿಂಗರು 'ಬಿಬ್ಲಿಯಾಥೆಕಾ ಕರ್ನಾಟಿಕಾ' ಎಂಬ ಸರಣಿಯಲ್ಲಿ ಕುಮಾರವ್ಯಾಸ ಭಾರತ, ಬಸವಪುರಾಣ, ಚನ್ನಬಸವಪುರಾಣ ಮುಂತಾದ ಅನೇಕ ಕೃತಿಗಳನ್ನು ಕಲ್ಲಚ್ಚಿನ ಮೂಲಕ ಪ್ರಕಟಿಸಿದರು. ಕನ್ನಡದ ಮೊತ್ತ ಮೊದಲ ಮೂರು ಪತ್ರಿಕೆಗಳಾದ ಮಂಗಳೂರು ಸಮಾಚಾರ, ಕನ್ನಡ ಸಮಾಚಾರ ಹಾಗೂ ಕನ್ನಡ ಸುವಾರ್ತಿಕಗಳಿಗೆ ಸಂಪಾದಕರಾಗಿದ್ದ ಹೆಗ್ಗಳಿಕೆ ಮೊಗ್ಲಿಂಗರದು. ಕಿಟೆಲರು ಕನ್ನಡ– ಇಂಗ್ಲಿಷ್ ನಿಘಂಟನ್ನು ಸಿದ್ಧಪಡಿಸಿದರಲ್ಲದೆ ನಾಗವರ್ಮನ ಛಂದಸ್ಸು, ಶಬ್ದಮಣಿದರ್ಪಣಂ ಮುಂತಾದ ಕೃತಿಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದರು. ಬೆಂಜಮಿನ್ ಲೂಯಿರೈಸ್ ಹಾಗೂ ಜೆ.ಎಫ್.ಫ್ಲೀಟ್ ಎಂಬಿಬ್ಬರು ವಿದ್ವಾಂಸರು ನಾಡಿನ ಸಾವಿರಾರು ಶಾಸನಗಳನ್ನು ಓದಿ ಅರ್ಥೈಸುವ ಕಾರ್ಯದಲ್ಲಿ ಯಶಸ್ವಿಯಾದರು.

ಮುಂಬಯಿಯ ಕರ್ಕಿ ವೆಂಕಟರಮಣ ಶಾಸ್ತ್ರೀ ಸೂರಿ ಕನ್ನಡದ ಆದ್ಯ ಸಾಮಾಜಿಕ ನಾಟಕವಾದ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನವನ್ನು ಮತ್ತು ಮೊಟ್ಟಮೊದಲ ಪ್ರವಾಸ ಕಥನವಾದ 'ದಕ್ಷಿಣ ಭಾರತಯಾತ್ರೆ' ಯನ್ನು ಬರೆದರು. ಧಾರವಾಡದ ರಾ.ಹ. ದೇಶಪಾಂಡೆಯವರು ಇತಿಹಾಸ ಸಂಬಂಧೀ ಕೃತಿಗಳನ್ನು ರಚಿಸಿದರಾದರೆ ಡೆಪ್ಯೂಟಿ ಚೆನ್ನಬಸಪ್ಪನವರು ಶೇಕ್ಸ್‌ಪಿಯರನ ನಾಟಕಗಳನ್ನು ಕನ್ನಡಿಸಿದರು. ಗಂಗಾಧರ ಮಡಿವಾಳೇಶ್ವರ ತುರಮರಿಯವರು ಬಾಣನ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಗೊಳಿಸಿದರು. ಶಾಂತವೀರ ರಾಚಿದೇವ ಕಿತ್ತೂರ, ಧೋಂಡೋ ನರಸಿಂಹ ಮುಳಬಾಗಿಲ, ವೆಂಕಟ ರಂಗೋಕಟ್ಟಿ, ಶಾಂತಕವಿ, ಮುಂತಾದ ಉತ್ಸಾಹಿಗಳಿಂದಾಗಿ ೧೯ನೇ ಶತಮಾನದಲ್ಲಿ ಮುಂಬೈ ಕರ್ನಾಟಕದಲ್ಲಿ ಸಾಹಿತ್ಯದ ಚಟುವಟಿಕೆಗಳು ಗರಿಗೆದರಿದವು. ಇತ್ತ ಮೈಸೂರು ಪ್ರಾಂತ್ಯದಲ್ಲಿಯೂ ಪರಿಸ್ಥಿತಿ ಇಷ್ಟೇ ಚೇತೋಹಾರಿಯಾಗಿತ್ತು. ಸ್ವತಃ ಕವಿಗಳೂ, ಕಲಾರಸಿಕರೂ ಆಗಿದ್ದ ಮುಮ್ಮಡಿ ಕೃಷ್ಣರಾಜಒಡೆಯರು ತಮ್ಮ ಆಸ್ಥಾನದಲ್ಲಿ ಹಲವಾರು ಮಂದಿ ಕವಿಗಳಿಗೆ ಆಶ್ರಯ ನೀಡಿದರು. ಮುದ್ರಾಮಂಜೂಷವನ್ನು ಬರೆದ ಕೆಂಪುನಾರಾಯಣ, ಕಲಾವತಿ ಪರಿಣಯದ ಕರ್ತೃವಾದ ಯಾದವ ಕವಿ, ಕೃಷ್ಣರಾಜಭಕ್ತಿಸಾರ ರಚಯಿತನಾದ ದೇವಲಾ ಪುರದ ನಂಜುಂಡ, ಪ್ರಭಾವತಿ ಪರಿಣಯವನ್ನು ಬರೆದ ಅಳಿಯ ಲಿಂಗರಾಜ ಮುಂತಾದವರು ಮುಮ್ಮಡಿಯವರ ಆಶ್ರಿತರು. ಕಮೀಷನರ್‌ಗಳ ಆಳ್ವಿಕೆಯ ಕಾಲದಲ್ಲಿ ಪಾಶ್ಚಾತ್ಯಶೈಲಿಯ ಶಿಕ್ಷಣ ಪದ್ಧತಿಗೆ ಇಂಬು ದೊರೆಯಿತಲ್ಲದೆ ಅನೇಕ ಪಠ್ಯಪುಸ್ತಕಗಳು ಹಾಗೂ ಸಂಕಲನಗಳು ಹೊರಬಂದವು.

ಚಾಮರಾಜ ಒಡೆಯರು ತಮ್ಮ ಆಶ್ರಯದಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾವನ್ನು ಸ್ಥಾಪಿಸಿ, ತಮ್ಮ ಆಸ್ಥಾನಪಂಡಿತರನ್ನು ನಾಟಕ ರಚನೆಗೆ ಕೈ ಹಾಕುವಂತೆ ಪ್ರೋತ್ಸಾಹಿಸಿದರು. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ ಬಸವಪ್ಪಶಾಸ್ತ್ರಿ, ಜಯರಾಯಾಚಾರ್ಯ, ಸುಬ್ಬಾಶಾಸ್ತ್ರಿ, ಅನಂತನಾರಾಯಣಶಾಸ್ತ್ರೀ, ಸೋಸಲೆ ಅಯ್ಯಾ ಶಾಸ್ತ್ರಿ, ಎಂ.ಎಲ್.ಶ್ರೀಕಂಠೇಶಗೌಡ, ಪಿ.ಆರ್.ಕರಿಬಸವ ಶಾಸ್ತ್ರೀ ಮುಂತಾದವರು ಚಾಮರಾಜರಿಂದ ಪ್ರೋತ್ಸಾಹಿತರಾದ ಲೇಖಕರು.

ಪಂಪಭಾರತ, ಕವಿರಾಜಮಾರ್ಗ, ಪಂಪರಾಮಾಯಣ ಮುಂತಾದ ಕನ್ನಡದ ಅಭಿಜಾತ ಕೃತಿಗಳು ಮೊಟ್ಟ ಮೊದಲಿಗೆ ಮುದ್ರಣಗೊಂಡದ್ದು ಈ ಕಾಲದಲ್ಲಿಯೇ. ಚಾಮರಾಜರ ನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಕನ್ನಡ ಸಾಹಿತ್ಯದ ಸುವರ್ಣ ಯುಗಕ್ಕೆ ಅಡಿಪಾಯವನ್ನು ಹಾಕಿದರು. ಕೃಷ್ಣರಾಜರು ಸ್ಥಾಪಿಸಿದ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂದಿರುವ ಸೇವೆ ಅಪಾರ.

೨೦ನೇ ಶತಮಾನದ ಆದಿಭಾಗದಿಂದ ಆಧುನಿಕ ಕನ್ನಡ ಸಾಹಿತ್ಯವು ಅತ್ಯಂತ ಸಮೃದ್ಧವಾಗಿರುವುದನ್ನು ಕಾಣಬಹುದು. ಆಯಾ ಕಾಲಘಟ್ಟದ ಮನೋಧರ್ಮದ ಹಿನ್ನೆಲೆಯಲ್ಲಿ ಇದನ್ನು ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಹಾಗೂ ಆಧುನಿಕೋತ್ತರ ಕಾಲಗಳೆಂದು ಅಧ್ಯಯನದ ಅನುಕೂಲಕ್ಕಾಗಿ ವಿಭಜಿಸುವುದು ವಾಡಿಕೆ. ಈ ಎಲ್ಲ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯವು ಕಾವ್ಯ, ಕಾದಂಬರಿ, ಸಣ್ಣಕತೆ, ವಿಮರ್ಶೆ, ಗದ್ಯ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಡಂಬನೆ, ವಿಶ್ವಕೋಶಗಳು, ಶಾಸ್ತ್ರ ಸಾಹಿತ್ಯ ಮುಂತಾದ ಹಲವು ಹತ್ತು ಪ್ರಕಾರಗಳಲ್ಲಿ ಕವಲೊಡೆದಿದೆ. ಇವುಗಳ ಸ್ಥೂಲ ಸಮೀಕ್ಷೆಗಷ್ಟೇ ಇಲ್ಲಿ ಅವಕಾಶವಿದೆ.

### ಕಾವ್ಯ

೧೯ನೇ ಶತಮಾನದ ಪೂರ್ವಾರ್ಧದಲ್ಲಿಯೇ ಹೊಸಗನ್ನಡ ಕಾವ್ಯದ ಆವಿರ್ಭಾವವಾಯಿತು. ಕಿಟೆಲ್, ಬೆಂಜಮಿನ್ ರೈಸ್ ಮುಂತಾದ ಪಾದ್ರಿಗಳು ಕನ್ನಡದಲ್ಲಿ ಗೀತೆಗಳನ್ನು ರಚಿಸುವ ಯತ್ನದಲ್ಲಿ ತೊಡಗಿದರು. ೨೦ನೇ ಶತಮಾನದ ಆದಿಭಾಗದಲ್ಲಿ ಮುದ್ದಣ, ಸೋಸಲೆ ಅಯ್ಯಾಶಾಸ್ತ್ರಿ, ಬೆಳ್ಳಾವೆ ನರಹರಿಶಾಸ್ತ್ರೀ, ಮುಳಿಯ ತಿಮ್ಮಪ್ಪಯ್ಯ, ಡಿ.ವಿ. ಗುಂಡಪ್ಪ ಮುಂತಾದವರು ಸಾಂಪ್ರದಾಯಿಕ ಶೈಲಿಯಲ್ಲಿ ಕಾವ್ಯ ರಚನೆ ಮಾಡಿದವರುಗಳಲ್ಲಿ

ಮುಖ್ಯರು. ಇದೇ ವೇಳೆ ಚ. ವಾಸುದೇವಯ್ಯ, ಎಸ್.ಜಿ. ನರಸಿಂಹಾಚಾರ್ಯ, ಪಂಜೆಮಂಗೇಶರಾವ್, ಹಟ್ಟಿಯಂಗಡಿ ನಾರಾಯಣ ರಾವ್ ಮುಂತಾದವರು ಹೊಸ ನಮೂನೆಯ ಪದ್ಯಗಳ ರಚನೆ ಹಾಗೂ ಆಂಗ್ಲ ಕವಿತೆಗಳ ಅನುವಾದದ ಕಾರ್ಯದಲ್ಲಿ ತೊಡಗಿದ್ದದ್ದು ಕಂಡು ಬರುತ್ತದೆ.

ಗೋವಿಂದ ಪೈರವರು ದ್ವಿತೀಯಾಕ್ಷರ ಪ್ರಾಸವನ್ನು ಕೈಬಿಡುವ ದಿಟ್ಟ ನಿರ್ಧಾರವನ್ನು ಮೊಟ್ಟಮೊದಲಿಗೆ ತೆಗೆದುಕೊಂಡರು. ಆಚಾರ್ಯ ಬಿ.ಎಂ.ಶ್ರೀ ಯವರ 'ಇಂಗ್ಲೀಷ್ ಗೀತೆ'ಗಳು ಪ್ರಕಟಣೆಯೊಂದಿಗೆ ಕನ್ನಡ ಕಾವ್ಯಲೋಕದಲ್ಲಿ ಹೊಸ ಚೈತನ್ಯದ ಆಗಮನವಾಯಿತು. ಕುವೆಂಪು (ರಾಮಾಯಣ ದರ್ಶನಂ, ಕೊಳಲು, ಪಾಂಚಜನ್ಯ ಇತ್ಯಾದಿ), ದ.ರಾ.ಬೇಂದ್ರೆ (ನಾಕುತಂತಿ, ಬಾಹತ್ತರ, ಗಂಗಾವತರಣ), ಪು.ತಿ.ನ (ಹಣತೆ, ಮಾಂದಳಿರು, ಶಾರದಾಯಾಮಿನಿ), ವಿ.ಸೀ (ದೀಪಗಳು, ಕದಂಬ), ಡಿವಿಜಿ (ಕೇತಕೀವನ, ಮಂಕುತಿಮ್ಮನ ಕಗ್ಗ, ಅಂತಃಪುರಗೀತೆಗಳು) ಶ್ರೀನಿವಾಸ (ಅರುಣ, ತಾವರೆ, ಚೆಲುವು), ವಿನಾಯಕ (ಪಯಣ, ಉಗಮ), ರಾಜರತ್ನಂ (ರತ್ನನ ಪದಗಳು, ನಾಗನ ಪದಗಳು), ಮಧುರ ಚೆನ್ನ (ನನ್ನ ನಲ್ಲ, ಮಲ್ಲಿಗೆಯದಂಡೆ), ಕೆ.ಎಸ್.ನರಸಿಂಹಸ್ವಾಮಿ (ಮೈಸೂರ ಮಲ್ಲಿಗೆ, ಐರಾವತ, ಉಂಗುರ), ಕಡಂಗೊಂಡ್ಲು ಶಂಕರಭಟ್ಟ (ಕಾಣಿಕೆ, ನಲ್ಮೆ, ಹಣ್ಣುಕಾಯಿ), ಎಸ್.ವಿ. ಪರಮೇಶ್ವರ ಭಟ್ಟ (ರಾಗಿಣಿ, ಇಂದ್ರಚಾಪ, ಉಪ್ಪು, ಕಡಲು) ಮುಂತಾದವರು ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಕೆಲವರು.

ಸು.೧೯೫೦ರ ಸುಮಾರಿನಿಂದ ಈಚೆಗೆ ನವ್ಯಕಾವ್ಯ ಎಂಬ ಹೆಸರಿನಿಂದ ಹೊಸದೊಂದು ಶಾಖೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ಟಿ.ಎಸ್.ಎಲಿಯೆಟ್, ಆಡೆನ್, ಸೆಸಿಲ್ ಡೆ ಲೂಯಿ ಮೊದಲಾದ ಸಮಕಾಲೀನ ಇಂಗ್ಲಿಷ್ ಕವಿಗಳಿಂದ ಸ್ಫೂರ್ತಿಗೊಂಡ ಹಲವು ಕವಿಗಳು ಹೊಸ ರೀತಿಯ ಪ್ರಯೋಗಗಳ ಮೂಲಕ ಹೊಸ ಹಾದಿಯೊಂದನ್ನು ನಿರ್ಮಿಸಲು ಹೊರಟರು. ವ್ಯಕ್ತಿನಿಷ್ಠವಾಗಿ ಹೊಸ ವಸ್ತು, ಹೊಸ ಭಾಷೆ, ಹೊಸ ಶೈಲಿ, ಹೊಸ ಧೋರಣೆಗಳಿಂದ ಹೊರಟಿರುವ ಈ ಕವಿ ಕಾವ್ಯಗಳಲ್ಲಿ ಕವಿಮನದ ಸಂಕೀರ್ಣತೆಯನ್ನು ಅಭಿವ್ಯಕ್ತಗೊಳಿಸಲು ಬಳಸುವ ರೂಪಕಗಳು ಅನೇಕ ವೇಳೆ ಓದುಗರನ್ನು ಚಕಿತಗೊಳಿಸುತ್ತವೆ. ಸಾಂಕೇತಿಕವಾಗಿರುವ ಹಲವು ಮಾತುಗಳು ಅವುಗಳ ಪರಿಚಯವಿಲ್ಲದವರಿಗೆ ಕ್ಲಿಷ್ಟವೆನಿಸಿವೆ. ಈ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ವಿ.ಕೃ.ಗೋಕಾಕರಿಗೆ ಸಲ್ಲುತ್ತದೆ. ಆದರೆ ಇವರ ಕವನಗಳಲ್ಲಿ ಸಂಪ್ರದಾಯ, ನವ್ಯತೆಗಳು ಸಮರಸವಾಗಿ ಬೆರೆತಿವೆ.

ನವ್ಯಮಾರ್ಗದಲ್ಲಿ ಗೋಪಾಲಕೃಷ್ಣ ಅಡಿಗರ ಹೆಸರು (ಚಂಡೆಮದ್ದಳೆ, ಭೂಮೀಗೀತ, ಬತ್ತಲಾರದ ಗಂಗೆ), ಅತ್ಯಂತ ಗಣ್ಯವಾದುದು. ಇವರ ಕವಿತೆಗಳು ಇವರ ಪ್ರತಿಭೆ, ಕಲ್ಪನಾಶಕ್ತಿಗಳ ಮಹತ್ತಿಗೆ ಸಾಕ್ಷಿಗಳಾಗಿವೆ. ಪೇಜಾವರ ಸದಾಶಿವರಾಯ (ನಾಟ್ಯೋತ್ಸವ, ವರುಣ), ಗಂಗಾಧರ ಚಿತ್ತಾಲ (ಕಾಲದ ಕರೆ, ಹರಿವನೀರು), ಶಂಕರ ಮೊಕಾಶಿ ಪುಣೇಕರ (ಮಾಯಿಯ ಮೂರು ಮುಖಗಳು), ರಾಮಚಂದ್ರ ಶರ್ಮ (ಮಂದಾರ ಕುಸುಮ, ಏಳನೆಯ ಜೀವ), ಎ.ಕೆ.ರಾಮಾನುಜನ್ (ಕುಂಟೋಬಿಲ್ಲೆ, ಹೊಕ್ಕುಳಲ್ಲಿ ಹೂವಿಲ್ಲ), ಜಿ.ಎಸ್.ಸಿದ್ಧಲಿಂಗಯ್ಯ (ರಸಗಂಗೆ, ಉತ್ತರ), ಅರವಿಂದನಾಡಕರ್ಣಿ(ಮಾಯಾವಿ, ಕಾವ್ಯಾರ್ಪಣ), ಪಿ.ಲಂಕೇಶ್ (ಬಿಚ್ಚು, ತಲೆಮಾರು), ಎಚ್.ಎಂ.ಚನ್ನಯ್ಯ (ಕಾಮಿ, ಆಮೆ), ಸುಮತೀಂದ್ರ ನಾಡಿಗ (ಜಡ ಮತ್ತು ಚೇತನ, ಪಂಚಭೂತಗಳು), ಕೆ.ಎಸ್.ನಿಸಾರ್ ಅಹಮದ್, (ಮನಸು ಗಾಂಧೀಬಜಾರು, ನಿತ್ಯೋತ್ಸವ, ಬಹಿರಂತರ), ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ (ವೃತ್ತ, ಸುಳಿ, ನಿನ್ನೆಗೆ ನನ್ನ ಮಾತು), ಶ್ರೀ ಕೃಷ್ಣ ಆಲನಹಳ್ಳಿ (ಕಾಡು ಗಿಡದ ಹಾಡು ಪಾಡು), ಕೆ.ವಿ.ತಿರುಮಲೇಶ್ (ಮುಖವಾಡ, ಅವಧ, ವಠಾರ), ಸಿದ್ಧಲಿಂಗ ಪಟ್ಟಣ ಶೆಟ್ಟಿ (ನೀನಾ, ಔರಂಗಜೇಬ), ಮೊದಲಾದವರು ನವ್ಯಕಾವ್ಯ ಜಗತ್ತಿನಲ್ಲಿ ಗಣ್ಯರಾದವರು. ನವ್ಯರೆಂದು ಮುದ್ರೆಯೊತ್ತದ ಕವಿ ಕುವೆಂಪು, ಬೇಂದ್ರೆ, ಪುತಿನ ಕೆ.ಎಸ್.ನ ಜಿ.ಎಸ್.ಶಿವರುದ್ರಪ್ಪ (ಸಾಮಗಾನ, ಕಾರ್ತೀಕ) ಚೆನ್ನವೀರಕಣವಿ (ದೀಪಧಾರಿ, ಕಾವ್ಯಾಕ್ಷಿ), ಇವರಲ್ಲಿಯೂ ಕೆಲವು ಕೃತಿಗಳಲ್ಲಿ ನವ್ಯತೆಯ ಸೊಗಡನ್ನು ಕಾಣಬಹುದು.

೧೯೭೦ರ ದಶಕದಲ್ಲಿ ಕಂಡು ಬಂದ ದಲಿತ – ಬಂಡಾಯ ಚಳುವಳಿಗಳ ಸಾಹಿತ್ಯಕ ಅಭಿವ್ಯಕ್ತಿಯಾಗಿ ಹೊಸ ಬಗೆಯ ಸಾಹಿತ್ಯ ರಚನೆ ಆರಂಭವಾಯಿತು. ಸಿದ್ಧಲಿಂಗಯ್ಯ (ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು), ಸ.ಉಷಾ (ಈ ನೆಲದ ಹಾಡು), ಬಿ.ಟಿ.ಲಲಿತಾ ನಾಯಕ್ (ನಂ ರೂಪ್ಲಿ, ಇದೇ ಕೂಗು ಮತ್ತೆ ಮತ್ತೆ) ಪ್ರತಿಭಾ ನಂದಕುಮಾರ್ (ನಾವು ಹುಡುಗಿಯರೇ ಹೀಗೆ, ಈ ತನಕ) ಅಲ್ಲಮಪ್ರಭು ಬೆಟ್ಟದೂರು (ಇದು ನನ್ನ ಭಾರತ, ಗುಲಗಂಜಿ), ಎಸ್.ಜಿ. ಸಿದ್ಧರಾಮಯ್ಯ (ಮರುಜೇವಣಿ, ಕರೆಬಳಗ), ಎಲ್.ಹನುಮಂತಯ್ಯ (ಕಪ್ಪು ಕಣ್ಣಿನ ಹುಡುಗಿ, ಅವ್ವ), ಮೂಡ್ನಾಕೂಡು ಚಿನ್ನಸ್ವಾಮಿ (ಕೊಂಡಿಗಳು, ಗೋಧೂಳಿ) ಸತ್ಯಾನಂದ ಪಾತ್ರೋಟ (ಜಾಜಿ ಮಲ್ಲಿಗೆ, ಕರಿನೆಲದ ಕಲೆಗಳು), ಮುಂತಾದವರು ಈ ಪರಂಪರೆಯ ಪ್ರಮುಖ ಕವಿಗಳು. ಇದೇ ಸಮಯದಲ್ಲಿಯೇ ಎಚ್.ಎಸ್.ವೆಂಕಟೇಶ ಮೂರ್ತಿ (ಪರಿವೃತ್ತ. ಕ್ರಿಯಾಪರ್ವ), ದೊಡ್ಡರಂಗೇಗೌಡ (ಮಾವು-ಬೇವು, ತೀರದ ತುಡಿತ), ಬಿ.ಆರ್.ಲಕ್ಷ್ಮಣರಾವ್ (ಗೋಪಿ ಮತ್ತು ಗಾಂಡಲಿನ, ಕೆಂಗುಲಾಬಿ), ಕೆ.ಎಸ್.ನಿಸಾರ್ ಅಹಮದ್ (ನಿತ್ಯೋತ್ಸವ) ಎನ್. ಎಸ್.ಲಕ್ಷ್ಮೀನಾರಾಯಣ ಭಟ್ಟ (ದೀಪಿಕಾ, ಬಾರೋ ವಸಂತ), ಎಂ.ಎನ್.ವ್ಯಾಸರಾವ್ ಮುಂತಾದವರು ರಚಿಸಿದ ಭಾವಗೀತೆಗಳು ಧ್ವನಿಸುರುಳಿಗಳಾಗಿ ಕನ್ನಡಿಗರ ಮನವನ್ನು ಗೆದ್ದವು.

ಇಂದಿಗೂ ಕನ್ನಡ ಕಾವ್ಯ ಪರಂಪರೆ ನಿರಂತರವಾಗಿ ಹರಿಯುತ್ತಲೇ ಇದೆ. ಟಿ.ಎಲ್ಲಪ್ಪ (ಕಡಲಿಗೆ ಕಳಿಸಿದ ದೀಪ, ಚಿಟ್ಟೆ ಮತ್ತು ಜೀವಯಾನ), ಜಂಬಣ್ಣ ಅಮರ ಚಿಂತ (ಮುಂಜಾವಿನ ಕೊರಳು, ಮಣ್ಣಿನಲ್ಲಿ ಬಿರಿದ ಅಕ್ಷರ), ಸವಿತಾ ನಾಗಭೂಷಣ (ಹೊಳೆ ಮಗಳು, ದರುಶನ, ಜಾತ್ರೆಯಲ್ಲಿ ಶಿವ), ರೂಪಾ ಹಾಸನ (ಕಡಲಿಗೆಷ್ಟು ಬಾಗಿಲು), ಸುಬ್ಬು ಹೊಲೆಯಾರ್ (ಎಲ್ಲರ ಬೆರಳಲ್ಲೂ ಅಂಟಿಕೊಂಡ ದುಃಖವೇ), ಲಲಿತಾ ಸಿದ್ದಬಸವಯ್ಯ (ಮೊದಲಸಿರಿ, ಇಹದ ಸ್ವರ), ಎಚ್.ಎಸ್.ಪುಷ್ಪಾ (ಅಮೃತಮತಿಯ ಸ್ವಗತ, ಗಾಜುಗೋಳ), ವಿಕ್ರಂ ವಿಸಾಜಿ(ಗಾಳಿಪಟ,ಜೀವ ಮಿಡಿತದಸದ್ದು ಲಕ್ಕೂರು ಆನಂದ (ಬಟವಾಡೆಯಾಗದ ರಸೀತಿ, ಊರಿಂದ ಊರಿಗೆ). ಸರಸ್ವತಿ (ಹೆಣೆದರೆ ಜೇಡನಂತ, ಜೀವಸಂಪಿಗೆ), ತೇಜಶ್ರೀ (ಲಯ, ತಿಳಿಗೊಳ), ಆರೀಫ್ ರಾಜಾ (ಸೈತಾನನ ಪ್ರವಾದಿ, ಬೆಂಕಿಗೆ ತೊಡಿಸಿದ ಬಟ್ಟೆ), ಮುಂತಾದ ಹಲವರು ಈ ಕ್ಷೇತ್ರದಲ್ಲಿ ಇದ್ದು ಕಾಣುತ್ತಾರೆ.

## ಕಾದಂಬರಿ

ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯೂ ಜನಪ್ರಿಯವೂ ಆಗಿದೆ. 'ಕರತಲ ರಂಗಭೂಮಿ' ಎನಿಸಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಕನ್ನಡದಲ್ಲಿ ಕಾಣಿಸಿಕೊಂಡ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು. ಇಂಗ್ಲಿಷ್‌ನ 'ನಾವೆಲ್' ಎಂಬ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಕಾದಂಬರಿ' ಎಂಬ ಶಬ್ದವನ್ನು ಬಳಸಲಾಗುತ್ತಿದೆ. ೧೮೭೫ರಲ್ಲಿ ಪ್ರಕಟವಾದ, ಗಂಗಾಧರ ಮಡಿವಾಳೇಶ್ವರ ತುರಮರಿಯವರು ಅನುವಾದಿಸಿದ, ಬಾಣಭಟ್ಟನು ಸಂಸ್ಕೃತದಲ್ಲಿ ರಚಿಸಿದ ಕಾದಂಬರಿ ಎಂಬ ಗದ್ಯಕಾವ್ಯದ ಹೊಸಗನ್ನಡ ಗದ್ಯರೂಪವು ಬಹಳ ಜನಪ್ರಿಯವಾಯಿತು. ಆದುದರಿಂದ ಸಂಸ್ಕೃತದ ಕಾದಂಬರೀ ಕಾವ್ಯದಂತೆ ರಮ್ಯವಾದ ಎಲ್ಲ ಗದ್ಯ ಕೃತಿಗಳನ್ನು ಕಾದಂಬರಿ ಎಂಬ ಹೆಸರಿನಿಂದಲೇ ಕರೆಯುವ ವಾಡಿಕೆ ಏರ್ಪಟ್ಟಿತು.

ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ಕೆಂಪುನಾರಾಯಣನ ಮುದ್ರಾಮಂಜೂಷವೆಂಬ ಗದ್ಯಕೃತಿಯಲ್ಲಿ ಕನ್ನಡ ಕಾದಂಬರಿಯ ರೂಪರೇಷೆಗಳನ್ನು ಗುರುತಿಸಬಹುದಾಗಿದೆ. ಮುದ್ದಣ 'ಗೋದಾವರಿ' ಎಂಬ ಒಂದು ಕಾದಂಬರಿಯನ್ನು ಬರೆದು ಮುಗಿಸುವಷ್ಟರಲ್ಲಿಯೇ ತೀರಿಕೊಂಡನೆಂದು ಹೇಳುತ್ತಾರೆ. ಕನ್ನಡಿಗರಿಗೆ ಕಾದಂಬರಿಗಳ ಮೊದಲ ಪರಿಚಯ ಕನ್ನಡದ ಮೂಲಕ ಆದುದು ಬಿ.ವೆಂಕಟಾಚಾರ್ಯರು ಮಾಡಿದ ಬಂಗಾಳಿ ಕಾದಂಬರಿಗಳ ಭಾಷಾಂತರದಿಂದ. ಆನಂದ ಮಠ, ದೇವಿಚೌದುರಾಣಿ, ಕಪಾಲಕುಂಡಲಾ, ವಿಷವೃಕ್ಷ, ನವಾಬ ನಂದಿನಿ ಮುಂತಾದ ಅವರ ಅನುವಾದಿತ ಕಾದಂಬರಿಗಳು ಜನರನ್ನು ಅಕ್ಷರಶಃ ಹುಚ್ಚೆಬ್ಬಿಸಿದವು.

ರೆಂಟ್ಲ ವೆಂಕಟಸುಬ್ಬರಾವ್ ರವರ ಕೇಸರಿ ವಿಲಾಸವು ಕನ್ನಡದ ಮೊದಲ ಸ್ವತಂತ್ರ ಕಾದಂಬರಿ ಎಂಬುದು ಗೋವಿಂದ ಪೈ ಅವರ ಅಭಿಪ್ರಾಯ. ಗುಲ್ವಾಡಿ ವೆಂಕಟರಾಯ (ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ, ಭಾಗೀರಥಿ, ಸೀಮಂತಿನಿ), ಬೋಳಾರ ಬಾಬುರಾಯ (ವಾಗ್ದೇವಿ), ಎಂ.ಎಲ್.ಶ್ರೀಕಂಠೇಶ ಗೌಡ (ಕನ್ಯಾವಿ ತಂತು), ಗಳಗನಾಥ (ಪದ್ಮನಯನೆ, ಮಾಧವ ಕರುಣಾವಿಲಾಸ, ಕನ್ನಡಿಗರ ಕರ್ಮಕಥೆ, ಈಶ್ವರೀಸೂತ್ರ) ಮುಂತಾದವರು ೧೯ನೇ ಶತಮಾನದ ಅಂತ್ಯದಲ್ಲಿ ಕಂಡುಬರುವ ಕಾದಂಬರಿಕಾರರಲ್ಲಿ ಪ್ರಮುಖರು.

೨೦ನೇ ಶತಮಾನದ ಆರಂಭದಿಂದಲೇ ಕಾದಂಬರಿಗಳ ಬೆಳವಣಿಗೆಯಲ್ಲಿ ನವೀನತೆ ಮತ್ತು ಆಧುನಿಕತೆಗಳು ತಲೆ ಹಾಕಲಾರಂಭಿಸಿದವು. ಎಂ.ಎಸ್.ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಗಮನಾರ್ಹ ಕೃತಿ. ಮುಂದಿನ ದಶಕದಲ್ಲಿ ಆಧುನಿಕ ಪ್ರವೃತ್ತಿಯ ಕಾದಂಬರಿಗಳ ನಿರ್ಮಾಣವನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ವಸ್ತು, ನಿರೂಪಣೆ, ಶೈಲಿ, ತಂತ್ರಗಳಲ್ಲಿ ಆಧುನಿಕತೆ ಈ ಕಾದಂಬರಿಗಳ ನಿರ್ಮಾಣದ ಮುಖ್ಯತತ್ತ್ವಗಳು. ಬೆಟಗೇರಿಕೃಷ್ಣ ಶರ್ಮ (ಸುದರ್ಶನ, ಮಗಳ ಮದುವೆ), ರಂ.ಶ್ರೀ. ಮುಗಳಿ (ಬಾಳೂರಿ, ಅನ್ನ), ಜಡಭರತ (ಧರ್ಮಸೆರೆ), ವಿನಾಯಕ (ಇಜ್ಜೋಡು), ಶ್ರೀರಂಗ (ವಿಶ್ವಾಮಿತ್ರ ಸೃಷ್ಟಿ, ಪುರುಷಾರ್ಥ) ಮುಂತಾದ ಕಾದಂಬರಿಕಾರರು ಪ್ರಸಿದ್ಧರಾದವರು.

ಶಿವರಾಮ ಕಾರಂತರ ಮೊದಲ ಕಾದಂಬರಿ ಚೋಮನದುಡಿ ವಸ್ತು, ಶೈಲಿ ಹಾಗೂ ಒಟ್ಟಿನ ಪರಿಣಾಮಗಳ ದೃಷ್ಟಿಯಿಂದ ನಿಜವಾಗಿಯೂ ಮೊದಲ ಬಾರಿಗೆ ವೈಶಿಷ್ಟ್ಯಪೂರ್ಣ. ಇವರ ಮರಳಿ ಮಣ್ಣಿಗೆ ಕನ್ನಡದ ಮಹಾಕಾದಂಬರಿಗಳಲ್ಲೊಂದು. ಈ ಕೃತಿಯಲ್ಲಿ ಕರಾವಳಿ ಪ್ರದೇಶದ ಮೂರು ತಲೆಮಾರುಗಳ ಜೀವನ ದರ್ಶನ ಅರಳಿದೆ. ಬೆಟ್ಟದ ಜೀವ, ಮೈಮನಗಳ ಸುಳಿಯಲ್ಲಿ, ಮೂಕಜ್ಜಿಯ ಕನಸುಗಳು ಔದಾರ್ಯದ ಉರುಳಲ್ಲಿ, ಮುಗಿದ ಯುದ್ಧ, ಅಳಿದಮೇಲೆ ಕುಡಿಯರಕೂಸು ಮುಂತಾದವು ಕಾರಂತರ ಕಾದಂಬರಿಗಳಲ್ಲಿ ವೈಶಿಷ್ಟ್ಯಪೂರ್ಣವಾದುವು.

ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕನ್ನಡದ ಎರಡು ಮಹಾ ಕಾದಂಬರಿಗಳು ಎಂಬ ಪ್ರಖ್ಯಾತಿ ಪಡೆದಿವೆ. ಇಲ್ಲಿ ಬಳಕೆಯಾಗಿರುವ ಭಾಷೆ ಕನ್ನಡ ಗದ್ಯಶೈಲಿಯ ಶ್ರೀಮಂತ ಪ್ರತಿನಿಧಿಯಾಗಿದೆ. ಮಲೆನಾಡಿನ ಜೀವನ ಚಿತ್ರವನ್ನು ಅದರ ಹಿನ್ನೆಲೆ, ವಿಸ್ತಾರ, ಆಳ, ವರ್ಣವಿನ್ಯಾಸಗಳೊಂದಿಗೆ ಚಿತ್ರಿಸಿರುವ ರೀತಿ ಅನ್ಯಾದೃಶವಾದುದು.

ಅ.ನ.ಕೃ. ಕನ್ನಡದಲ್ಲೆಲ್ಲ ಹೆಚ್ಚು ಕಾದಂಬರಿಗಳನ್ನು ರಚಿಸಿದವರೆಂದು ಖ್ಯಾತರಾಗಿದ್ದಾರೆ. ಸುಮಾರು ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಸಮಾಜದ ಹಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಇವರು ಸಂಧ್ಯಾರಾಗದಿಂದ ಕಾದಂಬರಿಕಾರರೆಂದು ಪ್ರಸಿದ್ಧಿ ಪಡೆದರು. ನಟಸಾರ್ವಭೌಮ ಎಂಬ ದೊಡ್ಡ ಕಾದಂಬರಿಯಲ್ಲಿ ಕಲಾವಿದನ ಬಾಳಿನ ಏಳು ಬೀಳುಗಳ ಹೊಯ್ದಾಟ ತುಯ್ದಾಟಗಳ ಚಿತ್ರವಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾದಂಬರಿಗಳನ್ನು ರಚಿಸಿದ ಇತರ ಪ್ರಸಿದ್ಧ ಕಾದಂಬರಿಕಾರರೆಂದರೆ ರಾವಬಹದ್ದೂರ (ಗ್ರಾಮಾಯಣ), ದೇವುಡು(ಮಯೂರ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ), ಬಿ.ಪುಟ್ಟಸ್ವಾಮಯ್ಯ(ಕ್ರಾಂತಿಕಲ್ಯಾಣ, ಚಿತ್ರಲೇಖಾ), ಶ್ರೀನಿವಾಸ (ಚಿಕವೀರರಾಜೇಂದ್ರ, ಚೆನ್ನಬಸವನಾಯಕ), ಕೆ.ವಿ.ಅಯ್ಯರ್ (ಶಾಂತಲಾ, ರೂಪದರ್ಶಿ, ಲೀನಾ), ಮಿರ್ಜಿ ಅಣ್ಣಾರಾಯ (ನಿಸರ್ಗ), ತ.ರಾ.ಸು. (ಚಂದನದ ಬೊಂಬೆ, ಮಸಣದ ಹೂವು, ನಾಗರಹಾವು, ದುರ್ಗಾಸ್ತಮಾನ), ಬಸವರಾಜ ಕಟ್ಟೀಮನಿ (ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಖಾನಾವಳಿಯ ನೀಲಾ), ವಿ.ಎಂ.ಇನಾಂದಾರ್ (ಶಾಪ, ಈ ಪರಿಯ ಸೊಬಗು, ಮುಗಿಯದ ಕತೆ), ನಿರಂಜನ (ಅಭಯಾಶ್ರಮ, ಚಿರಸ್ಮರಣೆ, ಮೃತ್ಯುಂಜಯ), ಚದುರಂಗ (ಉಯ್ಯಾಲೆ), ವೀರಕೇಸರಿ ಸೀತಾರಾಮ ಶಾಸ್ತ್ರೀ (ದೌಲತ್), ಶ್ರೀನಿವಾಸ ಕೊರಟಿ (ಪರಮೇಶ್ವರ ಪುಲಕೇಶಿ), ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹೇಮಾವತಿ, ಊರ್ವಶಿ), ವ್ಯಾಸರಾಯ ಬಲ್ಲಾಳ (ಹೇಮಂತಗಾನ, ವಾತ್ಸಲ್ಯಪಥ, ಚಿರವಿರಹಿ), ಬೀಚಿ (ದಾಸಕೂಟ), ಕೃಷ್ಣಮೂರ್ತಿ ಪುರಾಣಿಕ (ಮುಗಿಲ ಮಲ್ಲಿಗೆ, ಮನೆ ತುಂಬಿದ ಹೆಣ್ಣು, ಮಣ್ಣಿನ ಮಗಳು, ತಂಪುನೆಳಲು), ಕುಂ ವೀರಭದ್ರಪ್ಪ (ಕಪ್ಪು ಪಕ್ಷಿ, ಶಾಮಣ್ಣ, ಅರಮನೆ, ಯಾಪಿಲ್ಲು), ಚಂದ್ರಶೇಖರ ಕಂಬಾರ

(ಸಿಂಗಾರೆವ್ವ ಮತ್ತು ಅರಮನೆ, ಶಿಖರಸೂರ್ಯ), ನಾ.ಡಿಸೋಜಾ (ಮಾನವ, ಹರಿವ ನದಿ, ದ್ವೀಪ), ವೀರಪ್ಪ ಮೊಯ್ಲಿ (ತೆಂಬರೆ, ಕೊಟ್ಟ), ವೈಕುಂಠ ರಾಜು (ಪರ್ಯಟನ, ಆಕ್ರಮಣ, ಉದ್ಧವ), ಟಿ.ಕೆ. ರಾಮರಾವ್ (ಬಂಗಾರದ ಮನುಷ್ಯ), ಭಾರತೀಸುತ (ಎಡಕಲ್ಲು ಗುಡ್ಡದ ಮೇಲೆ), ಎಸ್.ಎಲ್.ಭೈರಪ್ಪ (ವಂಶವೃಕ್ಷ, ಗೃಹಭಂಗ, ಗ್ರಹಣ, ದಾಟು, ತಂತು, ಅಂಚು, ಪರ್ವ), ವಿಶುಕುಮಾರ್ (ಕರಾವಳಿ, ಮದರ್), ಎನ್ಕೆ (ಸಾವಿನ ಉಡಿಯಲ್ಲಿ, ಎರಡನೆ ಸಂಬಂಧ), ಯಶವಂತ ಚಿತ್ತಾಲ (ಮೂರು ದಾರಿಗಳು, ಶಿಕಾರಿ), ಶಾಂತಿನಾಥ ದೇಸಾಯಿ (ಮುಕ್ತಿ, ಓಂಣಮೋ, ವಿಕ್ಷೇಪ), ಯು. ಆರ್.ಅನಂತಮೂರ್ತಿ (ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ), ಪಿ.ಲಂಕೇಶ್ (ಬಿರುಕು, ಅಕ್ಕ), ಎ.ಕೆ.ರಾಮಾನುಜನ್ (ಹಳದಿ ಮೀನು), ಶಂಕರ ಮೊಕಾಶಿ ಪುಣೇಕರ (ಗಂಗವ್ವ ಗಂಗಾಮಾಯಿ, ಅವಧೇಶ್ವರಿ), ಪೂರ್ಣಚಂದ್ರ ತೇಜಸ್ವಿ (ಸ್ವರೂಪ, ಚಿದಂಬರ ರಹಸ್ಯ, ಕರ್ವಾಲೋ, ಜುಗಾರಿ ಕ್ರಾಸ್), ಗಿರಿ (ಗತಿಸ್ಥಿತಿ), ಕಾಮರೂಪಿ (ಕುದುರೆಮೊಟ್ಟೆ), ಆರ್ಯ (ಗುರು), ಶ್ರೀಕೃಷ್ಣ ಅಲನಹಳ್ಳಿ, (ಕಾಡು, ಪರಸಂಗದ ಗೆಂಡೆತಿಮ್ಮ, ಭುಜಂಗಯ್ಯನ ದಶಾವತಾರ), ದೇವನೂರ ಮಹಾದೇವ (ಕುಸುಮಬಾಲೆ, ಒಡಲಾಳ), ಸತ್ಯಕಾಮ (ಪಂಚಮಗಳ ನಡುವೆ, ವಿಜ್ಞಾನ ಭೈರವ) ಮೊದಲಾದವರು.

ಇತ್ತೀಚಿನ ತಲೆಮಾರಿನ ಕಾದಂಬರಿಕಾರರಲ್ಲಿ ಕೆ.ಎನ್. ಗಣೇಶಯ್ಯ (ಕಪಿಲಿಪಿಸಾರ, ಕರಿಸಿರಿಯಾನ, ಚಿತಾದಂತ), ಜೋಗಿ (ಯಾಮಿನಿ, ಚಿಕ್ಕಪ್ಪ, ಊರ್ಮಿಳಾ), ರವಿಬೆಳಗೆರೆ (ರೇಷ್ಮೆರುಮಾಲು, ಹಿಮಾಗ್ನಿ, ಮಾಂಡೋವಿ), ವಸುಧೇಂದ್ರ (ವರ್ಣಮಯ, ಹರಿಚಿತ್ತ ಸತ್ಯ), ಸುರೇಂದ್ರನಾಥ್ (ಎನ್ನಭವದ ಕೇಡು), ಕೃಷ್ಣಮೂರ್ತಿ ಹನೂರು (ನಿಕ್ಷೇಪ, ಅಜ್ಞಾತನೊಬ್ಬನ ಆತ್ಮ ಚರಿತ್ರೆ), ಗುರುಪ್ರಸಾದ್ ಕಾಗಿನೆಲೆ (ಗುಣ, ಬಿಳಿಯ ಚಾದರ), ಶ್ರೀನಿವಾಸ ವೈದ್ಯ (ಹಳ್ಳಬಂತು ಹಳ್ಳ), ಮನು (ಮಹಾಸಂಪರ್ಕ), ವಿವೇಕ ಶಾನಭಾಗ್ (ಒಂದು ಬದಿ ಕಡಲು), ಗೋಪಾಲಕೃಷ್ಣ ಪೈ (ಸ್ವಪ್ನ ಸಾರಸ್ವತ), ಮುಂತಾದವರ ಕೃತಿಗಳು ಜನಪ್ರಿಯವಾಗಿವೆ.

ಪತ್ತೇದಾರಿಯು ಅತ್ಯಂತ ಜನಪ್ರಿಯ ಕಾದಂಬರೀ ಪ್ರಕಾರಗಳಲ್ಲಿ ಒಂದು. ವೆಂಕಟಕೃಷ್ಣಯ್ಯನವರು ಬರೆದ ಚೋರಗ್ರಹಣ ತಂತ್ರ ಕನ್ನಡದ ಮೊದಲ ಪತ್ತೇದಾರಿ ಕಾದಂಬರಿಯೊಂದು ಪರಿಗಣಿಸಲಾಗಿದೆ. ಛಿ.ಪ.ಕಾಳೆ (ಕಾಲಸರ್ಪ, ಕಂಕಣ ಚೋರ), ನಾಗೇಶ (ಮಾಯಾವಿನಿ), ಎಂ.ರಾಮಮೂರ್ತಿ (ಜುಲೇಖಾ, ನೀಲಕಮಲ, ಅವಳೇನಾದಳು), ವಿ.ಜಿ.ಕೃಷ್ಣಮೂರ್ತಿ (ಕತ್ತರಿಸಿದ ಬೆರಳು, ವಿಷದಸೀಸೆ) ಮುಂತಾದವರು ೨೦ನೇ ಶತಮಾನದ ಆರಂಭಕಾಲದ ಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರು. ಎನ್.ನರಸಿಂಹಯ್ಯ (ಭಯಂಕರ ಭೈರಾಗಿ, ಪತ್ತೇದಾರ ಪುರುಷೋತ್ತಮ) ಪತ್ತೇದಾರಿ ಪ್ರಿಯರಿಗೆ ಅತ್ಯಂತ ಆಪ್ತರಾದ ಲೇಖಕರು. ಟಿ.ಕೆ.ರಾಮರಾವ್ (ಕಪ್ಪು ನಾಯಿ, ಶಕುನ ಪಕ್ಷಿ), ಮಾ.ಭೀ.ಶೇ, ಜಿಂದೆ ನಂಜುಂಡಸ್ವಾಮಿ, ಎಚ್.ಕೆ.ಅನಂತರಾವ್ (ಅಂತ), ವಿಜಯ ಸಾಸನೂರ ಮುಂತಾದವರಿಂದಾಗಿ ಕನ್ನಡಕ್ಕೆ ಹೆಚ್ಚಿನ ಓದುಗರು ದಕ್ಕಿದ್ದಾರೆ.

ಕಾದಂಬರೀ ಕ್ಷೇತ್ರಕ್ಕೆ ಮಹಿಳೆಯರ ಕೊಡುಗೆ ಗಮನಾರ್ಹ. ಶಾಂತಾಬಾಯಿ ನೀಲಗಾರ (ಸದ್ಗುಣಿ ಕೃಷ್ಣಾಬಾಯಿ) ಕನ್ನಡದ ಮೊದಲ ಮಹಿಳಾ ಕಾದಂಬರಿಗಾರ್ತಿ. ನಂಜನಗೂಡು ತಿರುಮಲಾಂಬಾ (ಸುಶೀಲೆ, ನಭಾ, ವಿದ್ಯುಲ್ಲತಾ) ತ್ರಿವೇಣಿ (ಶರಪಂಜರ, ಹಣ್ಣೆಲೆ ಚಿಗುರಿದಾಗ, ಬೆಳ್ಳಿಮೋಡ), ಅನುಪಮಾ ನಿರಂಜನ (ಮಾಧವಿ, ಆಳ, ಘೋಷ, ಮೂಲಮುಖಿ), ಎಂ.ಕೆ. ಇಂದಿರಾ (ತಾಳದವರು, ಫಣಿಯಮ್ಮ, ತೆಗ್ಗಿನಮನೆ ಸೀತೆ), ವಾಣಿ (ಎರಡು ಕನಸು, ಬಾಳೆಯ ನೆರಳು), ಸಾಯಿಸುತೆ (ಡಾ॥ ವಸುಧಾ, ವಸುಧೈವ ಕುಟುಂಬ), ಉಷಾನವರತ್ನರಾಮ್ (ಹೊಂಬಿಸಿಲು, ಗಂಧರ್ವಗಿರಿ), ಸಿ.ಎನ್.ಮುಕ್ತಾ (ಮೇಘಮಂದಾರ, ತಲ್ಲಣಿಸದಿರು ಮನವೇ), ಎಚ್.ಎಸ್. ಪಾರ್ವತಿ (ನೇಸರ ನೆಳಲು, ಜಬಾಲಾ), ಎಚ್.ಜಿ.ರಾಧಾದೇವಿ (ಅದೃಷ್ಟತಾರೆ, ಪಾರಿಜಾತ, ಕಿರಣ), ಎಚ್.ವಿ.ಸಾವಿತ್ರಮ್ಮ (ವಿಮುಕ್ತಿ, ಸೀತೆ-ರಾಮ-ರಾವಣ), ಗೀತಾನಾಗಭೂಷಣ (ಬದುಕು, ಹಸಿಮಾಂಸ ಮತ್ತು ಹದ್ದುಗಳು ನೀಲಗಂಗಾ), ವೀಣಾ ಶಾಂತೇಶ್ವರ (ಗಂಡಸರು), ಸಾರಾ ಅಬೂಬಕರ್ (ಚಂದ್ರಗಿರಿಯ ತೀರದಲ್ಲಿ, ಸಹನಾ, ವಜ್ರಗಳು), ರೇಖಾ ಕಾಖಂಡಕಿ (ಹೊಸಹೆಜ್ಜೆ, ತ್ರಸ್ತ), ಸುನಂದಾ ಬೆಳಗಾಂವಕರ (ನಾಸು, ಕಾಯಕ ಕೈಲಾಸ ಝುವಾದಿ), ಸವಿತಾ ನಾಗಭೂಷಣ (ಸ್ತ್ರೀ ರೂಪ), ನೇಮಿಚಂದ್ರ (ಯಾದ್ ವಶೇಮ್), ಬಿ.ಟಿ.ಲಲಿತಾನಾಯಕ (ಗತಿ), ಎಚ್.ಎಸ್.ನಾಗವೇಣಿ (ಗಾಂಧಿ ಬಂದ), ವೈದೇಹಿ (ಅಸ್ಪೃಶ್ಯರು), ಬಾನುಮುಷ್ತಾಕ್ (ಕುಬಿ, ಬಡವರಮಗಳು ಹೆಣ್ಣಲ್ಲ), ವಸುಮತಿ ಉಡುಪ (ಮನ್ವಂತರ), ಸುಧಾಮೂರ್ತಿ (ಯಶಸ್ವಿ, ಡಾಲರ್ ಸೊಸೆ) ಮುಂತಾದವರು ಪ್ರಸಿದ್ಧ ಮಹಿಳಾ ಕಾದಂಬರಿಗಾರ್ತಿಯರು.

### ಸಣ್ಣಕತೆ

ಕಾದಂಬರಿಯಂತೆಯೇ ಸಣ್ಣಕತೆಯೂ ಪಾಶ್ಚಾತ್ಯ ಪ್ರಭಾವದಿಂದ ಹೊಸಗನ್ನಡದಲ್ಲಿ ಕಾಣಿಸಿಕೊಂಡ ಒಂದು ಸಾಹಿತ್ಯ ಪ್ರಕಾರ. ಪಂಜೆ ಮಂಗೇಶರಾಯರು ಬರೆದ ನನ್ನ ಚಿಕ್ಕತಾಯಿ ಆಧುನಿಕ ಕನ್ನಡದ ಮೊದಲ ಸಣ್ಣಕತೆ ಎಂದು ಗುರುತಿಸಲಾಗಿದೆ. ಆದರೆ ಕೇವಲ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲದೆ ಗುಣದ ದೃಷ್ಟಿಯಿಂದಲೂ ಈ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದರೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು. ಹಾಗಾಗಿಯೇ ಇವರನ್ನು 'ಕನ್ನಡ ಸಣ್ಣಕತೆಗಳ ಜನಕ' ಎಂದು ಕರೆಯಲಾಗುತ್ತದೆ. ರಂಗನ ಮದುವೆ ಇವರ ಮೊದಲ ಸಣ್ಣಕತೆ. ಮೊಸರಿನ ಮಂಗಮ್ಮ, ಮಸುಮತ್ತಿ, ಸುಶೀಲಾ ರಜಾಕರ್, ಜೋಗ್ಯೋರ ಅಂಜಪ್ಪನ ಕೋಳಿಕತೆ ಮುಂತಾದ ಕತೆಗಳಿಂದ ಮಾಸ್ತಿಯವರು ಪ್ರಸಿದ್ಧರಾಗಿದ್ದಾರೆ.

ಕುವೆಂಪು, ಗೊರೂರು, ಆನಂದಕಂದ, ದೇವುಡು, ಅನಕೃ, ತರಾಸು, ನಿರಂಜನ, ಚದುರಂಗ, ಚಿತ್ತಾಲ, ಲಂಕೇಶ್, ತೇಜಸ್ವಿ, ಸತ್ಯಕಾಮ, ಅನಂತಮೂರ್ತಿ ಮುಂತಾದ ಹೊಸಗನ್ನಡ ಕಾದಂಬರಿಕಾರರೆಲ್ಲರೂ ಬಹುಮಟ್ಟಿಗೆ ಕಥೆಗಳನ್ನೂ ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಮಾಡಿಕೊಂಡಿರುವವರೇ ಆಗಿದ್ದಾರೆ. ಕಥಾ ರಚನೆಯ ಕ್ಷೇತ್ರದಲ್ಲಿಯೇ ವಿಶಿಷ್ಟವಾಗಿ ಸಾಧನೆ ಮಾಡಿದವರೆಂದರೆ ಆನಂದ (ನಾನು ಕೊಂದ ಹುಡುಗಿ, ಮಾಟಗಾತಿ), ಅಶ್ವತ್ಥ (ಸೊಸೆಗೊಂದು ಉಡುಗೊರೆ, ಬಾಳಹೊಳೆ) ಕೊರಡ್ಕಲ್ ಶ್ರೀನಿವಾಸರಾವ್ (ನಂದಾದೀಪ), ಕೊಡಗಿನ ಗೌರಮ್ಮ (ಕಂಬನಿ ಮತ್ತು ಚಿಗುರು), ಸರಸ್ವತಿ ಬಾಯಿ ರಾಜವಾಡೆ (ಆಹುತಿ, ಕದಂಬ), ಎ.ಆರ್.ಕೃಷ್ಣಶಾಸ್ತ್ರೀ (ಶ್ರೀಪತಿಯ ಕಥೆಗಳು), ಕೆ.ಸದಾಶಿವ (ಅಪರಿಚಿತರು), ಎಸ್.ಜೆ.ಸದಾಶಿವ (ಮಗುವಾಗಿ ಬಂದವನು, ತುಣುಕುಗಳು), ರಾಘವೇಂದ್ರ ಖಾಸನೀಸ (ಅಪಘಾತ, ತಬ್ಬಲಿಗಳು),

ಟಿ.ಜಿ.ರಾಘವ (ಜ್ವಾಲೆ ಆರಿತು, ಸಂಬಂಧಗಳ), ಎಂ.ವ್ಯಾಸ (ತಪ್ತ, ಅಸ್ತ್ರ, ಓಟ), ಬೆಸಗನಹಳ್ಳಿ ರಾಮಣ್ಣ (ಗರ್ಜನೆ, ಕಣಜ), ಜಯಂತಕಾಯ್ಕಿಣಿ (ತೆರೆದಷ್ಟೇ ಬಾಗಿಲು, ಅಮೃತಬಳ್ಳಿ ಕಷಾಯ), ವೈದೇಹಿ (ಮರಗಿಡಬಳ್ಳಿ, ಅಂತರಂಗದ ಪುಟಗಳು), ಅಮರೇಶ ನುಗಡೋಣಿ (ಮಣ್ಣು ಸೇರಿತು ಬೀಜ, ತಮಂಧದ ಕೇಡು) ವಸುಧೇಂದ್ರ (ಮನೀಷೆ, ಯುಗಾದಿ, ಚೇಳು) ಮುಂತಾದವರು. ರಾಜಶೇಖರ ಭೂಸನೂರು ಮಠ, ಸಂಜಯ ಹಾವನೂರ, ಕೆ.ಎನ್.ಗಣೇಶಯ್ಯ, ಮುಂತಾದವರು ವೈಜ್ಞಾನಿಕ ಕಥಾ ರಚನಕಾರರಾಗಿ ಪ್ರಸಿದ್ಧರಾಗಿದ್ದಾರೆ. ಕನ್ನಡ ನಿಯತಕಾಲಿಕೆಗಳು ಪ್ರತಿಸಂಚಿಕೆಯಲ್ಲಿಯೂ ಕತೆಗಳನ್ನು ಪ್ರಕಟಿಸುತ್ತಿವೆಯಲ್ಲದೆ ವಿಶೇಷ ಸಂದರ್ಭಗಳಲ್ಲಿ ಕಥಾಸ್ಪರ್ಧೆಗಳನ್ನೂ ಏರ್ಪಾಡಿಸುವುದರಿಂದ ಅನೇಕ ಜನ ಹೊಸ ತಲೆಮಾರಿನ ಕತೆಗಾರರು ಬೆಳಕಿಗೆ ಬರುವುದು ಸಾಧ್ಯವಾಗಿದೆ.

## ವಿಮರ್ಶೆ

ಸಾಹಿತ್ಯವನ್ನು ಆಸ್ವಾದಿಸುವುದರ ಜೊತೆ ಜೊತೆಗೇ ಅದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಪದ್ಧತಿಯೂ ಭಾರತೀಯರಲ್ಲಿ ಇದೆಯಾದರೂ ಅದು ಸ್ಪಷ್ಟವಾದ ಚೌಕಟ್ಟಿನಲ್ಲಿ ಬೆಳೆದದ್ದು ಪಾಶ್ಚಾತ್ಯ ಪ್ರಭಾವದಿಂದ. ೧೯ನೇ ಶತಮಾನದ ಕೊನೆಯ ವೇಳೆಗೆ ಕನ್ನಡದಲ್ಲಿ ಕಾಣಿಸಿಕೊಂಡ ಸಾಹಿತ್ಯ ವಿಮರ್ಶೆ ನವೋದಯ ಕಾಲದಲ್ಲಿ ಚೆನ್ನಾಗಿ ಚಿಗುರೊಡೆಯಿತು. ಬಿ.ಕೃಷ್ಣಪ್ಪ (ರಾಮಚಂದ್ರ ಚರಿತ ಪುರಾಣ ವಿಮರ್ಶೆ), ಜಿ.ಪಿ.ರಾಜರತ್ನಂ (ಶ್ರೀ ಕವಿಪಂಪ), ತೀನಂಶ್ರೀ (ಪಂಪ), ಎಸ್.ವಿ.ರಂಗಣ್ಣ (ಕುಮಾರವ್ಯಾಸ ಶೈಲಿ), ವಿ.ಸೀ.(ಮಹಾಕವಿ ಪಂಪ), ಮುಳಿಯ ತಿಮ್ಮಪ್ಪಯ್ಯ (ನಾಡೋಜ ಪಂಪ), ಮಾಸ್ತಿ (ಆದಿಕವಿ ವಾಲ್ಮೀಕಿ, ವಿಮರ್ಶೆ), ತೀನಂಶ್ರೀ (ಕಾವ್ಯ ಸಮೀಕ್ಷೆ, ಸಮಾಲೋಕನ), ಜಿ.ಎಸ್.ಶಿವರುದ್ರಪ್ಪ (ಪರಿಶೀಲನ, ಗತಿಬಿಂಬ), ಸುಜನಾ (ಹೃದಯ ಸಂವಾದ), ಕುವೆಂಪು (ಕಾವ್ಯ ವಿಹಾರ, ವಿಭೂತಿ ಪೂಜೆ) ಎ.ಆರ್.ಕೃಷ್ಣಶಾಸ್ತ್ರಿ (ಸಂಸ್ಕೃತ ನಾಟಕ, ಭಾಸಕವಿ), ಎಸ್.ಅನಂತನಾರಾಯಣ (ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ), ಎಲ್.ಎಸ್.ಶೇಷಗಿರಿರಾವ್ (ಕಾದಂಬರಿ– ಸಾಮಾನ್ಯ ಮನುಷ್ಯ) ಮುಂತಾದವರು ತಮ್ಮ ಸಹೃದಯ ವಿಮರ್ಶೆಗಾಗಿ ಪ್ರಸಿದ್ಧರು.

ನವ್ಯ ಸಾಹಿತ್ಯ ಆರಂಭವಾದ ಮೇಲೆ ಸಾಹಿತ್ಯವಿಮರ್ಶೆಯ ವಿಧಾನದಲ್ಲಿಯೂ ಹಲವಾರು ಬದಲಾವಣೆಗಳಾದವು. ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಸ್ತ್ರೀವಾದ ಮುಂತಾದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕೃತಿಗಳನ್ನು ನೋಡುವ ಪರಿಪಾಠ ಬೆಳೆಯಿತು. ಕೃತಿಕೇಂದ್ರಿತ, ಸಮಾಜಕೇಂದ್ರಿತ, ಕರ್ತೃಕೇಂದ್ರಿತ, ವಾಚಕ ಕೇಂದ್ರಿತ ಎಂಬಿತ್ಯಾದಿಯಾಗಿ ವಿಮರ್ಶೆಯನ್ನು ವಿಭಜಿಸುವ ಪದ್ಧತಿ ಆರಂಭವಾಯಿತು. ಕೀರ್ತನಾಥ ಕುರ್ತಕೋಟಿ (ಯುಗಧರ್ಮ ಮತ್ತು ಸಾಹಿತ್ಯ, ಉರಿಯ ನಾಲಗೆ), ಯು.ಆರ್. ಅನಂತಮೂರ್ತಿ (ಪ್ರಜ್ಞೆ ಮತ್ತು ಪರಿಸರ), ಎಂ.ಜಿ.ಕೃಷ್ಣಮೂರ್ತಿ (ಆಧುನಿಕ ಭಾರತೀಯ ಸಾಹಿತ್ಯ), ಗಿರಡ್ಡಿ ಗೋವಿಂದರಾಜ (ಭುವನದ ಭಾಗ್ಯ, ಸಾತತ್ಯ), ಕೆ.ಜಿ.ನಾಗರಾಜಪ್ಪ (ಮರುಚಿಂತನ), ಜಿ.ಎಚ್.ನಾಯಕ (ಸಮಕಾಲೀನ ನಿರಪೇಕ್ಷ), ನರಹಳ್ಳಿ ಬಾಲಸುಬ್ರಹ್ಮಣ್ಯ (ಅನಕೃ ಮತ್ತು ಕನ್ನಡ ಸಂಸ್ಕೃತಿ), ವಿಜಯದಬ್ಬೆ (ಮಹಿಳೆ, ಸಾಹಿತ್ಯ, ಸಮಾಜ, ಸಂಪ್ರತಿ), ಆರ್ಕೆ ಮಣಿಪಾಲ (ಅನ್ವೇಷಣೆ, ಲೋಕಗ್ರಹಿಕೆ) ಬರಗೂರು ರಾಮಚಂದ್ರಪ್ಪ (ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ) ಎಚ್.ಎಂ.ಚನ್ನಯ್ಯ (ಜಿಜ್ಞಾಸೆ, ಪ್ರಾಸಂಗಿಕ), ಡಿ.ಆರ್.ನಾಗರಾಜ (ಸಾಹಿತ್ಯ ಕಥನ, ಅಮೃತ ಮತ್ತು ಗರುಡ), ರಹಮತ್ ತರೀಕೆರೆ (ಮರದೊಳಗಣ ಕಿಚ್ಚು, ಪ್ರತಿ ಸಂಸ್ಕೃತಿ), ರಾಜೇಂದ್ರ ಚೆನ್ನಿ (ಸದ್ಯದ ಹಂಗು, ಯಶವಚಿತಚಿತ್ತಾಲರ ಸಾಹಿತ್ಯಲೋಕ), ಸಿ.ಎನ್.ರಾಮಚಂದ್ರನ್ (ವಸಾಹತೋತ್ತರ ಚಿಂತನೆ, ಶಿಲ್ಪವಿನ್ಯಾಸ, ಸ್ವರೂಪ ), ಪೋಲಂಕಿ ರಾಮಮೂರ್ತಿ (ಸೀತಾಯಣ), ಟಿ.ಪಿ.ಅಶೋಕ (ಸಾಹಿತ್ಯ ಸಂಪರ್ಕ, ಸಾಹಿತ್ಯ ಸಂದರ್ಭ), ಎಚ್.ಎಸ್.ರಾಘವೇಂದ್ರರಾವ್ (ನಿಲುವು, ಹಾಡೆ ಹಾದಿಯ ತೋರಿತು), ಜಿ.ಎಸ್.ಆಮೂರ (ಅರ್ಥಲೋಕ, ಭುವನದ ಭಾಗ್ಯ), ಕೆ.ವಿ.ನಾರಾಯಣ (ಬೇರು, ಕಾಂಡ, ಚಿಗುರು), ಓ.ಎಲ್.ನಾಗಭೂಷಣಸ್ವಾಮಿ (ಇಂದಿನ ಹೆಜ್ಜೆ), ಜಿ.ರಾಮಕೃಷ್ಣ (ಆಯತನ, ಮುನ್ನೋಟ), ಸಿದ್ಧಲಿಂಗ ಪಟ್ಟಣಶೆಟ್ಟಿ (ಅನುಶೀಲನ, ಪರಿಭಾವನ) ಮುಂತಾದವರು ತಮ್ಮ ವಿಶಿಷ್ಟವಾದ ವಿಮರ್ಶನ ಶಕ್ತಿಯಿಂದ ಕನ್ನಡ ಸಾಹಿತ್ಯ ವಿಮರ್ಶನ ಪರಂಪರೆಯನ್ನು ಕಟ್ಟಿ ಬೆಳೆಸಿದ್ದಾರೆ. ಸಾಕ್ಷಿ, ಸಂಕ್ರಮಣ, ರುಜುವಾತು, ಸಂಚಯ, ದೇಶಕಾಲ ಮುಂತಾದ ಪತ್ರಿಕೆಗಳು ಕನ್ನಡಿಗರ ಸಾಹಿತ್ಯ ವಿಮರ್ಶನ ಶಕ್ತಿಯನ್ನು ಬೆಳಸಿವೆ. ಕೆಲವು ದಿನಪತ್ರಿಕೆಗಳು ತಮ್ಮ ಸಾಪ್ತಾಹಿಕ ಪುರವಣಿಗಳಲ್ಲಿ ಕೃತಿವಿಮರ್ಶೆಗಳನ್ನು ಪ್ರಕಟಿಸುವ ಪದ್ಧತಿಯನ್ನು ಉಳಸಿಕೊಂಡಿವೆ. ಎಸ್.ಆರ್.ವಿಜಯಶಂಕರ್, ಜೆ.ಬಿ.ಹರೀಶ್, ಕೆ.ಸತ್ಯನಾರಾಯಣ ಮುಂತಾದವರು ಕೃತಿ ವಿಮರ್ಶೆಗೆ ಹೆಸರಾಗಿದ್ದಾರೆ.

## ಪ್ರವಾಸಸಾಹಿತ್ಯ

ಕರ್ಕಿ ವೆಂಕಟರಮಣ ಶಾಸ್ತ್ರೀ ಸೂರಿಯವರ ದಕ್ಷಿಣಭಾರತಯಾತ್ರೆಯು ೧೮೮೦ರಲ್ಲಿ ಪ್ರಕಟವಾಗುವುದರೊಂದಿಗೆ ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ಉಗಮವಾಯಿತು. ಅಂದಿನಿಂದ ಇಂದಿನವರೆಗೂ ನೂರಾರು ಮಂದಿ ಲೇಖಕರು ತಮ್ಮ ಸ್ವದೇಶಿ ಮತ್ತು ವಿದೇಶಿ ಪ್ರವಾಸದ ಅನುಭವಗಳನ್ನು ಕೃತಿಗಳ ರೂಪದಲ್ಲಿ ದಾಖಲಿಸಿದ್ದಾರೆ. ಸ್ವದೇಶಿ ಪ್ರವಾಸದ ವಿವರಗಳನ್ನು ನೀಡಿದವರಲ್ಲಿ ವಿ.ಸೀ. (ಪಂಪಾಯಾತ್ರೆ), ಶಿವರಾಮಕಾರಂತ (ಅಬುವಿನಿಂದ ಬರಾಮಕ್ಕೆ), ಬಿಜಿಎಲ್ ಸ್ವಾಮಿ (ಹಸಿರು ಹೊನ್ನು), ಸಿದ್ದವನಹಳ್ಳಿ ಕೃಷ್ಣ ಶರ್ಮ (ವರ್ಧಾಯಾತ್ರೆ) ಕೃಷ್ಣಾನಂದ ಕಾಮತ (ವಂಗದರ್ಶನ), ಎಚ್.ಎಸ್.ರಾಘವೇಂದ್ರ ರಾವ್ (ಜನಗಣಮನ), ಶಾಂತಾದೇವಿ ಮಾಳವಾಡ (ಶ್ರೀಗಿರಿಯಿಂದ ಹಿಮಗಿರಿಗೆ), ಜಿ.ಪಿ.ಬಸವರಾಜು (ನೀಲಾಚಲಗಳ ನಾಡಿನಲ್ಲಿ), ರಹಮತ್ ತರೀಕೆರೆ (ಅಂಡಮಾನ್ ಕನಸು), ತೇಜಸ್ವಿ (ಅಲೆಮಾರಿಯ ಅಂಡಮಾನ್), ಜೆ.ಎಸ್.ಶಿವರುದ್ರಪ್ಪ (ಗಂಗೆಯ ಶಿಖರಗಳಲ್ಲಿ), ಎಂ.ಚಿದಾನಂದ ಮೂರ್ತಿ (ಕನ್ನಡಾಯಣ), ಕೆ.ಬಿ. ಪ್ರಭುಪ್ರಸಾದ್ (ದೇಗುಲಗಳ ದಾರಿಯಲ್ಲಿ) ಮುಂತಾದವರುಗಳನ್ನು ಹೆಸರಿಸಬಹುದು. ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಅಮೇರಿಕದಲ್ಲಿ ಗೊರೂರು), ಎ.ಎನ್. ಮೂರ್ತಿರಾವ್ (ಅಪರ ವಯಸ್ಕನ ಅಮೇರಿಕಾ ಯಾತ್ರೆ), ಎಸ್.ರಾಮಸ್ವಾಮಿ (ಅಲೆಮಾರಿಯ ಇಂಗ್ಲೆಂಡ್, ಅಲೆಮಾರಿಯ ಇಟಲಿ), ಶಿವರಾಮ ಕಾರಂತ (ಅಪೂರ್ವ ಪಶ್ಚಿಮ, ಅರಸಿಕರಲ್ಲ), ಕು.ಶಿ.ಹರಿದಾಸ ಭಟ್ಟ (ನಾ ಕಂಡ ಇತಾಲಿಯಾ), ಟಿ.ಕೆ.ರಾಮರಾವ್ (ಗೋಳದ ಮೇಲೊಂದು ಸುತ್ತು), ವಿ.ಕೃ.ಗೋಕಾಕ್ (ಸಮುದ್ರದಾಚೆಯಿಂದ), ನೇಮಿಚಂದ್ರ (ಪೆರುವಿನ ಪವಿತ್ರ ಕಣಿವೆ), ದೇಜಗೌ (ಪ್ರವಾಸಿಯ ದಿನಚರಿ),

ನಾಡಿಗ್ ಕೃಷ್ಣಮೂರ್ತಿ (ಸಾಗರದಾಚೆ), ಬಿ.ಜಿ.ಎಲ್.ಸ್ವಾಮಿ (ಅಮೇರಿಕಾದಲ್ಲಿ ನಾನು), ಪ್ರಭುಶಂಕರ (ಅಮೇರಿಕದಲ್ಲಿ ನಾನು, ಶಾಂತಿ), ಎಚ್.ವಿ.ಶ್ರೀರಂಗರಾಜು (ಸೋವಿಯೆತ್ ದಿನಚರಿ), ನವರತ್ನರಾಮ್ (ಪ್ಯಾರಿಸ್ಸಿನಿಂದ ಪ್ರೇಯಸಿಗೆ) ಮುಂತಾದವರು ವಿದೇಶದ ಅನುಭವಗಳನ್ನು ದಾಖಲಿಸಿರುವರಲ್ಲಿ ಪ್ರಮುಖರು. ಎಚ್. ಎಲ್. ನಾಗೇಗೌಡರು ಕನ್ನಡಿಸಿರುವ ಪ್ರವಾಸಿಕಂಡಇಂಡಿಯಾ ಸಂಪುಟಗಳು ಕನ್ನಡ ಪ್ರವಾಸ ಸಾಹಿತ್ಯಕ್ಕೆ ಅದ್ವಿತೀಯ ಕೊಡುಗೆಗಳಾಗಿವೆ.

## ಲಲಿತ ಪ್ರಬಂಧ

ಇದು ಹೊಸಗನ್ನಡದಲ್ಲಿ ಚೆನ್ನಾಗಿ ಬೇರೂರಿರುವ ಪ್ರಕಾರ. ಒಂದು ವಿಷಯದ ಕುರಿತು ಸಣ್ಣಕಥೆ, ವರದಿ, ಆತ್ಮಕತೆಗಿಂತ ಭಿನ್ನವಾಗಿ, ಸರಸವಾದ ಗದ್ಯದಲ್ಲಿ ನಿರೂಪಣೆ ಮಾಡುವುದು ಇದರ ಲಕ್ಷಣ. ವಿಷಯದ ಆಯ್ಕೆಯಲ್ಲಿ, ಶೈಲಿಯಲ್ಲಿ ಲಾಲಿತ್ಯವನ್ನು ತರುವುದು ಇಲ್ಲಿ ಮುಖ್ಯ. ವಿ.ಸೀತಾರಾಮಯ್ಯ (ಬೆಳದಿಂಗಳು, ಸೀಕರಣೆ), ಎ.ಎನ್.ಮೂರ್ತಿರಾವ್ (ಹಗಲುಗನಸುಗಳು), ರಾಕು (ಗಾಳಿಪಟ), ಲಾಂಗೂಲಾಚಾರ್ಯ (ಪಾ.ವೆಂ.ಆಚಾರ್ಯ), ಅ.ರಾ.ಮಿತ್ರ (ಬಾಲ್ಕನಿಯ ಬಂಧುಗಳು), ಸುನಂದಾ ಬೆಳಗಾಂವ್‌ಕರ್ (ಕಜ್ಜಾಯ), ಎಸ್.ದಿವಾಕರ್ (ನಾಪತ್ತೆಯಾದ ಗ್ರಾಮಫೋನ್ ಮತ್ತು ಇತರ ಪ್ರಬಂಧಗಳು) ಕನ್ನಡದ ಕೆಲವು ಉತ್ತಮ ಲಲಿತ ಪ್ರಬಂಧಕಾರರು.

## ಸಾಹಿತ್ಯಕ ಸಂಶೋಧನೆ

ಇಂಗ್ಲಿಷಿನ research (ರಿಸರ್ಚ್) ಎಂಬ ಪರಿಕಲ್ಪನೆಗೆ ಸಂವಾದಿಯಾದದ್ದು ಸಂಶೋಧನೆ. ಹಳೆಯ ಮತ್ತು ಮರೆತ ಸಂಗತಿ, ಅಂಶಗಳನ್ನು ಮತ್ತೆ ಎತ್ತಿ ತೋರಿಸುವುದು ಒಂದು ಬಗೆಯ ಸಂಶೋಧನೆ; ಚಿಂತನೆಗೆ ಹೊಸ ದೃಷ್ಟಿಕೋನ ನೀಡುವುದು ಮತ್ತೊಂದು ಬಗೆಯ ಸಂಶೋಧನೆ. ಆಕರಗಳ ಹುಡುಕಾಟ, ಸಂಕಲನ-ಸಂಪಾದನೆ, ವ್ಯವಸ್ಥೀಕರಣ ಮತ್ತು ವ್ಯಾಖ್ಯಾನ, ಪುನರ್ವಿಮರ್ಶೆ ಸಂಶೋಧನೆಯ ಮೂರು ಹಂತಗಳು. ಕನ್ನಡ ಸಂಸ್ಕೃತಿಯ ಶೋಧನೆ, ಕನ್ನಡ ಕವಿ ಲೇಖಕ-ಲೇಖಕಿಯರನ್ನು ಕುರಿತ ಶೋಧನೆ ಒಂದು ಬಗೆಯದು. ಅದೇ ರೀತಿ ಕರ್ನಾಟಕದಲ್ಲಿರುವ ಪ್ರಮುಖ ಮತ, ಸಮುದಾಯ, ಭಾಷೆಯ ಆಚೆಗಿನ ಕರ್ನಾಟಕ ಕುರಿತ ಸಂಶೋಧನೆ ಇನ್ನೊಂದು ಬಗೆಯದು. ಆರಂಭ ಕಾಲದಲ್ಲಿ ಓರಿಯಂಟಲ್ ವಿದ್ವತ್ತು, ಸಂಸ್ಕೃತಿ, ಹಳಗನ್ನಡ ಪಾಂಡಿತ್ಯ, ಶಾಸನ-ನಾಣ್ಯ-ಹಿರಿಯ ರಾಜವಂಶಗಳ ಅಧ್ಯಯನ, ಕವಿಗಳ ಕಾಲದೇಶ ವಿಚಾರ, ಮತಧರ್ಮದ ವಿಚಾರ, ಕರ್ತೃವಿನ ವಿಚಾರಗಳು ಸಂಶೋಧನೆಯ ಕ್ಷೇತ್ರದಲ್ಲಿ ಪ್ರಮುಖವಾಗಿದ್ದವು. ಪಂಪ, ರನ್ನರಿಂದ ಮೊದಲ್ಗೊಂಡು, ಹಲ್ಮಿಡಿ ಶಾಸನಗಳಿಂದ ಮೊದಲ್ಗೊಂಡ ಅನೇಕ ಶಾಸ್ತ್ರ ಮತ್ತು ಕಾವ್ಯಗಳು ಗ್ರಂಥ ಸಂಪಾದನೆ, ಪಾಠ ಪರಿಷ್ಕಾರ ಹೊಂದಿ ಪ್ರಕಟವಾದವು. ಜತೆಗೆ ಅವುಗಳ ವಿಮರ್ಶೆಯೂ ನಡೆಯಿತು. ಆರ್.ನರಸಿಂಹಾಚಾರ್ಯ, ಎ.ವೆಂಕಟಸುಬ್ಬಯ್ಯ, ಟಿ.ಎಸ್. ವೆಂಕಣ್ಣಯ್ಯ, ಗೋವಿಂದ ಪೈ, ಡಿ.ಎಲ್.ನರಸಿಂಹಾಚಾರ್ಯ, ತೀ.ನಂ.ಶ್ರೀ, ಫ.ಗು.ಹಳಕಟ್ಟಿ, ಶಂ.ಬಾ.ಜೋಶಿ, ಬಿ.ಎ.ಸಾಲತೊರೆ, ನಂದೀಮಠ, ಸ.ಸ.ಮಾಳವಾಡ, ಪಿ.ಬಿ.ದೇಸಾಯಿ, ಆ.ನೇ.ಉಪಾಧ್ಯೆ, ಕೆ.ಜಿ.ಕುಂದಣಗಾರ್, ಸೇಡಿಯಾಪು ಕೃಷ್ಣಭಟ್ಟ, ಬಿ.ಆರ್.ಗೋಪಾಲ್, ಎಂ.ಚಿದಾನಂದಮೂರ್ತಿ, ಎಂ.ಎ.ಕಲಬುರ್ಗಿ, ಹಂಪನಾಗರಾಜಯ್ಯ, ಎಸ್.ಶಿವಣ್ಣ, ಟಿ.ವಿ.ವೆಂಕಟಾಚಲಶಾಸ್ತ್ರೀ, ಎನ್.ಎಸ್.ತಾರಾನಾಥ್, ಷ.ಶೆಟ್ಟರ್, ಶ್ರೀನಿವಾಸ ಹಾವನೂರ,ಕಮಲಾ ಹಂಪನಾ ಮುಂತಾದವರು ಸಂಶೋಧನೆಯ ಕ್ಷೇತ್ರದಲ್ಲಿ ಗಮನಾರ್ಹ ಕೃಷಿ ಮಾಡಿದ್ದಾರೆ. ನಾಡಿನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಹಲವಾರು ಮಂದಿ ಪಿ.ಎಚ್.ಡಿ. ಅಧ್ಯಯನವನ್ನು ಕೈಗೊಂಡು ಅನೇಕ ಮಹತ್ವದ ಸಂಶೋಧನೆಗಳನ್ನು ನಡೆಸಿದ್ದಾರೆ.

## ಗ್ರಂಥ ಸಂಪಾದನೆ

೧೯ನೇ ಶತಮಾನದ ನಾಲ್ಕನೇ ದಶಕದಲ್ಲಿ ಮಂಗಳೂರಿನ ಬಾಸೆಲ್ ಮಿಶನ್ನಿನ ಹರ್ಮನ್ ಮೊಗ್ಲಿಂಗ್‌ರವರು 'ಬಿಬ್ಲಿಯಾಥೆಕಾ ಕರ್ನಾಟಕಾ' ಸರಣಿಯಲ್ಲಿ ಜೈಮಿನಿ ಭಾರತ, ಬಸವಪುರಾಣ, ಕುಮಾರವ್ಯಾಸ ಭಾರತ, ಚೆನ್ನಬಸವಪುರಾಣ ಮುಂತಾದ ಕನ್ನಡ ಗ್ರಂಥಗಳ ಕಲ್ಲಚ್ಚಿನ ಮುದ್ರಣವನ್ನು ತರುವುದರೊಂದಿಗೆ ಗ್ರಂಥ ಸಂಪಾದನೆಯು ಕನ್ನಡದಲ್ಲಿ ಆರಂಭವಾಯಿತು. ಗ್ಯಾರೆಟ್ ಶಬ್ದಮಣಿದರ್ಪಣವನ್ನು ಪ್ರಕಟಿಸಿದ (೧೮೬೮) ನಾಲ್ಕು ವರ್ಷಗಳ ನಂತರ ಕಿಟೆಲ್ ಒಂಬತ್ತು ಹಸ್ತಪ್ರತಿಗಳನ್ನು ಬಳಸಿ ಶಬ್ದಮಣಿದರ್ಪಣದ ಗ್ರಂಥ ಸಂಪಾದನೆ ನಡೆಸಿದರು, ಮತ್ತೆ ಡಿ.ಎಲ್.ನರಸಿಂಹಾಚಾರ್ಯ ಈ ಕೆಲಸವನ್ನು ಪರಿಷ್ಕರಿಸಿದರು. ಬಿ.ಎಲ್.ರೈಸ್ ಅವರು ಆರಂಭಿಸಿದ ಬಿಬ್ಲಿಯೋಥೆಕ ಕರ್ನಾಟಕ ಮಾಲೆಯಲ್ಲಿ ರೈಸ್ ಅವರ ಪ್ರಸ್ತಾವನೆಯೊಂದಿಗೆ ನಾಗಚಂದ್ರನ ಪಂಪ ರಾಮಾಯಣ, ಭಟ್ಟಾಕಳಂಕನ ಕರ್ಣಾಟಕ ಶಬ್ದಾನುಶಾಸನ, ನಾಗವರ್ಮನ ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ಆದಿಕವಿ ಪಂಪನ ಪಂಪಭಾರತ, ಕವಿರಾಜಮಾರ್ಗ – ಇವು ಪ್ರಕಟವಾದವು; ಗ್ರಂಥ ಸಂಪಾದನೆಗೆ ದಾರಿದೀಪಗಳಾದವು. ಆರ್.ನರಸಿಂಹಾಚಾರ್ಯರ ಕಾವ್ಯಾವಲೋಕನ, ಕೆ.ಬಿ.ಪಾಠಕ್ ಅವರ ಕವಿರಾಜಮಾರ್ಗ, ಎಸ್.ಜಿ.ನರಸಿಂಹಾಚಾರ್ಯರ ಪಂಪನ ಆದಿಪುರಾಣ, ಮೈಸೂರು ವಿ.ವಿ.ಪ್ರಕಟಿಸಿರುವ ಕುಮಾರವ್ಯಾಸ ಭಾರತದ ೧೦ ಸಂಪುಟಗಳು, ಡಿ.ಎಲ್.ಎನ್. ಸಂಪಾದಿಸಿದ ವಡ್ಡಾರಾಧನೆ, ಎಲ್.ಬಸವರಾಜು ಸಂಪಾದಿಸಿದ ಅಲ್ಲಮನ ವಚನ ಚಂದ್ರಿಕೆ, ಬಿ.ಎಸ್.ಸಣ್ಣಯ್ಯನವರ ಇಮ್ಮಡಿ ನಾಗವರ್ಮನ ವರ್ಧಮಾನ ಪುರಾಣ, ಇವು ಕನ್ನಡದ ಕೆಲವು ಪ್ರಮುಖ ಗ್ರಂಥಸಂಪಾದನೆಯ ಕೆಲಸಗಳು. ಫ.ಗು.ಹಳಕಟ್ಟಿಯವರು ದೇವರ ದಾಸಿಮಯ್ಯ, ಬಸವೇಶ್ವರ, ಅಲ್ಲಮಪ್ರಭು, ಅಕ್ಕ ಮಹಾದೇವಿ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ ಮುಂತಾದವರ ವಚನಗಳನ್ನು ವಿಂಗಡಿಸಿ, ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ಬೆಳಕಿಗೆ ತಂದರು. ಎಂ.ವಿ.ರಾಮಾನುಜೈಯ್ಯಂಗಾರ್, ಟಿ.ಎಸ್.ವೆಂಕಣ್ಣಯ್ಯ, ಡಿ.ಶ್ರೀನಿವಾಸಾಚಾರ್, ಎಚ್.ದೇವೀರಪ್ಪ, ಶಿಶಿ.ಬಸವನಾಳ, ಶಿ.ಜಿ.ನಂದೀಮಠ, ಆರ್.ಸಿ.ಹಿರೇಮಠ, ಕೆ.ಜಿ.ಕುಂದಣಕಾರ, ಎ.ಶಾಂತರಾಜಶಾಸ್ತ್ರೀ, ಬೆಟಗೇರಿಕೃಷ್ಣಶರ್ಮ, ಎಂ.ವಿ.ಸೀತಾರಾಮಯ್ಯ, ಟಿ.ವಿ.ವೆಂಕಟಾಚಲಶಾಸ್ತ್ರೀ, ತೆಕ್ಕುಂಜ ಗೋಪಾಲಕೃಷ್ಣಭಟ್ಟ, ಎನ್.ಬಸವರಾಧ್ಯ, ಎಂ.ಎಂ.ಕಲಬುರ್ಗಿ, ವೈ.ಸಿ.ಭಾನುಮತಿ, ರಾಮೇಗೌಡ, ಟಿ.ಎನ್.ನಾಗರತ್ನ,

ಜಿ.ಜಿ.ಮಂಜುನಾಥನ್, ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ ಮುಂತಾದವರು ಈ ಕ್ಷೇತ್ರದ ಗಣ್ಯರು.

**ಜೀವನಚರಿತ್ರೆ**

ಕನ್ನಡದಲ್ಲಿ ವೀರಗಲ್ಲು, ಮಾಸ್ತಿಕಲ್ಲು, ಶಾಸನಗಳಲ್ಲಿ, ಹರಿಹರ (ಶಿವಶರಣರ ರಗಳೆಗಳು), ರಾಘವಾಂಕ (ಸಿದ್ಧರಾಮ ಚಾರಿತ್ರ), ಮೈಸೂರು ಒಡೆಯರ ಆಸ್ಥಾನ ಕವಿಗಳ ಸಾಹಿತ್ಯದಲ್ಲಿ (ಕಂಠೀರವ ನರಸರಾಜ ವಿಜಯಂ – ರಣಧೀರ ಕಂಠೀರವನ ಸಾಹಸದ ವಿವರಗಳಿವೆ) ಜೀವನ ಚರಿತ್ರೆಯ ಅಂಶಗಳಿವೆ. ೧೯–೨೦ನೆಯ ಶತಮಾನದಲ್ಲಿ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕ ಬಂದ ಮೇಲೆ ಕನ್ನಡದಲ್ಲಿ ಜೀವನಚರಿತ್ರೆ ಪ್ರಕಾರ ಬೆಳೆಯಿತು.

ಚ.ವಾಸುದೇವಯ್ಯ, ಎಂ.ಎಸ್.ಪುಟ್ಟಣ್ಣ (ಕುಣಿಗಲ್ ರಾಮಶಾಸ್ತ್ರಿಗಳ ಚರಿತ್ರೆ, ಮಹಮದ್ ಗವಾನ್), ಆಲೂರು ವೆಂಕಟರಾಯ, ಡಿವಿಜಿ (ದಿವಾನ್ ರಂಗಾಚಾರ್ಲು, ವಿದ್ಯಾರಣ್ಯರು ಮತ್ತು ಸಮಕಾಲೀನರು), ಮಾಸ್ತಿ (ರವೀಂದ್ರನಾಥ ಠಾಕೂರ್), ಸಿ.ಕೆ.ವೆಂಕಟರಾಮಯ್ಯ (ಆಳಿದ ಮಹಾಸ್ವಾಮಿಗಳು, ಬುದ್ಧ), ಜಿ.ಪಿ.ರಾಜರತ್ನಂ, ಎ.ಆರ್.ಕೃಷ್ಣಶಾಸ್ತ್ರೀ (ಬಂಕಿಮ ಚಂದ್ರ), ಸುಬೋಧ ರಾಮರಾಯರು (ಗುರುನಾನಕ್), ದ.ಕೃ.ಭಾರದ್ವಾಜ, ಟಿ.ಎಸ್.ವೆಂಕಣ್ಣಯ್ಯ (ಶ್ರೀ ರಾಮಕೃಷ್ಣ ಪರಮಹಂಸ), ಜಿ.ಪಿ.ರಾಜರತ್ನಂ (ಧರ್ಮದಾನಿ ಬುದ್ಧ), ಕುವೆಂಪು (ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ) ಮುಂತಾದವರು ಉತ್ತಮ ದರ್ಜೆಯ ಜೀವನಚರಿತ್ರೆಯನ್ನು ರಚಿಸಿದರು. ಆನಂತರ, ಕೋ. ಚೆನ್ನಬಸಪ್ಪ (ಸ್ವಾತಂತ್ರ್ಯಯೋಧ ಶ್ರೀ ಅರವಿಂದ), ಎಸ್.ಆರ್. ರಾಮಸ್ವಾಮಿ (ಕೋಲ್ಮಿಂಚು–ಸುಭಾಷ್‌ಚಂದ್ರ ಬೋಸ್ ಕುರಿತು), ಬಾಬು ಕೃಷ್ಣಮೂರ್ತಿ (ಅಜೇಯ – ಚಂದ್ರಶೇಖರ ಆಜಾದ್ ಬಗ್ಗೆ ಅದಮ್ಯ – ವಾಸುದೇವ ಬಲವಂತ ಫಡಕೆ ಕುರಿತು), ದೇಜಗೌ (ರಾಷ್ಟ್ರಕವಿ ಕುವೆಂಪು), ಶಿವರಾಮ ಕಾರಂತ (ಶ್ರೀರಾಮಕೃಷ್ಣ ಪರಮಹಂಸ ಮತ್ತು ಕಲಾವಿದ ಕೃಷ್ಣ ಹೆಬ್ಬರರು), ತಿರುಮಲೆ ರಾಜಮ್ಮ (ವೀಣೆ ಶೇಷಣ್ಣ), ತಿ.ತಾ.ಶರ್ಮ (ಮೋಕ್ಷಗುಂಡಂ), ಡಿ.ವಿ.ಜಿ. (ಮೈಸೂರಿನ ದಿವಾನರುಗಳು), ಬಿ.ಆರ್.ಪ್ರಾಣೇಶರಾಯ (ಲಾಲ್ ಬಹದ್ದೂರ ಶಾಸ್ತ್ರಿ), ನೇಮಿಚಂದ್ರ (ಮೇಡಂ ಕ್ಯೂರಿ), ಜಿ.ಟಿ.ನಾರಾಯಣರಾವ್ (ಸುಬ್ರಹ್ಮಣ್ಯ ಚಂದ್ರಶೇಖರ್, ಸಿ.ವಿ.ರಾಮನ್), ಕುಂ.ವೀರಭದ್ರಪ್ಪ (ಚಾರ್ಲಿ ಚಾಪ್ಲಿನ್), ವೆಂಕಟರಮಣ (ವಿರಕ್ತ ರಾಷ್ಟ್ರಕ – ಡಿವಿಜಿ), ಇವರು ಕೆಲವು ಗಮನಾರ್ಹ ಜೀವನಚರಿತ್ರೆಗಳನ್ನು ಬರೆದಿದ್ದಾರೆ. ಇದಲ್ಲದೆ ದೇಶ, ವಿದೇಶಗಳ ಮಹನೀಯರ ಜೀವನ ಚರಿತ್ರೆಗಳು ಸಹ ಕನ್ನಡಕ್ಕೆ ಅನುವಾದಗೊಂಡಿವೆ.

**ಆತ್ಮಕಥೆ**

ವ್ಯಕ್ತಿಯೊಬ್ಬ ತನ್ನ ಜೀವನದ ಘಟನೆಗಳನ್ನು ಅಥವಾ ಬದುಕು ಹೇಗೆ ಕಂಡಿತು ಎಂಬ ವಿವರಗಳನ್ನು ತಾನೇ ದಾಖಲಿಸಿದರೆ ಅದು ಆತ್ಮಕಥೆ ಎನಿಸುತ್ತದೆ.ಮಾಸ್ತಿ (ಭಾವ), ಶಿವರಾಮಕಾರಂತ (ಹುಚ್ಚು ಮನಸ್ಸಿನ ಹತ್ತು ಮುಖಗಳು ಮತ್ತು ಸ್ಮೃತಿಪಟಲದಿಂದ), ಕುವೆಂಪು (ನೆನಪಿನ ದೋಣಿಯಲ್ಲಿ), ಲಂಕೇಶ್ (ಹುಳಿಮಾವಿನ ಮರ), ಗೋಪಾಲಕೃಷ್ಣ ಅಡಿಗ (ನೆನಪಿನ ಗಣಿಯಿಂದ), ಗಿರೀಶ್ ಕಾರ್ನಾಡ (ಆಡಾಡ್ತ ಆಯುಷ್ಯ), ಪ್ರತಿಭಾನಂದ ಕುಮಾರ (ಅನುದಿನದ ಅಂತರಂಗ), ನವರತ್ನ ರಾಮರಾವ್ (ಕೆಲವು ನೆನಪುಗಳು), ತ.ರಾ.ಸು (ಹಿಂತಿರುಗಿ ನೋಡಿದಾಗ), ರಾಜರತ್ನಂ (ಹತ್ತು ವರ್ಷಗಳು), ಬೀಚಿ (ನನ್ನ ಬಯಾಗ್ರಫಿ), ಎ.ಎನ್. ಮೂರ್ತಿರಾವ್ (ಸಂಜೆಗಣ್ಣಿನ ಹಿನ್ನೋಟ), ಅನುಪಮಾ ನಿರಂಜನ (ಬರಹಗಾರ್ತಿಯ ಬದುಕು), ಎಸ್.ಎಲ್.ಭೈರಪ್ಪ (ಭಿತ್ತಿ), ಸಿದ್ದಲಿಂಗಯ್ಯ (ಊರುಕೇರಿ), ಜೋಳದರಾಶಿ ದೊಡ್ಡಣ್ಣಗೌಡ (ನಂದೇ ನಾನೋದಿದೆ), ಎಚ್.ಎಲ್.ನಾಗೇಗೌಡ (ನಾಗಸಿರಿ), ಯು.ಆರ್.ಅನಂತಮೂರ್ತಿ (ಸುರಗಿ), ಬೇಂದ್ರೆ (ಚತುರ್ಮುಖ), ದೇಜಗೌ (ಹೋರಾಟದ ಬದುಕು), ಆಲೂರು ವೆಂಕಟರಾಯ (ಜೀವನಸ್ಮರಣೆ), ಶ್ರೀರಂಗ (ಗಾಢನೆನಪುಗಳು) ಕನ್ನಡದ ಕೆಲವು ಪ್ರಸಿದ್ಧ ಆತ್ಮಚರಿತ್ರೆಗಳು.

**ವಿಜ್ಞಾನ ಸಾಹಿತ್ಯ:**

ಪ್ರಾಚೀನ ಕಾಲದಿಂದಲೂ ಗಣಿತ, ಖಗೋಳ ವಿಜ್ಞಾನ, ವೈದ್ಯಕೀಯ, ಪಶು ವಿಜ್ಞಾನ ಮುಂತಾದ ವಿಜ್ಞಾನದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಕೃತಿಗಳು ರಚಿತವಾಗಿರುವುದನ್ನು ಕಾಣಬಹುದು. ರಾಜಾದಿತ್ಯನ ವ್ಯವಹಾರಗಣಿತ, ಕ್ಷೇತ್ರಗಣಿತ, ಶ್ರೀ ಪುರುಷನ ಗಜಶಾಸ್ತ್ರ, ಕೀರ್ತಿವರ್ಮನ ಗೋವೈದ್ಯ, ಮಂಗರಾಜನ ಖಗೇಂದ್ರಮಣಿದರ್ಪಣ ಮುಂತಾದವು ಕೆಲವು ಪ್ರಾಚೀನಕಾಲದ ವೈಜ್ಞಾನಿಕ ಕೃತಿಗಳು. ಇವು ಮಾತ್ರವೇ ಅಲ್ಲದೆ ಚಾವುಂಡರಾಯನ ಲೋಕೋಪಕಾರ, ಜಗದ್ದಳ ಸೋಮನಾಥನ ಕರ್ಣಾಟಕ ಕಲ್ಯಾಣಕಾರಕ, ಸೋಮೇಶ್ವರನ ಮಾನಸೋಲ್ಲಾಸ ಮುಂತಾದ ವಿಶ್ವಕೋಶ ಸ್ವರೂಪದ ಕೃತಿಗಳಲ್ಲಿಯೂ ಹಲವಾರು ವೈಜ್ಞಾನಿಕ ವಿವರಗಳು ದಾಖಲಾಗಿದೆ.

೧೯ನೇ ಶತಮಾನದಲ್ಲಿ ಮುದ್ರಣಕಲೆಯ ಪರಿಚಯದೊಂದಿಗೆ ಹಲವಾರು ವಿಜ್ಞಾನ ಸಂಬಂಧಿ ಕೃತಿಗಳೂ ಕನ್ನಡದಲ್ಲಿ ಕಂಡುಬಂದವು. ಇವೆಲ್ಲ ಬಹುಮಟ್ಟಿಗೆ ಅನುವಾದಿತ ಕೃತಿಗಳೇ ಆದರೂ ಕನ್ನಡದ ಜಾಯಮಾನಕ್ಕೆ ಇವು ಹೊಂದಿಕೊಂಡಿವೆ. ಸಹಸ್ರಾರ್ಧ ವೃಕ್ಷಾದಿಗಳ ವರ್ಣನೆ, ವ್ಯವಸಾಯ ಕ್ರಮಬೋಧಿಸಿ, ಕನ್ನಡ ಯಂತ್ರಶಾಸ್ತ್ರ, ಖನಿಜಶಾಸ್ತ್ರ, ವನಸ್ಪತಿಶಾಸ್ತ್ರ ಮುಂತಾದವು ಈ ಕಾಲದ ವಿಜ್ಞಾನ ಸಂಬಂಧಿ ಕೃತಿಗಳಿಗೆ ಉದಾಹರಣೆಗಳು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಬೆಳ್ಳಾವೆವೆಂಕಟನಾರಣಪ್ಪನವರು ನೂರು ಮತ್ತು ರಾಜ್ಯ ಪವನ ವಿಜ್ಞಾನ ಇಲಾಖೆಯಲ್ಲಿದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್‌ರವರು ಸರ್. ಎಂ.ವಿಶ್ವೇಶ್ವರಯ್ಯನವರ ಸಲಹೆಯ ಮೇರೆಗೆ ೧೯೧೭ರಲ್ಲಿ 'ವಿಜ್ಞಾನ ಪ್ರಚಾರಿಣೀ ಸಮಿತಿ'ಯನ್ನು ಆರಂಭಿಸಿದರು. ಈ ಸಂಸ್ಥೆಯ ಮುಖವಾಣಿಯಾದ 'ವಿಜ್ಞಾನ' ಪತ್ರಿಕೆಯು ಹೊಸಗನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬೆಳವಣಿಗೆ ಕಾರಣವಾಯಿತೆನ್ನಬಹುದು. ಬೆಳ್ಳಾವೆಯವರು ರಚಿಸಿದ 'ಉಷ್ಣವಿಷಯ' ಹಾಗೂ 'ಜೀವವಿಜ್ಞಾನ' ಕೃತಿಗಳು ಹಾಗೂ ನಂಗಪುರಂ ರವರು ಇಂಗ್ಲಿಷಿನಿಂದ ಅನುವಾದಿಸಿದ 'ಜ್ಯೋತಿರ್ವಿನೋದಿನಿ' ಸರಸವಾದ ನಿರೂಪಣೆ ಹಾಗೂ ನಿಖರವಾದ ಪಾರಿಭಾಷಿಕ ಪದಗಳ ಬಳಕೆಗಳಿಂದಾಗಿ ಪ್ರಸಿದ್ಧವಾಗಿವೆ. ಸಿ.ಎನ್.ಶ್ರೀನಿವಾಸಯ್ಯಂಗಾರ್ (ಖಗೋಳಶಾಸ್ತ್ರ ಪ್ರವೇಶಿ, ಸೌರವ್ಯೂಹ), ವೆಂಕಟೇಶ ಘೋಂಡೊ (ಕುಡಿಯುವ

ನೀರು, ಪ್ರಬುದ್ಧ ವೈದ್ಯ ಬೋಧಿಸಿ), ಕಪಿನೀಪತಿ ಭಟ್ಟ (ಜಲಶಕ್ತಿ), ಕೆ.ಶೇಷಾದ್ರಿ ಅಯ್ಯಂಗಾರ್ (ಸಚಿತ್ರ ಕರ್ನಾಟಕ ಉದ್ಭಿಜ ಶಾಸ್ತ್ರ), ಬಿ.ವಿ.ಸುಬ್ಬರಾಯಪ್ಪ (ನೀರು, ಆಹಾರ ಮತ್ತು ದೇಹ ಪೋಷಣೆ), ಶಿವರಾಮಕಾರಂತ (ಬಾಲಪ್ರಪಂಚ ಸಂಪುಟಗಳು), ಆರ್.ಎಲ್.ನರಸಿಂಹಯ್ಯ (ಜಗತ್ತಿನ ಹುಟ್ಟು – ಸಾವು, ಶಕ್ತಿ, ನಕ್ಷತ್ರದರ್ಶನ) ಮುಂತಾದವರು ೨೦ನೇ ಶತಮಾನದ ಪೂರ್ವಾರ್ಧದ ಪ್ರಮುಖ ವಿಜ್ಞಾನ ಲೇಖಕರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಗಳಾದ ಪ್ರಬುದ್ಧ ಕರ್ನಾಟಕ ಹಾಗೂ ವಿಜ್ಞಾನ ಕರ್ನಾಟಕಗಳು ಹಲವಾರು ಮಂದಿ ವಿಜ್ಞಾನ ಬರಹಗಾರರಿಗೆ ವೇದಿಕೆಯಾದವು. ಜೆ.ಆರ್.ಲಕ್ಷ್ಮಣರಾವ್ (ಆಹಾರ, ಆಕಸ್ಮಿಕ ಆವಿಷ್ಕಾರಗಳು), ಜಿ.ಟಿ.ನಾರಾಯಣರಾವ್ (ಕೊಪರ್ನಿಕಸ್ ಕ್ರಾಂತಿ, ಕೃಷ್ಣ ವಿವರಗಳು), ಆಡ್ವನಡ್ಕ ಕೃಷ್ಣಭಟ್ (ಗಗನಯುಗ, ಫಿಸಿಕ್ಸ್ ಮತ್ತು ಐನ್‌ಸ್ಟೈನ್), ಎಂ.ಎ ಸೇತುರಾವ್ (ಪರಮಾಣು ಶಾಸ್ತ್ರಗಳು, ಅರವತ್ತು ಪ್ರಶ್ನೆಗಳು,), ಬಿ.ಜಿ.ಎಲ್.ಸ್ವಾಮಿ (ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ, ದೌರ್ಗಂಧಿಕಾಪಹರಣ), ಎಚ್.ಬಿ.ದೇವರಾಜ ಸರ್ಕಾರ್ (ಮೀನಿನಿಂದ ಮಾನವನೆಡೆಗೆ, ಅನುವಂಶೀಯತೆ), ಕೃಷ್ಣಾನಂದ ಕಾಮತ್ (ಪ್ರಾಣಿ ಪರಿಸರ, ಕೀಟಜಗತ್ತು), ಎಚ್.ಆರ್. ರಾಮಕೃಷ್ಣರಾವ್ (ಅಂತರಿಕ್ಷ, ಶುಕ್ರ ಸಂಕ್ರಮ), ಬಿ.ಪಿ.ರಾಧಾಕೃಷ್ಣ (ಅಂತರ್ಜಲ), ಸ.ಜ.ನಾಗಲೋಟಿಮಠ (ರಾಬರ್ಟ್‌ಕಾಕ್, ಆರೋಗ್ಯ ಅಂದು ಇಂದು), ಅನುಪಮಾ ನಿರಂಜನ (ಕೇಳು ಕಿಶೋರಿ, ದಾಂಪತ್ಯ ದೀಪಿಕೆ), ಎಂ.ಆರ್.ನಾಗರಾಜು (ತಾಪಪ್ರತಾಪ, ರಸಸ್ವಾರಸ್ಯ), ನಾಗೇಶಹೆಗಡೆ (ಇರುವುದೊಂದೆ ಭೂಮಿ, ನಮ್ಮೊಳಗಿನ ಬ್ರಹ್ಮಾಂಡ), ಎಚ್.ಆರ್.ಕೃಷ್ಣಮೂರ್ತಿ (ಜೈವಿಕ ವೈವಿಧ್ಯ, ಕಲ್ಪವೃಕ್ಷದ ಜಾಡುಹಿಡಿದು), ಟಿ.ಆರ್. ಅನಂತರಾಮು (ಧಣಿ ಇಲ್ಲದ ಧರಣಿ, ದೂರದರ್ಶಕ ಕಂಡ ವಿಶ್ವರೂಪ), ಪೂರ್ಣಚಂದ್ರ ತೇಜಸ್ವಿ (ಪರಿಸರದ ಕತೆ, ಮಿಸ್ಸಿಂಗ್ ಲಿಂಕ್), ಬಾಲಚಂದ್ರರಾವ್ (ಆರ್ಯಭಟ, ಗಣಿತಶಾಸ್ತ್ರದ ಪ್ರವರ್ತಕರು), ಡಿ.ಆರ್.ಬಳೂರಗಿ (ಲೋಹಗಳು, ಪರಮಾಣು ಶಕ್ತಿ) ರಾ.ಶಿವರಾಂ (ಮನೋನಂದನ, ಮನಮಂಥನ), ಬಿ.ಎಸ್. ರುಕ್ಕಮ್ಮ (ಫೇಬರನ ಕೀಟಲೋಕ, ಮೇರಿಕ್ಯೂರಿ) ಮುಂತಾದ ಹಿರಿಯರು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬೇರುಗಳನ್ನು ಭದ್ರವಾಗಿ ವಾದಿಸಿದ್ದಾರೆ.

ಇಂದು ಕನ್ನಡದ ಎಲ್ಲ ಪತ್ರಿಕೆಗಳಲ್ಲಿ ವಿಜ್ಞಾನ ಸಂಬಂಧೀ ಬರವಣಿಗೆಗಳು ಪ್ರಕಟವಾಗುತ್ತಿವೆ. ಸಿ.ಆರ್.ಚಂದ್ರಶೇಖರ್, ಬಿ.ಎಂ. ಹೆಗ್ಡೆ, ಪದ್ಮಿನಿರಾವ್, ಸಿ.ಅನ್ನಪೂರ್ಣಮ್ಮ, ಡಿ.ಕೆ.ಮಹಾಬಲರಾಜು, ಪಿ.ಎಸ್.ಶಂಕರ್, ಶ್ರೀಮತಿ ಹರಿಪ್ರಸಾದ್, ನೇಮಿಚಂದ್ರ, ಬಿ.ಎಸ್.ಶೈಲಜಾ, ಹಾಲ್ದೊಡ್ಡೇರಿ ಸುಧೀಂದ್ರ, ಕೊಳ್ಳೇಗಾಲ ಶರ್ಮ, ಬಿ.ಆರ್.ಗುರುಪ್ರಸಾದ್, ವಸುಂಧರಾ ಭೂಪತಿ, ನಾ.ಸೋಮೇಶ್ವರ, ಯು.ಬಿ.ಪವನಜ, ಬಿ.ಎಸ್.ಸೋಮಶೇಖರ್, ಎನ್.ವಾಸುದೇವ್, ಎಚ್.ಎಸ್.ನಿರಂಜನಾರಾಧ್ಯ, ಜಿ.ಎನ್.ನರಸಿಂಹಮೂರ್ತಿ, ಸುಮಂಗಲ ಎಸ್.ಮುಮ್ಮಿಗಟ್ಟಿ, ಎನ್.ಎಸ್.ಲೀಲಾ, ಟಿ.ಜಿ.ಶ್ರೀನಿಧಿ, ರೋಹಿತ್ ಚಕ್ರತೀರ್ಥ, ಎಸ್.ಕ್ಷಮಾ ವಿ.ಎಸ್.ಎಸ್.ಶಾಸ್ತ್ರೀ ಮುಂತಾದ ಹಲವಾರು ಲೇಖಕರು ವಿಜ್ಞಾನದ ಅತ್ಯಾಧುನಿಕ ಸಂಗತಿಗಳನ್ನು ಜನಸಾಮಾನ್ಯರಿಗೆ ತಿಳಿಯಾದ ಭಾಷೆಯಲ್ಲಿ ವಿವರಿಸಿ ಹೇಳುವ ಕಾಯಕದಲ್ಲಿ ತೊಡಗಿದ್ದಾರೆ. ಕೇವಲ ವಿಶ್ವವಿದ್ಯಾಲಯಗಳು ಮಾತ್ರವಲ್ಲದೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು, ಭಾರತ ಜ್ಞಾನ ವಿಜ್ಞಾನ ಸಮಿತಿ, ಎನ್‌ಎಎಲ್ ಮುಂತಾದ ಸಂಘ ಸಂಸ್ಥೆಗಳು ವಿಜ್ಞಾನ ಸಾಹಿತ್ಯದ ಪ್ರಚಾರಕ್ಕೆ ಬೆಂಬಲವಾಗಿವೆ. ನವಕರ್ನಾಟಕ ಪ್ರಕಾಶನ, ಸ್ವಪ್ನಬುಕ್‌ಹೌಸ್, ಇಂಡಿಯಾ ಬುಕ್‌ಹೌಸ್‌ನಂತಹ ಖಾಸಗಿ ಪ್ರಕಾಶನ ಸಂಸ್ಥೆಗಳೂ ಈ ನಿಟ್ಟಿನಲ್ಲಿ ಗಮನಾರ್ಹ ಸೇವೆ ಸಲ್ಲಿಸಿವೆ. ವಿಜ್ಞಾನ, ಬಾಲವಿಜ್ಞಾನ, ವಿಜ್ಞಾನ ಕರ್ನಾಟಕ, ಜನಪ್ರಿಯ ವಿಜ್ಞಾನ, ಆಹಾರ ವಿಜ್ಞಾನ, ವಿಜ್ಞಾನ ಸಂಗಾತಿ, ಅಡಿಕೆ ಪತ್ರಿಕೆ ಮೊದಲಾದ ವಿಜ್ಞಾನ ಸಂಬಂಧಿ ಪತ್ರಿಕೆಗಳು ಹಲವಾರು ಲೇಖಕರನ್ನು ಪ್ರೋತ್ಸಾಹಿಸಿವೆ.

### ವಿಶ್ವಕೋಶಗಳು

ಜ್ಞಾನದ ವಿವಿಧ ಶಾಖೆಗಳ ವ್ಯಾಪಕವಾದ ಪರಿಚಯವನ್ನು ನೀಡುವ ಕೃತಿಗಳೇ ವಿಶ್ವಕೋಶಗಳು. ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ, ಎರಡನೇ ಚಾವುಂಡರಾಯನ ಲೋಕೋಪಕಾರ, ಲಕ್ಕಣ ದಂಡೇಶನ ಶಿವ ತತ್ವ ಚಿಂತಾಮಣಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಶ್ರೀತತ್ತ್ವ ನಿಧಿ ಮುಂತಾದವು ವಿಶ್ವಕೋಶ ಸ್ವರೂಪದ ಸಾಂಪ್ರದಾಯಿಕ ಕೃತಿಗಳು. ಹೊಸಗನ್ನಡದಲ್ಲಿ ವಿಶ್ವಕೋಶವನ್ನು ಮೊತ್ತ ಮೊದಲಿಗೆ ರಚಿಸಿದ ಹೆಗ್ಗಳಿಕೆ ಶಿವರಾಮಕಾರಂತರದು. ಮೂರು ಸಂಪುಟಗಳಲ್ಲಿ ರಚಿತವಾದ ಅವರ 'ಬಾಲಪ್ರಪಂಚ' ಹಾಗೂ ನಾಲ್ಕು ಸಂಪುಟಗಳಲ್ಲಿರುವ 'ವಿಜ್ಞಾನ ಪ್ರಪಂಚ'ಗಳು ಅದ್ವಿತೀಯವಾದವು. ನಿರಂಜನರ ಪ್ರಧಾನ ಸಂಪಾದಕತ್ವದ ಏಳು ಸಂಪುಟಗಳ ಜ್ಞಾನ ಗಂಗೋತ್ರಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಯಾದ, ಚಂದ್ರಶೇಖರ ಕಂಬಾರರ ಸಂಪಾದಕತ್ವದ ಕನ್ನಡ ಜನಪದ ಕೋಶ, ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಹಲವು ವಿಷಯಾಧಾರಿತ ವಿಶ್ವಕೋಶಗಳು ಹಾಗೂ ಕಿರಿಯರ ಕರ್ನಾಟಕ ವಿಶ್ವಕೋಶ, ನವಕರ್ನಾಟಕ ಪ್ರಕಾಶನದ ಜ್ಞಾನ ವಿಜ್ಞಾನಕೋಶ, ಉದಯಭಾನು ಕಲಾಸಂಘದ ಪ್ರಕಟಣೆಯಾದ ಬೆಂಗಳೂರು ದರ್ಶನ ಹಾಗೂ ಅತ್ಯಂತ ಪ್ರಮುಖವಾಗಿ ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ೧೪ ಸಂಪುಟಗಳ ಸಾಮಾನ್ಯ ವಿಶ್ವಕೋಶ ಹಾಗೂ ವಿಷಯ ವಿಶ್ವಕೋಶಗಳು ತಮ್ಮ ಮಾಹಿತಿ ಸಂಪತ್ತಿನಿಂದ ಶ್ರೀಮಂತವಾಗಿವೆ.

### ಹಾಸ್ಯ ಸಾಹಿತ್ಯ

ಓದುಗರನ್ನು ನಗೆಗಡಲಿನಲ್ಲಿ ತೇಲಿಸುವ ಹಾಸ್ಯ ಸಾಹಿತ್ಯ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಮುದ್ದಣನ ರಾಮಾಶ್ವಮೇಧ, ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೊ ಮಹಾರಾಯ' ಮುಂತಾದ ಕೃತಿಗಳಲ್ಲಿ ಹಾಸ್ಯದ ಎಳೆ ಮಿಂಚುವುದನ್ನು ಕಾಣಬಹುದು. ಆರ್.ನರಸಿಂಹಾಚಾರ್ಯರ 'ನಗೆಗಡಲು' ಗಾಂಪ ಗುರು–ಶಿಷ್ಯರ ಪೆದ್ದುತನದ ನಿರೂಪಣೆಯಿದೆ. ತಮ್ಮ ಕನ್ನಡಾಂಗ್ಲ ಭಾಷೆಯ ರಚನೆಗಳಿಂದ ಕೈಲಾಸಂ ಹಾಸ್ಯರಸಕ್ಕೆ ಹೊಸದೊಂದು ಆಯಾಮವನ್ನು ತಂದುಕೊಟ್ಟರು. ರಾ.ಶಿ. ಎಂಬ ಹೆಸರಿನಿಂದ ಖ್ಯಾತರಾದ ರಾ.ಶಿವರಾಂ (ಕೊರವಂಜಿ, ತುಟಿ ಮೀರಿದುದು), ನಾ.ಕಸ್ತೂರಿ (ಅನರ್ಥಕೋಶ), ಟಿ.ಸುನಂದಮ್ಮ (ಜಂಬದ ಚೀಲ, ಬಣ್ಣದ ಚಿಟ್ಟೆ), ದಾಶರಥೀ ದೀಕ್ಷಿತ್ (ಗಾಂಪರಗುಂಪು, ಪಕೋಡಪ್ರಿಯರು), ಆ.ರಾ.ಸೇ (ಸುಳಿನಗು), ಜಿ.ಪಿ.ರಾಜರತ್ನಂ

(ನರಕದ ನ್ಯಾಯ, ಮಹಾಕವಿ ಪುರುಷ ಸರಸ್ವತಿ), ನಾಡಿಗೇರ ಕೃಷ್ಣರಾಯ (ಅಡ್ಡಾದಿಡ್ಡಿ), ಬೀಚಿ (ತಿಮ್ಮಮನ ತಲೆ, ಚಿನ್ನದ ಕಸ, ಕಾಮಣ) ಪಾವೆಂ ಆಚಾರ್ಯ (ಹರಟೆಗಳು), ಟಿ.ಜಿ.ಎಲ್.ಸ್ವಾಮಿ (ತಮಿಳು ತಲೆಗಳ ನಡುವೆ, ಪ್ರಾಧ್ಯಾಪಕನ ಪೀಠದಲ್ಲಿ) ನುಗ್ಗೆಹಳ್ಳಿ ಪಂಕಜ (ಮದುವೆ ಗೊತ್ತಾದಾಗ, ಬಳ್ಳಿಮೊಗ್ಗು), ಎಚ್.ಕೆ.ರಂಗನಾಥ್ (ಕ್ಯಾಪಿಟಲ್ ಪನಿಷ್ಮೆಂಟ್, ಪರದೇಶಿಯಾದಾಗ) ಮುಂತಾದವರ ಕೃತಿಗಳಲ್ಲಿ ಕೇವಲ ಮನಹಗುರಾಗಿಸುವ ಹಾಸ್ಯ ಮಾತ್ರವಲ್ಲದೆ ಸಾಮಾಜಿಕ ಸಂಗತಿಗಳ ವಿಡಂಬನೆಯೂ ಇದೆ. ಇತ್ತೀಚೆಗೆ ಅ.ರಾ.ಮಿತ್ರ, ಸಿ.ಕೆ.ಎನ್.ರಾಜ, ಎಂ.ಎಸ್. ನರಸಿಂಹಮೂರ್ತಿ, ಎಚ್.ಎಲ್.ಕೇಶವಮೂರ್ತಿ, ಡುಂಡಿರಾಜ್, ಭುವನೇಶ್ವರಿ ಹೆಗಡೆ, ಬಿ.ಚಂದ್ರೇಗೌಡ, ಪ್ರೊ॥ ಕೃಷ್ಣೇಗೌಡ, ಮುಂತಾದವರು ಹಾಸ್ಯದ ಹೊನಲು ಹರಿಯುವುದಕ್ಕೆ ಕಾರಣರಾಗಿದ್ದಾರೆ.

### ಅಂಕಣ ಸಾಹಿತ್ಯ

ಕನ್ನಡ ನಿಯತಕಾಲಿಕೆಗಳಲ್ಲಿ 'ಅಂಕಣ' ವೆಂಬ ಸ್ಥಿರ ಶೀರ್ಷಿಕೆ ಪ್ರಾರಂಭವಾದ ಬಳಿಕ ಕನ್ನಡಗದ್ಯಕ್ಕೆ ಇನ್ನೊಂದು ಬಣ್ಣದ ಎಳೆ ಸೇರಿಕೊಂಡಿತು. ಕು.ಶಿ.ಹರಿದಾಸಭಟ್ಟ (ಲೋಕಾಭಿರಾಮ), ನಿರಂಜನ (ಸಾಧನ ಸಂಚಯ), ಹಾ.ಮಾ.ನಾಯಕ (ಸಾಂಪ್ರತ), ಎಚ್ಚೆಸ್ಕೆ (ವಾರದವ್ಯಕ್ತಿ), ವೈ.ಎಸ್ಕೆ (ವಂಡರ್ ಕಣ್ಣು), ಪಾವೆಂ ಆಚಾರ್ಯ (ಪದಾರ್ಥ ಚಿಂತಾಮಣಿ), ಟಿ.ಎಸ್ಸಾರ್ (ಛೂ ಬಾಣ) ಮೊದಲಾದವರ ಅಂಕಣಗಳು ಜನಪ್ರಿಯ. ಇತ್ತೀಚೆಗೆ ಪತ್ರಿಕಾ ಸಂಪಾದಕರುಗಳಾದ ವಿಶ್ವೇಶ್ವರಭಟ್ಟ, ರವಿಬೆಳಗೆರೆ, ಪದ್ಮರಾಜ ದಂಡಾವತಿ ಮುಂತಾದವರುಗಳ ಜೊತೆಗೆ ಲಕ್ಷ್ಮೀಶ ತೋಳ್ಪಾಡಿ, ನಾಗತಿಹಳ್ಳಿ ಚಂದ್ರಶೇಖರ್, ಚಂದ್ರಶೇಖರ ಆಲೂರು, ನೇಮಿಚಂದ್ರ ಕೆ.ಎಸ್.ನಾರಾಯಣಚಾರ್ಯ, ಶ್ರೀವತ್ಸ ಜೋಶಿ, ಗುರುರಾಜ ಕರ್ಜಗಿ, ಷಡಕ್ಷರಿ, ಎನ್.ವಾಸುದೇವ್, ನಾಗೇಶ ಹೆಗಡೆ, ಮುಂತಾದವರು ಅಂಕಣ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅ.ನಾ. ಪ್ರಹ್ಲಾದರಾವ್ ತಮ್ಮ 'ಪದಬಂಧ'ಗಳಿಂದ ಖ್ಯಾತರು.

### ಅಭಿನಂದನ, ಸಂಸ್ಕರಣ ಗ್ರಂಥಗಳು

ಕನ್ನಡ ನಾಡು – ನುಡಿಗಳ ಉನ್ನತಿಗಾಗಿ ದುಡಿದ ಅನೇಕ ಮಹನೀಯರ ಮತ್ತು ಸಂಸ್ಥೆಗಳ ಗೌರವಾರ್ಥವಾಗಿ ಗ್ರಂಥಗಳನ್ನು ಸಂಕಲಿಸಿ ಪ್ರಕಟಿಸುವ ಪದ್ಧತಿ ಕನ್ನಡದಲ್ಲಿ ವಿಶಿಷ್ಟವಾದದ್ದು. ಬಿ.ಎಂ.ಶ್ರೀಯವರಿಗೆ ಅರ್ಪಿಸಲಾದ 'ಸಂಭಾವನೆ' ಈ ಸಾಲಿನಲ್ಲಿ ಮೊದಲನೆಯದು. ಫ.ಗುಹಳಕಟ್ಟಿ (ವಚನ ಪಿತಾಮಹ), ಡಿ.ಎಲ್.ನರಸಿಂಹಾಚಾರ್ (ಜ್ಞಾನೋಪಾಸಕ, ಉಪಾಯನ), ಕುವೆಂಪು (ಗಂಗೋತ್ರಿ, ಸಹ್ಯಾದ್ರಿ), ಗೋವಿಂದ ಪೈ (ದೀವಿಗೆ), ಟಿ.ಎಸ್.ವೆಂಕಣ್ಣಯ್ಯ (ಸವಿನೆನಪು), ಅನಕೃ (ರಸಚೇತನ), ಶಂಬಾಜೋಶಿ (ಅಧ್ಯಯನ), ಎ.ಆರ್.ಕೃಷ್ಣ ಶಾಸ್ತ್ರೀ (ಅಭಿನಂದನೆ), ತ.ಸು.ಶಾಮರಾಯ (ಸ್ವಸ್ತಿ), ಹಾ.ಮಾ.ನಾಯಕ (ಮಾನ), ಟಿ.ವಿ.ವೆಂಕಟಾಚಲ ಶಾಸ್ತ್ರೀ (ಶ್ರೀಮುಖ, ಕನ್ನಡಮೇರು), ಕೆ.ಕೃಷ್ಣಮೂರ್ತಿ (ಅಭಿಜ್ಞಾನ), ಎಂ.ಚಿದಾನಂದಮೂರ್ತಿ (ಸಂಶೋಧನೆ), ಎಂ.ಎಂ.ಕಲಬುರ್ಗಿ (ಮಹಾಮಾರ್ಗ), ಜಿ.ವೆಂಕಟಸುಬ್ಬಯ್ಯ (ಶತನಮನ), ಶ್ರೀನಿವಾಸ ಹಾವನೂರ (ಸಂಕಥನ) ಮುಂತಾದ ನೂರಾರು ಮಂದಿ ಗಣ್ಯರಿಗೆ ಅಭಿನಂದನ ಗ್ರಂಥಗಳನ್ನು ಸಮರ್ಪಿಸಲಾಗಿದೆ.

### ಮಕ್ಕಳ ಸಾಹಿತ್ಯ

ಚಿಕ್ಕ ವಯಸ್ಸಿನವರಿಗೆ ಮುದಕೊಡುವ ಹಾಡು, ಕತೆ, ಕಾದಂಬರಿ ಮುಂತಾದವುಗಳನ್ನು ರಚಿಸುವ ಕಾರ್ಯ ಕನ್ನಡದಲ್ಲಿ ೧೯ನೇ ಶತಮಾನದಿಂದಲೇ ಆರಂಭವಾಯಿತು. ಮನರಂಜನೆಯ ಜೊತೆ ಜೊತೆಗೆ ನೀತಿಯನ್ನು ಬೋಧಿಸುವಂತಹ ರಚನೆಗಳನ್ನು ಆಕಾಲ ಪಠ್ಯಪುಸ್ತಕಗಳಲ್ಲಿ ಕಾಣಬಹುದು. ಸೋಸಲೆ ಅಯ್ಯಾಶಾಸ್ತ್ರೀ, ಜಯರಾಯಾಚಾರ್ಯ (ಅನುಕರಣ ಗೀತಲಹರಿ) ಎಸ್.ಜಿ.ನರಸಿಂಹಾಚಾರ್ಯ ಪಂಜೆಮಂಗೇಶರಾವ್ ಮುಂತಾದವರು ಆ ಶತಮಾನದ ಅಂತ್ಯದವೇಳೆಗೆ ಪ್ರಸಿದ್ಧರಾಗಿದ್ದ ಬಾಲಸಾಹಿತ್ಯ ನಿರ್ಮಾತೃಗಳು.

೨೦ನೇ ಶತಮಾನದಲ್ಲಿ ಮಕ್ಕಳ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಹೊಯಿಸಳ, ಜಿ.ಪಿ.ರಾಜರತ್ನಂ ಮೇವುಂಡಿ ಮಲ್ಲಾರಿ, ಕುವೆಂಪು, ಕಾರಂತ, ವಿ.ಜಿ. ಭಟ್ಟ, ಕೆಮ್ತೂರು ದೊಡ್ಡಣ್ಣ ಶೆಟ್ಟಿ, ಪಳಕಳ ಸೀತಾರಾಮಭಟ್ಟ, ಸಿದ್ದಯ್ಯ ಪುರಾಣಿಕ, ಎಂ.ವಿ.ಸೀತಾರಾಮಯ್ಯ, ಸಿ.ಫ.ಕಟ್ಟೀಮನಿ, ಶಂ.ಗು.ಬಿರದಾರ, ನವಗಿರಿನಂದ, ಮಚ್ಚಿಮಲೆ ಶಂಕರನಾರಾಯಣರಾವ್, ದಿನಕರ ದೇಸಾಯಿ, ಕಯ್ಯಾರ ಕಿಂಞಣ್ಣರೈ, ಪರಶುರಾಮ ಚಿತ್ರಗಾರ, ಕಂಚ್ಯಾಣಿ ಶರಣಪ್ಪ, ಸಿ.ಸು.ಸಂಗಮೇಶ, ರಸಿಕ ಪುತ್ತಿಗೆ, ಈಶ್ವರ ಕಮ್ಮಾರ, ಮುಂಡಾಜೆ ರಾಮಚಂದ್ರಭಟ್ಟ ಮುಂತಾದವರು ಬರೆದ ಪದ್ಯಗಳು ಮಕ್ಕಳ ಬಾಯಲ್ಲಿ ನಲಿದಾಡಿದವು. ಇವರುಗಳೊಂದಿಗೆ, ದೇವುಡು, ಟಿ.ಎಸ್.ನಾಗರಾಜಶೆಟ್ಟಿ, ಕೃ. ನಾರಾಯಣರಾವ್, ಸರೋಜಾ ನಾರಾಯಣ ರಾವ್ ಮುಂತಾದವರು ಬರೆದ ಕಥೆಗಳು, ಅನುಪಮಾ ನಿರಂಜನರು ಸಂಕಲಿಸಿದ ದಿನಕ್ಕೊಂದು ಕಥೆ, ಜಿ.ಪಿ.ರಾಜರತ್ನಂರವರ ಕಥಾಮೃತ ಮುಂತಾದ ಕಥಾ ಸಂಕಲನಗಳು ಮಕ್ಕಳ ಮನಸ್ಸನ್ನು ತಣಿಸಿದವು. ಮಕ್ಕಳ ಪುಸ್ತಕ, ಬಾಲವನ, ಬಾಲಚಂದ್ರ, ತುತ್ತೂರಿ, ಬಾಲಭಾರತಿ, ಮಕ್ಕಳ ಮನೆ, ಪಾಪಚ್ಚಿ ಮುಂತಾದ ಮಕ್ಕಳಿಗೆಂದೇ ಸೀಮಿತವಾದ ಪತ್ರಿಕೆಗಳು ಪ್ರಕಟವಾದವು. ಆಗ ಆರಂಭವಾದ ಚಂದಮಾಮ, ಬಾಲಮಿತ್ರ, ಬಾಲಮಂಗಳ, ತುಂತುರು ಮುಂತಾದವು ಈಗಲೂ ಮಕ್ಕಳನ್ನು ಆಕರ್ಷಿಸುತ್ತಿವೆ.

ಎಚ್.ಎಸ್.ವೆಂಕಟೇಶ ಮೂರ್ತಿ, ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟ, ಎನ್.ಶ್ರೀನಿವಾಸ ಉಡುಪ, ಸಿ.ಎಂ. ಗೋವಿಂದ ರೆಡ್ಡಿ, ಕವಿತಾಕೃಷ್ಣ, ಸುಮತೀಂದ್ರ ನಾಡಿಗ, ಬಾಗೂರು ಮಾರ್ಕಂಡೇಯ, ಆರ್.ಕೆ. ಶಾನಭೋಗ, ಬಿ.ತಿಪ್ಪೇರುದ್ರಪ್ಪ ಮುಂತಾದವರು ಬಾಲಸಾಹಿತ್ಯವನ್ನು ಸಮೃದ್ಧಗೊಳಿಸುವುದನ್ನು ಮುಂದುವರೆಸಿದ್ದಾರೆ.

### ಜನಪದ ಸಾಹಿತ್ಯ

ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯಕ್ಕಿಂತಲೂ ಹೆಚ್ಚು ಪ್ರಾಚೀನವಾದದ್ದು ಎಂದರೆ ತಪ್ಪಲ್ಲ. ಈ ಬಗೆಯ ಸಾಹಿತ್ಯದ ಅಧ್ಯಯನವು ಯುರೋಪಿನ್ ವಿದ್ವಾಂಸರಿಂದ ೧೯ನೇ ಶತಮಾನದಲ್ಲಿ ಮೊದಲಿಗೆ ಪ್ರಾರಂಭವಾಯಿತು. ಕಿಟ್ಟೆಲ್ ನಿಘಂಟನ್ನು ಯಾರೇ ಕಣ್ಣುಹಾಯಿಸಿದರೂ ಅಲ್ಲಿರುವ ಹೇರಳವಾದ ಗಾದೆಗಳ ಸಂಗ್ರಹವನ್ನು ನೋಡಿ ಬೆರಗಾಗುವುದು ನಿಶ್ಚಿತ. ಹೆಚ್ಚಿನ ಸಂಖ್ಯೆಯ ಅಲ್ಲಿನ ಗಾದೆಗಳು ಜಾನಪದ ಮೂಲವನ್ನು ಹೊಂದಿರುವಂತಹವಾಗಿವೆ.

ಮಂಗಳೂರಿನ ಬಾಸೆಲ್ ಮಿಷನ್ ಚರ್ಚ್‌ನಲ್ಲಿ ಕಿಟ್ಟೆಲ್ಲರ ಮೇಲಧಿಕಾರಿಯಾದ ರೆವೆರೆಂಡ್ ಮೋಗ್ಲಿಂಗ್‌ರಿಂದ ಕಿಟ್ಟೆಲ್ ಅವರಿಗೆ ಈ ಕಾರ್ಯದಲ್ಲಿ ಅಪಾರ ಸಹಕಾರ, ಸಹಾಯ ದೊರೆಯಿತು, ಅಬ್ಬೇ ಡುಬೋಯ್ಸ್‌ನ ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರಮೋನಿಸ್ (೧೮೧೬) ಕೃತಿಯಲ್ಲಿ ಜನಪದ ಕಥೆಗಳಲ್ಲಿ ಅಡಕವಿರುವ ಹಿಂದು ಪದ್ಧತಿಗಳು, ನಡವಳಿಕೆ, ವಿಧಿ ಸಂಸ್ಕಾರಗಳ ಕುರಿತ ವಿವರಗಳೊಂದಿಗೆ ಅನೇಕ ಜಾನಪದ ಕಥೆಗಳೂ ಇವೆ. ಮೇರಿ ಫ್ರೇರಿಸ್ ಸಂಗ್ರಹಿಸಿದ 'ಓಲ್ಡ್ ಡೆಕ್ಕನ್ ಡೇಸ್' ಎಂಬ ಕೃತಿಯು (೧೮೬೮) ೨೪ ಜನಪದ ಕಥೆಗಳ ಸಂಕಲನವಾಗಿದೆ. ಕನ್ನಡಿಗರ ಪೈಕಿ ಕೊಡಗಿನ ವಿದ್ವಾಂಸರಾದ ನಡಿಕೇರಿಯಂಡ ಚಿಣ್ಣಪ್ಪನವರು ೧೯೨೪ ರಲ್ಲಿ ಜಾನಪದಿಕ ಸಂಗ್ರಹ, ಸ್ಥಳೀಯ ಪ್ರಾದೇಶಿಕ ಕೊಡವ ಸಂಸ್ಕೃತಿಯ ಬಗ್ಗೆ ಕನ್ನಡದಲ್ಲಿ ವ್ಯಾಖ್ಯಾನಗಳನ್ನು ಬರೆದಿರುವ 'ಪಟ್ಟೋಲೆ ಪಳಮೆ' ಎಂಬ ಕೃತಿಯನ್ನು ಪ್ರಕಟ ಮಾಡಿದರು. ಉತ್ತರ ಕರ್ನಾಟಕದ ಹಲಸಂಗಿ ಸೋದರರು ಇದೇ ಮೇಲ್ಪಂಕ್ತಿ ಅನುಸರಿಸಿ 'ಗರತಿಯ ಹಾಡು', 'ಮಲ್ಲಿಗೆದಂಡೆ' ಮತ್ತು 'ಜೀವನ ಸಂಗೀತ' ಎಂಬ ಜನಪದಗೀತೆ ಹಾಗೂ ಲಾವಣಿಗಳ ಮೂರು ಸಂಪುಟಗಳನ್ನು ಪ್ರಕಟಿಸಿದರು.

ಮಂಡ್ಯ ಜಿಲ್ಲೆಯ ಅರ್ಚಕ ಬಿ.ರಂಗಸ್ವಾಮಿ ಭಟ್ಟ ಅವರು ತಮ್ಮ ಬಂಡಿಹಳ್ಳಿ ಗ್ರಾಮದ ಗ್ರಾಮೀಣ ಸಂಪ್ರದಾಯಗಳನ್ನು ವರ್ಣಿಸುವ 'ಹುಟ್ಟಿದ ಹಳ್ಳಿ' ಮತ್ತು ವಿಠೋಬ ವೆಂಕಣನವರು 'ಹಳ್ಳಿಯ ಹಾಡುಗಳು' ಎಂಬ ಜನಪದ ಸಂಗ್ರಹವನ್ನು ಬೆಳಕಿಗೆ ತಂದರು (೧೯೩೩). ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಬಿ.ಎಸ್. ಗದ್ದಗಿಮಠ ಕನ್ನಡ ಜಾನಪದ ಸಾಹಿತ್ಯದ ಮೇಲೆ ಪ್ರೌಢ ಪ್ರಬಂಧ ಬರೆದು ಡಾಕ್ಟರೇಟ್ ಪಡೆದವರಲ್ಲಿ ಮೊದಲ ವಿದ್ವಾಂಸರೆನ್ನಬಹುದು. ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಎಂ.ಎ. ತರಗತಿಗಾಗಿ ಜನಪದ ಸಾಹಿತ್ಯವನ್ನು ಪಠ್ಯಮಾಡಿದಾಗ ಧವಳಶ್ರೀ ಎಂಬುವವರು ೧೯೬೭ರಲ್ಲಿ 'ಜನಪದ ಕಥಾಮೃತ' ಎಂಬ ಎರಡು ಸಂಪುಟಗಳನ್ನು ಸಂಪಾದಿಸಿ ಪ್ರಕಟಿಸಿದರು. ಇದು ಚಾರಿತ್ರಿಕ ಮಹತ್ವದ ಮೊದಲ ಶಾಸ್ತ್ರೀಯ ಸಂಪಾದಿತ ಕೃತಿ ಎಂದು ಹೇಳಬಹುದಾಗಿದೆ. ಇವರನ್ನನುಸರಿಸಿ ಜೀ.ಶಂ.ಪರಮಶಿವಯ್ಯ ಅವರು ಕನ್ನಡ ಪತ್ರಿಕೆಗಳಲ್ಲಿ ಜಾನಪದದ ಬಗ್ಗೆ ಸರಣಿ ಲೇಖನಗಳನ್ನು ಬರೆದರು. ಭಾಷಾ ಶಾಸ್ತ್ರದಲ್ಲಿ ವಿದ್ವಾಂಸರೆನಿಸಿದ ಹಾ.ಮಾ.ನಾಯಕ್ ಅವರು ಜನಪದ ಸಂಸ್ಕೃತಿ ಅಧ್ಯಯನ ಕುರಿತಂತೆ ಅನೇಕ ಲೇಖನಗಳನ್ನು ಪ್ರಕಟಿಸಿದರು. ದೇ.ಜವರೇಗೌಡ ಅವರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಮೈಸೂರಿನಲ್ಲಿ 'ಜಾನಪದ ಸಂಶೋಧನಾ ಕೇಂದ್ರ' ಸ್ಥಾಪಿಸಿದರು ಹಾಗೂ 'ಜನಪದ ಅಧ್ಯಯನ' ಎಂಬ ಕೃತಿ ಹೊರತಂದರು. ಬೆಂಗಳೂರು ಧಾರವಾಡ, ಕಲಬುರಗಿ ವಿಶ್ವವಿದ್ಯಾಲಯಗಳೂ ಕೂಡ ಜಾನಪದ ಸಂಸ್ಕೃತಿ ಅಧ್ಯಯನಗಳ ಮೇಲೆ ಸಂಶೋಧನಾತ್ಮಕ ಪ್ರೌಢ ಪ್ರಬಂಧ ಸಲ್ಲಿಸಲು ಅವಕಾಶ ನೀಡಿವೆ. (ಪಿಹೆಚ್.ಡಿ. ನೀಡಲು) ಇತ್ತೀಚೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ, ಶಿವಮೊಗ್ಗ, ಮೊದಲಾದ ವಿಶ್ವವಿದ್ಯಾಲಯಗಳೂ ಈ ವಿಷಯದಲ್ಲಿ ಮುಂದಿವೆ.

ಇದಕ್ಕೆ ಮುನ್ನ ಕ್ರಿ.ಶ.೧೯೦೨ ರಲ್ಲಿ ಕೊರವಂಡ ಅಪ್ಪಯ್ಯ ಅವರು 'ಕೊಡವರ ಕುಲಾಚಾರಾದಿ ತತ್ವೋಜ್ಜೀವಿನಿ' ಎಂಬ ತಮ್ಮ ಜಾನಪದ ಕೃತಿಯಲ್ಲಿ ಕೊಡಗಿನ ತಕ್ಕಾಮೆ, ಹಬ್ಬಗಳು, ಜನಪದ ನೃತ್ಯ, ಹಾಡು ಕುರಿತಂತೆ ಬರೆದು ಪ್ರಕಟಿಸಿದ್ದಾರೆ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಉಪ ಸಂಸ್ಕೃತಿ ಯೋಜನೆಯಡಿ ಪ್ರಕಟಿಸಿದ ಕೃತಿಗಳಲ್ಲಿ ಜಾನಪದ ಸಂಗ್ರಹ ವಿಪುಲವಾಗಿದೆ. ಆ ಯೋಜನೆಯಡಿ ಬಂದ ಕೊಡಗಿನ ದಲಿತ ಕೆಂಬಟ್ಟಿಗಳ ಕುರಿತು 'ಕೆಂಬಟ್ಟಿ ಹೊಲೆಯರ ಸಂಸ್ಕೃತಿ' ಕೃತಿಯಲ್ಲಿ ಎಂ.ಜಿ.ನಾಗರಾಜ್ ಅವರು ಕೆಂಬಟ್ಟಿಗಳ ಜನಪದ ಸಂಸ್ಕೃತಿಯ ಹುರುಳನ್ನು ತೆರೆದು ತೋರಿದ್ದಾರೆ. ಜನಪದ ಹಾಡು, ಕಥೆ, ಗಾದೆ, ಒಗಟುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅವರ 'ಕೊಡಗು ಜಿಲ್ಲೆಯ ಸುಗ್ಗಿ ಕಟ್ಟೆಗಳು' ಮತ್ತು 'ಕೊಡಗಿನ ಸಾಂಸ್ಕೃತಿಕ-ಜಾನಪದ ನೆಲೆಗಳು' ಗಮನಾರ್ಹ ಕೃತಿಗಳಾಗಿವೆ.

ಜಾನಪದ ಅಧ್ಯಯನದ ಎರಡು ಮುಖ್ಯ ಕೇಂದ್ರಗಳೆಂದರೆ, ಕರ್ನಾಟಕ ಜನಪದ ಟ್ರಸ್ಟ್, ಹಾಗೂ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿಗಳು. ಜನಪದ ಟ್ರಸ್ಟ್‌ನಲ್ಲಿ ಸುಮಾರು ೧,೦೦೦ಕ್ಕೂ ಮೀರಿದ ಸಂಖ್ಯೆಯಲ್ಲಿ ಇಡೀ ರಾಜ್ಯದಿಂದ ಸಾವಿರಾರು ಜನಪದ ಗೀತೆಗಳನ್ನು ಸಂಗ್ರಹಿಸಿ ದಾಖಲಿಸಲಾಗಿದೆ. ಅಕಾಡೆಮಿಯಿಂದ ಪ್ರತಿವರ್ಷವೂ ಸುಮಾರು ೧೦೦ ಪುಟಗಳಷ್ಟು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಸುಲಭ ಬೆಲೆಯಲ್ಲಿ ಹೊರತರುತ್ತಿದೆ. ೨೦೧೨ರಲ್ಲಿ ಜನಪದ ವಿಶ್ವವಿದ್ಯಾಲಯ ಹಾವೇರಿಯಲ್ಲಿ ಪ್ರಾರಂಭವಾಗಿದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಜನಪದ ಗೀತೆಗಳ ಸಂಕಲನವಾದ 'ಗೃಹಿಣಿ ಗೀತೆಗಳು' ಮುಂತಾದ ಬೃಹತ್ ಜನಪದ ಸಂಪುಟ ಶ್ರೇಣಿಯನ್ನು ಹೊರತಂದಿದ್ದಾರೆ. ಎಸ್.ಕೆ.ಕರೀಂಖಾನ್ ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಮಾಡಿ ಜನಪದ ಸಾಹಿತ್ಯದ ಮೇಲೆ ಉಪನ್ಯಾಸಗಳನ್ನು ನೀಡಿದ್ದಾರೆ.ರಾಮೇಗೌಡ ಅವರು ಸಂಪಾದಿಸಿದ 'ಕರ್ನಾಟಕ ಜನಪದ ಕಥೆಗಳು'(೧೯೬೯) ಜೀ.ಶಂ.ಪರಮಶಿವಯ್ಯ ಅವರ (೧೯೭೦) 'ಕನ್ನಡ ಜನಪದ ಕಥೆಗಳು','ಆಯ್ದ ಜನಪದ ಕಥೆಗಳು','ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಇತ್ಯಾದಿ. ಜಿ.ವಿ.ದಾಸೇಗೌಡ ಅವರ 'ಹಾವಾಗಿ ಹರಿದ ಅಣ್ಣಯ್ಯ', ಹೆಚ್.ಜೆ.ಲಕ್ಕಪ್ಪಗೌಡರವರ 'ಜನಪದ ಕಥಾವಳಿ', 'ಒಗಟುಗಳು', ಡಿ.ಲಿಂಗಯ್ಯ ಅವರ 'ಪಡಿನೆರಳು', ಟಿ.ಎಸ್. ರಾಜಪ್ಪ ಅವರ 'ದಾಳಿಂಬೆರಾಣಿ ಮತ್ತಿತರ ಕಥೆಗಳು','ಬೆಳಗಾಂ ಜಿಲ್ಲೆಯ ಜನಪದ ಕಥೆಗಳು', 'ಧಾರವಾಡ ಜಿಲ್ಲೆಯ ಜನಪದ ಕಥೆಗಳು', 'ರಾಯಚೂರು ಜಿಲ್ಲೆಯ ಜನಪದ ಕಥೆಗಳು'. ಕ್ಯಾತನಹಳ್ಳಿ ರಾಮಣ್ಣ ಅವರು ಸಂಪಾದಿಸಿದ 'ಬಿಜಾಪುರ ಜಿಲ್ಲೆಯ ಗೊಂದಲಿಗರ ಪುರಾಣ ಕಥೆಗಳು' 'ಗೊಂದಲಿಗರ ಕಥೆಗಳು' ಎಂಬುದಾಗಿ ಪ್ರಕಟಗೊಂಡಿದೆ. ತೀ.ನಂ.ಶಂಕರನಾರಾಯಣ ಅವರ 'ಸಂಕೀರ್ಣ ಜನಪದ ಕಥೆಗಳು', ಎಲ್.ಆರ್.ಹೆಗಡೆ ಅವರ 'ಉತ್ತರ ಕನ್ನಡದ ಜನಪದ ಕಥೆಗಳು', 'ನಮ್ಮ ಜನಪದ ಕಥೆ', 'ಹಾಲಕ್ಕಿ ಒಕ್ಕಲಿಗರು', 'ಗಾಮೊಕ್ಕಲು' ಇತ್ಯಾದಿ, ಡಾ.ಕಾಳೇಗೌಡ ನಾಗವಾರ ಅವರ 'ಬೀದಿ ಮಕ್ಕಳು ಬೆಳೆದೊ', ಎಲ್.ಆರ್.ಹೆಗಡೆ ಅವರ 'ಕರಾವಳಿ ಕಥೆಗಳು', 'ಒಗಟುಗಳು' ಮತ್ತು 'ಕಥೆಗಳು', ಡಾ.ಅಂಬಳಿಕೆ ಹಿರಿಯಣ್ಣ ಅವರ 'ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು', ಬಸವರಾಜ ಮಲಶೆಟ್ಟಿ ಅವರ 'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು', ಜೀನಹಳ್ಳಿ ಸಿದ್ದಲಿಂಗಪ್ಪ ಅವರ 'ಕುಲ್ಡ, ಕುಂಟ, ಕೆಪ್ಪ-ಜಾಣ, ಕಳ್ಳ ಸುಳ್ಳರ ಜನಪದ ಕಥೆಗಳು', 'ಸ್ತ್ರೀವಾದಿ ಜನಪದ

ಕಥೆಗಳು'. ಎಂ.ಜಿ.ಈಶ್ವರಪ್ಪ ಅವರ 'ಬಂಗಾರಕೂದಲ ರಾಣಿ', ಡಿ.ಕೆ.ರಾಜೇಂದ್ರ ಅವರ 'ಬೆದರುಬೊಂಬೆ ಮತ್ತು ಇತರ ಜನಪದ ಕಥೆಗಳು', ಪಿ.ಕೆ.ಖಂಡೋಬಾ ಅವರ 'ಲಂಬಾಣಿ ಒಗಟುಗಳು', ಡಾ.ಹಿ.ಶಿ.ರಾಮಚಂದ್ರೇಗೌಡ ಅವರ 'ಜಾನಪದ ಸಾಂಸ್ಕೃತಿಕ ಆಯಾಮಗಳು', ಡಾ.ನಂ.ತಪಸ್ವೀಕುಮಾರ್ ಅವರ 'ಕನ್ನಡ ಒಗಟುಗಳ ಸಮೀಕ್ಷೆ', ಡಾ.ಪಿ.ಕೆ.ರಾಜಶೇಖರ ಅವರ 'ಸಿಂಗಮ್ಮ ಹೇಳಿದ ಜನಪದ ಕಥೆಗಳು', 'ಮಾತಿನರಗಿಣಿ', ಶ್ರೀಕಂಠ ಕೂಡಿಗೆ ಅವರ 'ಕನ್ನಡ ಲಾವಣಿಗಳು', ಕುರುವ ಬಸವರಾಜು ಅವರ 'ಜನಪದ ಒಗಟು, ಕಥೆಗಳು' ಮುಂತಾದವು ಗಮನಾರ್ಹ ಸಂಪಾದನೆಗಳಾಗಿವೆ. ಎ.ಕೆ. ರಾಮಾನುಜನ್ ಅವರು ಜಾನಪದ ಕಥಾಸಂಗ್ರಹಕ್ಕೂ ಅದೇ ಮನ್ನಣೆಗಳಿಸಿದ್ದಾರೆ. ಭಾರತದ ವಿವಿಧ ೨೨ ಭಾಷೆಗಳಿಂದ ಆಯ್ದ ೧೧೬ ಬಾಯ್ಮಾತಿನ ಕಥನಗಳನ್ನು ಇಂಗ್ಲೀಷಿನಲ್ಲಿ ಬರೆದು 'ಭಾರತೀಯ ಜನಪದ ಕಥೆಗಳು'ಹೆಸರಿನಲ್ಲಿ ಪ್ರಕಟಿಸಿದ್ದು ಇದನ್ನು ಡಾ.ಮಹಾಬಲೇಶ್ವರರಾಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಿ.ಮನೋಹರ್ ಮೊದಲಾದವರು. ಹೊನ್ನಪ್ಪ ಭಾಗವತರ್ ಅಭಿನಯದ ಕಾಳಿದಾಸ ಸಿನಿಮಾದಲ್ಲಿ ಆ ಕಾಲದ ಕೋಲಾಟ ಹಾಡು ಕುಣಿತಗಳನ್ನು ಯಥಾವತ್ತು ಬಳಕೆ ಮಾಡಿ ಗಮನ ಸೆಳೆದಿದ್ದಾರೆ. ಬಿ.ವಿ.ಕಾರಂತ ಮತ್ತು ಸಿ.ಅಶ್ವತ್ಥ್ ಅವರು ಚಲನಚಿತ್ರಗಳಿಗೆ ಜನಪದ ಶೈಲಿಯಿಂದ ಪ್ರೇರಿತವಾದ ಸಂಗೀತ ಸಂಯೋಜಿಸಿ ಹೆಸರಾಗಿದ್ದಾರೆ. ಕೃಷ್ಣಮೂರ್ತಿಹನೂರುರವರು 'ಮ್ಯಾಸಬೇಡರ ಸಂಸ್ಕೃತಿ','ಜನಪದ ವೀರಗೀತೆಗಳು', 'ಸುವರ್ಣ ಜಾನಪದ' ೧,೨ (ಸಂ), 'ಕರ್ನಾಟಕ ಬುಡಕಟ್ಟುಗಳು', 'ಸಾವಿರ ಸಿರಿಬೆಳಗು' ಮುಂತಾದ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಜನಪ್ರಿಯ ನಾಟಕಕಾರ, ಕಾದಂಬರಿಕಾರರಾದ ಚಂದ್ರಶೇಖರ ಕಂಬಾರರು, ಜಾನಪದದ ಜನಪ್ರಿಯ ಕಥೆಗಳನ್ನು ಅಳವಡಿಸಿ ಸಿರಿಸಂಪಿಗೆ, ಸಿಂಗಾರವ್ವ ಮತ್ತು ಅರಮನೆ, ಕಾಡು-ಕುದುರೆ, ಸಂಗ್ಯಾ-ಬಾಳ್ಯಾ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಜನಪದ ಕಥೆ ಆಧಾರಿತ 'ನಾಗಮಂಡಲ' ನಾಟಕ ಬರೆದ ಗಿರೀಶ್ ಕಾರ್ನಾಡರು ಅಂತಾರಾಷ್ಟ್ರೀಯ ಪ್ರಶಂಸೆಯನ್ನು ಪಡೆದಿದ್ದಾರೆ.

ಅನೇಕ ಗಣ್ಯಾತಿಗಣ್ಯರು ಹೆಸರಿಸಲಾಗದಷ್ಟು ಜಾನಪದ ಪ್ರಕಾರದಲ್ಲಿ ಸಂಶೋಧನೆ ಹಾಗೂ ಸಂಗ್ರಹ ಮಾಡಿದ್ದಾರೆ. ಅವರಲ್ಲಿ ಪ್ರಮುಖರಾದವರು; ಹೆಚ್.ಎಲ್.ನಾಗೇಗೌಡ, ಕೆ.ಆರ್.ಲಿಂಗಪ್ಪ, ಬಿ.ಬಿ.ಹಂಡಿ, ಮತ್ತು ಹ.ಕ.ರಾಜೇಗೌಡ, ಹೆಚ್.ಜೆ. ಲಕ್ಕಪ್ಪಗೌಡ, ಎನ್.ಆರ್.ನಾಯಕ ಮುಂತಾದವರು ಜಾನಪದ ಕ್ಷೇತ್ರದಲ್ಲಿ ಗಮನಾರ್ಹವಾದ ಕಾರ್ಯ ಮಾಡಿದ್ದಾರೆ. ಹೆಚ್.ಎಲ್.ನಾಗೇಗೌಡರಿಂದ ಜಾನಪದ ಪರಿಷತ್ತಿನ 'ಜಾನಪದ ಲೋಕ'ವು ರಾಮನಗರದ ಹೊರ ವಲಯದಲ್ಲಿ ಉತ್ತಮ ರೀತಿಯಲ್ಲಿ ರೂಪುಗೊಂಡಿದ್ದು, ಅದರಲ್ಲಿ ಅಪರೂಪದ ಜಾನಪದ ವಸ್ತುಗಳ ಅಪೂರ್ವ ಸಂಗ್ರಹವಿದೆ; 'ಆರಂಭದೆತ್ತು ಐನೂರು','ಆನೆ ಬಂತೊಂದಾನೆ', 'ನನ್ನೂರು', 'ವೆರಿಯರ್ ಎಲ್ವಿನ್ನನ ಗಿರಿಜನ ಪ್ರಪಂಚ', ಹೆಳವರು ಮತ್ತು ಅವರ ಕಾವ್ಯಗಳು ಮುಂತಾದವು ಪ್ರಮುಖ ಸಂಗ್ರಹಗಳು. ಹ.ಕ.ರಾಜೇಗೌಡ ಅವರ 'ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು.' 'ಒಕ್ಕಲಿಗ ಜನಾಂಗದ ಸಂಪ್ರದಾಯ', 'ಇತಿಹಾಸ ಜನಪದ' ಮೊದಲಾದವು ಗಮನಾರ್ಹ ಕೃತಿಗಳಾಗಿವೆ. ಕೆ.ಆರ್.ಕೃಷ್ಣಸ್ವಾಮಿ (ಕ.ರಾ.ಕೃ), ರಾಜೇಗೌಡ ಹೊಸಹಳ್ಳಿ, ಹಿ.ಚಿ.ಬೋರಲಿಂಗಯ್ಯ ಮತ್ತು ಮುದೇನೂರು ಸಂಗಣ್ಣ ಅವರ ಕೃತಿಗಳು. ಗೊ.ರು.ಚನ್ನಬಸಪ್ಪ ಸಂಪಾದಿತ 'ಕರ್ನಾಟಕ ಜನಪದ ಕಲೆಗಳು; ಎಚ್.ಎಸ್.ಸಿದ್ದಗಂಗಪ್ಪನವರ 'ಹಳ್ಳಿಯ ಬಳ್ಳಿ' ಬೀದರ್ ಜಿಲ್ಲೆಯ ಶಿಶುಪ್ರಾಸಗಳು; ಇತ್ಯಾದಿ ಕೃತಿಗಳು ಗಮನಾರ್ಹವಾದವು. ಮದರಾಸಿನ ಏಷ್ಯನ್ ಅಧ್ಯಯನ ಸಂಸ್ಥೆಯ ಜಾನಪದ ವಿಶ್ವಕೋಶ ಸಂಪುಟಕ್ಕೆ ಧಾರ್ಮಿಕ ವಿಧಿ ಕ್ರಿಯೆಗಳು ಮತ್ತು ಆಚರಣೆಗಳು ಎಂಬ ವಿಷಯ ಬರೆದು ಕೊಟ್ಟು ಪುಸ್ತಕವನ್ನೂ ಸಹ ೧೯೯೯ ರಲ್ಲಿ ಹೊರತಂದಿದ್ದಾರೆ. ಕೆಲವು ಜನಪದ ಕಥೆಗಳು ಎಲ್ಲಾ ಪ್ರದೇಶಗಳಿಗೂ ಸಾಮಾನ್ಯವಾದುದಾಗಿವೆ. ಅವುಗಳಲ್ಲಿನ ಒಂದು ಕಥೆಯಂತೆ, ಹರಿಜನ ತರುಣನೊಬ್ಬ ಬ್ರಾಹ್ಮಣನಂತೆ ವೇಷ ಹಾಕಿ ಬ್ರಾಹ್ಮಣ ಹುಡುಗಿಯನ್ನು ಮದುವೆಯಾದ ಕಥೆ ಇದೆ. ಆ ಹುಡುಗಿ ತನಗೆ ಮೋಸವಾದ ಸಂಗತಿ ತಿಳಿದು ಚಿತೆಗೆ ಹಾರಿ ಮುಂದೆ ದೇವತೆ ಎನಿಸುತ್ತಾಳೆ. ಇನ್ನೊಂದು ಕಥೆ 'ಕೆರೆಗೆ ಹಾರ' ಎಂಬುದು, ತನ್ನ ಗ್ರಾಮದ ಕೆರೆ ತುಂಬದಿದ್ದಾಗ, ಅದು ತುಂಬಲೆಂದು ಸಾಧ್ವಿಯೊಬ್ಬಳು ಕೆರೆಗೆ ಹಾರಿ ಬಲಿಯಾಗುವ ಘಟನೆಯ ಸುತ್ತ ಹೆಣೆಯಲ್ಪಟ್ಟದೆ. ಹೀಗೆಯೇ ನಮ್ಮಲ್ಲಿ ಠಕ್ಕ ನರಿಯ ಕಥೆಗಳನ್ನುಳ್ಳ ಪ್ರಾಣಿ ಸಂಬಂಧದ ಅನೇಕ ಕಥೆಗಳಿವೆ.

ಬೀಸುವುದು, ಕುಟ್ಟುವುದು, ನೇಜಿನೆಡುವುದು, ನಾಮಕರಣ, ಮದುವೆ, ಶೋಭನ ಮುಂತಾದ ಪ್ರತಿಯೊಂದು ಗ್ರಾಮೀಣ ಚಟುವಟಿಕೆ ಸಮಾರಂಭಗಳಿಗೆ ಸಂಬಂಧಪಟ್ಟಂತೆ ಬಗೆಬಗೆಯ ಹಾಡುಗಳನ್ನು ನಮ್ಮ ಜನಪದರು ರಚಿಸಿದ್ದಾರೆ. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತನ್ನು ನಿಜ ಎಂದು ನಿರೂಪಿಸಿದ್ದಾರೆ.

ಕಂಸಾಳೆಯವರು, ಗೊಂದಲಿಗರು, ಜುಂಜಪ್ಪನವರು, ದೇವರಗುಡ್ಡರು, ನೀಲಗಾರರು, ಗಣೆಯಾಟದವರು (ಪಿಳ್ಳಂಗೋವಿಗಳು) ಗೊರವರು, ಚೌಡಿಕೆಯವರು, ಅರದಿಗಳು, ಕರಪಾಲದವರು, ತಂಬೂರಿಯವರು, ಕಿನ್ನರ ಜೋಗಿಗಳು, ದೊಂಬಿದಾಸರು, ಹೆಳವರು, ತೆಲುಗು ಜಂಗಮರು ಮುಂತಾದ ವೃತ್ತಿಗಾಯಕರು ಪಿರಿಯಾಪಟ್ಟಣದ ಕಾಳಗ, ಗುಣಸಾಗರಿ, ಸರ್ಜಪ್ಪನಾಯಕನ ಕಥೆ, ಮದಕರಿನಾಯಕ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಹುಳಿಯಾರು ಕೆಂಚಮ್ಮ, ವೀರತಿಮ್ಮವ್ವ, ಗೊಲ್ಲರ ನಾಗಮ್ಮ, ಈರೋಬಿ, ಬಾಲನಾಗಮ್ಮ, ಉತ್ತರದೇವಿ ಮುಂತಾದ ಕಥೆಗಳು; ಮಲೆಯ ಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ನಂಜುಂಡೇಶ್ವರ ಕಾವ್ಯ, ಜುಂಜಪ್ಪನ ಕಾವ್ಯ, ಯಲ್ಲಮ್ಮನ ಕಾವ್ಯ ಮತ್ತು ಮೈಲಾರಲಿಂಗನ ಕಾವ್ಯ ಅರ್ಜುನ ಜೋಗಿ ಪದ ಮೊದಲಾದ ಜಾನಪದ ಕಾವ್ಯಗಳನ್ನು ಇಂದಿಗೂ ಹಾಡುವ ಪದ್ಧತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

ಮೌಖಿಕ ಕಾವ್ಯ ಪರಂಪರೆಯಲ್ಲಿ ತತ್ವ ಪದಗಳಿಗೆ ವಿಶೇಷವಾದ ಸ್ಥಾನವಿದೆ. ರತ್ನಾಕರವರ್ಣಿ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಚಿದಾನಂದಾವ ಧೂತ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಂತ ಶಿವಯೋಗಿ, ಕೂಡಲುಕೇಶ, ಆರ್.ಡಿ.ರಾನಡೆ, ಕಡಕೋಳ ಮಡಿವಾಳಪ್ಪ, ತಳೆವಾಡಿ ನಬಿ, ಸದಾನಂದ ಯೋಗಿ, ಭಟಕಳ ಅಪ್ಪಯ್ಯ, ಕೈವಾರ ನಾರಾಣಪ್ಪ, ಹಸನ ಸಾಹೇಬ, ಹಲಸಂಗೀ ಖ್ವಾಜಾ ಸಾಹೇಬ, ಗೋಕಾವಿಯ ಸಾತು ಶ್ಯಾಬಣ್ಣ, ಶಿಶುನಾಳ ಶರೀಫ ಮುಂತಾದ ತತ್ವಪದಕಾರರು

ಜಾತಿ, ಮತ, ಪಂಥಗಳ ಎಲ್ಲೆಗಳನ್ನು ಮೀರಿದ ತತ್ವಪದಗಳನ್ನು ರಚಿಸಿದ್ದಾರೆ. ದಂಡಿಗಿದಾಸರು, ಹೊಲದಾಸರು, ಕಂಬಿಯವರು, ಸಾರುವ ಅಯ್ಯಂದಿರು, ಕರಪಾಲದವರು, ಬಹುರೂಪಿಯವರು ಮುಂತಾದ ವೃತ್ತಿ ಗಾಯಕರು ಮಾತ್ರವಲ್ಲದೆ ಭಜನ ಮಂಡಳಗೂ ಈ ತತ್ವಪದಗಳನ್ನು ಹಾಡುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದಾರೆ.

**ನಾಟಕ ಸಾಹಿತ್ಯ** :"ರಂಗಭೂಮಿ" ಎಂಬ ವಿಭಾಗವನ್ನು ನೋಡಿ.

## ಕರ್ನಾಟಕ ಮತ್ತು ಇತರ ಭಾಷೆಗಳು ಸಂಸ್ಕೃತ

ಭಾರತದ ಪ್ರಾಚೀನ ಭಾಷೆಗಳಲ್ಲಿ ಒಂದಾದ ಸಂಸ್ಕೃತವು ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಪ್ರಚಾರದಲ್ಲಿದ್ದು ದೀರ್ಘವಾದ ಇತಿಹಾಸವನ್ನು ಹೊಂದಿದೆ. ಕರ್ನಾಟಕದ ಪ್ರಾಚೀನತಮ ಸಂಸ್ಕೃತ ಶಾಸನವೆಂದರೆ ಸುಮಾರು ಕ್ರಿ.ಶ. ೪೫೦ ರ ತಾಳಗುಂದದ ಶಾಸನ. ಕುಬ್ಜ ಎಂಬ ಕವಿಯಿಂದ ರಚಿತವಾದ ಈ ಶಾಸನವು ಪ್ರೌಢ ಸಂಸ್ಕೃತದಲ್ಲಿದ್ದು ಆ ಕಾಲಕ್ಕಾಗಲೇ ಸಂಸ್ಕೃತವು ಈ ನಾಡಿನಲ್ಲಿ ಚೆನ್ನಾಗಿ ಬೇರೂರಿರಬೇಕೆಂದು ತಿಳಿಸುತ್ತದೆ. ಹಲ್ಮಿಡಿ ಶಾಸನದ ಮೇಲೆಯೂ ಸಂಸ್ಕೃತದ ದಟ್ಟ ಪ್ರಭಾವವಿದೆ. ಇಲ್ಲಿಂದ ಮುಂದೆ ಸಂಸ್ಕೃತ ಶಿಷ್ಟ ಭಾಷೆಯಾಗಿ ಬೆಳೆದು ಉನ್ನತ ಸ್ಥಾನವನ್ನು ಗಳಿಸಿ ತತ್ಕಾಲದ ಉನ್ನಡ ವರ್ಗಗಳಿಂದ ಪ್ರೋತ್ಸಾಹ ಗಳಿಸಿತು. ನೂರಾರು ಸಂಸ್ಕೃತ ಶಾಸನಗಳು ಕನ್ನಡ ಲಿಪಿಯಲ್ಲಿ ರಚಿತವಾದವು. ಅನೇಕ ಕವಿಗಳು, ಶಾಸ್ತ್ರಕಾದರು ಈ ನಾಡಿನಲ್ಲಿ ಆಗಿ ಹೋದರು. ನೂರಾರು ಸಂಸ್ಕೃತ ಗ್ರಂಥಗಳ ರಚನೆಯಾಯಿತು. ಅಂತೆಯೇ ಸಂಸ್ಕೃತದ ಶ್ರುತಿ, ಸ್ಮೃತಿ, ಪುರಾಣ ಇತಿಹಾಸ ಕಾವ್ಯಗಳು ಕರ್ನಾಟಕದಲ್ಲಿ ಹರಡಿ ಅವುಗಳು ಹಾಗೂ ಇತರ ಸಂಸ್ಕೃತ ಕೃತಿಗಳು ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಮೇಲೆ ಎಷ್ಟು ದಟ್ಟವಾದ ಪ್ರಭಾವವನ್ನು ಬೀರಿವೆಯೆಂದರೆ ಕನ್ನಡವು ಸಂಸ್ಕೃತ ಜನ್ಯವಾದ ಭಾಷೆ ಎಂಬ ತಪ್ಪು ಗ್ರಹಿಕೆಗೆ ಅವಕಾಶವಾಗಿದೆ. ಕನ್ನಡದ ಪ್ರಾಚೀನ ಕವಿಗಳೆಲ್ಲರೂ ಬಹುಮಟ್ಟಿಗೆ 'ಉಭಯ ಭಾಷಾ ವಿಶಾರದ'ರಾಗಿದ್ದರು.

ಗಂಗರಾಜನಾದ ದುರ್ವಿನೀತ (೬ನೇ ಶತ) ನು ಪೈಶಾಚ ಭಾಷೆಯ ಬೃಹತ್ ಕಥೆಯನ್ನು ಸಂಸ್ಕೃತಕ್ಕೆ ರೂಪಾಂತರಿಸಿದನೆಂದು ಶಾಸನಗಳು ಹೇಳುತ್ತವೆ. ಭಾರವಿ ಮತ್ತು ಕಾಳಿದಾಸರನ್ನು ಉಲ್ಲೇಖಿಸುವ ಕ್ರಿ.ಶ. ೭ನೇ ಶತಮಾನದ ಐಹೊಳೆಯ ರವಿಕೀರ್ತಿಯ ಶಾಸನವು ಸಂಸ್ಕೃತಸಾಹಿತ್ಯಚರಿತ್ರೆಯಲ್ಲಿ ಅಪರೂಪದ ದಾಖಲೆಯಾಗಿದೆ. ಇಮ್ಮಡಿ ಪುಲಕೇಶಿಯ ಸೊಸೆಯಾದ ವಿಜ್ಜಿಕೆಯು ಕೌಮುದೀ ಮಹೋತ್ಸವವೆಂಬ ನಾಟಕವನ್ನು ಬರೆದಳೆಂದು ಹೇಳಲಾಗುತ್ತದೆ.

ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಜೈನರೂ ಅಮೋಘವಾದ ಕಾಣಿಕೆಯನ್ನಿತ್ತಿದ್ದಾರೆ. ಸಮಂತ ಭದ್ರ (ತತ್ವಾರ್ಥ ಸೂತ್ರ ಮಹಾಭಾಷ್ಯ, ಆಪ್ತಮೀಮಾಂಸಾ), ಅಕಲಂಕ (ನ್ಯಾಯ ವಿನಿಶ್ಚಯ), ಜಿನಸೇನಾಚಾರ್ಯ (ಮಹಾಪುರಾಣ), ಮಹಾವೀರ (ಗಣಿತಸಾರ ಸಂಗ್ರಹ), ವೀರಸೇನ (ಧವಲಾ ಗ್ರಂಥಗಳು), ವಿದ್ಯಾನಂದ (ಅಷ್ಟ ಸಾಹಸ್ರೀ) ವಾದಿರಾಜ (ಯಶೋಧರ ಚರಿತ) ಮುಂತಾದವರು ಪ್ರಸಿದ್ಧ ಜೈನ ಸಂಸ್ಕೃತ ಲೇಖಕರು. ತ್ರಿವಿಕ್ರಮ ಭಟ್ಟ (ನಳಚಂಪೂ), ಹಲಾಯುಧ, (ಕೋಶ), ವಿಜ್ಞಾನೇಶ್ವರ (ಮಿತಾಕ್ಷರ), ಮೂರನೇ ಸೋಮೇಶ್ವರ (ಮಾನಸೋಲ್ಲಾಸ), ಪಾರ್ಶ್ವದೇವ (ಸಂಗೀತ ಸಮಯಸಾರ), ಇಮ್ಮಡಿ ಜಗದೇಕಮಲ್ಲ (ಸಂಗೀತ ಚೂಡಾಮಣಿ) ವಿಶ್ವರೂಪ (ಬಾಲಕ್ರೀಡಾ ವ್ಯಾಖ್ಯೆ), ಸೋಮದೇವ ಸೂರಿ (ನೀತಿವಾಕ್ಯಾಮೃತ, ಯಶಸ್ತಿಲಕ ಚಂಪೂ), ಜಯಕೀರ್ತಿ (ಛಂದೋನುಶಾಸನ), ಬಿಲ್ಹಣ (ವಿಕ್ರಮಾಂಕದೇವ ಚರಿತ), ಮಧ್ವಾಚಾರ್ಯ (ತಾತ್ವರ್ಯ ನಿರ್ಣಯಗಳು), ದೇವಣ್ಣ ಭಟ್ಟ (ಸ್ಮೃತಿ ಚಂದ್ರಿಕೆ), ನರಹರಿ (ಸ್ಮೃತಿ ಕೌಸ್ತುಭ) ವಿದ್ಯಾರಣ್ಯ ಮಾಧವ (ಪರಾಶರ ಮಾಧವೀಯ, ನ್ಯಾಯಮಾಲಾ ವಿಸ್ತರ), ಸಾಯಣ (ಯಂತ್ರತಂತ್ರ ಸುಧಾನಿಧಿ, ಸರ್ವದರ್ಶನ ಸಂಗ್ರಹ), ಗಂಗಾದೇವಿ (ಮಥುರಾವಿಜಯಂ) ಬಸವಭೂಪಾಲ (ಶಿವತತ್ವ ರತ್ನಾಕರ) ವೆಂಕಾಮಾತ್ಯ (ಅಲಂಕಾರ ಮಣಿದರ್ಪಣ) ಮುಮ್ಮಡಿ ಕೃಷ್ಣರಾಜ (ಶ್ರೀ ತತ್ವನಿಧಿ) ಮುಂತಾದವರು ಕರ್ನಾಟಕದ ಪ್ರಸಿದ್ಧ ಪ್ರಾಚೀನ ಸಂಸ್ಕೃತ ಲೇಖಕರು. ಈ ಪಟ್ಟಿ ಇನ್ನೂ ಬಹಳ ದೀರ್ಘವಾಗಿದೆ.

೧೯ನೇ ಶತಮಾನದಲ್ಲಿ ಪಾಶ್ಚಾತ್ಯ ಮಾದರಿಯ ಶಿಕ್ಷಣ ವ್ಯವಸ್ಥೆಯ ರೂಢಿಗೆ ಬಂದ ನಂತರದಲ್ಲಿ ಸಂಸ್ಕೃತಾಧ್ಯಯನದಲ್ಲಿ ಗಮನಾರ್ಹ ಬದಲಾವಣೆಗಳಾದವು. ಪಾರಂಪರಿಕವಾದ ಗುರುಕುಲ ಪದ್ಧತಿಯ ಜೊತೆಜೊತೆಗೆ ಶಾಲಾ ಕಾಲೇಜುಗಳಲ್ಲಿಯೂ ಸಂಸ್ಕೃತಾಧ್ಯಯನಕ್ಕೆ ಅವಕಾಶವುಂಟಾಯಿತು. ಎಂ.ಹಿರಿಯಣ್ಣ, ಎಸ್.ರಾಧಾಕೃಷ್ಣನ್, ಕೆ. ಕೃಷ್ಣಮೂರ್ತಿ, ಡಿ.ವಿ.ಗುಂಡಪ್ಪ, ಎ.ಆರ್. ಕೃಷ್ಣಶಾಸ್ತ್ರೀ ಮುಂತಾದ ವಿದ್ವಾಂಸರು ಸಂಸ್ಕೃತ-ಇಂಗ್ಲಿಷ್-ಕನ್ನಡ ಭಾಷೆಗಳಲ್ಲಿ ಸಮದಂಡಿಯಾದ ಪಾಂಡಿತ್ಯವನ್ನು ಗಳಿಸಿ ತಮ್ಮ ರಚನೆಗಳಿಂದ ಪ್ರಸಿದ್ಧರಾದರು.

ರಾಳ್ಳಪಲ್ಲಿ ಅನಂತಕೃಷ್ಣ ಶರ್ಮಾ (ಅನಂತ ಭಾರತೀ), ಗಲಗಲಿ ರಾಮಾಚಾರ್ಯ (ಶ್ರೀ ಸ್ವರಾಜ್ಯ ರತ್ನಾಕರಃ) ನೀರ್ಪಾಜೆ ಭೀಮಭಟ್ಟ (ಕಾಶ್ಮೀರ ಸಂಧಾನ ಸಮುದ್ಯಮಃ), ಹಿತ್ತಲಹಳ್ಳಿ ಗೋವಿಂದ ಭಟ್ಟ (ಶ್ರೀ ಸರ್ವಜ್ಞೇಂದ್ರ ಚಂಪೂ) ವಿಘ್ನೇಶ್ವರ ಶರ್ಮಾ (ಶಿವಸ್ತುತಿ), ಹೆಚ್.ವಿ. ನಾರಾಯಣಶಾಸ್ತ್ರೀ (ಶ್ರೀಶೈಲ ಜಗದ್ಗುರು ಚರಿತಂ) ಕೆ.ಕೃಷ್ಣಜೋಯಿಸ್ (ಕುಂಭಾಭಿಷೇಕ ಚಂಪೂ), ಬೊಮ್ಮಲಾಪುರ ವೆಂಕಟರಾಮಭಟ್ಟ (ಭಾರ್ಗವ ಶತಕಂ), ಎನ್.ರಂಗನಾಥ ಶರ್ಮಾ (ಏಕಚಕ್ರಂ), ಎಂ.ಮಂಜುನಾಥಭಟ್ಟ (ವಿರಕ್ತ ವೀಥಿಕಾ), ಟಿ.ಜಿ.ಸಿದ್ಧಪ್ಪಾರಾಧ್ಯ, ಕೆ.ಟಿ. ಪಾಂಡುರಂಗಿ (ಉಪನಿಷದ್ ರೂಪಕಾಣಿ), ಎಂ.ಜಿ.ನಂಜುಂಡಾರಾಧ್ಯ (ಸ್ತೋತ್ರ ಸಂಗ್ರಹಃ), ಕೆ.ಎಸ್.ಭಾಸ್ಕರಭಟ್ಟ (ದೇವಿ ವಿಲಾಸ), ಪಂಡರೀನಾಥಾಚಾರ್ಯ ಗಲಗಲಿ (ಪವನ ಪಾವನ ಚಂಪೂ), ವಿಶ್ವೇಶ್ವರ ದೀಕ್ಷಿತ (ಶ್ರೀ ಜಗದ್ಗುರು ಪಂಚರತ್ನಂ), ಸಿ.ಜಿ. ಪುರುಷೋತ್ತಮ (ಸರ್ವಜ್ಞ ವಚನಾನಿ) ವೈ.ನಾಗೇಶ ಶರ್ಮಾ (ನೇತ್ರೋನ್ಮೀಲನಂ), ಸಾಂಬದೀಕ್ಷಿತ (ನಿತ್ಯಾನಂದ ಚರಿತಂ), ಪರಡ್ಡೀ ಮಲ್ಲಿಕಾರ್ಜುನ (ಬಸವ ಭಾಸ್ಕರೋದಯಃ) ಗುರುಪಾದ ಕೆ. ಹೆಗಡೆ (ಶ್ಲೇಷ ಸಿದ್ಧಾಂತ), ಎಚ್.ವಿ. ನಾಗರಾಜರಾವ್ (ದಾಂಪತ್ಯ ಕಲಹಂ), ಅರೆಯರ್ ರಾಮಶರ್ಮಾ (ಅಸ್ಮತ್ ಚರಿತ್ರ), ಭಾರತೀತೀರ್ಥ (ಶ್ರೀ ಶಾರದಾ ಪಂಚರತ್ನ) ಎಸ್. ಜಗನ್ನಾಥ್ (ಕೌಟಿಲ್ಯ ವಂದನಂ), ಆರ್. ಗಣೇಶ್ (ಜಾತಾ ಶಕುಂತಲಾ) ಮುಂತಾದವರು ಕರ್ನಾಟಕದ ಗಣ್ಯ ಸಂಸ್ಕೃತ ಲೇಖಕರು. ಇವರು ಮಾತ್ರವಲ್ಲದೆ ಎಸ್.ಕೆ.ರಾಮಚಂದ್ರರಾವ್,

ಬನ್ನಂಜೆ ಗೋವಿಂದಾಚಾರ್ಯ, ಮಲ್ಲೇಪುರಂ ಜಿ. ವೆಂಕಟೇಶ್, ಕೆ.ಹಯವದನ ಪುರಾಣಿಕ್, ಅನಂತ ತಂತ್ರಿ, ಹರಿದಾಸ ಭಟ್, ಗುರುರಾಜ ಗುಡಿ, ಆನಂದತೀರ್ಥ ನಾಗಸಂಪಿಗೆ, ಪಿ.ಎಸ್. ಶೇಷಗಿರಿರಾವ್, ಅಲೆವೂರು ಸೀತಾರಾಮಚಾರ್ಯ ಅಗ್ನಿಹೋತ್ರಿ, ಎಸ್.ರಂಗನಾಥ್ ಮುಂತಾದ ವಿದ್ವಾಂಸರು ಸಂಸ್ಕೃತ ಗ್ರಂಥಗಳ ಅನುವಾದ, ಸಂಪಾದನೆ ಮುಂತಾದ ಕಾರ್ಯಗಳಲ್ಲಿ ತೊಡಗಿದ್ದಾರೆ.

ಇತ್ತೀಚೆಗೆ ಸಂಸ್ಕೃತದಲ್ಲಿ ಕೃತಿ ರಚನೆಯಲ್ಲಿ ತೊಡಗಿರುವ ಯುವ ಪೀಳಿಗೆಯ ವಿದ್ವಾಂಸರೆಂದರೆ ಬಾದರಾಯಣ ವ್ಯಾಸ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಆರ್.ಶಂಕರ್, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಾದ ಜನಾರ್ಧನ ಹೆಗಡೆ, ಪತ್ರಕರ್ತ ಉಮಾಕಾಂತ ಭಟ್ಟ, ಮಧುಸೂದನ ಅಡಿಗ, ರಾಮಕೃಷ್ಣ ಪೆಜತ್ತಾಯ, ಶ್ರೀನಿವಾಸ ವರಖೇಡಿ, ವಿನಯ್ ಆಚಾರ್ಯ, ಎಚ್. ಆರ್.ವಿಶ್ವಾಸ್, ಶಾಂತಲಾ, ವೆಂಕಟೇಶ ಕುಲಕರ್ಣಿ, ಮಹೇಶ ಭಟ್ಟ ಹಾರ್ಯಾಡಿ, ಎಚ್.ವಿ. ವಾಸುಕಿ, ಎನ್.ಲಕ್ಷ್ಮೀನಾರಾಯಣ ಭಟ್ಟ, ಗುಂಡ್ಮಿ ಗಣಪಯ್ಯ ಹೊಳ್ಳ, ಬಿ.ಎಂ. ಶಶಿಕಿರಣ್, ಸುಹಾಸ್ ಮಹೇಶ್, ನರೇಶ್‌ಕುಂತೂರ್, ನರೇಶ್ ಕೀರ್ತಿ, ನಾಗರತ್ನ, ವಿಶ್ವಾಸ್ ವಾಸುಕಿ, ರಾಘವೇಂದ್ರ ಭಟ್ಟ ಮುಂತಾದವರು. ಇವರಲ್ಲಿ ಹಲವಾರು ಅವಧಾನ ಕಲೆ ಹಾಗೂ ಚಿತ್ರಕವಿತ್ವದಲ್ಲಿಯೂ ನಿಪುಣರಾಗಿದ್ದಾರೆ.

### ತಮಿಳು

ಕನ್ನಡ ಮತ್ತು ತಮಿಳು ಭಾಷೆಗಳು ಒಂದೇ ದ್ರಾವಿಡ ಮೂಲ ಭಾಷಾವರ್ಗದಿಂದ ಮೂಡಿಬಂದಿದ್ದು, (ಪ್ರೋಟೋ ದ್ರಾವಿಡಿಯನ್) ತಮಿಳನಷ್ಟೇ ಪ್ರಾಚೀನತೆ ಕನ್ನಡಕ್ಕೂ ಇದೆ. ಕನ್ನಡ ಮತ್ತು ತಮಿಳು ಭಾಷೆಗಳು ಪರಸ್ಪರ ಬಹಳ ಪ್ರಭಾವಿತವಾಗಿವೆ. ಈಗಿನ ಕರ್ನಾಟಕದ ಬಹಳಷ್ಟು ವಿಶಾಲ ಭಾಗಗಳನ್ನು ಪಲ್ಲವರು ಹಾಗೂ ಚೋಳರು ಆಳಿದ್ದುಂಟು. ಗಂಗರು, ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರ ಚಕ್ರವರ್ತಿಗಳು ತಮಿಳುನಾಡಿನ ಬಹಳಷ್ಟು ವಿಶಾಲಭಾಗಗಳನ್ನು ಆಳಿದರು. 'ಕರ್ನಾಟಕ' ಎಂಬ ಪದವು ತಮಿಳಿನ 'ಶಿಲಪ್ಪದಿಕಾರಂ'ನಲ್ಲಿ ಬಳಸಿರುವ 'ಕರುನಾಟ್'ಎಂಬ ಶಬ್ದದಿಂದ ಬಂದ ತಮಿಳಿನ ಕೊಡುಗೆಯಾಗಿದೆ. ಉಭಯ ಭಾಷೆಗಳ ನಂಟು ಎಷ್ಟೊಂದು ನಿಕಟವಾಗಿದೆ ಎಂದರೆ ಕನ್ನಡದ ಕೆಲವು ಹಳೆಗನ್ನಡದ ಶಬ್ದಗಳು ತಮಿಳಿನಲ್ಲಿಯೂ ಕಾಣಬರುತ್ತವೆ. ಈಗಿನ ಕರ್ನಾಟಕದಲ್ಲಿ ಅನೇಕ ತಮಿಳು ಶಾಸನಗಳು ಕಂಡುಬರುವಂತೆ ತಮಿಳುನಾಡಿನಲ್ಲಿಯೂ ಅನೇಕ ಕನ್ನಡ ಶಾಸನಗಳು ಕಂಡು ಬಂದಿವೆ. ಅನೇಕ ತಮಿಳು ಪದಗಳು ಅಲ್ಪ ಸ್ವಲ್ಪ ವ್ಯತ್ಯಾಸಗಳೊಡನೆ ಕನ್ನಡದಲ್ಲಿ ಕಾಣಸಿಗುತ್ತವೆ.

ಕನ್ನಡದ ಆದಿ ಕವಿ ಪಂಪನಿಗೆ ತಮಿಳೂ ಕೂಡ ಗೊತ್ತಿತ್ತು ಎಂದು ಊಹಿಸಲಾಗಿದೆ. ವಿಕ್ರಮಾರ್ಜುನ ವಿಜಯದಲ್ಲಿ ಕರ್ಣನು, ದುರ್ಯೋಧನನ ಪತ್ನಿಯನ್ನು ಪಗಡೆಯಾಟದಲ್ಲಿ ಸೋಲಿಸಿದ ಮೇಲೆ ಆಕೆಯ ಕೊರಳಹಾರವನ್ನು ಪಣವಿಟ್ಟಿದ್ದ ಕಾರಣ ಕಸಿದು ಕೊಳ್ಳುವ ಘಟನೆ ಇದೆ. ಇದು ತಮಿಳು ಮೂಲದಿಂದ ಪಡೆದ ಆಧಾರವೆನ್ನಲಾಗಿದೆ. ಹರಿಹರನ ರಗಳೆ ಛಂದಸ್ಸು, ತಮಿಳ್ ಛಂದಸ್ಸಾದ 'ಆವಗಲ್' ಛಂದಸ್ಸಿನ ಅಳವಡಿಕೆ ಎನ್ನುವುದುಂಟು. ರಾಮಾನುಜರು ಕನ್ನಡ ಭಾಷಿಕ ಪ್ರದೇಶದಲ್ಲಿ ಆಶ್ರಯ ಪಡೆದಾಗ ಅವರು ಪ್ರಸಾರ ಮಾಡಿದ ಶ್ರೀವೈಷ್ಣವಧರ್ಮ ಕರ್ನಾಟಕದ ಮೇಲೆ ಪ್ರಭಾವ ಬೀರಿತ್ತು. ಅನೇಕ ತಮಿಳು ಬ್ರಾಹ್ಮಣರು ತೊಂಡೂರು, ಮೇಲುಕೋಟೆ ಮುಂತಾದ ಸ್ಥಳಗಳಲ್ಲಿನ 'ಅಗ್ರಹಾರ'ಗಳಲ್ಲಿ ನೆಲೆಸಿದರು. ಈ ಧರ್ಮ ಮತ್ತು ತಮಿಳಿನ ಸಾಹಿತ್ಯವು ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಹರಿದಾಸ ಸಾಹಿತ್ಯವನ್ನು ರೂಪಿಸಿದ ಶ್ರೀಪಾದರಾಯರು ತಮಿಳು ಭಕ್ತಿಗೀತೆಗಳಿಂದ ಪ್ರಭಾವಿತರಾಗಿದ್ದರು. ತಮಿಳು ಕವಿಗಳಿಗೆ ತಮ್ಮ ಭಾಷೆಯ ಮೇಲೆ ಅಗಾಧ ಪ್ರೇಮ, ಶುದ್ಧ ತಮಿಳು ಶಬ್ದಗಳನ್ನೇ ಬಳಸುವ ಅವರ ಉತ್ಸಾಹ, ಉದ್ದೇಶ ಪೂರ್ವಕವಾಗಿಯೇ ಸಂಸ್ಕೃತ ಶಬ್ದಗಳನ್ನು ಎರವಲು ಪಡೆಯದಿರುವುದು, ಬಳಸದಿರುವುದು, ತಮಿಳು ನುಡಿಗಟ್ಟುಗಳನ್ನು ಉಳಿಸಿಕೊಳ್ಳುವುದು ಮುಂತಾದವು ಕನ್ನಡ ಕವಿಗಳನ್ನು, ಲೇಖಕರನ್ನು ಪ್ರಭಾವಿಸಿದವು. ಇದು ಚಿಕ್ಕುಪಾಧ್ಯಾಯ, ಸಿಂಗರಾರ್ಯ, ತಿರುಮಲಾರ್ಯ ಮತ್ತು ಸಂಚಿಯ ಹೊನ್ನಮ್ಮನಂಥ ಶ್ರೀವೈಷ್ಣವ ಕನ್ನಡ ಕವಿಗಳ ಮನೋಧರ್ಮದಲ್ಲಿ ಮತ್ತು ಅವರ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುವುದು ಕಂಡುಬರುತ್ತದೆ. ಅವರು ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದರೂ ಅಚ್ಚಗನ್ನಡವನ್ನೇ ತಮ್ಮ ಕಾವ್ಯಗಳಲ್ಲಿ ಬಳಸಿದರು. ಈ ಮನೋಧರ್ಮವು ಸ್ಪಷ್ಟವಾಗಿ ಬಿ.ಎಂ.ಶ್ರೀಕಂಠಯ್ಯನವರ ಬರಹಗಳು ಪ್ರತಿಬಿಂಬಿಸಿದೆ. ಅವರ 'ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ', 'ಏಳ್ ಕನ್ನಡ ತಾಯ್' ಮುಂತಾದ ಘೋಷಣೆಗಳಲ್ಲಿ ಅವರ ಅಚ್ಚಗನ್ನಡದ ಬಳಕೆ ಎದ್ದು ಕಾಣುತ್ತದೆ. ಈ ದಿಸೆಯಲ್ಲಿ ಅವರು ತಮಿಳು ಸಾಹಿತ್ಯದಿಂದ ಪ್ರಭಾವಿತರಾದಂತೆ ಕಂಡುಬರುತ್ತದೆ.

ತಮಿಳಿನ ಮೇಲೆ ಕನ್ನಡದ ಪ್ರಭಾವವೂ ಕಡಿಮೆಯೇನಲ್ಲ. ಕರ್ನಾಟಕದಲ್ಲಿ ನಡೆದ ಧಾರ್ಮಿಕ ಚಳವಳಿಗಳಾದ ಜೈನಧರ್ಮ, ಗಣಪತಿ ಆರಾಧನೆ ಬಹುಶಃ ಬೌದ್ಧ ಧರ್ಮದ ಮೂಲಕ ಕರ್ನಾಟಕದಿಂದ ತಮಿಳುನಾಡಿಗೆ ಸಾಗಿದಂತೆ ತೋರುತ್ತದೆ. ತಮಿಳುನಾಡಿನಲ್ಲಿ ಶ್ರವಣಬೆಳಗೊಳದ ಜೈನ ಯತಿಗಳು/ಸಂನ್ಯಾಸಿಗಳು, ಕ್ರಿಯಾಶೀಲರಾಗಿದ್ದರು ಎಂಬುದನ್ನು ತಮಿಳು ಶಾಸನಗಳು ತಿಳಿಸುತ್ತವೆ. ಮುತ್ತುಸ್ವಾಮಿ ದೀಕ್ಷಿತರು ವಾತಾಪಿ ಗಣಪತಿಯನ್ನು ಸ್ತುತಿಸಿ ಹಾಡಿರುವುದು ಗಣಪತಿ ಪಂಥವು ಕರ್ನಾಟಕದಿಂದ ತಮಿಳುನಾಡಿಗೆ ಹೋಗಿ ಅಲ್ಲಿ ಪ್ರವರ್ಧಮಾನಗೊಂಡಿದ್ದುದರ ಕುರುಹೆನಿಸುತ್ತದೆ. ಚಾಮರಸನ ಪ್ರಭುಲಿಂಗಲೀಲೆ, ಸರ್ವಜ್ಞನ ವಚನಗಳು, ಬಸವೇಶ್ವರ ವಚನಗಳು, ಅಕ್ಕಮಹಾದೇವಿಯ ವಚನಗಳು ತಮಿಳಿಗೆ ಅನುವಾದಗೊಂಡಿವೆ. ತಮಿಳಿನ ಪುರಾತನ ಸಾಹಿತ್ಯವಾದ 'ತಿರುಕ್ಕುರಳ್' ಮತ್ತು 'ಪೆರಿಯ ಪುರಾಣ'ಗಳು ಕನ್ನಡಕ್ಕೆ ತರ್ಜುಮೆಗೊಂಡಿವೆ.

ಆಧುನಿಕಕಾಲದಲ್ಲಿ ಕುವೆಂಪು, ಮಾಸ್ತಿ ತೇಜಸ್ವಿ, ಚದುರಂಗ, ಎಂ.ಕೆ.ಇಂದಿರಾ, ಶಿವರಾಮಕಾರಂತ, ಕೆ.ವಿ.ಅಯ್ಯರ್, ಲಂಕೇಶ್, ಯಶವಂತ ಚಿತ್ತಾಲ, ಚಂದ್ರಶೇಖರ ಕಂಬಾರ, ಅರವಿಂದ ಮಾಲಗತ್ತಿ, ಮುಂತಾದ ಕನ್ನಡದ ಲೇಖಕರ ಕೃತಿಗಳು ತಮಿಳಿಗೆ ಭಾಷಾಂತರಗೊಂಡಿವೆ. ಅಂತೆಯೇ ಜಯಕಾಂತನ್, ಉ.ವೆ.ಸ್ವಾಮಿನಾಥ ಅಯ್ಯರ್, ಅಖಿಲನ್, ವೇದನಾಯಗಂ ಪಿಳ್ಳೈ, ರಾಜಮಯ್ಯರ್, ಕಲ್ಕಿ, ವರದರಾಜನ್, ಕೋಮಲ ಸ್ವಾಮಿನಾಥನ್, ಸುಬ್ರಹ್ಮಣ್ಯ ಭಾರತಿ, ಭಾರತಿದಾಸನ್ ಮುಂತಾದ ತಮಿಳು

ಲೇಖಕರ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ಎಲ್. ಗುಂಡಪ್ಪ, ಶೇಷನಾರಾಯಣ, ಟಿ.ಎಸ್.ಸದಾಶಿವಂ, ಪಾವನನ್, ತಮಿಳ್ ಸೆಲ್ವಿ ಮುಂತಾದವರು ಅನುವಾದ ಕಾರ್ಯದಲ್ಲಿ ಪ್ರಸಿದ್ಧರಾಗಿರುವರಲ್ಲಿ ಕೆಲವರು.

### ತೆಲುಗು

ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ನಡುವಿನ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ಬಾಂಧವ್ಯ ಬಹಳ ನಿಕಟ ಹಾಗೂ ಮಹತ್ವದ್ದಾಗಿದೆ. ಅನೇಕ ತೆಲುಗು ದೊರೆಗಳು ಈಗಿನ ಕರ್ನಾಟಕದ ವಿಶಾಲಭಾಗಗಳನ್ನು ಆಳಿದರು ಮತ್ತು ಅನೇಕ ಕನ್ನಡ ದೊರೆಗಳು ತೆಲುಗು ಭಾಷಿಕ ರಾಜ್ಯದ ವಿಶಾಲವಾದ ಪ್ರದೇಶಗಳನ್ನು ಆಳಿದರು. ಕರ್ನಾಟಕದಲ್ಲಿ ಅಸಂಖ್ಯಾತ ತೆಲುಗು ಶಾಸನಗಳುಕಂಡುಬರುವಂತೆ,ಆಂಧ್ರಪ್ರದೇಶದಲ್ಲಿಯೂ ಅಸಂಖ್ಯಾತ ಕನ್ನಡ ಶಾಸನಗಳು ಕಾಣಬರುತ್ತವೆ. ಇವು ಉಭಯ ರಾಜ್ಯಗಳ ಮೇಲ್ಲೂಚಿತ ವಿಷಯವನ್ನು ಪ್ರತಿಬಿಂಬಿಸುತ್ತದೆ. ವಿಜಯನಗರ ಸ್ಥಾಪನಾಪೂರ್ವದಲ್ಲಿ ತೆಲುಗು ಮತ್ತು ಕನ್ನಡ ಭಾಷೆಗಳಿಗೆ ಒಂದೇ ಲಿಪಿ ಇತ್ತು. ಇಂದು ಅವು ಬೇರೆ ಬೇರೆ ಲಿಪಿಗಳನ್ನು ಹೊಂದಿದ್ದರೂ ಪರಸ್ಪರ ಹತ್ತಿರವಾಗಿಯೇ ಕಾಣುತ್ತವೆ. ಪಾಲ್ಕುರಿಕೆ ಸೋಮನಾಥನು 'ಬಸವ ಪುರಾಣಮು' ಕೃತಿಕಾರನಾಗಿ ತೆಲುಗು ಸಾಹಿತ್ಯದಲ್ಲಿ ಪ್ರಸಿದ್ಧನಾಗಿದ್ದಾನೆ. ಅವನು ಕನ್ನಡದಲ್ಲಿ ಕೆಲವು ರಗಳೆಗಳನ್ನು,ವಚನಗಳನ್ನು, 'ಶೀಲಸಂಪಾದನೆ', 'ಸಹಸ್ರಗಣನಾಮ' ಮೊದಲಾದ ಕೃತಿಗಳನ್ನು ಬರೆದನೆನ್ನಲಾಗಿದೆ. ಬಸವೇಶ್ವರನ ವಚನಗಳ ಮಾದರಿಯಲ್ಲಿಯೇ 'ಸಿಂಹಗಿರಿ ವಚನಗಳು', 'ವೆಂಕಟೇಶ್ವರ ವಚನಗಳು' ತೆಲುಗಿನಲ್ಲಿ ಪ್ರಕಟವಾಗಿವೆ.

ವಿಜಯನಗರ ಕಾಲಾವಧಿಯು ಕನ್ನಡ ಮತ್ತು ತೆಲುಗು ಭಾಷೆಗಳ ಸುವರ್ಣಯುಗವೆನಿಸಿತ್ತು. ವಿಜಯನಗರ ಆಸ್ಥಾನವು ಈ ಉಭಯ ಭಾಷೆಗಳ ಮತ್ತು ಸಂಸ್ಕೃತಿಯ ಸಂಗಮವೆನಿಸಿತ್ತು. ಉಭಯ ರಾಜ್ಯಗಳ/ಉಭಯ ಭಾಷಿಕ ಪ್ರಜೆಗಳ ವಿಚಾರ ವಿನಿಮಯಗಳಿಗೆ ವ್ಯಾಪಕ ಅವಕಾಶವನ್ನು ಅದು ನೀಡಿತ್ತು.ತೆಲುಗಿನ ಕವಿಯಾದ ಶ್ರೀನಾಥ ಪ್ರೌಢ ದೇವರಾಯನಿಂದ ಕನಕಾಭಿಷೇಕದ ಗೌರವಕ್ಕೆ ಪಾತ್ರನಾದ. 'ಕರ್ನಾಟಕ ರಾಜ್ಯ ರಮಾರಮಣ' ನೆನಿಸಿದ ಶ್ರೀ ಕೃಷ್ಣ ದೇವರಾಯ ಆಮುಕ್ತಮಾಲ್ಯದವೆಂಬ ತೆಲುಗು ಕೃತಿಯನ್ನು ರಚಿಸಿದ್ದಾನೆ. ಇಮ್ಮಡಿ ಜಗದೇವರಾಯ (ಆಧ್ಯಾತ್ಮ ರಾಮಾಯಣ), ಸುಗಟೂರಿನ ಮುಮ್ಮಡಿ ತಮ್ಮ ಭೂಪಾಲ (ಕುಮಾರಾರ್ಜುನೀಯಮು), ಕಂಠೀರವ ನರಸರಾಜ (ಲಕ್ಷ್ಮೀವಿಲಾಸಮು), ಕಳಲೆ ವೀರರಾಜ (ಆಂಧ್ರ ಮಹಾಭಾರತ), ನಂಜರಾಜ (ಶಿವಭಕ್ತಿ ವಿಲಾಸ), ಕುಂದಲಕುರ್ತಿ ಚಂದ್ರಕವಿ (ಕೃಷ್ಣ ಭೂಪಾಲೀಯಮು), ಎಲಚನಾಡು ವೆಂಕಟರಮಣ ಕವಿ (ವಾಸಿಷ್ಠ ರಾಮಾಯಣಮು) ಮುಂತಾದವರು ಕರ್ನಾಟಕದಲ್ಲಿದ್ದುಕೊಂಡೇ ತೆಲುಗಿನಲ್ಲಿ ಸಾಹಿತ್ಯ ರಚನೆಮಾಡಿದ ಪ್ರಾಚೀನರು. ಮಹಾಕವಿ ಗುಮ್ಮರಾಜು ವಿರಚಿತ 'ಚೌಡೇಶ್ವರಿ ಪುರಾಣಮ್', ಕೊಮರಾಲ ರಾಮಚಂದ್ರಯ್ಯ ವಿರಚಿತ 'ಸುಕರ್ಮನೀತಿ ಚಿಂತಾಮಣಿ', ಕಾಹುಲ ಭೈರವ ಕವಿಯ 'ಪದ್ಮಾವತಿ ಶ್ರೀನಿವಾಸ' ಮುಂತಾದ ಕೃತಿಗಳು ೧೯ ಮತ್ತು ೨೦ನೆಯ ಶತಮಾನದ ಕೃತಿಗಳಾಗಿ ಹೊರಹೊಮ್ಮಿದವು. ಕನ್ನಡಕ್ಕೆ ಸರ್ವಜ್ಞನಿದ್ದಂತೆ ತೆಲುಗಿಗೆ ವೇಮನ ಪ್ರಸಿದ್ಧ. ಕರ್ನಾಟಕದ ತೆಲುಗು ಕವಿ ಭೀಮರಾಜು ಸರ್ವಜ್ಞನ ವಚನಗಳನ್ನು ತೆಲುಗಿಗೆ ಮತ್ತು ವೇಮನನ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಪೋತನನ ಆಂಧ್ರಭಾಗವತವು ಇತ್ತೀಚೆಗೆ ಸಂಪೂರ್ಣ ರೂಪದಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ.

ಈಚಿನ ಕಾಲದಲ್ಲಿ ಅನುವಾದ ಕ್ಷೇತ್ರದಲ್ಲಿ ಸಾಹಿತ್ಯಿಕ ಚಟುವಟಿಕೆಗಳು ಗಣನೀಯ ಪ್ರಮಾಣದಲ್ಲಿ ಕಾಣಬರುತ್ತಿವೆ. ಉಭಯ ಭಾಷೆಗಳಲ್ಲಿನ ಪ್ರಶಸ್ತಿ ವಿಜೇತ ಸಾಹಿತ್ಯ ಕೃತಿಗಳು ಪರಸ್ಪರ ಅನುವಾದಗೊಂಡಿವೆ. ಅನುವಾದ ಕ್ಷೇತ್ರದಲ್ಲಿ ಟಿ.ವಿ.ಸುಬ್ಬರಾವ್, ಬಾಡಾಲ ರಾಮಯ್ಯ, ಕೆ.ಎಸ್.ಜಾನಕೀರಾಮಯ್ಯ, ಆರ್ದ್ರಿಯಸ್ ಸುಂದರಮ್, ನಿರುಪಮ, ಹರಿಹರಪ್ರಿಯ, ಗುರುಮೂರ್ತಿ ಪೆಂಡಕೂರು ಮುಂತಾದವರು ಗಮನಾರ್ಹ ಕಾರ್ಯಗೈದಿದ್ದಾರೆ.

ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳು ತೆಲುಗು ವಿಭಾಗವನ್ನು ಪ್ರತಿಷ್ಠಾಪಿಸಿಕೊಂಡಿದ್ದು, ತೆಲುಗು ಭಾಷೆಯ ಅಭಿವೃದ್ಧಿಗಾಗಿ ನೆರವಾಗಿವೆ. ಈ ಉಭಯ ವಿಶ್ವವಿದ್ಯಾಲಯಗಳಲ್ಲಿ ತೆಲುಗು ಭಾಷೆ ಮತ್ತು ಸಂಸ್ಕೃತಿ ಕುರಿತಾದ ಅನೇಕ ಸಂಶೋಧನೆ ಸಂಪ್ರಬಂಧಗಳು ಹೊರಬಂದಿವೆ. ಕರ್ನಾಟಕ, ಆಂಧ್ರ ಹಾಗೂ ತಮಿಳುನಾಡುಗಳ ಸಂಗಮ ಸ್ಥಳವಾದ ಕುಪ್ಪಂನಲ್ಲಿ ದ್ರಾವಿಡ ವಿಶ್ವವಿದ್ಯಾನಿಲಯವು ೧೯೯೭ ರಲ್ಲಿ ಸ್ಥಾಪನೆಯಾಗಿದ್ದು ಕನ್ನಡ-ತೆಲುಗಿನ ಕೊಡು-ಕೊಳ್ಳುವಿಕೆಗೆ ಹೆಚ್ಚಿನ ಅವಕಾಶ ಒದಗಿದೆ.

ರಾಜಕೀಯ, ಸಾಮಾಜಿಕ ವಿಡಂಬನೆ ಹಾಗೂ ಕಾದಂಬರಿಗಳು ತೆಲುಗಿನಿಂದ ಕನ್ನಡಕ್ಕೆ ಅನುವಾದಗೊಳ್ಳುವ ಪ್ರವೃತ್ತಿ ಗಮನಾರ್ಹ ಬೆಳವಣಿಗೆ. ತೆಲುಗು ಮತ್ತು ಕನ್ನಡ ಚಲನಚಿತ್ರ ರಂಗವು ಪರಸ್ಪರ ನಿಕಟ ಬಾಂಧವ್ಯವನ್ನು ಹೊಂದಿವೆ. ತೆಲುಗು ಸಮಿತಿ ಮತ್ತು ಆಂಧ್ರ ವಿಜ್ಞಾನ ಸಂಘಗಳು ಬೆಂಗಳೂರಿನಲ್ಲಿ ಸಾಹಿತ್ಯಿಕ-ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಮಾನ ವೇದಿಕೆಯನ್ನು ಒದಗಿಸಲು ಕಾರ್ಯಶೀಲವಾಗಿವೆ. ತೆಲುಗು ಮತ್ತು ಕನ್ನಡ ಭಾಷೆಗಳಿಗೆ ಸಾಮಾನ್ಯ ಲಿಪಿ ಇರಬೇಕೆಂಬ ಬಗ್ಗೆ ಆಗಾಗ ಚರ್ಚೆ ನಡೆಯುತ್ತಿರುತ್ತದೆ.

### ಮಲಯಾಳಂ

ಕರಾವಳಿ ತೀರವನ್ನು ಪರಶುರಾಮನು ರೂಪಿಸಿದ ಎಂಬ ದಂತಕಥೆಯು ಕೇರಳ ಮತ್ತು ಕರ್ನಾಟಕದ ಸಾಂಸ್ಕೃತಿಕ ಸಾಮರಸ್ಯಕ್ಕೆ ಸಾಕ್ಷಿಯಾಗಿ ಕಂಡು ಬರುತ್ತದೆ. ಈ ಉಭಯ ದೇಶೀ ಸಂಸ್ಕೃತಿಗಳು ಸಾಮಾನ್ಯ ದ್ರಾವಿಡ ಮೂಲದಿಂದ ಮೊಳೆತು ಬಂದಂಥವು. ಆದರೂ ಎರಡೂ ಸಂಸ್ಕೃತಿಗಳು ಹೆಚ್ಚು ಕಡಿಮೆ ವಿದೇಶಿ ಪ್ರಭಾವಕ್ಕೆ ಬಹುಶಃ ತೆರೆದುಕೊಂಡವೆನ್ನಬೇಕು. ಕಾರಣ ಇಡೀ ಪಶ್ಚಿಮ ಕರಾವಳಿ ತೀರವು ಪ್ರಾಚೀನ ಕಾಲದಲ್ಲಿಯೇ ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆಗಳ ಕೇಂದ್ರವಾಗಿತ್ತು.

ಭಾಷಾಶಾಸ್ತ್ರೀಯ ವಲಯದಲ್ಲಿ ಕನ್ನಡ ಮತ್ತು ಮಲಯಾಳಂ ಭಾಷೆಗಳು ದ್ರಾವಿಡ ಮೂಲದಿಂದ ಉಗಮವಾದಂಥವು. ಹಳೆಗನ್ನಡ ಮಲಯಾಳಂಗೆ ನಿಕಟವಾಗಿರುವುದು ಆಶ್ಚರ್ಯಕರವಾಗಿ ಕಾಣುತ್ತದೆ. ವರ್ಣಮಾಲೆ ಮೂಲಶಬ್ದಗಳು, ಅವುಗಳಲ್ಲಿ ಅಡಕವಿರುವ ವಿನ್ಯಾಸ ಇವೆಲ್ಲವೂ ಈ ಭಾಷೆಗಳಲ್ಲಿ ಬಹಳಷ್ಟು ಮಟ್ಟಿಗೆ ಪರಸ್ಪರ ಸಾಮ್ಯತೆ ಹೊಂದಿವೆ. ಸಂಸ್ಕೃತವು ಉಭಯ ಭಾಷೆಗಳನ್ನು ಬಹಳ ಪ್ರಭಾವಿಸಿದ್ದು, ಕನ್ನಡ ಮತ್ತು ಮಲಯಾಳಂ ಮೇಲೆ ಕವಿ ಕಾಳಿದಾಸ, ಭಾಸ ಮುಂತಾದವರ ಸಂಸ್ಕೃತದ

ಮಹಾಕೃತಿಗಳು ಏಕರೀತಿಯಲ್ಲಿ ಪ್ರಭಾವ ಬೀರಿವೆ.ಕರ್ನಾಟಕ ಮತ್ತು ಕೇರಳದ ನಡುವೆ ಇದ್ದ ಬಹು ಪ್ರಾಚೀನ ಸಂಪರ್ಕವು ಪಶ್ಚಿಮ ಕರಾವಳಿಯಲ್ಲಿನ (ಕ್ರೈಸ್ತ) ಮಿಷನರಿಗಳ ಚಟುವಟಿಕೆಗಳ ಕಾಲದಲ್ಲಿ ಹೊಸ ಶಕೆಯನ್ನು ಪ್ರವೇಶಿಸಿತು. ಸಾಹಿತ್ಯ ಅಕಾಡೆಮಿಯು ಕೊಡಮಾಡಿದ ಘೋಷಣೆಯಿಂದಾಗಿ ಮಲೆಯಾಳ ಮೂಲದ 'ಚೆಮ್ಮೀನ್', 'ಯಕ್ಷಿ' ಮುಂತಾದವು (ಕಾದಂಬರಿಗಳು) ಕನ್ನಡಕ್ಕೆ ತರ್ಜುಮೆಗೊಂಡವು.

ಅಪರೂಪವೆನಿಸಿದರೂ ಕನ್ನಡದ ಲೇಖಕರು ಕೇರಳದ ಜನಜೀವನದ ಲಕ್ಷಣಗಳಿಂದ ಹಾಗೂ ನಿರ್ದಿಷ್ಟ ಆವರಣದಿಂದ ಸ್ಫೂರ್ತಿ/ಪ್ರೇರಣೆಗಳನ್ನು ಪಡೆದಿರುವ ಉದಾಹರಣೆಗಳಿವೆ. ಕೇರಳದ ಲೇಖಕರೂ ಸಹ ಕರ್ನಾಟಕದ ಸಂದರ್ಭಗಳಿಂದ ಹೀಗೆ ಸ್ಫೂರ್ತಿ/ಪ್ರೇರಣೆಗಳನ್ನು ಪಡೆದಿರುವುದೂ ಇದೆ. ನಿರಂಜನರ ಪ್ರಸಿದ್ಧ ಪ್ರಗತಿಶೀಲ ಕನ್ನಡ ಕಾದಂಬರಿಯಾದ 'ಚಿರಸ್ಮರಣೆ'ಯ ವಸ್ತುವು ಕೇರಳದ ಗ್ರಾಮ ಕಯ್ಯಾರ್ ನಲ್ಲಿ ಘಟಿಸಿದ ಘಟನೆಯೊಂದರ ಸುತ್ತ ಹೆಣೆದ ಕಥೆಯಾಗಿದೆ. ಅದರ ಮಲಯಾಳಂ ಅನುವಾದವು ವಿಸ್ಮಯಕಾರಕ ಮೆಚ್ಚುಗೆ–ಸ್ವಾಗತವನ್ನೂ ಪಡೆಯಿತು. ಮಲೆಯಾಳದ ಪ್ರಸಿದ್ಧ ಆಧುನಿಕ ಕವಿಯಾದ ಡಾ.ಅಯ್ಯಪ್ಪ ಪಣಿಕ್ಕರ್ ಅವರ ಈಚಿನ ಕವನಸಂಕಲನದ ಶೀರ್ಷಿಕೆಯೇ 'ಚಾಮುಂಡಿ ಮಲೆಯಿಲೆ ತಿರುವಿಳೆಯಾಟ್ಟಂ' ಎಂದಿರುವುದು ವಿಶೇಷ. ತ್ರಿವೇಂಡ್ರಮ್ ಕರ್ನಾಟಕ ಅಸೋಸಿಯೇಷನ್ ಕೂಡ 'ಮಂದಾರಮಲ್ಲಿಗೆ' ಎಂಬ ಸಂಪುಟವನ್ನು ಹೊರತಂದಿದೆ. ಅದು ಮಲೆಯಾಳಂ ಸಾಹಿತ್ಯದ ಪ್ರಾತಿನಿಧಿಕ ಲೇಖನಗಳ ಕನ್ನಡಾನುವಾದದ ಸಂಕಲನವಾಗಿದೆ. ಇತ್ತೀಚಿನ ಅವಧಿಗಳಲ್ಲಿ ಹೊಸ ಲೇಖಕರ ತಂಡವು ಬೆಳೆದು ಬಂದಿದೆ. ಸಣ್ಣ ಕಥೆಗಳು, ಕಾದಂಬರಿಗಳು, ವಿದ್ವತ್ ಪ್ರಬಂಧಗಳು ಇತ್ಯಾದಿಗಳನ್ನು ಅವರು ಅನುವಾದಿಸುತ್ತಿರುವ ಈ ಪ್ರಯತ್ನವು ಉಭಯ ಭಾಷೆ ಮತ್ತು ಸಂಸ್ಕೃತಿಯನ್ನು ಆತ್ಮೀಯ ಸಂಪರ್ಕಕ್ಕೆಳಸಿದೆ. ಪಾರ್ವತಿ ಜಿ. ಐತಾಳ್, ಕೆ.ಕೆ.ನಾಯರ್, ಕೆ.ಟಿ. ಶ್ರೀಧರ್ ಕೆ.ಕೆ.ಗಂಗಾಧರನ್, ಪಿ.ವಿ.ಪುಣಿಂಚತ್ತಾಯ, ಶ್ರೀ ಕೃಷ್ಣಭಟ್ ಅರ್ತಿಕಜೆ, ಅಶೋಕ್ ಕುಮಾರ್, ಸಿ.ರಾಘವನ್, ನಾ.ದಾಮೋದರ ಶೆಟ್ಟಿ ,ಎಂ.ಎಸ್. ಲಕ್ಷ್ಮಣಚಾರ್ ಮುಂತಾದ ಸಮರ್ಥ ಅನುವಾದಕರಿಂದಾಗಿ ಪಿ.ಕೆ. ಪಾರಕ್ಕಡವು, ಪಿ.ಪದ್ಮನಾಭನ್, ವೈ.ಕಂ. ಮಹಮದ್ ಬಶೀರ್, ತಕುಳ ಶಿವಶಂಕರ ಪಿಳ್ಳೈ, ಕಮಲಾದಾಸ್, ಕುಮಾರನ್ ಆಶಾನ್, ಎಂ.ಟಿ.ವಾಸುದೇವನ್ ನಾಯರ್, ಎಸ್.ಕೆ. ಪೊಟ್ಟಿಕ್ಕಾಟ್, ಲಲಿತಾಂಬಿಕಾ ಅನಂತಜ್ಞಾನಾ, ಸಚ್ಚಿದಾನಂದನ್ ಮುಂತಾದ ಮಲೆಯಾಳಂ ಲೇಖಕರ ಕೃತಿಗಳು ಕನ್ನಡಿಗರಿಗೆ ದಕ್ಕಿವೆ. ಪಿ.ವಿ.ನಾರಾಯಣರವರ 'ಧರ್ಮಕಾರಣ'ವೂ ಸೇರಿದಂತೆ ನಿರಂಜನ, ಶ್ರೀಕೃಷ್ಣ ಆಲನಹಳ್ಳಿ ಮುಂತಾದ ಹಲವಾರು ಕನ್ನಡಿಗರ ಕೃತಿಗಳು ಮಲೆಯಾಳಂಗೆ ಅನುವಾದಗೊಂಡಿವೆ. ತಿರುವನಂತಪುರದ ಕರ್ನಾಟಕ ಸಂಘವು 'ಪುರಂದರದಾಸರ ಕೀರ್ತನಾವಳಿ' ಎಂಬ ಕೃತಿಯನ್ನು ಮಲೆಯಾಳಂನ ಅನುವಾದದೊಡನೆಯೂ, ಸಂಗೀತ ಸ್ವರ ಚಿಹ್ನೆ ಹಾಗೂ ವಿವರಣೆ ಸಹಿತವಾಗಿ ಪ್ರಕಟಿಸಿದೆ.

ಕರ್ನಾಟಕದಲ್ಲಿ ವಿಶ್ವವಿದ್ಯಾಲಯಗಳು ಪದವಿ ಮಟ್ಟದಲ್ಲಿ ಮಲೆಯಾಳಂ ಭಾಷೆಯನ್ನು ಭಾಷಾಧ್ಯಯನಗಳಲ್ಲಿ ಒಂದನ್ನಾಗಿ ಓದಲು ಅವಕಾಶ ಮಾಡಿವೆ. ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಮಲೆಯಾಳಂ ವಿಭಾಗವೇ ಇದೆ. ಮೈಸೂರು ವಿಶ್ವವಿದ್ಯಾಲಯವು ನಡೆಸುತ್ತಿರುವ ಸೌತ್ ಇಂಡಿಯನ್ ಲಾಂಗ್ವೇಜ್ ಸ್ಟಡೀಸ್ (ದಕ್ಷಿಣ ಭಾರತ ಭಾಷಾ ಅಧ್ಯಯನಗಳು) ವಿಭಾಗದಲ್ಲಿ ಎಂ.ಎ. ತರಗತಿಗಳಲ್ಲಿ ಮಲೆಯಾಳಂಗೂ ಸೂಕ್ತ ಸ್ಥಾನವನ್ನು ಕಲ್ಪಿಸಿದೆ.

### ಮರಾಠಿ

ಅನೇಕ ಶತಮಾನಗಳಿಂದ ಮರಾಠಿ ಮತ್ತು ಕನ್ನಡ ಭಾಷೆಗಳು ನಿಕಟ ಸಂಬಂಧವನ್ನು ಹೊಂದಿವೆ. ಇಂಥ ಬಾಂಧವ್ಯಕ್ಕೆ, ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ, ಮಾನವ ಜನಾಂಗೀಯ ಪದ್ಧತಿಗಳು (ಮಾನವ ಕುಲ ಪದ್ಧತಿಗಳು) ಹಾಗೂ ಧಾರ್ಮಿಕ ಬೆಸುಗೆ ಕಾರಣವಾಗಿದೆ. ಕನ್ನಡ ಸಾಹಿತ್ಯದಲ್ಲಿ ಶ್ರೀಮಂತಿಕೆ ಇದ್ದುದರಿಂದ ಈ ಭಾಷೆಗಳ ಬಳಕೆಯಲ್ಲಿ ಪರಸ್ಪರ ಪ್ರಭಾವಗಳು, ವಿನಿಮಯಗಳು, ಕಾಣಬರುತ್ತದೆ.

ಮರಾಠಿಯು 'ಜೈನ್ ಮಹಾರಾಷ್ಟ್ರಿ' ಎಂದು ಜನಪ್ರಿಯವಾಗಿರುವ ಮಹಾರಾಷ್ಟ್ರ ಪ್ರಾಕೃತದಿಂದ ವಿಕಸಿತಗೊಂಡಿದೆ. ಕರ್ನಾಟಕದಲ್ಲಿ ಭಾಷಿಕ ವೈಶಿಷ್ಟ್ಯತೆಗಳಿಂದ ಮರಾಠಿಯನ್ನು ಮಾತನಾಡುತ್ತಿರುವುದು ಗಮನಾರ್ಹವಾದುದು. ಕನ್ನಡ ಪದಗಳು ಹಾಗೂ ನುಡಿಗಟ್ಟುಗಳ ಬಳಕೆಯೇ ಮುಖ್ಯ ವೈಶಿಷ್ಟ್ಯಗಳಾಗಿವೆ. ಕರ್ನಾಟಕದ ಮರಾಠಿ ಭಾಷಿಕರಲ್ಲಿ ಮೂಲ ಮರಾಠಿಯ ದಂತ–ತಾಲವ್ಯ ಉಚ್ಚಾರವೇ ಇಂಥ ವೈಶಿಷ್ಟ್ಯಕ್ಕೆ ಕಾರಣವೆಂದು ಗಮನಿಸಬಹುದು. ಮರಾಠಿಯಲ್ಲಿ ಬರುವ ಯಾವುದೇ ನಾಮವಾಚಕದಲ್ಲಿ 'ಅವರು' ಎಂಬ ಕನ್ನಡದ ಪದವು ಅಂತ್ಯ ಪ್ರತ್ಯಯವಾಗಿ ಬರುವುದು ಆ ಶಬ್ದದ ಪ್ರಭಾವವಾಗಿದ್ದು ಬಹಳ ಗಮನಾರ್ಹವಾದುದು. ವಿಜಯಪುರ ಮೈಸೂರು ಮತ್ತು ಜಮಖಂಡಿ ಮುಂತಾದ ಕರ್ನಾಟಕದ ಅನೇಕ ಸಣ್ಣ ಜಹಗೀರುಗಳ ಮುಸ್ಲಿಂ ದೊರೆಗಳು, ಮರಾಠಿ ಭಾಷೆಗೆ ಮತ್ತು ಮೋಡಿ ಲಿಪಿಗೆ ಪ್ರಮುಖ ಸ್ಥಾನವನ್ನು ನೀಡಿದರು. ೧೯ನೆಯ ಶತಮಾನದ ಅಂತ್ಯದವರೆಗೆ ವಿಶೇಷತಃ ಉತ್ತರ ಕರ್ನಾಟಕದಲ್ಲಿ ಮೋಡಿ ಲಿಪಿಯು ಚಾಲ್ತಿಯಲ್ಲಿತ್ತು. ಮರಾಠರ ಆಳ್ವಿಕೆಯಲ್ಲಿ ಕನ್ನಡ ಮತ್ತು ಮರಾಠಿ ಭಾಷೆಗಳು ನಿಕಟ ಸಂಪರ್ಕಕ್ಕೆ ಬಂದು ಒಂದರ ಮೇಲೊಂದು ಗಣನೀಯ ಪ್ರಮಾಣದಲ್ಲಿ ಪರಸ್ಪರ ಪ್ರಭಾವಿತವಾಗಿದ್ದುವು. ೧೨ನೆಯ ಶತಮಾನಕ್ಕಿಂತ ಹಿಂದೆಯೇ ಕರ್ನಾಟಕದಲ್ಲಿ ಪ್ರಮುಖ ಮರಾಠಿ ಸಾಹಿತ್ಯ ರಚನೆಯಾಯಿತು.

ಗೋಕಾಕ್ ಹತ್ತಿರದ ಮೂಡಲಗಿಯಲ್ಲಿ ಮರಾಠಿಯ ಮೊದಲ ಕವಿಯಾದ ಮುಕುಂದರಾಜರ ಸಂಪ್ರದಾಯಕ್ಕೆ (ಪಂಥ) ಸೇರಿದ ಸ್ವಾಮಿಗಳ ಪರಂಪರೆ ಇದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಮರಾಠಿಗೂ ಆಶ್ರಯದಾತರಾಗಿದ್ದರು. ಅವರೂ 'ಸಾಂಖ್ಯರತ್ನಕೋಶ' ಎಂಬ ಹೆಸರಿನ ಚದುರಂಗದಾಟ ಕುರಿತ ಪುಸ್ತಕವನ್ನು ಮರಾಠಿಯಲ್ಲಿ ಬರೆದರು. ಬ್ರಿಟಿಷರ ಆಡಳಿತ ಬಂದ ಮೇಲೆ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವೆ, ರಾಜಕೀಯ, ಶಿಕ್ಷಣ, ಸಾಹಿತ್ಯ ಹಾಗೂ ವಿವಿಧ ಲಲಿತ ಕಲೆಗಳ ಕ್ಷೇತ್ರಗಳಲ್ಲಿ ಇದ್ದ ಸಂಪರ್ಕದ ಕಾರಣ ಮರಾಠಿಯು ಕರ್ನಾಟಕದಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ಗೋಖಲೆ ಮತ್ತು ತಿಲಕರಂಥ ರಾಜಕೀಯ ನೇತಾರರನ್ನು ಕರ್ನಾಟಕದ ಜನತೆ ಗೌರವಿಸಿದ್ದು, ತಮ್ಮವರೆನ್ನುವ ರೀತಿಯಲ್ಲಿಯೇ ಪ್ರೀತಿಯನ್ನು ತೋರಿದ್ದು, ಕರ್ನಾಟಕದಲ್ಲಿ ಮರಾಠಿ ರಂಗಭೂಮಿಯು ಬಹು ಜನಪ್ರಿಯವಾಗಿದೆ. ಬಾಲಗಂಧರ್ವರಂತಹ

ರಂಗಭೂಮಿ ನಟರು ಕರ್ನಾಟಕದಲ್ಲಿ ಅಚ್ಚು ಮೆಚ್ಚಿನವರಾಗಿದ್ದಾರೆ. ಗಳಗನಾಥರು ಹರಿನಾರಾಯಣ ಆಪ್ಟೆಯವರ ಐತಿಹಾಸಿಕ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಣೆ ಗುರೂಜಿ, ಫಡ್ಕೆ, ಖಾಂಡೇಕರ್, ಸಾವರ್ಕರ್ ಮತ್ತು ರಣಜಿತ್ ದೇಸಾಯಿ ಮುಂತಾದವರ ಮರಾಠಿ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ, ಅನೇಕ ಆಧುನಿಕ ಮರಾಠಿ ನಾಟಕಗಳು ಕನ್ನಡಕ್ಕೂ, ಹಾಗೆಯೇ ಕನ್ನಡದಿಂದ ಮರಾಠಿಗೂ ಅನುವಾದಗೊಂಡಿವೆ. ತೆಂಡೂಲ್ಕರ್ ಅವರ ಮರಾಠಿ ನಾಟಕಗಳು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಜನಪ್ರಿಯತೆ ಗಳಿಸಿವೆ ಮತ್ತು ಗಿರೀಶ್ ಕಾರ್ನಾಡರ ಕನ್ನಡ ನಾಟಕಗಳು ಮಹಾರಾಷ್ಟ್ರದಲ್ಲಿ ಮೆಚ್ಚುಗೆ ಮತ್ತು ಜನಮನ್ನಣೆಯನ್ನು ಗಳಿಸಿವೆ. ಡಾ. ಶ್ರೀನಿವಾಸ ಹಾವನೂರರ ಕಲ್ಪನೆಯ ಕೂಸಾದ ಪುಣೆಯ 'ಮರಾಠಿ – ಕನ್ನಡ ಸ್ನೇಹವರ್ಧನ ಕೇಂದ್ರವು" ಎರಡೂ ಭಾಷೆಗಳ ಸಾಂಸ್ಕೃತಿಕ ಅಭಿವೃದ್ಧಿಗೆ ಶ್ರಮಿಸಿದೆ.

ಬೇಂದ್ರೆಯವರ 'ನಾಕುತಂತಿ', 'ವಚನ ಬಸವೇಶ್ವರ', 'ವಚನೋದಯ', ಕೈಲಾಸಂ ಅವರ 'ಪೊಳ್ಳುಗಟ್ಟಿ' ನಾಟಕ, ಎಸ್.ಎಲ್. ಭೈರಪ್ಪನವರ ಅನೇಕ ಕಾದಂಬರಿಗಳು, ಕಾರ್ನಾಡರ 'ಹಯವದನ' ಹಾಗೂ ತುಘಲಕ್' ಮುಂತಾದ ನಾಟಕಗಳು ಮರಾಠಿಗೆ ಅನುವಾದಗೊಂಡು ಬಹಳ ಜನಪ್ರಿಯವಾಗಿವೆ ಕರ್ನಾಟಕದ ಅನೇಕ ಸಮರ್ಥ ಮರಾಠಿ ಲೇಖಕರು ಕೀರ್ತಿ ಗಳಿಸಿದ್ದಾರೆ, ಅವರಲ್ಲಿ ಗೋವಿಂದ ಕೇಳ್ಕರ್, ನಾರಾಯಣ ಅತ್ತಿವಾಡ್ಕರ್, ಮನೋಹರ್ ಬನೇ, ಜಿ.ಜಿ. ರಾಜಾಧ್ಯಕ್ಷ, ಎಸ್. ಆರ್. ಕಿಲ್ಲೆದಾರ್, ಜಿ.ಎ. ಕುಲಕರ್ಣಿ ಮುಂತಾದವರು ಪ್ರಸಿದ್ಧರು.

ಕಾದಂಬರಿಕಾರರಾದ ಪ್ರೊ. ನಿಕುಂಬ, ಇಂದಿರಾ ಸಂತ್ ಮತ್ತು ರಂಜಿತ್ ದೇಸಾಯಿ, ಪ್ರೊ.ಅರವಿಂದ ಯಾಲಗಿ, ಮಾಧವಿ ದೇಸಾಯಿ, ಪ್ರಿಯಾ ಪ್ರಭು ಅವರು ಬೆಳಗಾವಿ ಜಿಲ್ಲೆಯ ಪ್ರಖ್ಯಾತ ಲೇಖಕರು. ಗದಗಿನ ಜಿ.ಡಿ.ಖರೆ ಅವರು ತಮ್ಮ 'ಗೀತಾ ಮರ್ಮ ದರ್ಶನ್' ಎಂಬ ಕೃತಿ ರಚನೆಗಾಗಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಪ್ರೊ. ಜಿ.ಎ.ಕುಲಕರ್ಣಿ ಅವರು ಧಾರವಾಡದ ಪ್ರಸಿದ್ಧ ಸಣ್ಣ ಕತೆಗಾರರು. ಐನಾಪುರದ ಡಾ.ಎ.ಆರ್.ತೋರೊ ಅವರು ಅನೇಕ ಮರಾಠಿ ಕೃತಿಗಳನ್ನು ಕನ್ನಡಕ್ಕೂ, ಕನ್ನಡ ಕೃತಿಗಳನ್ನು ಮರಾಠಿಗೂ ಅನುವಾದಿಸಿದ್ದಾರೆ. ಅವರ ಮರಾಠಿ ಕೃತಿಗೆ ಜ್ಞಾನಪೀಠ ಪ್ರಶಸ್ತಿಯೂ ಸಂದಾಯವಾಗಿದೆ. ಹುಬ್ಬಳ್ಳಿಯ ಆರ್.ಜಿ. ಕಲಂಗಡೆಯವರು ಸಾಯಣಾಚಾರ್ಯರು ಕೃತಿ ಸೇರಿದಂತೆ ಅನೇಕ ಧಾರ್ಮಿಕ ಕೃತಿಗಳನ್ನು ಬರೆದಿದ್ದಾರೆ. ಧಾರವಾಡದ ಲೇಖಕರಲ್ಲಿ ಪ್ರೊ. ಬಿ.ಆರ್.ಮೋಡಕ್, ವಿದ್ಯಾ ಸಪ್ರೆ (ಕಾದಂಬರಿಕಾರ್ತಿ) ಹಾಗೂ ಬಾಬುರಾವ್ ಗಾಯಕವಾಡ್ ಅವರನ್ನು ಹೆಸರಿಸಬಹುದು. ಎಸ್. ಎಸ್.ಗೋಖಲೆ ಅವರ ವಿಶಿಷ್ಟ ಕೃತಿ 'ಆಕಾಶಸಿ ಜಾದವ್ ನಾಟೆ' ಎಂಬುದು ಖಗೋಳ ಶಾಸ್ತ್ರದ ಕೃತಿಯಾಗಿದೆ. ಗುಲಬರ್ಗಾದ ದೇವಳಗಾಂವ್ಕರ್ ಮತ್ತು ಜಿ.ಪಿ.ಜೋಷಿ ಕೂಡ ಮರಾಠಿಯಲ್ಲಿ ಬರೆದಿದ್ದಾರೆ, ಜಿ.ಪಿ. ಜೋಶಿ ಅವರು 'ಕೃಷ್ಣ–ಗೋದಾವರಿ ಪರಿಸರ' ಕುರಿತು ಬರೆದ ಕೃತಿಯು ಸಾಂಸ್ಕೃತಿಕ ಇತಿಹಾಸದ ಗಮನಾರ್ಹ ಕೃತಿಯೆನಿಸಿದೆ.

ಮರಾಠಿ ಪತ್ರಿಕೋದ್ಯಮವು ಕರ್ನಾಟಕದಲ್ಲಿಯೂ ಅಭಿವೃದ್ಧಿಗೊಂಡಿದೆ. ತರುಣ್‌ಭಾರತ್, ರಣಜುಂಜಾರ್, ವಾರ್ತಾ, ವೀರವಾಣಿ, ಲೋಕಮತ, ರಾಷ್ಟ್ರವೀರ್ ಮತ್ತು ಬೆಳಗಾವಿ ಸಮಾಚಾರ್ ಮುಂತಾದ ಪತ್ರಿಕೆಗಳನ್ನು ಪ್ರಮುಖವಾಗಿ ಹೆಸರಿಸಬಹುದು.

## ತುಳು

ದ್ರಾವಿಡ ಭಾಷಾವರ್ಗದ ಪ್ರಾಚೀನ ಹಾಗೂ ಶ್ರೀಮಂತ ಭಾಷೆಗಳಲ್ಲಿ ತುಳುಭಾಷೆಯೂ ಕೂಡ ಒಂದಾಗಿದೆ. ತುಳು ಭಾಷೆಯನ್ನಾಡುವ ಜನತೆಯನ್ನು 'ತುಳುವ'ರೆಂದು ಕರೆಯಲಾಗುತ್ತದೆ. ಅವರು ಬಹಳಷ್ಟು ದಕ್ಷಿಣ ಕನ್ನಡ ಮತ್ತು ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ತುಳುನಾಡು, ಉತ್ತರಕ್ಕೆ ಕಲ್ಯಾಣಪುರ ನದಿ, ಪಶ್ಚಿಮಕ್ಕೆ ಅರೇಬಿಯನ್ ಸಮುದ್ರ, ಪೂರ್ವಕ್ಕೆ ಪಶ್ಚಿಮ ಘಟ್ಟಗಳನ್ನು ದಕ್ಷಿಣಕ್ಕೆ ಪಯಸ್ವಿನಿ/ಚಂದ್ರಗಿರಿ ನದಿಗಳನ್ನು ಮೇರೆಯಾಗಿ ಹೊಂದಿದೆ.

ತುಳು ಭಾಷೆಯು ತನ್ನದೇ ಆದ ಭಾಷಾ ಶಾಸ್ತ್ರೀಯ ವೈಶಿಷ್ಟ್ಯಗಳನ್ನು ಹೊಂದಿದೆ. ಹಾಗೆಯೇ ಕನ್ನಡ ಮತ್ತು ಇತರೆ ದ್ರಾವಿಡ ಭಾಷೆಗಳೊಡನೆ ಸಮಾನ ಲಕ್ಷಣಗಳ ಸಾಮ್ಯವನ್ನೂ ಹೊಂದಿದೆ. ತುಳುವಿಗೆ ವಿಪುಲವಾದ ವಿಶಿಷ್ಟವಾದ ಜಾನಪದ ಪರಂಪರೆಯೂ ಇದೆ. ತುಳುವಿನಲ್ಲಿ ಜಾನಪದವು ಪಾಡ್ಡನಗಳು, ಸಂದಿ, ಕಬಿತ, ಉರಾಲು, ಪಡಿಪು, ನೃತ್ಯ–ಪದ್ಯ, ಗಾದೆ, ಒಗಟು, ಜೋಗುಳ, ಅಜ್ಜಿಕಥೆಗಳ ಮೂಲಕ ಎದ್ದು ಕಾಣುತ್ತದೆ.

ಸಾಮಾನ್ಯವಾಗಿ ತುಳು ಬ್ರಾಹ್ಮಣವರ್ಗವು ವೇದಶಾಸ್ತ್ರಗಳಲ್ಲಿ ವಿದ್ವತ್ತನ್ನು ಪಡೆದ ವರ್ಗವಾಗಿದೆ. ಅವರ ಜನಪದಗೀತೆಗಳು ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳ ಕಥಾಂಶಗಳಿಂದ ಆಧಾರಿತವಾದಂಥವಾಗಿವೆ. ಕೆಳವರ್ಗದವರಲ್ಲಿ ಹಾಗೂ ಪರಿಶಿಷ್ಟವರ್ಗದವರಲ್ಲಿ ಭೂತಾರಾಧನಾ ಸಂಪ್ರದಾಯವು ಬಹು ಪ್ರಚಲಿತವಾಗಿದೆ. ಇತರ ದ್ರಾವಿಡ ಭಾಷೆಗಳೊಡನೆ ಹೋಲಿಸಿದರೆ ತುಳುವಿನಲ್ಲಿ ಪ್ರಾಚೀನ ಸಾಹಿತ್ಯದ ಪ್ರಮಾಣ ಕಡಿಮೆಯೆ. ಕಳೆದ ೧೫೦ ವರ್ಷಗಳಿಂದಲೂ, ತುಳು ಕನ್ನಡ ಲಿಪಿಯನ್ನೇ ತನ್ನ ಸಾಹಿತ್ಯ ಪ್ರಕಾರಕ್ಕೆ ಬಳಸುತ್ತಾ ಬಂದಿದೆ. ತುಳುಸಾಹಿತ್ಯದ ಕೃತಿ ರಚನೆಗಳು ಆರಂಭಕ್ಕೆ ಕ್ರೈಸ್ತಧರ್ಮದ ಬಾಸೆಲ್ ಮಿಷನ್ ಕ್ರೈಸ್ತರು ಮಾಡಿದ ಬೋಧನೆಗಳ ಅನುವಾದಗಳಾಗಿವೆ. ಆಗ ತುಳು–ಆಂಗ್ಲ ನಿಘಂಟುವಿನಂಥ ಕೆಲವಾರು ಮುಖ್ಯ ಕೃತಿಗಳೂ ಪ್ರಕಟವಾದವು. ನಂತರ ಅವರ ಜಾನಪದ ಹಾಡುಗಳ ಸಂಗ್ರಹ, ದಕ್ಷಿಣ ಕನ್ನಡದ ಇತಿಹಾಸ, ಹಾಗೂ ತುಳುವ ಸಂಸ್ಕೃತಿ ಕುರಿತ ಕೃತಿಗಳು ಪ್ರಕಟವಾದವು. ತುಳು ವ್ಯಾಕರಣ, ಭಾಷೆ ಹಾಗೂ ಕ್ರಿಯಾಪದ ಚೌಕಟ್ಟಿನ ಪರಿವರ್ತನಾ ವಿಶ್ಲೇಷಣೆಯ ಸಂಪ್ರಬಂಧಗಳೂ ೨೦ನೇ ಶತಮಾನದ ಉತ್ತರಾರ್ಧದಲ್ಲಿ ಪ್ರಕಟವಾದುವು.

ಕೇರಳ ಮತ್ತು ಕರ್ನಾಟಕ ಸರ್ಕಾರಗಳು ತುಳು ಶಬ್ದಕೋಶ ತಯಾರಿಕೆಗೆ ಮತ್ತು ಪಠ್ಯಪುಸ್ತಕಗಳ ಪ್ರಕಟಣೆಗೆ ಸಹಾಯ ಮಾಡಿವೆ. ಅನೇಕ ಕನ್ನಡ ಯಕ್ಷಗಾನ ಬಯಲಾಟಗಳು ಹಾಗೂ ಧಾರ್ಮಿಕ ಕೃತಿಗಳು ತುಳುಭಾಷೆಗೆ ಅನುವಾದಗೊಂಡಿವೆ. ತುಳು ಸಾಹಿತ್ಯದಲ್ಲಿ ಪ್ರಸಿದ್ಧರಾಗಿರುವವರಲ್ಲಿ ಆರಂಭಿಕ ಬರಹಗಾರ ಸಂಕಯ್ಯ ಭಾಗವತರು, ಶೀನಪ್ಪ ಹೆಗಡೆ, ಕೆ.ಬಿ ನಾರಾಯಣ ಶೆಟ್ಟಿ, ಹಾಗೂ ಎಂ.ವಿ.ಹೆಗಡೆ ಯವರು ಪ್ರಮುಖರು. ಎಸ್. ಯು.ಫಣಿಯಾಡಿ ಅವರು ೧೯೨೮ ರಲ್ಲಿಯೇ ಉಡುಪಿಯಲ್ಲಿ 'ತುಳು ಮಹಾಸಭಾ'ವನ್ನು ಸಂಸ್ಥಾಪಿಸಿದರು. ಇದು ತುಳು ಸಾಹಿತ್ಯ

ಮತ್ತು ಸಂಸ್ಕೃತಿ ಪ್ರಸರಣಕ್ಕೆ ಬಹಳ ಉತ್ತೇಜನಕಾರಿಯಾಯಿತು. ಇದರಿಂದ ತುಳು ಭಾಷೆ ಮತ್ತು ಸಾಂಸ್ಕೃತಿಕ ಚಳವಳಿಗೆ ಚಾಲನೆ ದೊರೆತಂತಾಯಿತು.

ಈ ಸಂದರ್ಭದಲ್ಲಿಯೆ ತುಳು ರಂಗಭೂಮಿ ಮತ್ತು ನಾಟಕಗಳು ಅಭಿವೃದ್ಧಿ ಸಾಧಿಸಿದವು. ಕೆ. ದೊಡ್ಡಣ್ಣ ಶೆಟ್ಟಿ, ಕೆ.ಎನ್.ಟೇಲರ್, ರಾಮಕಿರೋಡಿಯನ್, ಯು.ಆರ್.ಚಂದರ್, ಕೆ.ಬಿ.ಭಂಡಾರಿ, ಮಚ್ಚೇಂದ್ರನಾಥ್, ರಮಾನಂದಾಚಾರ್ಯ, ಸೀತರಾಮಕುಲಾಲ್, ಪಿ.ಎಸ್.ರಾವ್, ವಿಶುಕುಮಾರ್ ಮುಂತಾದವರು ತುಳು ರಂಗಭೂಮಿಯ ಆದ್ಯ ಪ್ರವರ್ತಕರಾದರು. ತುಳು ಒಗಟುಗಳ, ಗಾದೆಗಳ ಹಾಗೂ ಅಭಿವ್ಯಕ್ತಿಗಳ ಸೊಗಸು ಈ ಕಾಲಾವಧಿಯ ಸಾಮಾಜಿಕ ಚಟುವಟಿಕೆಗಳಲ್ಲಿ ಬಹಳ ಚೆನ್ನಾಗಿ ನಿರೂಪಿತಗೊಂಡಿತು. ಕರ್ನಾಟಕದ ವೈಭವೋಪೇತ ಜಾನಪದ ನೃತ್ಯಗಳು ಯಕ್ಷಗಾನಗಳು ಇತ್ತೀಚಿನ ದಿನಗಳಲ್ಲಿ ತುಳುವಿನಲ್ಲಿಯು ಬಹಳ ಜನಪ್ರಿಯವಾಗುತ್ತಿದೆ. ಈಚಿನ ವರ್ಷಗಳಲ್ಲಿ ತುಳು ಭಾಷಾ ಕವಿಗಳಾದ ಅಮೃತ ಸೋಮೇಶ್ವರ, ಆತ್ಮರಾಂ ಬಂಗಾಡೆ, ಪುರುಷೋತ್ತಮ ಪೂಂಜ, ನಿತ್ಯಾನಂದ ಕಾರಂತ, ಅಶೋಕ ಎ. ಶೆಟ್ಟಿ, ಕೆ.ಶೇಖರ್, ವಿ.ಶೆಟ್ಟಿ, ಜಿ.ಬಾಯರು, ಮಧುಕುಮಾರ್ ಮತ್ತು ಎ.ಎನ್.ಶೆಟ್ಟಿ ಮುಂತಾದವರು ತುಳು ಯಕ್ಷಗಾನ ಮಹಾಕಾವ್ಯಗಳನ್ನು ರಚಿಸಿದ್ದಾರೆ. ತುಳು ಭಾಷೆ ಮತ್ತು ಸಂಸ್ಕೃತಿ ಪ್ರಸಾರಕ್ಕಾಗಿ ದುಡಿಯುತ್ತಿರುವ ಹಲವಾರು ಸಂಘ ಸಂಸ್ಥೆಗಳೂ ಇಂದಿವೆ. ಮಂಗಳೂರಿನ ತುಳುಕೂಟ ಇಂತಹ ಸಂಸ್ಥೆಗಳಲ್ಲಿ ಒಂದಾಗಿದೆ. ಮಂಗಳೂರಿನ ತುಳುರಾಜ್ಯ ಹಾಗೂ ತುಳುವೆರೆತುಡರ್ ಮತ್ತು ದೆಹಲಿಯಿಂದ ಪ್ರಕಟವಾಗುವ ತುಳುವೆರ್‌ಗಳು ತುಳು ಭಾಷೆಯ ಪತ್ರಿಕೆಗಳು.

ತುಳು ಸಾಹಿತ್ಯದಲ್ಲಿ ಅನೇಕ ಇತರೆ ಕವಿಗಳೂ ಹೆಸರು ಮಾಡಿದ್ದಾರೆ. ಅವರಲ್ಲಿ 'ಮಂದಾರ ರಾಮಾಯಣ' ಎಂಬ ಶ್ರೇಷ್ಠ ಮಹಾಕಾವ್ಯಗಳನ್ನು ಬರೆದ ಮಂದಾರ ಕೇಶವಭಟ್ ಎಂಬುವವರು ಪ್ರಸಿದ್ಧರಾದವರು. ವೆಂಕಟರಾಜ ಪುಣಿಂಚಿತ್ತಾಯ, ಪಿ.ವಿ.ಆಚಾರ್ಯ, ರಾಮಕೃಷ್ಣ ಆಚಾರ್, ಧೂಮಪ್ಪ ಮಾಸ್ತರರು, ವಾಮನ ನಂದಾವರ, ಕೆ.ವಿ.ರವಿ ತಿಲಕನಾಥ ಮಂಜೇಶ್ವರ್, ರತ್ನಕುಮಾರ್, ಯಶವಂತ ಬೋಳೂರು, ಭಾಸ್ಕರರಾವ್, ಸೀತಾರಾಮ ಕುಲಾಲ್, ಸೀತಾರಾಮ ಆಳ್ವ ಹಾಗೂ ಬನ್ನಂಜೆ ಮುಂತಾದವರು ಪ್ರಸಿದ್ಧರಾಗಿದ್ದಾರೆ. ೨೦೦ ವರ್ಷಗಳಷ್ಟು ಹಳೆಯದಾದ ಗ್ರಂಥಲಿಪಿಯಲ್ಲಿರುವ ಮೂರು ತುಳು ಮಹಾಕಾವ್ಯಗಳ ಓಲೆಗರಿಯ ಪ್ರತಿಗಳು ಲಭ್ಯವಾಗಿದ್ದು. ಅವು ವಿಷ್ಣು ತುಂಗನ 'ತುಳು ಭಾಗವತೋ', 'ಕಾವೇರಿ' ಹಾಗೂ ಗದ್ಯಕೃತಿಯಾದ 'ದೇವಿ ಮಹಾತ್ಮೆ' ಗಳಾಗಿವೆ.

ತುಳು ಭಾಷೆ, ಸಂಸ್ಕೃತಿ, ತುಳುವರ ಜಾನಪದ ಕುರಿತು ಅನೇಕ ವಿದ್ವಾಂಸರು ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಪೈಕಿ ಡಿ.ಎನ್.ಎಸ್.ಭಟ್, ಎಸ್.ಎನ್.ಭಟ್, ಎಂ.ರಾಮ, ಎಸ್.ಮಲ್ಲಿಕಾದೇವಿ, ಯು.ಪಿ.ಉಪಾಧ್ಯಾಯ, ವಿಲಿಯಂಮಾಡ್ತ, ಟಿ.ಗೋಪಾಲಕೃಷ್ಣಭಟ್ಟ, ಸೇಡಿಯಾಪು ಕೃಷ್ಣಭಟ್ಟ, ಎ.ಆಚಾರ್ಯ, ವೆಂಕಟರಾಜ ಪುಣಿಂಚಿತ್ತಾಯ, ವಿವೇಕ ರೈ, ಅಮೃತ ಸೋಮೇಶ್ವರ, ಸುಶೀಲ ಉಪಾಧ್ಯಾಯ, ಚಿನ್ನಪ್ಪ ಗೌಡ, ಕೆ.ಪದ್ಮನಾಭ ಕೆಖುನ್ನಾಯ, ಹಾಗೂ ಹಲವಾರು ತರುಣ ವಿದ್ವಾಂಸರೂ ಸೇರಿದ್ದಾರೆ. ತುಳು ಭಾಷಾಶಾಸ್ತ್ರ ಹಾಗೂ ಜಾನಪದ ಕೃತಿಗಳಾಗಿ 'ತುಳುಭಾಷಿಕ ತೌಲನಿಕ ಅಧ್ಯಯನ', 'ತುಳುವ ದರ್ಶನ', 'ತುಳುನಾಡಿನ ಜಾನಪದ ಮಹಾಕಾವ್ಯಗಳು', 'ತುಳು ಜನಪದ ಸಾಹಿತ್ಯ', 'ಭೂತಾರಾಧನೆ', 'ತುಳು ಬದುಕು', 'ಪಾಡ್ದನಗಳು', ಜನಪದ ಆರಾಧನೆ ಮತ್ತು ರಂಗಕಲೆ, ಕರಾವಳಿ ಜಾನಪದ, ಮುಂತಾದ ಕೃತಿಗಳು ಹೊರಬಂದಿವೆ. ಸರ್ಕಾರವು ೧೯೯೪ರಲ್ಲಿ ತುಳು ಅಕಾಡೆಮಿಯನ್ನು ಸ್ಥಾಪಿಸಿತು.

ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಹಾಗೂ ಉಡುಪಿಯ ಎಂ.ಜಿ.ಎಂ ಕಾಲೇಜಿನ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಇವು ತುಳುಭಾಷೆ, ಜಾನಪದ ಹಾಗೂ ಇತಿಹಾಸ ಕುರಿತು ಸಂಶೋಧನೆಯನ್ನು ನಡೆಸುತ್ತಿವೆ. ಪುಣೆ, ಅಣ್ಣಾಮಲೈ ಮತ್ತು ತ್ರಿವೇಂಡ್ರಮ್ ವಿಶ್ವವಿದ್ಯಾಲಯದ ವಿದ್ವಾಂಸರು ತುಳು ಭಾಷೆ ಕುರಿತ ಸಂಶೋಧನೆಯಲ್ಲಿ ತೊಡಗಿದ್ದಾರೆ. ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರವು ಆಧುನಿಕ ತುಳುಭಾಷಿಕ ನಿಘಂಟನ್ನು ಬಹುಸಂಪುಟಗಳಲ್ಲಿ ಸಂಕಲಿಸಿದೆ.

### ಕೊಡವ

ಐತಿಹಾಸಿಕವಾಗಿ ಗಮನಿಸಬಹುದಾದರೆ ೧೭ನೆಯ ಶತಮಾನದವರೆಗೆ ಕೊಡವ ಭಾಷೆಯನ್ನು, ಆಗ ಪ್ರತ್ಯೇಕ ರಾಜ್ಯವಾಗಿದ್ದ ಕೊಡಗಿನಲ್ಲಿ ಪ್ರಧಾನವಾಗಿ ಮಾತನಾಡಲು ಬಳಸಲಾಗುತ್ತಿದ್ದುದು ಕಂಡು ಬರುತ್ತದೆ. ಕೊಡಗಿನ ಮೇಲೆ ಮಲೆಯಾಳದ ಪ್ರಭಾವ ಸಾಕಷ್ಟಿತ್ತು. ಕಾರಣ ಅದರ ಪ್ರಮುಖ ವಾಣಿಜ್ಯ ಸಂಬಂಧ/ಸಂಪರ್ಕಗಳು ಮಲಬಾರಿನೊಡನೆಯೇ ಇದ್ದುವು. ಹಾಲೇರಿ ಅರಸರು ೧೭ನೆಯ ಶತಮಾನದಲ್ಲಿ ಕೊಡಗಿನ ಆಡಳಿತಕ್ಕೆ ಬಂದ ಮೇಲೆ ಕೊಡಗು, ಕನ್ನಡವನ್ನು ನ್ಯಾಯಾಡಳಿತ ಭಾಷೆಯನ್ನಾಗಿ ಅಳವಡಿಸಿಕೊಂಡಿತು. ಸುಮಾರು ೩೬೦ ವರ್ಷಗಳ ಕನ್ನಡದ ಪ್ರಭಾವವು ಸ್ಥಳೀಯ ಭಾಷೆಯ ಮೇಲೆ ಬದಲಾವಣೆಯ ಅನೇಕ ಛಾಯೆಗಳನ್ನು ಮೂಡಿಸಿತು. ಅದರಲ್ಲಿ ಆ ಭಾಷೆಯು ಕನ್ನಡ ಲಿಪಿಯನ್ನು ಬಳಸಿಕೊಂಡದ್ದು ಪ್ರಮುಖ ಅಂಶವಾಗಿದೆ. ಅಪ್ಪನೇರಂಡ ಅಪ್ಪಚ್ಚು ಕೊಡವಭಾಷೆಯ ಅನೇಕ ನಾಟಕಗಳನ್ನು ಬರೆದಿದ್ದಾರೆ. ನಡಿಕೇರಿಯಂಡ ಚಿನ್ನಪ್ಪನವರು 'ಪಟ್ಟೋಲೆ ಪಳಮೆ' ಎಂಬ ಜಾನಪದ ಸಂಕಲನವನ್ನು ಸಂಪಾದಿಸಿಕೊಟ್ಟಿದ್ದಾರೆ. 'ಭಗವದ್ಗೀತೆ'ಯನ್ನು ಕೊಡವ ಭಾಷೆಗೆ ಅನುವಾದಿಸಿದ್ದಾರೆ. ಇವರೀರ್ವರೂ ಕೊಡವ ಭಾಷಾ ಸಾಹಿತ್ಯದ ಆದ್ಯ ಪ್ರವರ್ತಕರೆನಿಸಿದ್ದಾರೆ.

ಕೊಡಗು ಕರ್ನಾಟಕದೊಡನೆ ವಿಲೀನವಾದ ನಂತರ ವಿಪುಲವಾಗಿ ಸಾಹಿತ್ಯಿಕ ಜಾಗೃತಿಯಾಯಿತು. ಡಾ.ಐ.ಮಾ. ಮುತ್ತಣ್ಣನವರು 'ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ' ಅಲ್ಲದೆ ಅನೇಕ ಕೃತಿಗಳನ್ನು ಬರೆದಿದ್ದಾರೆ. ಕೊಡವ ಭಾಷೆಯಲ್ಲಿ ಸ್ವರಚಿತ ಕವನಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಬಿ.ಡಿ.ಗಣಪತಿ ಅವರು, ಕೊಡವ ಭಾಷೆಯಲ್ಲಿ 'ನಂಗಕೊಡವ' ಮತ್ತು 'ಕುತ್ತಂಬೋಲಚ' ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಕೊಡವ ಸಂಸ್ಕೃತಿ ಕುರಿತಾದ 'ಕೊಡಗು ಮತ್ತು ಕೊಡವರು' ಎಂಬ ಕೃತಿಯನ್ನು ಕನ್ನಡದಲ್ಲಿ ಬರೆದಿದ್ದಾರೆ. ಈ ಕೃತಿಯು ರಾಜ್ಯ (ಸಾಹಿತ್ಯ) ಅಕಾಡೆಮಿ ಪ್ರಶಸ್ತಿಗಳಿಸಿದೆ. ಈಚಿನ ದಿನಗಳಲ್ಲಿ ಕೊಡವ ಸಾಹಿತ್ಯವನ್ನು ಪ್ರೋತ್ಸಾಹಿಸುವ ಪ್ರಯತ್ನಗಳು

ನಡೆದಿವೆ. 'ಕೊಡವ ತಕ್ಕ್ ಪರಿಷತ್' ಸಂಸ್ಥೆಯು ೧೯೭೮ರಲ್ಲಿಯೆ ಪ್ರತಿಷ್ಠಾಪನೆಗೊಂಡಿತು. ಅದು ಕೊಡವ ನಿಘಂಟನ್ನು ಹೊರತರುವ ಪ್ರಯತ್ನ ಮಾಡಿದೆ. ಆ ಪರಿಷತ್ತಿನ ಪ್ರಥಮ ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರಸಿದ್ಧ ಲೇಖಕರಾದ ಬಿ.ಡಿ.ಗಣಪತಿಯವರು ವಹಿಸಿದ್ದರು. ಅದು ಪ್ರತಿ ವರ್ಷವೂ ಸಮ್ಮೇಳನವನ್ನು ನಡೆಸುತ್ತಿದೆ. ಕೊಡವ ಜಾನಪದ ಪರಂಪರೆಯು ಬಹಳ ಶ್ರೀಮಂತವಾಗಿದೆ. ಕೊಡವ ಜನಪದ ಗೀತೆಗಳು ಅವರ ವರ್ಣಮಯ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುತ್ತವೆ. ಅವರ ಕವಿತೆಗಳು ಸತ್ವಶಾಲಿ ಹಾಗೂ ಹಾಸ್ಯಸ್ಪರ್ಶಿಯಾಗಿವೆ ಸಂದು ಹೋದ ಯುಗದ, ಅಜ್ಞಾತ ಕೃತಿಕಾರರ ಈ ಹಾಡುಗಳು ಅತ್ಯಂತ ಪ್ರಾಚೀನವೆನಿಸುತ್ತವೆ. ಈ ಹಾಡುಗಳಲ್ಲಿ ಬಳಸಿರುವ ಭಾಷೆ ಹಾಗೂ ವರ್ತಮಾನದಲ್ಲಿನ ಆಡುಭಾಷೆಗಳ ನಡುವಣ ಭಾಷೆಗಳ ವ್ಯತ್ಯಾಸ ಎದ್ದು ಕಾಣುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಕೊಡವರು ತಮ್ಮ ನೆಲವನ್ನು ಪ್ರೀತಿಸುತ್ತಾರೆ. ಹಾಗಾಗಿ ಅವರ ಹಾಡುಗಳು ತಮ್ಮ ಭೂಮಿಯನ್ನು ಪ್ರಶಂಸೆಗೈಯುವ ದೇಶಾಭಿಮಾನದ ಸ್ತೋತ್ರಗೀತೆಯಾಗಿ ಕಾಣುತ್ತವೆ, ಆದ್ದರಿಂದ ಕೊಡವರಲ್ಲಿ 'ಭಾಷೆ, ಸಂಸ್ಕೃತಿ, ಹಾಗೂ ಪರಂಪರೆ' ವಿಶಿಷ್ಟವೆನಿಸುತ್ತದೆ.

ಕೊಡಗಿನವರಾದ ಐ.ಮಾ.ಮುತ್ತಣ್ಣ ಹೆಸರಾಂತ ಸಾಹಿತಿ. ಪ್ರಸಿದ್ಧ ಬರಹಗಾರರಾಗಿ 'ಕೊಡವ-ಕನ್ನಡ ನಿಘಂಟ'ನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದ್ದಾರೆ. 'ಬ್ರಹ್ಮಗಿರಿ' ಎಂಬ ಸಾಪ್ತಾಹಿಕ ೧೯೮೦ರಲ್ಲಿ ವೀರಾಜಪೇಟೆಯಿಂದ ಪ್ರಕಟವಾಗಲಾರಂಭಿಸಿತು. ಗೋಣಿಕೊಪ್ಪಲಿನಿಂದ ೧೯೮೪ರಿಂದ 'ಜಮ್ಮ ನಂಗಡ'ಎಂಬ ಪತ್ರಿಕೆ ಆರಂಭಗೊಂಡಿತು. ಇವೆಲ್ಲವೂ ಕನ್ನಡ ಲಿಪಿಯಲ್ಲಿದ್ದು, ಕೊಡವ ಭಾಷಾ ಬರಹಗಳಿಗೆ ತುಂಬ ಉತ್ತೇಜನ ದೊರಕಿದಂತಾಯಿತು. 'ನಾಡ್ ಮಣ್ಣ್ ನಾಡ್ ಕೂಳ್' ಎಂಬ ಕಥಾ ಚಿತ್ರವೂ ಕೊಡವ ಭಾಷೆಯಲ್ಲಿ ಎಸ್.ಆರ್.ರಾಜನ್ ಅವರ ನಿರ್ದೇಶನದಲ್ಲಿ ೧೯೭೨ರಲ್ಲಿ ಬಿಡುಗಡೆಯಾಯಿತು.

**ಕೊಂಕಣಿ**

ಕೊಂಕಣಿಯು ಒಂದು ಸ್ವತಂತ್ರ ಭಾಷೆ. ಸುಮಾರು ೧೫ ಲಕ್ಷ ಜನರು ಆ ಭಾಷೆಯನ್ನು ಆಡುತ್ತಾರೆ. ಭಾರತದ ಪಶ್ಚಿಮ ಕರಾವಳಿಯಲ್ಲಿ ಹರಡಿಕೊಂಡಿರುವ ಜನರ ಭಾಷೆ ಇದಾಗಿದೆ. ಅದರಲ್ಲಿ ಆರು ಲಕ್ಷಕ್ಕೂ ಮೀರಿದ ಜನ ಕರ್ನಾಟಕದ ನಿವಾಸಿಗಳಾಗಿದ್ದಾರೆ. ಕೊಂಕಣಿ ಭಾಷಿಕರು ಬಹುತೇಕವಾಗಿ ಗೋವಾ ನಿವಾಸಿಗಳಾಗಿದ್ದರೂ ಪೋರ್ಚುಗೀಸರು ಗೋವಾವನ್ನು ಆಕ್ರಮಿಸಿದಾಗ ಅವರಲ್ಲಿ ಅನೇಕರು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗೆ ವಲಸೆ ಹೋದರು. ಇಂದು, ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ (ಕೆನರಾ) ಜಿಲ್ಲೆಗಳಲ್ಲಿ ಕೊಂಕಣಿ ಭಾಷಿಕರು ಬಹುಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ.

ಪೋರ್ಚುಗೀಸರು ಕೊಂಕಣಿ ಭಾಷೆ ಮತ್ತು ಸಂಸ್ಕೃತಿಯನ್ನು ದಮನ ಮಾಡಲೆತ್ನಿಸಿದರೂ, ಗೋವಾದಿಂದ ವಲಸೆ ಬಂದ ಕೊಂಕಣಿಗರು ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದರು. ಕರ್ನಾಟಕದಲ್ಲಿ ಬೆಳೆದ ಕೊಂಕಣಿ ಸಾಹಿತ್ಯದಲ್ಲಿ ಎರಡು ವಿಶಿಷ್ಟ ಶಾಖೆಗಳು ಕಾಣಬರುತ್ತವೆ. ಕೊಂಕಣಿ ಹಿಂದೂಗಳಿಂದ ರಚಿತವಾದ ಕೊಂಕಣಿ ಸಾಹಿತ್ಯ ಹಾಗೂ ಕೊಂಕಣಿ ಕ್ರೈಸ್ತರಿಂದ ರಚಿತವಾದ ಕೊಂಕಣಿ ಸಾಹಿತ್ಯ ಎಂಬ ಎರಡು ಸಾಹಿತ್ಯ ಶಾಖೆಗಳಾಗಿವೆ. ಕೊಂಕಣಿಯನ್ನು ಕನ್ನಡ ಲಿಪಿಯಲ್ಲಿಯೇ ಬರೆಯುವುದು ಕರ್ನಾಟಕದಲ್ಲಿ ವಾಡಿಕೆ. ಹಿಂದೂ ಕೊಂಕಣಿ ಸಾಹಿತ್ಯದ ಚರಿತ್ರೆಯು ಪ್ರಸಿದ್ಧ ಭಕ್ತಿ ಕವಿ/ಕವಯತ್ರಿಯರಿಂದ ಆರಂಭವಾಗುತ್ತದೆ. ಸಂಕಪ್ಪಯ್ಯ, ರಾಘವದಾಸ್, ಜೋಗ್ವ ಮತ್ತು ಅವದಿಬಾಯಿ ಅವರು ಕೊಂಕಣಿ ಭಾಷಾ ಭಕ್ತಿಗೀತೆಗಳನ್ನು ರಚಿಸಿದರು. ನಂತರ 'ಭಗವದ್ಗೀತೆ'ಯನ್ನು ಬಂಗ್ಲೆ ನಾರಾಯಣ ಕಾಮತ್ (೧೮೭೨-೧೯೧೮) ಕೊಂಕಣಿ ಭಾಷೆಗೆ ಅನುವಾದಿಸಿದರು. ಮಂಗೇಶ್ ರಾಮಕೃಷ್ಣ ತೆಲಂಗ್, ಬೋಳಂತೂರ್ ಕೃಷ್ಣಪ್ರಭು, ಉಪೇಂದ್ರ ಪೈ, ಸ್ವಾಮಿ ಪ್ರಭವಾನಂದ, ಎನ್.ವಿ.ಪ್ರಭು ಮತ್ತು ಬಿ.ವಿ.ಬಾಳಿಗಾ ಮುಂತಾದವರು ಅತ್ಯುತ್ತಮ ಕವಿತೆಗಳನ್ನು ಹಾಗೂ ನಾಟಕಗಳನ್ನು ಕೊಂಕಣಿಯಲ್ಲಿ ಬರೆದರು. ಉದ್ಯಾವರ ನಾರಾಯಣಾಚಾರ್, ಹಟ್ಟಂಗಡಿ ನಾರಾಯಣರಾವ್ ಮತ್ತು ಎಮ್.ಎಮ್.ಶಾನುಭಾಗ್ ಮುಂತಾದ ವಿದ್ವಾಂಸರು ಕೊಂಕಣಿ ವ್ಯಾಕರಣಗಳನ್ನು ಬರೆದರು. ಇತರೆ ಗಮನಾರ್ಹ ಲೇಖಕರುಗಳೆಂದರೆ ಶೇಷಗಿರಿ ಕೇಶವಪ್ರಭು, ಮುಂದಾಸ್ ದೇವದಾಸ ಪೈ, ಕೊಡ್ಬೆಟ್ ರಾಮರಾಯ ಕಾಮತ್, ಬಂಟವಾಳ್ ಪುಂಡಲೀಕ ಬಾಳಿಗಾ, ವಿ.ಆರ್.ಪ್ರಭು, ಎಸ್.ವಿ.ಕಾಮತ್, ಎಂ.ಜಿ.ಪೈ ಮುಂತಾದವರು.

ಕೊಂಕಣಿ ಭಾಷಾ ವೃತ್ತ ಪತ್ರಿಕೆಗಳೂ ಕೂಡ ಸಾಕಷ್ಟು ಇದ್ದು, ೧೯೩೯ರ ವೇಳೆಗೆ 'ಸಾರಸ್ವತ್' ಎಂಬ ಪಾಕ್ಷಿಕ ಪತ್ರಿಕೆಯು ಮಂಗಳೂರಿನಿಂದ ೧೫ ದಿನಗಳಿಗೊಮ್ಮೆ ಪ್ರಕಟವಾಗುತ್ತಿತ್ತು. ನಂತರದಲ್ಲಿ 'ನವಯುಗ್', 'ಉಜ್ವಧ್', 'ಕೊಂಕಣ ಕಿನಾರ' ಮತ್ತು 'ಸರ್ವೋದಯ' ಇತ್ಯಾದಿ ನಿಯತಕಾಲಿಕೆ/ಪತ್ರಿಕೆಗಳು ಪ್ರಕಟವಾದವು. ಕೊಂಕಣಿ ಭಾಷಾ ಮಂಡಲಿ, ಕೊಂಕಣಿ ಭಾಷಾ ಪರಿಷತ್ತು, ಇನ್ಸಿಟ್ಯೂಟ್ ಆಫ್ ಕೊಂಕಣಿ, ಕೊಂಕಣಿ ಭಾಷಾಭಿಮಾನಿ ಸಮಿತಿ ಮುಂತಾದ ಸಂಸ್ಥೆಗಳು ಕೊಂಕಣಿ ಭಾಷಾಭಿವೃದ್ಧಿ ಮತ್ತು ಪ್ರಸಾರಕ್ಕಾಗಿ ದುಡಿದವು. ಕೊಂಕಣಿ ಕಥಾಚಲನಚಿತ್ರಗಳೂ ಸಹ ನಿರ್ಮಾಣವಾದವು.

ದಕ್ಷಿಣ ಕನ್ನಡ ಕ್ರೈಸ್ತರಲ್ಲಿಯೂ ಕೊಂಕಣಿ ಭಾಷೆಯು ಪ್ರವರ್ಧಮಾನಕ್ಕೆ ಬಂದಿತು. ನ್ಯೂ ಟೆಸ್ಟ್‌ಮೆಂಟ್ (ಹೊಸ ಒಡಂಬಡಿಕೆ) ಕುರಿತಂತೆ ಪ್ರಚಾರ ಪುಸ್ತಿಕೆಗಳು (ಕಿರುಹೊತ್ತಗೆ) ಮತ್ತು ವಿಮರ್ಶೆ ವ್ಯಾಖ್ಯಾನಗಳೂ ಸಿದ್ಧವಾದವು. ರೆವರೆಂಡ್ ರಾಫೆಲ್ಲೆ ಪಾಸ್ಕೆಟ್ಟಿ ಮತ್ತು ರೆವರೆಂಡ್ ಫ್ರಾನ್ಸಿಸ್ಕೊ, ಸವೇರಿಯೋದ ಸಾಂತ ಅನ್ನ ಅವರುಗಳು ಕೊಂಕಣಿ ಅಧ್ಯಯನದಲ್ಲಿ ಆದ್ಯ ಪ್ರವರ್ತಕರಾಗಿದ್ದರು. ಜೇಸುಟ್ಸ್‌ಗಳು ಬಂದು ಸೆಂಟ್ ಜೋಸೆಫ್ ಸೆಮಿನರಿ, ಸೆಂಟ್ ಅಲೋಷಿಯಸ್ ಕಾಲೇಜ್, ಫಾದರ್ ಮುಲ್ಲರ್ ಹಾಸ್ಪಿಟಲ್ ಹಾಗೂ ಕೋಡಿಬೈಲ್ ಪ್ರೆಸ್ ಗಳನ್ನು ಸಂಸ್ಥಾಪಿಸಿ ಕೊಂಕಣಿ ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಉತ್ತೇಜನ ನೀಡಿದರು. ಇತರೆ ಅನೇಕ ಲೇಖಕರು ಮತ್ತು ಕವಿಗಳು ಕ್ರೈಸ್ತಧರ್ಮ ಹಾಗೂ ಸಂಸ್ಕೃತಿ ಕುರಿತಂತೆ ಕವಿತೆಗಳನ್ನು ಹಾಗೂ ವಿಮರ್ಶೆ-ವ್ಯಾಖ್ಯಾನಗಳನ್ನು ಬರೆದರು.

೧೯೧೨ರ ಕಾಲಕ್ಕೆ ಮಂಗಳೂರಿನ ಲೂಯಿಸ್ ಮಾಸ್ಕರೆನಸ್ ಮತ್ತು ಲೂಯಿಸ್ ಕಣ್ಣಪ್ಪ ಅವರು ಕನ್ನಡ ಲಿಪಿಯ ಮೊಟ್ಟಮೊದಲ ಕೊಂಕಣಿ ಪತ್ರಿಕೆ 'ಕೊಂಕಣಿ ದಿರ್ವೆಮ್' ಅನ್ನು ಪ್ರಕಟಿಸಿದರು. ಇದನ್ನನುಸರಿಸಿ 'ರಕ್ನೊ', 'ಪೊಯಿನಾರಿ','ಮಿತ್ರ್', 'ಸುಖ-ದುಃಖ ವೈ ಸೇವಕ್', 'ಜಗ್-ಮಗ್', 'ವಿಶಾಲಕೊಂಕಣ್''

'ಕನಿಕ್' ಮತ್ತು 'ಉದೆವ್' ಇತ್ಯಾದಿ ಪತ್ರಿಕೆಗಳು ಪ್ರಕಟವಾದವು. ಜಿ.ಎಮ್.ಬಿ.ರೊಡ್ರಿಗ್ಸ್, ಎ.ಟಿ.ಲೋಬೋ, ವಿ.ಜೆ.ಪಿ ಸಾಲ್ಡಾನ, ಎಂ.ಪಿ ಡೇಸ, ಹೆನ್ರಿ ಡಿಸಿಲ್ವ, ಎಡ್ಡಿ ಡಿಸೋಜ ಹಾಗೂ ಸಿ.ಎಫ್. ಡಿಕೋಸ್ಟಾ ಮುಂತಾದ ಕೊಂಕಣಿ ನಾಟಕಕಾರರು ಅನೇಕ ಕೊಂಕಣಿ ಭಾಷಾ ನಾಟಕಗಳನ್ನು ಬರೆದು ಪ್ರಸಿದ್ಧಿಗಳಿಸಿದರು. ಕಾದಂಬರಿಗಳು ಹಾಗು ಕಥೆಗಳು ಬರೆಯಲ್ಪಟ್ಟವು. ಕೊಂಕಣಿ ಭಾಷೆ ಸಾಹಿತ್ಯ ಸಂಸ್ಕೃತಿ ಕುರಿತು ಅನೇಕ ವಿದ್ವಾಂಸರು ಸಂಶೋಧನೆಗೆ ತೊಡಗಿದರು. ಅವರಲ್ಲಿ ಡಾ.ವಿಲಿಯಂ ಮಾಡ್ತಾ ಮತ್ತು ಡಾ. ರಾಕಿ ಮಿರಾಂಡ ಪ್ರಸಿದ್ಧರಾಗಿದ್ದಾರೆ.

ಧಾರವಾಡವೂ ಕೂಡ ಕೊಂಕಣಿ ಭಾಷೆಯ ಸಂಶೋಧನೆ ಹಾಗೂ ಸಾಹಿತ್ಯಕ ಚಟುವಟಿಕೆಗಳಿಗೆ ಕೇಂದ್ರವಾಗಿದೆ. ಕರ್ನಾಟಕದಲ್ಲಿ ಕೊಂಕಣಿ ರಂಗಭೂಮಿಯೂ ಮುಖ್ಯ ಪಾತ್ರವನ್ನು ವಹಿಸಿದೆ. ಈ ಕ್ಷೇತ್ರದಲ್ಲಿ ಬೋಳಂತೂರು ಕೃಷ್ಣಪ್ರಭು, ಕುಂಬ್ಳೆ ನರಸಿಂಹನಾಯಕ್, ಬೆನೆಡಿಕ್ಟ್ ರಸಾರಿಯೋ, ಶ್ರೀನಿವಾಸ ನಾಯಕ್, ಎನ್.ಆರ್. ಕಾಮತ್, ಶ್ರೀಧರ ಭಟ್, ಕಮಲಾಕ್ಷ ನಾಯಕ, ಬಾಬೂತಿ ನಾಯಕ ಹಾಗೂ ಎಂ.ವೆಂಕಟೇಶಪ್ರಭು, ಅವರುಗಳು ಮುಂಚೂಣಿಯಲ್ಲಿದ್ದಾರೆ. 'ತಪಸ್ವಿನಿ' ಮತ್ತು 'ಜನಮಾರಿಯ' ಎಂಬ ಎರಡು ಕಥಾ ಚಲನಚಿತ್ರಗಳು ಸಾರಸ್ವತರಿಂದ ನಿರ್ಮಾಣಗೊಂಡಿವೆ; ಕ್ಯಾಥೋಲಿಕ್ ರಿಂದ 'ಜೀವಿತ್' 'ಅಮ್‌ಚೆಮ್ ಅಶೆಮ್' ಎಂಬ ಕಥಾ ಚಲನಚಿತ್ರಗಳೂ ನಿರ್ಮಾಣಗೊಂಡಿವೆ. ಬಿ.ವಿ.ಬಾಳಿಗಾ ಅವರು 'ಪಂಚ್‌ಕಡಾಯ್' ಎಂಬ ಕೊಂಕಣಿ ಮಾಸಿಕವನ್ನು ಸಂಪಾದಿಸುತ್ತಿದ್ದಾರೆ. ಕೊಂಕಣಿ ಭಾಷೆಯನ್ನು ಗೋವಾದಲ್ಲಿ ಆಡಳಿತ ಭಾಷೆಯಾಗಿ ಅಳವಡಿಸಿಕೊಳ್ಳಲಾಗಿದೆ ಹಾಗೂ ಭಾರತದ ರಾಜ್ಯಾಂಗ ಸಂವಿಧಾನದಲ್ಲಿ ಎಂಟನೇ ಶೆಡ್ಯೂಲ್‌ಗೆ (ಪರಿಚ್ಛೇದ) ಸೇರಿಸಲಾಗಿದೆ.

### ಉರ್ದು

ಕರ್ನಾಟಕದ ಬಹುತೇಕ ಮುಸ್ಲಿಮರ ಮಾತೃಭಾಷೆ ಉರ್ದು ಭಾಷೆಯಾಗಿದೆ.ದಖ್ಖನ್ ಪ್ರದೇಶದಲ್ಲಿ ಮುಸ್ಲಿಂ ಆಳ್ವಿಕೆಯು ಪ್ರವರ್ಧಿಸಿದಾಗ, ಹೊಸ ಪ್ರಾಂತ ಭಾಷೆ (ಉಪಭಾಷೆ)ಯ ಉಗಮ ತೀರ ಅಗತ್ಯವಾಯಿತು. ಅದು ಸ್ಥಳೀಯ ಜನತೆ ಹಾಗೂ ಆಳುವವರ ನಡುವೆ ಸಂವಾದಿಸಲು ಸಹಾಯಕಾರಿಯಾಗಬೇಕಿತ್ತು. ಈ ನವಪ್ರಾಂತೀಯ ಉಪಭಾಷೆಯಾದ ದಖ್ಖನಿ ಭಾಷೆಯು ಹಿಂದೂ ಮತ್ತು ಮುಸ್ಲಿಮರ ನಡುವೆ ಸಾಮರಸ್ಯ, ಸಹಕಾರ ಹಾಗು ಪರಸ್ಪರ ಅರಿವಿನ ಸಂಕೇತವಾಗಿತ್ತು. ಬಹಮನಿ ಸುಲ್ತಾನರು ಈ ಭಾಷೆಗೆ ಆಶ್ರಯದಾತರಾಗಿದ್ದರು. ಪ್ರಸಿದ್ಧ ಲೇಖಕರು, ಕವಿಗಳಾದ ನಿಜಾಮ ('ಕದಂ ರಾವ್ ಪದಂ'), ವಾಜ್ಹಿ (ಖುತಾಬ್ ಮುಷ್ತರಿ ಮತ್ತು ಸಬ್-ರಸ್) ಗವಾಸಿ (ಸೈಫುಲ್ ಮುಲೋಕ್-ಓ-ಬಡೇ-ಉಲ್-ಕಮತ್), ಆಜೀಬ್ (ಲೈಲಾ ಮಜನು), ಬಲಾಖಿ (ಮೆರಾಜ್ನಾಮ) ಇಬ್ನೆ-ನಿಶಾತಿ(ಫೂಲ್ ಬನ್) ತಬೀ(ಖೈಸ್-ಲ-ಬೆಹ್ರಮ್-ಓ-ಗುಲ್‌ಅಂದಮ್) ಹಾಗೂ ಸೇವಕ್ (ಜಂಗ್‌ನಾಮಾ) ಮುಂತಾದವರು ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ. ಹಜರತ್ ಖ್ವಾಜಾ ಬಂದೇ ನವಾಜ್ ಹಾಗೂ ಅವನ ವಂಶೀಕರು ಉರ್ದುವಿನಲ್ಲಿ ವಿಪುಲವಾಗಿ ಬರೆದಿದ್ದಾರೆ. ಮೈಸೂರಿನಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಪ್ರವರ್ಧಮಾನವು ಉರ್ದುವಿಗೆ ನವಚೈತನ್ಯವನ್ನು ತಂದುಕೊಟ್ಟಿತು. ಇವರು ಮೊಹಮದ್ ಸಯೀದ್ ಮೇಖ್ರಿ ಆಸಿ, ಷಾ ಮೊಹಮದ್ ಸದ್ರುದ್ದೀನ್, ಮಹಮದ್ ಇಷಾಕ್ ಬಿಜಾಪುರಿ, ಜೈನುಲ್ ಅಬೆದ್ದೀನ್ ಷುಸ್ತ್ರಿ, ಹಸನ್ ಆಲಿ ಇಜ್ಜತ್, ಅಹಮದ್ಖಾನ್ ಶೆರ್ವಾನಿ, ಸೈಯದ್ ಷಾ ಆರಿಫ್ ಖಾದ್ರಿ, ಖಾಜಿ ಗುಲಾಮ್ ಅಹಮದ್, ಲಾಲಾ ಬಾಧಾಸಿಂಗ್, ಲಾಲಾ ಮೆಹತಾಬ್ ರಾಯ್ ಸಬ್ಖತ್ ಮತ್ತು ಮೀರ್ ಹಸನ್ ಕಿರ್ಮಾನಿ ಮುಂತಾದ ಪ್ರಸಿದ್ಧ ಲೇಖಕರಿಗೆ ಆಶ್ರಯದಾತರಾಗಿದ್ದರು.

ಮೈಸೂರು ಮಹಾರಾಜರೂ ಕೂಡ ಉರ್ದು ಭಾಷೆಗೆ ರಾಜಾಶ್ರಯ ಮುಂದುವರಿಸಿದರು. ೧೯ನೆಯ ಶತಮಾನವು ಸುವರ್ಣಯುಗವೆನಿಸಿತ್ತು. ಉರ್ದು ಸಾಹಿತ್ಯದ ಪ್ರಗತಿಗಾಗಿ ಈ ಯುಗದಲ್ಲಿ ಶ್ರಮಿಸಿದವರಲ್ಲಿ ಷಾ ಅಬು ಹೈವೈಜ್, ಹಜರತ್ ಮಹಮದ್ ಖಾಸಿಂ ಖಾನ್, ಸೂಫಿ, ಖಲೀಂ ಅಥರ್, ದಿಲ್, ಸಬೀರ್, ನವಾಬ್ ಸುಲ್ತಾನ್ ನಸೀಂ, ಜಾದೂ, ಅಮೀರ್, ಶೌಕತ್ ನಾಸಿರ್, ಬಾರ್ಖ, ತಹಕ್ವೀಕ್, ಅಮೀರ್, ತಾಹಿತಿ ಮತ್ತು ಆರಿಂ ರವರು ಎದ್ದು ಕಾಣುತ್ತಾರೆ.

ದಖ್ಖನಿ ಭಾಷೆಯು ಉರ್ದುವೆನಿಸಿ ಉತ್ತರಭಾರತದಲ್ಲಿ ಅಭಿವೃದ್ಧಿಗೊಂಡು ಬರಹದ ಭಾಷೆಯಾಗಿ ಬೆಳೆದರೆ, ಕರ್ನಾಟಕದಲ್ಲಿ ಆಡುಭಾಷೆಯಾಯಿತು. ೨೦ನೇ ಶತಮಾನದ ಪ್ರಥಮಾರ್ಧದಶಕಗಳಲ್ಲಿ ಪ್ರಸಿದ್ಧ ಎದ್ದು ಕಾಣುವ ಸಾಹಿತಿಗಳಾಗಿ ಖಾಜಿ ಅಬ್ದುಲ್ಲ ಹುಸೇನ್ ಖಲೀಲ್, ಷಾ ಅಬ್ದುಲ್ ಹುಸೇನ್ ಅದೀಬ್, ಸೈಯದ್ ಗೌಸ್ ಮೋಹಿಯುದ್ದೀನ್, ಹಜರತ್ ಫೈಖ್, ಹಜ್ಹರತ್ ಅಲ್ತಾ, ಹಜರತ್ ಶೌಖ್ ಹಾಗೂ ಮಹಮೂದ್ ಖಾನ್ ಮಹಮೂದ್ ಪ್ರಸಿದ್ಧರಾಗಿದ್ದಾರೆ. ತಮ್ಮ ಪೂರ್ವಸೂರಿಗಳ ಹೆಜ್ಜೆಯ ಜಾಡಿನಲ್ಲಿ ನಡೆದಂತಹ ಸಾಹಿತಿಗಳೆಂದರೆ, ಸುಲೇಮಾನ್ ಖತೀಬ್, ಇಮಾಮಿ ತಬ್ಲೀಶ್, ಖಲೀಲ್ ಸೆಮಾಬಿ, ಮಹಮೂದ್ ಇಯಾಜ್, ಹಮೀಬ್ ಆಲ್ಮಾಸ್, ರಾಹಿ ಖುರೇಷಿ, ಡಾ.ಮುದ್ದಣ್ಣ ಮಂಜ಼ಾರ್, ಫೈಯಾಜ್ ಬೆಳ್ಗೋಡಿ, ಶೂಲ ಮೈಲಿ, ಮಹಮದ್ ಹನೀಫ್ ಖಲೀಂ, ಮೊಹಮದ್‌ಖಾನ್ ಮತ್ತು ಮುಬೇರಿಜುದ್ದೀನ್ ರಾಫತ್ ಇವರುಗಳು ಸದ್ಯದ ತಲೆಮಾರಿನವರಾಗಿದ್ದಾರೆ.

ಸ್ತ್ರೀಯರವರೆಗೂ ಶಿಕ್ಷಣವು ಪ್ರಸರಿಸಲಾಗಿ ಅನೇಕ ಮಹಿಳಾ ಬರಹಗಾರರು ಮುಂದೆ ಬಂದರು. ಅವರಲ್ಲಿ ಸೈಯಿದಾ ಅಖ್ತರ್, ಮುರ್ನತಾಜ್ ಶಿರೀನ್, ಬೇಗಂ ರಹಮತುನ್ನೀಸಾ, ಮೈಮನ್ ತಸ್ನೀಮ್, ಹುಸ್ನಾ ಸರೂರ್, ಜುಬೇದಾ ನಸ್ರೀನ್, ಡಾ. ಹಬಿಬುನ್ನೀಸಾ ಬೇಗಂ, ಡಾ.ಅಮೀನಾ ಖಾತೂನ್, ಡಾ.ವಹೀದುನ್ನೀಸಾ. ಡಾ.ಫಾಹಮೀದಾ ಬೇಗಂ ಮತ್ತು ಬಷೀರುನ್ನೀಸಾ ಬೇಗಂ ಅವರು ಮುಖ್ಯರಾಗಿ ಕಾಣಬರುತ್ತಾರೆ.

ಅನೇಕ ಉರ್ದು ಪತ್ರಿಕೆಗಳು ೨೦ನೇ ಶತಮಾನದಲ್ಲಿ ಪ್ರಕಟವಾಗಲಾರಂಭಿಸಿದವು. ಪ್ರಪ್ರಥಮ ಉರ್ದು ಪತ್ರಿಕೆ 'ಖಾಸಿಮ್-ಉಲ್-ಅಖ್ಬಾರ್' ೧೮೪೮ರಲ್ಲಿ ಮಹಮದ್ ಖಾಸಿಮ್ ಫಮ್ ಅವರು ಆರಂಭಿಸಿದರು. ೧೮೪೮ರಲ್ಲಿ ಮೊದಲ ಉರ್ದು ಕಲ್ಲಚ್ಚು ಮುದ್ರಣಾಲಯ 'ಮುಥ-ಇ-ಫಿರ್ದೋಸ್' ಎಂಬ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ರಾಜ್ಯಾದ್ಯಂತ ೨೦೦ ಕಲ್ಲಚ್ಚು ಮುದ್ರಣಾಲಯಗಳು, ೨೫-೩೦ ವಿದ್ಯುತ್ ಬಳಕೆಯ ಮುದ್ರಣಾಲಯಗಳಿದ್ದು, ಉರ್ದು ಭಾಷೆಯಲ್ಲಿನ ಮುದ್ರಣ ಹಾಗೂ ಪ್ರಕಟಣಾ ಕಾರ್ಯದಲ್ಲಿ ತೊಡಗಿಕೊಂಡಿವೆ. 'ಮಾರ್ಥಮ್-ಇ-ಮಹಮದಿ', 'ಮೈಸೂರ್ ಅಖ್ಬಾರ್', 'ಸುಲ್ತಾನ್ ಅಖ್ಬಾರ್', 'ದಿ ಬೆಂಗಳೂರ್ ಗಾರ್ಡಿಯನ್', 'ದಿ ಬೆಂಗಳೂರ್ ಅಖ್ಬಾರ್'

ಮತ್ತು 'ನಯಿರ್-ಇ-ಅಜಂ' ಇತ್ಯಾದಿ ಹೆಸರಿಸಬಹುದಾದ ಗಮನಾರ್ಹ ಪತ್ರಿಕೆಗಳು. 'ತರ್ಗೀಬ್', 'ತಾಲೀಮ್', ಮುಸ್ಸಾಲೆ ಹಾಗೂ 'ಶಮ್-ಇ-ಸಕುರ್' ಮೊದಲಾದವು ಕೂಡ ಗಮನಾರ್ಹ ಪತ್ರಿಕೆಗಳಾಗಿವೆ. ರಾಜ್ಯದ ವಿವಿಧ ಪಟ್ಟಣಗಳಲ್ಲಿ ಇನ್ನೂ ಅನೇಕ ಪತ್ರಿಕೆಗಳು ಬೆಳಕು ಕಂಡಿವೆ. ಸಾಲಾರ್ (೧೯೬೪), 'ಕರ್ನಾಟಕ ಲೀಡರ್'(೧೯೭೨), 'ಸುಲ್ತಾನ್'(೧೯೯೦) ಹಾಗೂ 'ಖೂಬ್ ಸೂರತ್'(೧೯೯೪) ಮೊದಲಾದ ಪತ್ರಿಕೆಗಳು ಬೆಂಗಳೂರಿನಿಂದ ಪ್ರಕಟವಾಗುತ್ತಿವೆ. ಕನ್ನಡ ಭಾಷೆಯ ಮೇಲೆ ಉರ್ದುವಿನ ಪ್ರಭಾವವೂ ಗಮನಾರ್ಹವಾದುದಾಗಿದೆ. ಸುಮಾರು ೪೩೮ ಅರಾಬಿಕ್ ಮತ್ತು ೬೧೪ ಪರ್ಷಿಯನ್ ಭಾಷಾ ಶಬ್ದಗಳು ಉರ್ದುವಿನ ಮೂಲಕ ಕನ್ನಡಕ್ಕೆ ಬಂದಿವೆ. ಇವು ಬಹುತೇಕ ರೆವಿನ್ಯೂ ದಾಖಲೆಗಳಲ್ಲಿ ಕಂಡು ಬರುತ್ತದೆ. ಉದಾ: ಜಮೀನ್ದಾರಿ, ಮುಜರಾಯಿ, ಮಸೀದಿ, ಗುಮಾಸ್ತ, ಕಛೇರಿ, ಖರ್ಚು, ದಿವಾನ್, ಕಾರ್ಖಾನೆ ಇತ್ಯಾದಿ.

### ರಾಜ್ಯ ಅಕಾಡೆಮಿಗಳು

ಕನ್ನಡ ಸಾಹಿತ್ಯದ ಸರ್ವತೋಮುಖ ಬೆಳವಣಿಗೆಗಾಗಿ ಹಾಗೂ ಸಾಹಿತ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ರಾಜ್ಯ-ರಾಷ್ಟ್ರಗಳ ಏಕತೆಯನ್ನು ಭದ್ರಪಡಿಸಲು ಸಾಹಿತ್ಯ-ಸಂಸ್ಕೃತಿಗಳ ಸಮನ್ವಯತೆ ಅತ್ಯಗತ್ಯ ಎಂಬುದನ್ನು ಮನಗಂಡು ಆಗಿನ ಮೈಸೂರು ಸರ್ಕಾರ ಅಕಾಡೆಮಿಗಳನ್ನು ರೂಪುಗೊಳಿಸಿತು. ಮೊದಲಿಗೆ ಈ ಅಕಾಡೆಮಿಗಳು ಶಿಕ್ಷಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅಂದಂದಿನ ಶಿಕ್ಷಣ ಸಚಿವರೇ ಅಕಾಡೆಮಿಗಳ ಅಧ್ಯಕ್ಷರಾಗಿರುತ್ತಿದ್ದರು. ಆಯಾ ಕ್ಷೇತ್ರದ ತಜ್ಞರನ್ನೇ ಆಯಾ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ನೇಮಿಸುವ ಕಾರ್ಯನೀತಿಯನ್ನು ರಾಜ್ಯ ಸರ್ಕಾರ ೧೯೭೭ರಲ್ಲಿ ಪ್ರಾರಂಭಿಸಿತು. ಪ್ರಸ್ತುತ ೧೩ ಅಕಾಡೆಮಿಗಳು ಕಾರ್ಯ ನಿರ್ವಹಿಸುತ್ತಿವೆ. ೧೧ ಅಕಾಡೆಮಿಗಳು ಸ್ವಾಯತ್ತ ಅಕಾಡೆಮಿಗಳಾಗಿದ್ದು, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ. ಕರ್ನಾಟಕ ಮಾಧ್ಯಮ ಅಕಾಡೆಮಿಯು ವಾರ್ತಾ ಇಲಾಖೆ ವ್ಯಾಪ್ತಿಗೂ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಮಾಹಿತಿ ತಂತ್ರಜ್ಞಾನ ಇಲಾಖೆ ವ್ಯಾಪ್ತಿಗೂ ಒಳಪಟ್ಟಿದೆ. ಕೆಲವು ಅಕಾಡೆಮಿಗಳು ಕನ್ನಡ ಭವನದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೊಡವ ಅಕಾಡೆಮಿಯು ಮಡಿಕೇರಿಯಲ್ಲಿಯೂ, ತುಳು ಮತ್ತು ಕೊಂಕಣಿ ಅಕಾಡೆಮಿ ಮತ್ತು ಬ್ಯಾರಿ ಅಕಾಡೆಮಿಗಳೂ ಸಹ ಮಂಗಳೂರಿನಲ್ಲಿ ಕಛೇರಿ ಹೊಂದಿದೆ.

### ಕರ್ನಾಟಕ ಸಾಹಿತ್ಯ ಅಕಾಡೆಮಿ

ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿಯು ೧೭.೧೦.೧೯೬೧ರಲ್ಲಿ ಸ್ಥಾಪಿಸಲ್ಪಟ್ಟಿತು. ೧೯೭೩ರಲ್ಲಿ 'ಕರ್ನಾಟಕ' ಎಂದು ಪುನರ್ ನಾಮಕರಣವಾದಾಗ 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಎಂದಾಯಿತು. ಮೊದಲಿಗೆ ಶಿಕ್ಷಣ ಸಚಿವರೇ ಅಧ್ಯಕ್ಷರಾಗಿರುತ್ತಿದ್ದು, ೧೯೭೭ರಲ್ಲಿ ಸಾಹಿತಿಗಳನ್ನು ಮೊದಲ ಬಾರಿಗೆ ಅಧ್ಯಕ್ಷರನ್ನಾಗಿ ಮಾಡಲಾಯಿತು. ೨೮-೧೧-೧೯೭೮ರಿಂದ ಅಕಾಡೆಮಿಗಳು ಸ್ವಾಯತ್ತ ಮಂಡಳಿಗಳಾದವು. ಇದುವರೆಗಿನ ಅಧ್ಯಕ್ಷರುಗಳು; ಎಸ್.ಆರ್.ಕಂಠಿ (೧೯೬೧-೧೯೬೬) ಕೆ.ವಿ.ಶಂಕರೇಗೌಡ (೧೯೬೮-೧೯೭೦), ಅ.ನ.ಕೃಷ್ಣರಾವ್(೧೯೭೧),ಆದ್ಯರಂಗಾಚಾರ್ಯ(೧೯೭೧-೧೯೭೨), ಎ.ಆರ್.ಬದರೀನಾರಾಯಣ್ (೧೯೭೩-೧೯೭೪), ಎಂ.ಮಲ್ಲಿಕಾರ್ಜುನಸ್ವಾಮಿ (೧೯೭೪-೭೫),ಆರ್.ಗುಂಡೂರಾವ್, ಕೆ.ಹೆಚ್.ಶ್ರೀನಿವಾಸ್ (೧೯೭೬), ಡಾ.ಎಂ.ಶಿವರಾಂ(೧೯೭೮-೮೦), ಹಾ.ಮಾ.ನಾಯಕ (೧೯೮೦-೮೪), ಕೆ.ಎಸ್.ನಿಸಾರ್ ಅಹಮದ್ (೧೯೮೪-೮೭), ಜಿ.ಎಸ್.ಶಿವರುದ್ರಪ್ಪ (೧೯೮೭-೯೦), ಬರಗೂರು ರಾಮಚಂದ್ರಪ್ಪ (೧೯೯೦-೧೯೯೫), ಶಾಂತರಸ (೧೯೯೫-೯೮), ಗಿರಡ್ಡಿ ಗೋವಿಂದರಾಜ (೧೯೯೮-೨೦೦೧), ಗುರುಲಿಂಗ ಕಾಪಸೆ (೨೦೦೧-೦೪), ಗೀತಾನಾಗಭೂಷಣ (೨೦೦೪-೦೭), ಎಂ.ಎಚ್. ಕೃಷ್ಣಯ್ಯ (೨೦೦೮-೨೦೧೧). ಮಾಲತಿ ಪಟ್ಟಣ ಶೆಟ್ಟಿ (೨೦೧೪ ರಿಂದ)

ಕನ್ನಡ ಪುಸ್ತಕಗಳಿಗೆ ಬಹುಮಾನ, ಯುವ ಬರಹಗಾರರಿಗೆ ತರಬೇತಿ ಶಿಬಿರಗಳು, ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆ, ಅಂತರರಾಜ್ಯ ಸಾಂಸ್ಕೃತಿಕ ವಿನಿಮಯ ಯೋಜನೆಯಡಿ ನೆರೆರಾಜ್ಯಗಳಿಗೆ ಪ್ರವಾಸ ಅನುದಾನನೀಡಿ ಬರಹಗಾರರನ್ನು ಕಳುಹಿಸುವುದು. ವಾರ್ಷಿಕ ಪ್ರಶಸ್ತಿ, ದಶವಾರ್ಷಿಕ ಸಂಪುಟ, ಕವಿಗೋಷ್ಠಿ, ಸಾಮಾಜಿಕ ಚಿಂತನಮಾಲೆ, ಉಪಸಂಸ್ಕೃತಿ ಮಾಲೆ, ಅಂತರ್ ಶಿಸ್ತೀಯ ಅಧ್ಯಯನ, ಜ್ಞಾನಪೀಠ ಪ್ರಶಸ್ತಿ ವಿಜೇತರ ಮಾಲೆ, ಪುಸ್ತಕ ಯಾತ್ರೆ, ಕಮ್ಮಟಗಳು, ಕವಿ-ಸಾಹಿತಿಗಳ ಶತಮಾನೋತ್ಸವ, ಅನಿಕೇತನ ಕನ್ನಡ, ಆಂಗ್ಲ ಭಾಷೆಯಲ್ಲಿ ತ್ರೈಮಾಸಿಕ ಪ್ರಕಟಣೆ ಹಾಗೂ ಅದನ್ನು ಅಂತರ್ಜಾಲಕ್ಕೆ ಅಳವಡಿಸುವುದೇ ಮುಂತಾದ ಕಾರ್ಯಕ್ರಮ ನಡೆಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿ ಅದರ ಅಭಿವೃದ್ಧಿಗಾಗಿ ದುಡಿದ ಖ್ಯಾತ ಸಾಹಿತಿಗಳು ಹಾಗೂ ಸೇವಾಸಾಧಕರಿಗೆ ಪ್ರತಿವರ್ಷವೂ ವಾರ್ಷಿಕ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಅಕಾಡೆಮಿಯು ಆರಂಭಗೊಂಡಂದಿನಿಂದ ಅಂದರೆ ೧೯೬೫ರಿಂದ ೨೦೧೫ರವರೆಗೆ ೨೬೭ ಸಾಧಕರನ್ನು ಗೌರವಿಸಿದೆ. ಅತ್ಯುತ್ತಮ ಪುಸ್ತಕಗಳಿಗೆ ಪುಸ್ತಕ ಬಹುಮಾನಗಳನ್ನೂ ಸಹ ಪ್ರತಿವರ್ಷ ನೀಡುತ್ತಾ ಬಂದಿದೆ.

### ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ರಾಜ್ಯಾದ್ಯಂತ ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂಥ ಒಂದು ಸ್ಥಾಯಿಯಾದ ಸ್ವಾಯತ್ತ ಸಂಸ್ಥೆಯಾಗಿರಬೇಕು ಮತ್ತು ಆ ಮೂಲಕ ಕನ್ನಡದಲ್ಲಿ ಪುಸ್ತಕೋದ್ಯಮವು ಜನಪರವಾಗಿ, ವ್ಯಾಪಕವಾಗಿ, ಸಮಗ್ರ ಚಳುವಳಿಯಾಗಿ ಬೆಳೆದು ಭದ್ರವಾಗಿ ಬೇರೂರುವಂತೆ ಮಾಡುವ ಸಲುವಾಗಿ ೧೯೯೩ರಲ್ಲಿ ಪುಸ್ತಕ ಪ್ರಾಧಿಕಾರವನ್ನು ಸ್ಥಾಪಿಸಲಾಯಿತು.

**ಇದುವರೆಗಿನ ಅಧ್ಯಕ್ಷರು:** ಎಲ್.ಎಸ್.ಶೇಷಗಿರಿರಾವ್ (೧೯೯೩-೧೯೯೫), ನೆಲಮನೆ ದೇವೇಗೌಡ (೧೯೯೫-೧೯೯೬), ಎಚ್.ಜೆ.ಲಕ್ಕಪ್ಪಗೌಡ (೧೯೯೮-೨೦೦೧), ಮಲ್ಲೇಪುರಂ ಜಿ. ವೆಂಕಟೇಶ್ (೨೦೦೧-೨೦೦೪), ಎಸ್.ಜಿ.ಸಿದ್ಧರಾಮಯ್ಯ (೨೦೦೫-೨೦೦೮), ಸಿದ್ದಲಿಂಗಯ್ಯ (೨೦೦೮-೨೦೧೩), ಬಂಜಗೆರೆ ಜಯಪ್ರಕಾಶ್ (೨೦೧೩ ರಿಂದ). ಅಪರೂಪದ ಹಾಗೂ ಅಲಭ್ಯ ಕೃತಿಗಳನ್ನು 'ಜನಪ್ರಿಯ ಪುಸ್ತಕಮಾಲೆ'ಯಲ್ಲಿ ಪ್ರಕಟಿಸುವುದು,

ಜಿಲ್ಲಾ ಕೇಂದ್ರಗಳಲ್ಲಿ ರಿಯಾಯಿತಿ ಪುಸ್ತಕ ಮಾರಾಟ ಮೇಳಗಳ ಆಯೋಜನೆ, ಕನ್ನಡ ಪುಸ್ತಕಗಳ ಸಗಟು ಖರೀದಿ ಹಾಗೂ ಗಡಿ ಭಾಗದ ಶಾಲಾ ಕಾಲೇಜುಗಳಿಗೆ ಅವುಗಳ ವಿತರಣೆ, ಕನ್ನಡ ಪುಸ್ತಕಗಳ ಪ್ರಕಟಣೆಗೆ ಧನಸಹಾಯ, ಲೇಖಕ-ಪ್ರಕಾಶಕರ ಕಮ್ಮಟಗಳ ಏರ್ಪಾಡು, ಶಾಲಾ ಕಾಲೇಜುಗಳಲ್ಲಿ 'ನಾನು ಮೆಚ್ಚಿದ ಪುಸ್ತಕ' ಸ್ಪರ್ಧೆಯ ಆಯೋಜನೆ, ಜಿಲ್ಲಾ ಕೇಂದ್ರಗಳಲ್ಲಿ ದಲಿತ ಸಾಹಿತ್ಯ ಸಮ್ಮೇಳನಗಳ ವ್ಯವಸ್ಥೆ ಮುಂತಾದ ಕಾಯ್ಯಕ್ರಮಗಳನ್ನು ಪ್ರಾಧಿಕಾರವು ನಡೆಸಿಕೊಂಡು ಬರುತ್ತದೆ.

೨೦೦೭ರಿಂದ ಪ್ರತಿ ವರ್ಷ ಪುಸ್ತಕ ಪ್ರಾಧಿಕಾರದ ವತಿಯಿಂದ ಶ್ರೇಷ್ಠ ಪ್ರಕಾಶಕರುಗಳಿಗೆ ಅತ್ಯುತ್ತಮ ಪ್ರಕಾಶನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿ ಮೊತ್ತ ರೂ. ೧,೦೦,೦೦೦-ಗಳು. ರಾಜ್ಯದ ವಿವಿಧ ಕ್ಷೇತ್ರದಲ್ಲಿ ಸಂಶೋಧನೆ ಮಾಡಿದ ಸಾಹಿತಿಗಳನ್ನು ಗುರುತಿಸಿ ೨೦೧೪ರಿಂದ ಡಾ. ಎಂ.ಎಂ.ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿ ಮೊತ್ತ ೭೫,೦೦೦-೦೦ ರೂ.ಗಳು ಒಳಗೊಂಡಿರುತ್ತದೆ.

ಬಿ. ಶೇಖ್ ಅಲಿ (೨೦೧೪) ಹಾಗೂ ಬಿ.ಶೇಷಾದ್ರಿ (೨೦೧೫) ಈ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಚಟುವಟಿಕೆಯಿಂದ ಸಾಧನೆ ಮಾಡಿದ ಮಹನೀಯರನ್ನು ಗುರುತಿಸಿ ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಪ್ರಶಸ್ತಿ ಮೊತ್ತ ರೂ. ೫೦,೦೦೦-೦೦ಗಳು ಕಿ.ರಂ. ನಾಗರಾಜ (೨೦೦೮), ಎಂ.ಕೆ.ಅಂಕೇಗೌಡ (೨೦೦೯), ಸುಮತೀಂದ್ರ ನಾಡಿಗ (೨೦೧೦), ಜಿ.ಕೃಷ್ಣಪ್ಪ (೨೦೧೧), ಶೂದ್ರ ಶ್ರೀನಿವಾಸ (೨೦೧೨), ಜಾಣಗೆರೆ ವೆಂಕಟರಾಮಯ್ಯ (೨೦೧೩), ತೇಜಸ್ವಿನಿ ಕಟ್ಟೀಮನಿ (೨೦೧೪) ಹಾಗೂ ಶಶಿಕಲಾ ಬೆಳಗಲಿ (೨೦೧೫) ಈ ಪ್ರಶಸ್ತಿಯನ್ನು ಈವರೆಗೆ ಪಡೆದಿದ್ದಾರೆ. ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರಿಗೆ ಅನುಕೂಲವಾಗುವ ಪುಸ್ತಕಗಳನ್ನು ಹೊರತಂದ ಮಹನೀಯರನ್ನು ಗುರುತಿಸಿ ಡಾ. ಅನುಪಮ ನಿರಂಜನ ವೈದ್ಯಕೀಯ ಮತ್ತು ವಿಜ್ಞಾನ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿ ಮೊತ್ತ ರೂ. ೨೫,೦೦೦/- ಗಳನ್ನು ಒಳಗೊಂಡಿರುತ್ತದೆ. ವಸಂತಕುಲಕರ್ಣಿ (೨೦೧೦), ಲೀಲಾವತಿ ದೇವದಾಸ್ (೨೦೧೧), ಸಿ.ಆರ್. ಚಂದ್ರಶೇಖರ್ (೨೦೧೨), ಈ.ಟಿ. ಪುಟ್ಟಯ್ಯ (೨೦೧೩), ಬಿ.ಟಿ. ರುದ್ರೇಶ್ (೨೦೧೪), ಹಾಗೂ ಎಸ್.ಪಿ. ಯೋಗಣ್ಣ (೨೦೧೫)ರಿಗೆ ಈ ಪ್ರಶಸ್ತಿ ಸಂದಿದೆ. ಅಲ್ಲದೆ ಪುಸ್ತಕಸೊಗಸು ಬಹುಮಾನವನ್ನು, ಮುಖಪುಟ ಚಿತ್ರ ವಿನ್ಯಾಸ ,ಚಿತ್ರ ಕಲಾವಿದರಿಗೆ ನೀಡಲಾಗುತ್ತಿದೆ.

### ಕುವೆಂಪು ಭಾಷಾ ಭಾರತಿ ಪ್ರಾಧಿಕಾರ (ಅನುವಾದ ಅಕಾಡೆಮಿ)

ಕುವೆಂಪು ಜನ್ಮ ಶತಮಾನೋತ್ಸವದ ನೆನಪಿಗಾಗಿ ೦೬-೦೧-೨೦೦೬ರಲ್ಲಿ ಉದ್ಘಾಟನೆಗೊಂಡ ಈ ಅಕಾಡೆಮಿಯು ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನಗಂಗೋತ್ರಿ ಆವರಣದಲ್ಲಿ 'ಕುವೆಂಪು ಭಾಷಾ ಭಾರತಿ' ಎಂಬ ಹೆಸರಿನಲ್ಲಿ ನೆಲೆಗೊಂಡಿತು. ವಿವಿಧ ಭಾಷೆಗಳ ಪ್ರಾಚೀನ ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಅನುವಾದಿಸುವುದು; ಹಾಗೆಯೇ ಕನ್ನಡ ಭಾಷೆಯ ಪ್ರಾಚೀನ ಉತ್ಕೃಷ್ಟ ಸಾಹಿತ್ಯವನ್ನು ವಿವಿಧ ಭಾಷೆಗಳಿಗೆ ಅನುವಾದಿಸುವುದು. ಅನುವಾದ ಕಮ್ಮಟ, ಅನುವಾದಿತ ಕೃತಿಗಳ ಪ್ರಕಟಣೆ, ವಿಚಾರ ಸಂಕಿರಣ ಉತ್ತಮ ಅನುವಾದ ಗ್ರಂಥಗಳಿಗೆ ಬಹುಮಾನ ಪ್ರಶಸ್ತಿ ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಗೆ೦೩-೧೨-೨೦೦೮ರಿಂದ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಎಂದು ಮರುನಾಮಕರಣವಾಯಿತು ಪ್ರಧಾನ್ ಗುರುದತ್ತ ಅವರು ಮೊದಲ ಅಧ್ಯಕ್ಷರಾಗಿದ್ದು, ಕೆ.ವಿ.ನಾರಾಯಣಅವರು ೨೦೧೪ರಿಂದ ಅಧ್ಯಕ್ಷರಾಗಿದ್ದಾರೆ.

### ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ

ಮೈಸೂರು ರಾಜ್ಯ ಸಂಗೀತ ಮತ್ತು ನಾಟಕ ಅಕಾಡೆಮಿ ಎಂಬುದಾಗಿ ೧೮-೦೨-೧೯೫೫ರಂದು ಉದ್ಘಾಟನೆಯಾಯಿತು. ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅಧ್ಯಕ್ಷತೆಯಲ್ಲಿ ನಾಟಕ ಅಕಾಡೆಮಿಯ ಅಧ್ಯಕ್ಷರು ಹಾಗೂ ಮದರಾಸು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಗೌ:ರಾಜಮನ್ನಾರ್ ಅವರು ಉದ್ಘಾಟಿಸಿದ್ದರು. ೧೯೭೭ರಲ್ಲಿ ಕನ್ನಡ ಸಂಸ್ಕೃತಿ ಮತ್ತು ನೃತ್ಯ ಅಕಾಡೆಮಿ ಎಂಬುದಾಗಿ ನಾಮಕರಣವಾಯಿತು. ಸಂಗೀತ, ನಾಟಕ ನೃತ್ಯ ಸಮ್ಮೇಳನ ಏರ್ಪಡಿಸುವುದು, ಪ್ರಶಸ್ತಿ ನೀಡಿ ಗೌರವಿಸುವುದು, ಕಲಾವಿದರ ಮಾಸಾಶನ, ಶಿಷ್ಯ ವೇತನ, ವಿಚಾರ ಸಂಕಿರಣ, ಸಂಸ್ಕೃತಿ ವಿನಿಮಯ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕಲಾ ಪ್ರದರ್ಶನ, ಮಹತ್ವದ ಪುಸ್ತಕ ಪ್ರಕಟಣೆ ಮುಂತಾದವುಗಳನ್ನು ಏರ್ಪಡಿಸುವುದು ಇವೇ ಮೊದಲಾದ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಸಂಗೀತ ಕ್ಷೇತ್ರದಲ್ಲಿ ನಾಲ್ಕು ಬಗೆಯ ಪ್ರಶಸ್ತಿಗಳನ್ನು ಕೊಡಲಾಗುತ್ತಿದೆ. ರಾಜ್ಯ ಸಂಗೀತ ನೃತ್ಯ ಅಕಾಡೆಮಿಯು ೧೯೫೯ರಿಂದ ೨೦೧೦ರವರೆಗೆ ವಿವಿಧ ಪ್ರಕಾರಗಳಲ್ಲಿ ನಿಷ್ಣಾತರಾದ ೭೦೩ ಕಲಾವಿದರನ್ನು ವಾರ್ಷಿಕ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ೨೦೦೮ರಿಂದ ಈ ಪ್ರಶಸ್ತಿಗೆ 'ಕರ್ನಾಟಕ ಕಲಾಶ್ರೀ' ಎಂದು ಹೆಸರಿಸಲಾಗಿದೆ.

**ಇದುವರೆಗಿನ ಅಧ್ಯಕ್ಷರು:** ಕೋಮಲಾ ವರದನ್ (೧೯೭೮-೮೧), ಗಂಗೂಬಾಯಿ ಹಾನಗಲ್ (೧೯೮೧-೮೪), ವೀಣಾ ದೊರೆಸ್ವಾಮಿ ಅಯ್ಯಂಗಾರ್ (೧೯೮೪-೮೬), ಮಾಯಾರಾವ್ (೧೯೮೭-೯೦), ಪಂ.ಆರ್.ವಿ.ಶೇಷಾದ್ರಿ (೧೯೯೭-೯೫), ಚಂದ್ರಭಾಗಾದೇವಿ (೧೯೯೫-೯೭), ಶ್ಯಾಮಲಾ ಜಿ.ಭಾವೆ (೧೯೯೭-೨೦೦೧), ಹೆಚ್. ಆರ್.ಲೀಲಾವತಿ (೨೦೦೧-೦೪), ಪಂಡಿತ್ ರಾಜಶೇಖರ ಮನ್ಸೂರ್ (೨೦೦೫-೦೮), ಪಂಡಿತ ನರಸಿಂಹಲು ವಡವಾಟಿ (೨೦೦೮-೧೧). ವೈಜಯಂತಿಕಾಶಿ (೨೦೧೨ -೧೩ ), ಗಂಗಮ್ಮ ಕೇಶವಮೂರ್ತಿ(೨೦೧೪-)

### ಕರ್ನಾಟಕ ಲಲಿತಕಲಾ ಅಕಾಡೆಮಿ

೧೯೬೪ರಲ್ಲಿ ಸ್ಥಾಪನೆಗೊಂಡಿದ್ದು, ೨೦೦೮ರಲ್ಲಿ ಪುನರ್ರಚನೆಗೊಂಡಿತು. ಜನಸಾಮಾನ್ಯರಲ್ಲಿ ಚಿತ್ರಕಲೆಯ ಬಗ್ಗೆ ಅರಿವು ಮೂಡಿಸಲು ಹಾಗೂ ಕಲಾವಿದರಿಗೆ ಪ್ರೋತ್ಸಾಹ ನೀಡಲು ಅನೇಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಕಲಾವಿದರಿಗೆ ರಾಜ್ಯ-ರಾಷ್ಟ್ರಮಟ್ಟದಲ್ಲಿ ಮನ್ನಣೆ ಪಡೆಯಲು ಸಾಧ್ಯವಾಗುವಂತೆ ಕಾರ್ಯಕ್ರಮ ರೂಪಿಸುವುದು, ಶಿಷ್ಯವೇತನ ನೀಡಿ, ರಾಜ್ಯದ ಹೊರಗೆ, ಏಕವ್ಯಕ್ತಿ ಪ್ರದರ್ಶನ ನೀಡಲು, ಭಿತ್ತಿಚಿತ್ರ ನಕಲು ಮಾಡಲು ಸಹಾಯಧನ ನೀಡುತ್ತದೆ. ಕಲಾವಾರ್ತೆ ನಿಯತಕಾಲಿಕೆ

ಪ್ರಕಟಣೆ, ಪುಸ್ತಕ ಪ್ರಕಟಣೆ, ಪ್ರಶಸ್ತಿ, ಬಹುಮಾನ ನೀಡಿಕೆ. ಆಯ್ದ ಕಲಾಕೃತಿಗಳ ಪ್ರದರ್ಶನ, ಚಿತ್ರಕಲಾ ಶಿಬಿರ, ಕಾರ್ಯಾಗಾರ, ವಾರ್ಷಿಕ ಪ್ರಶಸ್ತಿ ನೀಡುವುದು, ಫೋಟೋಗ್ರಾಫಿಕ್ ಕಲೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿಯನ್ನು ೧೯೬೬ರಲ್ಲಿ ಆರಂಭಿಸಲಾಯಿತು. ೨೦೧೦ರವರೆಗೆ ೧೯೭೪-೮೦ರ ಅವಧಿಯನ್ನು ಹೊರತುಪಡಿಸಿ ೧೭೩ ಕಲಾವಿದರನ್ನು ಅಕಾಡೆಮಿಯು ಸನ್ಮಾನಿಸಿದೆ. ೨೦೦೧ರಿಂದ ಲಲಿತ ಕಲಾ ಅಕಾಡೆಮಿಯು, ಲಲಿತ ಕಲೆಗಳ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಯನ್ನು ಸಲ್ಲಿಸಿದವರಿಗೆ ವಿಶೇಷ ಪ್ರಶಸ್ತಿಯನ್ನು ನೀಡುವ ರೂಢಿಯನ್ನು ಆರಂಭಿಸಿತು. ಅಂತಾಗಿ ಈ ಕ್ಷೇತ್ರದ ಸಾಧಕರಾದ ಡಿ.ಕೆ.ಚೌಟ (೨೦೦೧), ಸಿ.ರೇವಣಸಿದ್ದಯ್ಯ (೨೦೦೨), ಕೆ.ಆರ್.ಕೃಷ್ಣಸ್ವಾಮಿ (೨೦೦೩), ಶರಣಬಸಪ್ಪ ಅಪ್ಪ (೨೦೦೬), ವೀರೇಂದ್ರ ಹೆಗ್ಗಡೆ (೨೦೦೭) ಅವರನ್ನು ಅಕಾಡೆಮಿಯು ಸನ್ಮಾನಿಸಿದೆ.

**ಇದುವರೆಗಿನ ಅಧ್ಯಕ್ಷರು :** ಪುನರ್ರಚಿತ ಅಕಾಡೆಮಿಗೆ ಅಂತರಾಷ್ಟ್ರೀಯ ಖ್ಯಾತ ಕಲಾವಿದರಾದ ಕೆ.ಕೆ.ಹೆಬ್ಬಾರ್ (೧೯೭೮-೮೧), ಟಿ.ಪಿ.ಅಕ್ಕಿ (೧೯೮೧-೮೪) ಸೋಮಶೇಖರ ಸಾಲಿ (೧೯೮೪-೮೭) ಆರ್.ಎಂ.ಹಡಪದ್ (೧೯೮೭-೯೦) ಪಿ.ಆರ್.ತಿಪ್ಪೇಸ್ವಾಮಿ(೧೯೯೧-೯೫) ಸಿ.ಚಂದ್ರಶೇಖರ್ (೧೯೯೫-೯೮) ಬಿ.ಜಿ.ಅಂದಾನಿ (೧೯೯೮-೨೦೦೧) ಪೀಟರ್ ಲೂಯಿಸ್ (೨೦೦೧-೦೪) ಬಿ.ಬಸವರಾಜು (೨೦೦೫-) ವಿ.ಟಿ.ಕಾಳೆ (೨೦೦೫-೨೦೦೮) ನಾಡೋಜ ಡಾ.ಜೆ.ಎಸ್.ಖಂಡೇರಾವ್ (೨೦೦೮-೧೧) ಚಿ.ಸು.ಕೃಷ್ಣಶೆಟ್ಟಿ (೨೦೧೨-೧೩), ಎಂ.ಎಸ್.ಮೂರ್ತಿ(೨೦೧೩-)

### ಕರ್ನಾಟಕ ನಾಟಕ ಅಕಾಡೆಮಿ

ನಾಟಕ ಅಕಾಡೆಮಿಯು ೧೯೫೯ ರಲ್ಲಿ ಆರಂಭವಾಯಿತು. ಜಾನಪದ ಶಿಬಿರಗಳು, ಜಿಲ್ಲಾ ನಾಟಕೋತ್ಸವಗಳು, ಕೈಲಾಸಂ ಶತಮಾನೋತ್ಸವ, ಪರ್ವತವಾಣಿ, ಶ್ರೀರಂಗರು ಮುಂತಾದ ಖ್ಯಾತ ನಾಟಕಕಾರರ ಬಗ್ಗೆ ವಿಚಾರಸಂಕಿರಣ, ಹೊರನಾಡಿನಲ್ಲಿ ನಾಟಕೋತ್ಸವ, ಕಲಾವಿದರಿಗೆ ಗೌರವಧನ, ಮಾಸಾಶನ ನೀಡುವಿಕೆ, ಶಿಷ್ಯವೇತನ, ಮಕ್ಕಳ ನಾಟಕ ಶಿಬಿರ, ಪ್ರಶಸ್ತಿ ನೀಡುವುದು, ಬೀದಿನಾಟಕ, ನಾಟಕ ಅಕಾಡೆಮಿಯ ಪ್ರಕಟಣೆ, ಸುವರ್ಣಸಂಭ್ರಮ, ಮಹಿಳಾ ರಂಗ ಸಮಾವೇಶ, ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ರಂಗಶಿಬಿರ ನಡೆಸುವುದು, ನಾಟಕ, ಸೀನರಿ ಉಡುಪು ಒದಗಿಸುವ ಸಂಸ್ಥೆಗಳಿಗೆ ಧನ ಸಹಾಯ ನೀಡಿಕೆ, ನಾಟಕ ರಚನಾ ಶಿಬಿರ ಮುಂತಾದ ಕಾರ್ಯಕ್ರಮ ನಡೆಸಿದೆ.

**ಇದುವರೆಗಿನ ಅಧ್ಯಕ್ಷರು:** ಗಿರೀಶ್ ಕಾರ್ನಾಡ್ (೧೯೭೭-೧೯೮೦) ಡಾ.ಬಿ.ವಿ.ಕಾರಂತ (೧೯೮೦-೧೯೮೨) ಚಂದ್ರಶೇಖರ ಕಂಬಾರ (೧೯೮೨-೧೯೮೭) ಬಿ.ವಿ.ವೈಕುಂಠರಾಜು (೧೯೮೭-೧೯೮೯) ಪರ್ವತವಾಣಿ (೧೯೮೯-೯೦) ಚಿಂದೋಡಿ ಲೀಲಾ (೧೯೯೧-೧೯೯೫) ಕೆ.ಮರುಳಸಿದ್ದಪ್ಪ (೧೯೯೫-೧೯೯೮) ಸಿ.ಜಿ.ಕೃಷ್ಣಸ್ವಾಮಿ (೧೯೯೮-೨೦೦೧) ಆರ್.ನಾಗೇಶ್ (೨೦೦೧-೨೦೦೪) ಶ್ರೀನಿವಾಸ್ ಜಿ.ಕಪ್ಪಣ್ಣ (೨೦೦೫-೨೦೦೮) ಬಿ.ವಿ.ರಾಜಾರಾಂ (೨೦೦೮-೨೦೧೧) ಮಾಲತಿ ಸುಧೀರ್ (೨೦೧೧-೧೩)

### ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೨೦೦೮-೦೯ ರಲ್ಲಿ ಪ್ರತ್ಯೇಕಿಸಿ 'ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ' ಎಂಬುದಾಗಿ ಪ್ರತ್ಯೇಕ ಅಕಾಡೆಮಿಯನ್ನು ಸ್ಥಾಪಿಸಲಾಗಿದ್ದುಇದರ ವ್ಯಾಪ್ತಿ ಹಿರಿದಾದುದು. ಸಮಗ್ರ ಕನ್ನಡ ಜನಪದ ರಂಗಭೂಮಿಯ ಎಲ್ಲಾ ರೂಪಗಳು ಈ ಅಕಾಡೆಮಿಯ ಪರಿಧಿಯಲ್ಲಿ ಬರುತ್ತವೆ. ಇಲ್ಲಿ ಕರಾವಳಿ ಯಕ್ಷಗಾನವಿದೆ, ತಾಳಮದ್ದಳೆ ಇದೆ. ಬಯಲುಸೀಮೆಯ ಮೂಡಲಪಾಯವಿದೆ. ಉತ್ತರಭಾಗದ ದೊಡ್ಡಾಟ, ಸಣ್ಣಾಟ, ರಾಧಾನಾಟ, ಕೃಷ್ಣಪಾರಿಜಾತವಿದೆ. ರಾಜಾನಾಟ, ದಾಸರಾಟಗಳೂ ಇವೆ. ಅಲ್ಲದೆ, ಗೊಂಬೆ ರಂಗಭೂಮಿಗೆ ಸೇರಿದ ಸೂತ್ರದಗೊಂಬೆಯಾಟ. ಸರಳುಗೊಂಬೆಯಾಟ, ಕೀಲುಗೊಂಬೆಯಾಟ, ತೊಗಲು ಗೊಂಬೆಯಾಟಗಳಿವೆ. ಈ ಎಲ್ಲಾ ರಂಗರೂಪಗಳು ಸೇರಿ ಯಕ್ಷಗಾನ ಬಯಲಾಟ ಅಕಾಡೆಮಿ ರೂಪುಗೊಂಡಿದೆ. ಕುಂಬಳೆ ಸುಂದರ ರಾವ್ ಹಾಗೂ ಎಂ.ಎಲ್.ಸಾಮಗರು ಕ್ರಮವಾಗಿ ಇದರ ಮೊದಲ ಮತ್ತು ಎರಡನೆಯ ಅಧ್ಯಕ್ಷರು. ೨೦೧೪ರಿಂದ ಬೆಳಗಲ್ಲು ವೀರಣ್ಣನವರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಯಕ್ಷಗಾನ ಬಯಲಾಟದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಂಶೋಧನೆ, ತರಬೇತಿ ಶಿಬಿರ, ಅಧ್ಯಯನಾತ್ಮಕ ಕಮ್ಮಟ, ಕಲಾ ಶಿಕ್ಷಣ, ಅಶಕ್ತ ಕಲಾವಿದರಿಗೆ ಆರ್ಥಿಕ ನೆರವು, ಪ್ರಾತ್ಯಕ್ಷಿಕೆಗಳು ಮುಂತಾದ ಚಟುವಟಿಕೆಗಳನ್ನು ಅಕಾಡೆಮಿ ಹಮ್ಮಿಕೊಳ್ಳುತ್ತದೆ. ಯಕ್ಷಗಾನದ ಸೀಮಾ ಪುರುಷರಾದ ಮಹಾಕವಿ 'ಪಾರ್ತಿ ಸುಬ್ಬ'ರ ಹೆಸರಿನಲ್ಲಿ ಒಂದು ಲಕ್ಷ ರೂ ಮೌಲ್ಯದ ರಾಜ್ಯಮಟ್ಟದ ಪ್ರಶಸ್ತಿಯನ್ನು ಅಕಾಡೆಮಿಯು ನೀಡುತ್ತಿದೆ. ಈ ಪ್ರಶಸ್ತಿಯನ್ನು ಪಡೆದವರೆಂದರೆ ಅಮೃತ ಸೋಮೇಶ್ವರ (೨೦೦೯), ಮಂಜುನಾಥ ಹೊಸ್ತೋಟ ಭಾಗವತ (೨೦೧೦), (೨೦೧೧), ಶಿಮಂತೂರು ನಾರಾಯಣ ಶೆಟ್ಟಿ (೨೦೧೨), ಎಂ.ಆರ್.ರಂಗನಾಥರಾವ್ (೨೦೧೩), ಜಿ.ಎಸ್.ಭಟ್ಟ (೨೦೧೪), ಗುಂಡ್ಲ ವದ್ದಿಗೇರಿ ತಿಮ್ಮಾರೆಡ್ಡಿ (೨೦೧೫) ಇದಲ್ಲದೆ, ಅಕಾಡೆಮಿಯು ಮೊದಲಿಗೆ ೧೦ ಸಾವಿರ ರೂಪಾಯಿಗಳ ಗೌರವ ಪ್ರಶಸ್ತಿಯನ್ನು ನೀಡುತ್ತಿದ್ದು ೨೦೧೬ರಿಂದ ಈ ಮೊತ್ತವನ್ನು ೫೦ ಸಾವಿರಕ್ಕೆ ಏರಿಸಲಾಗಿದೆ. ಪ್ರತಿ ವರ್ಷ ಹತ್ತು ಮಂದಿ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

### ಕರ್ನಾಟಕ ಜಾನಪದ ಅಕಾಡೆಮಿ

ಮೌಖಿಕ ಪರಂಪರೆಯ ಸಾಂಸ್ಕೃತಿಕ ಸಿರಿ ಜಾನಪದ ಹಾಗೂ ಯಕ್ಷಗಾನ ಕಲೆ, ಸಮೃದ್ಧತೆಯಿಂದ ಕೂಡಿದ ಈ ಕಲಾ ಪ್ರಾಕಾರವನ್ನು ಉಳಿಸಿ ಬೆಳೆಸಲು, ಆಧುನಿಕತೆಯ ಸ್ಪರ್ಶಕ್ಕೆ ಕಾಲಗತಿಯಲ್ಲಿ ಅಳಿಸಿಹೋಗದಂತೆ ಕಾಪಾಡುವ ದಿಸೆಯಲ್ಲಿ ೦೩-೧೧-೧೯೮೦ರಲ್ಲಿ ಈ ಅಕಾಡೆಮಿ ಸ್ಥಾಪನೆಯಾಯಿತು. ಜನಪದ ಸಾಹಿತ್ಯ ಸಂಗ್ರಹ, ಮಾಸಾಶನ, ಪ್ರಶಸ್ತಿ ನೀಡಿಕೆ, ಧ್ವನಿಮುದ್ರಣ, ಗ್ರಂಥ ಪ್ರಕಟಣೆ, ಪ್ರದರ್ಶಕ ಕಲೆಗಳಿಗೆ ಪ್ರದರ್ಶನ ನೀಡಲು ಅವಕಾಶ, ಆಡಿಯೋ ವೀಡಿಯೋ ಸಂಶೋಧನೆ, ವಿಚಾರ ಸಂಕಿರಣ, ಕಮ್ಮಟಗಳು, ಕಲಾಮೇಳ, ಜಾನಪದ ರಂಗೋತ್ಸವ, ಜಾನಪದ ಉತ್ಸವ, ಪಾರಂಪರಿಕ ಕಲೆ ಜನಪದದಲ್ಲಿ ವಿಜ್ಞಾನ, ತಂತ್ರಜ್ಞಾನ, ಜನಪದ ಕಾವ್ಯ ಮೀಮಾಂಸೆಯ ಪರಿಕಲ್ಪನೆ ಮುಂತಾದ ಚಟುವಟಿಕೆಗಳನ್ನು ಅಕಾಡೆಮಿ ಹಮ್ಮಿಕೊಳ್ಳುತ್ತದೆ.

**ಇದುವರೆಗಿನ ಅಧ್ಯಕ್ಷರುಗಳು:** ಹೆಚ್.ಎಲ್.ನಾಗೇಗೌಡ (೧೯೮೦–೮೭) ಎಸ್.ಕೆ.ಕರೀಂಖಾನ್ (೧೯೮೭–೯೦) ಜೀ.ಶಂ.ಪರಮಶಿವಯ್ಯ (೧೯೯೧–೯೫) ಎಚ್.ಜೆ.ಲಕ್ಕಪ್ಪಗೌಡ (೧೯೯೫–೯೮) ಕಾಳೇಗೌಡ ನಾಗವಾರ (೧೯೯೮–೨೦೦೧) ಹಿ.ಶಿ.ರಾಮಚಂದ್ರೇಗೌಡ (೨೦೦೧–೦೪) ಕೆರೆಮನೆ ಶಂಭುಹೆಗಡೆ (೨೦೦೫–೦೮) ಗೊ. ರು.ಚನ್ನಬಸಪ್ಪ (೨೦೦೮–೧೧), ಬಾನಂದೂರು ಕೆಂಪಯ್ಯ (೨೦೧೨ –೧೩), ಜಾನಪದ ಅಕಾಡೆಮಿ ಮೊದಲಿಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಎಂದಿದ್ದು ೨೦೦೮–೦೯ರಲ್ಲಿ ಎರಡು ಅಕಾಡೆಮಿಗಳನ್ನು ಪ್ರತ್ಯೇಕ ಅಕಾಡೆಮಿಗಳನ್ನಾಗಿ ಮಾಡಲಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯು ಜಾನಪದ ಸಾಹಿತ್ಯ ಮತ್ತು ಕಲೆಗಳನ್ನು ಪ್ರೋತ್ಸಾಹಿಸಲು ಪ್ರಸಿದ್ಧ ಜಾನಪದ ವಿದ್ವಾಂಸರು ಮತ್ತು ಕಲಾವಿದರನ್ನು ಪ್ರತಿವರ್ಷವೂ ಗೌರವಿಸಿ 'ಜಾನಪದ ತಜ್ಞ', ಹಾಗೂ 'ವಾರ್ಷಿಕ ಪ್ರಶಸ್ತಿ'ಗಳನ್ನೂ ನೀಡುತ್ತಿದೆ. ೨೦೧೧ರವರೆಗೆ ಸುಮಾರು ೮೦೦ ಜಾನಪದ ಗಣ್ಯರಿಗೆ, ಕಲಾವಿದರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಜಾನಪದ ತಜ್ಞ ಪ್ರಶಸ್ತಿ ವಿಜೇತರು:** ಸಿಂಪಿ ಲಿಂಗಣ್ಣ (೧೯೮೬), ಮತಿಘಟ್ಟ ಕೃಷ್ಣಮೂರ್ತಿ (೧೯೮೮), ದೇ.ಜವರೇಗೌಡ (೧೯೮೯), ಹೆಚ್.ಎಲ್.ನಾಗೇಗೌಡ(೧೯೯೦), ಹಾ.ಮಾ.ನಾಯಕ್ ಮತ್ತು ಬಿ.ಬಿ.ಹಂಡಿ (೧೯೯೧), ಕು.ಶಿ.ಹರಿದಾಸಭಟ್ಟ ಮತ್ತು ಕೆ.ಆರ್.ಲಿಂಗಪ್ಪ (೧೯೯೨), ಚಂದ್ರಶೇಖರ ಕಂಬಾರ ಮತ್ತು ಮುದೇನೂರು ಸಂಗಣ್ಣ(೧೯೯೭), ಎಂ.ಚಿದಾನಂದಮೂರ್ತಿ, ಪಿ.ಆರ್.ತಿಪ್ಪೇಸ್ವಾಮಿ ಮತ್ತು ಎನ್.ಆರ್.ನಾಯಕ್ (೧೯೯೪), ಜಿ.ನಾರಾಯಣ, ಗೊ. ರು.ಚನ್ನಬಸಪ್ಪ, ದೇವೇಂದ್ರಕುಮಾರ್ ಹಕಾರಿ, ಎಂ.ಜಿ.ಬಿರಾದಾರ, ಅಮೃತ ಸೋಮೇಶ್ವರ ಮತ್ತು ಸಿ.ಪಿ.ಕೃಷ್ಣಕುಮಾರ್ (೧೯೯೫), ಹಂ.ಪ.ನಾಗರಾಜಯ್ಯ, ರಾಮೇಗೌಡ (ರಾಗೌ), ಸೋಮಶೇಖರ ಇಮ್ರಾಪುರ ಮತ್ತು ಆರ್.ಸಿ.ಹಿರೇಮಠ (೧೯೯೬), ಬಿ.ಎ.ವಿವೇಕರೈ, ಬಸವರಾಜ ಮಲಶೆಟ್ಟಿ ಮತ್ತು ಪಿ.ಕೆ ರಾಜಶೇಖರ್ (೧೯೯೭), ಎಂ.ಎಂ. ಕಲಬುರ್ಗಿ, ಎಂ.ಬಿ.ನೇಗಿನಹಾಳ, ಟಿ.ಎನ್.ಶಂಕರನಾರಾಯಣ, ಡಿ.ಕೆ.ರಾಜೇಂದ್ರ ಮತ್ತು ಪಿ.ಕೆ.ಖಂಡೋಬ (೧೯೯೮), ಕ್ಯಾತನಹಳ್ಳಿ ರಾಮಣ್ಣ, ಶಾಂತಿನಾಯಕ್ ಮತ್ತು ಎ.ವಿ.ನಾವಡ (೧೯೯೯), ನಂ. ತಪಸ್ವೀಕುಮಾರ್, ಎಂ.ಎನ್.ವಾಲಿ ಮತ್ತು ಎಚ್.ಜೆ. ಲಕ್ಕಪ್ಪಗೌಡ (೨೦೦೦), ತಾಳ್ತಜೆ ಕೇಶವ ಭಟ್ಟ, ಸಿ.ಎಚ್.ಮಹದೇವನಾಯಕ್, ಎಂ.ಟಿ.ಧೂಪದ, ಟಿ.ಎಸ್.ರಾಜಪ್ಪ ಮತ್ತು ಎಂ.ಎ ಜಯಚಂದ್ರ (೨೦೦೧), ಸಿದ್ಧಲಿಂಗಯ್ಯ, ವಿಲಿಯಂ ಮಾಡ್ತ, ಶ್ರೀರಾಮ ಇಟ್ಟಣ್ಣನವರ್ (೨೦೦೨), ಚನ್ನಣ್ಣ ವಾಲೀಕಾರ, ಬಿ.ಎಸ್.ಸ್ವಾಮಿ, ನಲ್ಲೂರ್ ಪ್ರಸಾದ್ (೨೦೦೩), ಎಂ.ಜಿ.ಈಶ್ವರಪ್ಪ, ಶ್ರೀಕಂಠ ಕೂಡಿಗೆ, ಪ್ರಭಾಕರ ಜೋಶಿ ಇವರಿಗೆ ಪ್ರಶಸ್ತಿ ನೀಡಿದೆ. ೨೦೦೪ರಿಂದ ಜಾನಪದ ತಜ್ಞ ಪ್ರಶಸ್ತಿ ಕೊಡುವುದನ್ನು ನಿಲ್ಲಿಸಲಾಯಿತು. ಆದರೆ ಬಿ.ಎಸ್. ಗದ್ದಗೀಮಠ ಮತ್ತು ಜೀ.ಶಂ.ಪ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ಜಾನಪದ ವಿದ್ವಾಂಸರಿಗೆ ನೀಡಲಾರಂಭವಾಯಿತು. ಜಾನಪದ ಕ್ಷೇತ್ರ ತಜ್ಞರಿಗೆ ತಲಾ ೧೦ ಸಾವಿರ ನಗದು ಗೌರವಧನ, ಪ್ರಶಸ್ತಿ ಫಲಕ, ಕಲಾವಿದರಿಗೆ ಹಾಗೂ ಪುಸ್ತಕ ಬಹುಮಾನಕ್ಕೆ ತಲಾ ೫ ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತದೆ.

**ಗದ್ದಗೀಮಠ ಪ್ರಶಸ್ತಿ ವಿಜೇತರು:** ಕೆರೆಮನೆ ಮಹಾಬಲ ಹೆಗಡೆ (೨೦೦೪), ವೀರಣ್ಣ ದಂಡೆ (೨೦೦೫), ಹ.ಕ.ರಾಜೇ ಗೌಡ (೨೦೦೬), ಡಿ.ಬಿ.ನಾಯಕ್ (೨೦೦೭), ಸಿ.ಕೆ.ನಾವಲಗಿ (೨೦೦೮), ಡಾ. ಕಾಳೇಗೌಡ ನಾಗವಾರ (೨೦೦೯), ಡಾ. ಎಸ್.ಪಿ.ಪದ್ಮ ಪ್ರಸಾದ್ (೨೦೧೦), ಪ್ರೊ.ಸೂಗಯ್ಯ ಹಿರೇಮಠ (೨೦೧೧). ದೇಶಾಂತ ಹುಡಗಿ (೨೦೧೨), ಸಿದ್ದಪ್ಪ ಫಕೀರಪ್ಪ ಜಕಬಾಳ (೨೦೧೩), ಜಯಲಕ್ಷ್ಮೀ ಸೀತಾಪುರ (೨೦೧೪), ಇಂದಿರಾ ಹೆಗ್ಗಡೆ (೨೦೧೫).

**ಜೀಶಂಪ ಪ್ರಶಸ್ತಿ ವಿಜೇತರು:** ಹಿ.ಶಿ.ರಾಮಚಂದ್ರಗೌಡ(೨೦೦೪),ಎಂ.ಕೆ. ರಾಘವ ನಂಬಿಯಾರ್(೨೦೦೫), ಬಸವರಾಜ ನೆಲ್ಲಿಸರ(೨೦೦೬), ಜಿ.ಎಸ್.ಭಟ್ (೨೦೦೭), ವೈ.ಸಿ.ಭಾನುಮತಿ(೨೦೦೮), ಡಾ. ಕೃಷ್ಣಮೂರ್ತಿ ಹನೂರು (೨೦೦೯) ಡಾ.ಕೆ.ಆರ್.ಸಂಧ್ಯಾ ರೆಡ್ಡಿ (೨೦೧೦) ಡಾ.ಮೀರಾಸಾಬಿಹಳ್ಳಿ ಶಿವಣ್ಣ (೨೦೧೧). ಸೈಯದ್ ಜಮೀರುಲ್ಲಾ ಷರೀಫ್ (೨೦೧೨), ಸುಶೀಲ ಹೊನ್ನೆಗೌಡ (೨೦೧೩), ಎಚ್.ಎಂ. ಮಹೇಶ್ವರಯ್ಯ (೨೦೧೪), ಕೋಟಗಾನಹಳ್ಳಿ ರಾಮಯ್ಯ (೨೦೧೫). ಜಾನಪದ ಕ್ಷೇತ್ರ ತಜ್ಞರಿಗೆ ತಲಾ ೧೦ ಸಾವಿರ ನಗದು ಗೌರವಧನ, ಪ್ರಶಸ್ತಿ ಫಲಕ, ಕಲಾವಿದರಿಗೆ ಹಾಗೂ ಪುಸ್ತಕ ಬಹುಮಾನಕ್ಕೆ ತಲಾ ೫ ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತದೆ.

### ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕರ್ನಾಟಕದಲ್ಲಿ ವಾಸ್ತುಕಲೆ ವೈವಿಧ್ಯಮಯವಾಗಿರುವಂತೆ, ಶಿಲ್ಪಕಲೆಯೂ ವ್ಯಾಪಕವಾದುದಾಗಿದೆ. ನವಶಿಲಾಯುಗದಿಂದ ಹಿಡಿದು ಆಧುನಿಕ ಯುಗದವರೆಗೂ ನಿರಂತರವಾಗಿ ಬೆಳೆದು ಬಂದ ಹಿನ್ನೆಲೆ ಮತ್ತು ಪರಂಪರೆ ಇದೆ. ಇದನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದ ೧೦–೦೮–೧೯೯೬ರಲ್ಲಿ ಈ ಅಕಾಡೆಮಿ ಸ್ಥಾಪಿಸಲ್ಪಟ್ಟಿತು. ಶಿಲ್ಪಕಲೆಯು ಮೊದಲಿಗೆ ಲಲಿತಕಲಾ ಅಕಾಡೆಮಿಯ ಭಾಗವಾಗಿದ್ದಿತು. ೧೯೯೬ ರಿಂದ ಕರ್ನಾಟಕ ಶಿಲ್ಪ ಕಲಾ ಅಕಾಡೆಮಿಯು ಕಾರ್ಯಾರಂಭ ಮಾಡಿತು. ಶಿಲ್ಪ ಕಲಾವಿದರನ್ನು ಗೌರವಿಸುವುದಲ್ಲದೆ, ಶಿಲ್ಪ ಕಲಾ ಕಮ್ಮಟಗಳನ್ನು, ಪ್ರದರ್ಶನಗಳನ್ನು ಏರ್ಪಡಿಸುತ್ತಿದೆ. ಪಾರಂಪರಿಕ ಶಿಲ್ಪಗಳ ಕುರಿತಾದ ಪುಸ್ತಕಗಳು ಹಾಗೂ ಆಧುನಿಕ ಶಿಲ್ಪ ಕಲೆಯ ಕುರಿತಾದ ಗ್ರಂಥಗಳನ್ನು ಅಕಾಡೆಮಿಯು ಪ್ರಕಟಿಸುತ್ತಾ ಬಂದಿದೆ. ೧೯೬೫ರಿಂದ ೨೦೦೯ರ ವರೆಗೆ ಒಟ್ಟು ೭೮ ಶಿಲ್ಪಿಗಳನ್ನು ಗುರುತಿಸಿ ಸನ್ಮಾನಿಸಿದೆ. ಸೆಂಟ್ರಲ್ ಟೆಕ್ಸ್‌ಟೈಲ್ ಕಮೀಷನ್ ಫಾರ್ ಹ್ಯಾಂಡಿಕ್ರಾಫ್ಟ್ಸ್ (ಕರಕುಶಲ ವಸ್ತುಗಳ ಕೇಂದ್ರ ಜವಳಿ ಆಯೋಗ) ಸಂಸ್ಥೆಯು ೨೦೦೩ರಲ್ಲಿ ಪರಮೇಶ್ವರಾಚಾರ್ ಅವರಿಗೆ ರೂ. ೭.೫ ಲಕ್ಷಗಳ ನಗದು ಬಹುಮಾನ ನೀಡಿ ಅವರ ವಿಶಿಷ್ಟ ಸಾಧನೆಗಾಗಿ ಸನ್ಮಾನಿಸಿತು. ೨೦೦೪ರಲ್ಲಿ ನೀಲಕಂಠಾಚಾರ್ ಅವರಿಗೆ 'ಶಿಲ್ಪಗುರು' ಎಂಬ ಬಿರುದನ್ನು ನೀಡಿ ಗೌರವಿಸಿತು. ಪಾರಂಪರಿಕವಾಗಿ ಬೆಳೆದು ಬಂದಿರುವ ದೇವಾಲಯ ಶಿಲ್ಪಕ್ಕೆ ಸಂಬಂಧಿಸಿದಂತೆ, ಶಿಲೆ,ತಾಮ್ರ, ಪಂಚಲೋಹ, ಉಬ್ಬಚ್ಚುಗಳು, ಮರ, ಸುದ್ದೆಮಣ್ಣು ಮತ್ತು ಗಾರೆಗಳಲ್ಲಿನ ಶಾಸ್ತ್ರೀಯ ಶಿಲ್ಪ ಪ್ರಕಾರಗಳನ್ನು ಉಳಿಸಿ–ಬೆಳೆಸಲು, ಶಿಲ್ಪಶಾಸ್ತ್ರ ವಿದ್ವಾಂಸರ ಕೊರತೆ ನೀಗಿಸುವುದು., ಶಿಲ್ಪಶಿಬಿರ, ಕಾಷ್ಠಶಿಲ್ಪ ಶಿಬಿರ, ಟೆರ್ರಾಕೋಟಾ ಕಾರ್ಯಾಗಾರ, ಶಿಲ್ಪ ಕಲಾವಿದರ ಸಮ್ಮೇಳನ, ಕರ್ನಾಟಕ ಶಿಲ್ಪೋತ್ಸವ, ಶಿಲ್ಪ, ಚಿತ್ರ, ಗ್ರಾಫಿಕ್ ಕಲಾಶಿಬಿರಗಳು ಸಾಹಿತಿ ಕಲಾವಿದರಭಾವಶಿಲ್ಪ ರಚನೆ, ಶಿಲ್ಪ ಕಲಾ ಪ್ರದರ್ಶನ, ಪ್ರವಾಸಾನುದಾನ, ಪುಸ್ತಕ ಪ್ರಕಟಣೆ, ಸಿಮೆಂಟ್ ಶಿಲ್ಪ

ಕಾರ್ಯಾಗಾರ, ರೇಖಾ ವರ್ಣ ಮತ್ತು ಭಿತ್ತಿಚಿತ್ರ ರಚನಾಶಿಬಿರ ಮುಂತಾದವುಗಳು.

**ಇದುವರೆಗಿನ ಅಧ್ಯಕ್ಷರುಗಳು :** ಕೆ.ಶ್ಯಾಮರಾಯ ಆಚಾರ್ಯ (೧೯೯೫–೧೯೯೮) ಸಿ.ಪರಮೇಶ್ವರಾಚಾರ್ಯ (೧೯೯೮–೨೦೦೧) ಎನ್.ಜಿ.ನೀಲಕಂಠಾಚಾರ್ (೨೦೦೨–೨೦೦೫) ವೆಂಕಟಾಚಲಪತಿ (೨೦೦೫–೨೦೦೮) ಜಿ. ಜ್ಞಾನಾನಂದ (೨೦೦೮–೨೦೧೩), ಮಹದೇವಪ್ಪ ಶಂಭುಲಿಂಗಪ್ಪ ಶಿಲ್ಪಿ (೨೦೧೪ ರಿಂದ)

**ಜಕಣಚಾರಿ ಪ್ರಶಸ್ತಿ ವಿಜೇತರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ೧೯೯೫ರಲ್ಲಿ ವಿಶಿಷ್ಟ ಶಿಲ್ಪಕಲಾ ಸಾಧನೆ ಮಾಡಿದ ಶಿಲ್ಪ ಕಲಾವಿದರಿಗೆ ಈ ಪ್ರಶಸ್ತಿ ಪ್ರಾರಂಭಿಸಿದ್ದು ಅದು 'ಒಂದು ಲಕ್ಷ ನಗದು ಒಳಗೊಂಡಿದೆ. ಪ್ರಸಿದ್ಧ ಶಿಲ್ಪಿಗಳಾದ ಸಿ.ಪರಮೇಶ್ವರಾಚಾರ್ (೧೯೯೫), ಎನ್.ಜಿ. ನೀಲಕಂಠಾಚಾರ್ (೧೯೯೬), ಜಿ.ಡಿ.ಮಾಯಚಾರ್ (೧೯೯೭), ವಿ.ರಾಮಚಂದ್ರಶೆಟ್ಟಿ ಗುಡಿಗಾರ್ (೧೯೯೮), ಕೆ.ಶಾಮಾಚಾರ್ಯ (೧೯೯೯), ಎಂ.ಪರಮೇಶ್ವರಾಚಾರ್ಯ (೨೦೦೦), ಧನಂಜಯ ಶಿಲ್ಪಿ (೨೦೦೧), ಎನ್.ಕೆ. ಮೃತ್ಯುಂಜಯಾಚಾರ್ (೨೦೦೨), ಆರ್.ಕಾಳಾಚಾರ್ (೨೦೦೩), ಕೆ.ಕಾಶಿನಾಥ್ (೨೦೦೪), ಸಿ.ಸಿದ್ದಲಿಂಗಯ್ಯ (೨೦೦೫), ಬಿ.ಎನ್. ಚನ್ನಪ್ಪಾಚಾರ್ಯ (೨೦೦೬), ಮಲ್ಲೋಜ ಭೀಮರಾವ್(೨೦೦೭) ಆರ್. ವೀರಭದ್ರಾಚಾರ್ (೨೦೦೮), ಪುಟ್ಟಣ್ಣಾಚಾರ್(೨೦೦೯), ವೆಂಕಟಾಚಲಪತಿ (೨೦೧೦) ಕನಕಮೂರ್ತಿ (೨೦೧೧), ಜಿ.ಬಿ.ಹಂಸಾನಂದಾಚಾರ್ಯ (೨೦೧೨), ಬಸಪ್ಪ ಮೋನಪ್ಪ, ಬಡಿಗೇರ (೨೦೧೩), ಷಣ್ಮುಖಪ್ಪ ಕಾಳೆಪ್ಪ ಯರಕದ (೨೦೧೪), ಎನ್.ಪುಷ್ಪಮಾಲಾ (೨೦೧೫). ಅವರುಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಕರ್ನಾಟಕ ಉರ್ದು ಅಕಾಡೆಮಿ

ಕರ್ನಾಟಕದಲ್ಲಿ ಉರ್ದುಭಾಷೆ ಮತ್ತು ಉರ್ದು ಸಾಹಿತ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ೧೯೭೭ರಲ್ಲಿ ಕರ್ನಾಟಕ ಸರ್ಕಾರವು 'ಕರ್ನಾಟಕ ಉರ್ದು ಅಕಾಡೆಮಿ'ಯನ್ನು ಸ್ಥಾಪಿಸಿತು. ಉರ್ದು ನರ್ಸರಿ ಪದ್ಯಗಳ ಪ್ರಕಟಣೆ, ಉರ್ದು–ಕನ್ನಡ, ಕನ್ನಡ–ಉರ್ದು ನಿಘಂಟು ಪ್ರಕಟಣೆ, ಮುಖ್ಯಕೃತಿಗಳನ್ನು ಉರ್ದುಭಾಷೆಗೆ ಭಾಷಾಂತರ ಮಾಡುವುದು, ಮುಷಾಯಿರಾ. ಶಾಮ್–ಎ–ಗಜಲ್, ಕವ್ವಾಲಿ, ಉರ್ದು ಗ್ರಂಥಾಲಯ ಸ್ಥಾಪನೆ, ಉರ್ದು ಸಾಹಿತ್ಯ ಸಂಸ್ಕೃತಿ, ಭಾಷೆಗೆ ಕೊಡುಗೆ ನೀಡಿದವರ ಸ್ಮರಣೆ, ಉರ್ದು ಪತ್ರಿಕೋದ್ಯಮ, ಉರ್ದು ಸಾಹಿತ್ಯ 'ಅಜ್ಕಾರ್' ಎಂಬ ತ್ರೈಮಾಸಿಕ ಪತ್ರಿಕೆ ಪ್ರಕಟಣೆ. ವಾರ್ಷಿಕ ಪ್ರಶಸ್ತಿ ನೀಡುವುದು, ಸಾಹಿತಿ ಕಲಾವಿದರಿಗೆ ಧನಸಹಾಯ, ಉರ್ದು ಶಾಲೆಗಳಿಗೆ ಉರ್ದು ಪುಸ್ತಕಗಳ ಕೊಡುಗೆ ಇವೇ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ೧೯೮೮ ರಿಂದ ೨೦೧೦ರವರೆಗೆ ೮೦ ಜನ ಪ್ರಸಿದ್ಧ ಬರಹಗಾರರಿಗೆ ಹಾಗೂ ಹತ್ತು ಜನ ಪ್ರಸಿದ್ಧ ಉರ್ದು ಲೇಖಕರ ಪುಸ್ತಕಗಳಿಗೆ ಪ್ರಶಸ್ತಿಯನ್ನು ನೀಡಲಾಗಿದೆ.

**ಇದುವರೆಗಿನ ಅಧ್ಯಕ್ಷರು:** ಹಬೀಬ್ ತನ್ವೀರ್ (೧೯೭೭–೭೯) ಮಹಮ್ಮದ್ ಅಯಾಜ್ (೧೯೭೯–೮೦, ೧೯೮೩–೮೬, ೧೯೯೧–೯೫) ಮೂರು ಅವಧಿ) ಫಾಹ್ಮಿದಾಬೇಗಂ (೧೯೮೦–೮೨) ಲಾಯ್ಕ್ ಖಾದಿಜಾ (೧೯೮೭–೯೦) ಅಬ್ದುಲ್ ಗಫಾರ್ ಷಕೀಲ್ (೧೯೯೫–೨೦೦೧) ಎಂ.ಎ.ವಾಹಬ್ ಅಂದಲೀಬ್ (೨೦೦೧–೦೪) ಪ್ರೊ.ನೂರುದ್ಧೀನ್ (೨೦೦೪–೦೮) ಖಲೀಲ್ ಉರ್ ರಹಮಾನ್ (೨೦೦೮–೨೦೧೦) ಅಮ್ಜದ್ ಹುಸೇನ್ ಹಫೀಜ಼ ಕರ್ನಾಟಕಿ (೨೦೧೦–೨೦೧೩), ಫೌಜ಼ಿಯ ಚೌಧುರಿ (೨೦೧೪ರಿಂದ ೧೩), ಅಜ಼ೀಜ಼ುಲ್ಲಾ ಬೇಗ್ (೨೦೧೬ ರಿಂದ) ಹಾಲಿ ಉರ್ದು ಅಕಾಡೆಮಿಯನ್ನು ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆ ಅಧೀನಕ್ಕೆ ಒಳಪಡಿಸಲಾಗಿದೆ.

## ಕೊಂಕಣಿ ಸಾಹಿತ್ಯ ಅಕಾಡೆಮಿ

ಕೊಂಕಣಿ ಭಾಷಿಕರು ಹಾಗೂ ಕೊಂಕಣಿ ಸಾಹಿತಿಗಳ ಹೋರಾಟ ಮತ್ತು ಅಪೇಕ್ಷೆ ಮೇರೆಗೆ ೧೯೯೪ರಲ್ಲಿ 'ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ' ಪ್ರಾರಂಭವಾಯಿತು. ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ತೋರಿದ ಕೊಂಕಣಿಗರಿಗೆ ಪ್ರಶಸ್ತಿ ನೀಡಿ ಗೌರವಿಸುವುದು, ಪುಸ್ತಕ ಪುರಸ್ಕಾರ, ಗೋಷ್ಠಿಗಳು, ಕೊಂಕಣಿ ಸಾಂಸ್ಕೃತಿಕ ಭಾಷಾ ಬಾಂಧವ್ಯ, ಮಕ್ಕಳ ಸಾಹಿತ್ಯ, ಕಮ್ಮಟ, ಜನಪದ ಸಾಹಿತ್ಯ ಗೋಷ್ಠಿ, ಕವಿಗೋಷ್ಠಿ, ಕೊಂಕಣಿ ದಿನಾಚರಣೆ, ಕೊಂಕಣಿ ಕಲಾ ಸಂಸ್ಕೃತಿ ದರ್ಶನ, ಅನುವಾದ ಕಮ್ಮಟಗಳು ಕೊಂಕಣಿ ಸಿರಿಸಂಪದ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಕರ್ನಾಟಕ ರಾಜ್ಯ ಸರ್ಕಾರವು ೧೯೯೪ರಲ್ಲಿ ಕೊಂಕಣಿ ಅಕಾಡೆಮಿಯನ್ನು ಪ್ರತಿಷ್ಠಾಪಿಸಿದೆ. ೧೯೯೫–೯೬ ರಿಂದ ೨೦೦೯–೧೦ ರವರೆಗೆ ೭೯ ಶ್ರೇಷ್ಠ ಲೇಖಕರಿಗೆ, ಕೊಂಕಣಿ ವಾರ್ತಾಪತ್ರಿಕೆಗಳಿಗೆ ಸಂಸ್ಥೆಗಳಿಗೆ ಕೊಂಕಣಿ ಅಕಾಡೆಮಿಯು ಪ್ರಶಸ್ತಿಗಳನ್ನು ನೀಡಿದೆ. ಈ ಅಕಾಡೆಮಿಯ ಕಛೇರಿ ಮಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ.

**ಇದುವರೆಗಿನ ಅಧ್ಯಕ್ಷರು:** ವಿ.ಜೆ.ಪಿ.ಸಲ್ಡಾನ (೧೯೯೪–೯೫) ಬಿ.ವಿ.ಬಾಳಿಗಾ (೧೯೯೫–೯೭) ಬಸ್ತಿ ವಾಮನ ಶೆಣೈ (೧೯೯೭–೦೧) ಎಂ.ಅಲೆಕ್ಸಾಂಡರ್ ಎಫ್ ಡಿಸೋಜ (೨೦೦೧–೨೦೦೪) ಎರಿಕ್ ಒಝೇರಿಯಾ (೨೦೦೪–೦೮) ನಾರಾಯಣ ಖಾರ್ವಿ (೨೦೦೯–೧೧) ಕಾಸರಗೋಡು ಚಿನ್ನಾ (೨೦೧೨ ರಿಂದ)

## ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳು ಭಾಷೆಯ ಸಾಹಿತ್ಯ ಮತು ಸಂಸ್ಕೃತಿಯ ಬೆಳವಣಿಗೆಗಾಗಿ ತುಳು, ಕೊಡವ ಮತ್ತು ಕೊಂಕಣಿ ಅಕಾಡೆಮಿಗಳು ಏಕಕಾಲಕ್ಕೆ ಸ್ಥಾಪಿಸಲ್ಪಟ್ಟವು. ಇದು ೧೯೯೪ರ ಏಪ್ರಿಲ್ ೨೧ರಂದು ಮಂಗಳೂರಿನಲ್ಲಿ ಪ್ರಾರಂಭವಾಯಿತು. ತುಳು ಜಾನಪದ ಅಧ್ಯಯನ, ತುಳುನಾಡಿಗೆ ಸಂಬಂಧಿಸಿದ ಚಿತ್ರಗಳ ಪ್ರದರ್ಶನ, ಅನುವಾದ ಕಮ್ಮಟ, ಆಕಾಶವಾಣಿ ನಾಟಕ ರಚನಾ ಕಮ್ಮಟ, ಕವಿಗೋಷ್ಠಿ, ವಿಚಾರ ಸಂಕಿರಣ, ಗ್ರಂಥಪ್ರಕಟಣೆ, ತುಳುಸಾಹಿತ್ಯ ಕಮ್ಮಟ, 'ಮದಿಪು' ಎಂಬ ತ್ರೈಮಾಸಿಕ, ರಾಣಿಅಬ್ಬಕ್ಕ ಉತ್ಸವ, ಕರಾವಳಿ ಕಲೋತ್ಸವ, ಸಾಂಸ್ಕೃತಿಕ ಉತ್ಸವ, ತುಳು ಫೆಲೋಶಿಪ್, ನಾಟಕೋತ್ಸವ, ಕೋಟಿ ಚನ್ನಯ, ಸಿರಿ–ಪಾಡ್ದನ, ತುಳು ಸಮಾವೇಶ, ಮದಿಪು ನುಡಿಕಟ್ಟುಗಳ ದಾಖಲೀಕರಣ ಕಾರ್ಯಾಗಾರ, ತ್ರಿಭಾಷಾ ಯಕ್ಷಗಾನ, ತಾಳಮದ್ದಲೆ ಮುಂತಾದ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಈ ತುಳು ಅಕಾಡೆಮಿಯು ೧೯೯೫ರಿಂದ ೨೦೧೦ರವರೆಗೆ ತುಳು ಸಾಹಿತ್ಯದ ೬೦ ಮಂದಿ ಗಣ್ಯರನ್ನು ಸನ್ಮಾನಿಸಿದೆ. ಈ ಸನ್ಮಾನಕ್ಕೆ ತುಳು ಸಂಸ್ಥೆಗಳೂ ಭಾಜನವಾಗಿವೆ. ಈ ಅಕಾಡೆಮಿಯ ಕಛೇರಿ ಮಂಗಳೂರಿನಲ್ಲಿದೆ.

**ಇದುವರೆಗಿನ ಅಧ್ಯಕ್ಷರು:** ಬಿ.ಎ.ವಿವೇಕ ರೈ(೧೯೯೫-೧೯೯೮), ಅ.ಬಾಲಕೃಷ್ಣ ಪೊಳಲಿ (೧೯೯೮-೨೦೦೧), ವಾಮನ ನಂದಾವರ (೨೦೦೧-೦೪) ಎಂ.ಕೆ.ಸೀತಾರಾಮ ಕುಲಾಲ(೨೦೦೪-೨೦೦೮)ಪಾಲ್ತಾಡಿ ರಾಮಕೃಷ್ಣ ಆಚಾರ್(೨೦೦೮-೨೦೧೦) ಉಮಾನಾಥ ಎ.ಕೋಟ್ಯಾನ್ (೨೦೧೧ರಿಂದ).

## ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

೧೯೯೪ರಲ್ಲಿ ಕೊಡವ ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗಾಗಿ ಇದೂ ಕೂಡ ಸ್ಥಾಪಿತವಾಯಿತು. ಕೊಡವ ಪ್ರಚಾರ ಆಂದೋಲನ, ಜಾನಪದ ಅಧ್ಯಯನ, ನಾಟಕ, ಸಾಹಿತ್ಯ, ಕ್ರೀಡಾ ಮುಂತಾದವುಗಳ ಅಭಿವೃದ್ಧಿ, ಶಿಬಿರ, ತರಬೇತಿ,ಕೊಡವ ನೃತ್ಯ, ಕಲೆ, ಗ್ರಂಥ ಪ್ರಕಟಣೆ, ಕ್ಯಾಸೆಟ್ ಬಿಡುಗಡೆ, ಆಟ್-ಪಾಟ್ ಕಾರ್ಯಕ್ರಮ ಸಂಶೋಧನೆ ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅಕಾಡೆಮಿಯು ೧೯೯೫-೯೬ ರಿಂದ ೨೦೧೦-೧೧ ವರೆಗೆ ೮೯ ಗಣ್ಯರಿಗೆ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕೇಂದ್ರ ಕಚೇರಿಯು ಮಡಿಕೇರಿಯಲ್ಲಿದೆ.

**ಇದುವರೆಗಿನ ಅಧ್ಯಕ್ಷರುಗಳು:** ಉಳ್ಳಿಯಡ ಎಂ.ಪೂವಯ್ಯ (೧೯೯೪-೯೮), ಮೇಕೇರಿರ ಕೆ.ಕಾರ್ಯಪ್ಪ (೧೯೯೮-೨೦೦೧) ಬಾಚರಣಿಯಂಡ ಪಿ.ಅಪ್ಪಣ್ಣ (೨೦೦೧-೨೦೦೧) ಚೆರಿಯಪಂಡ ರಾಜಪ್ಪ (ರಾಜಾನಂಜಪ್ಪ) (೨೦೦೨-೦೪) ಉಳ್ಳಿಯಡ ಡಾ ಟಿ. ಪೂವಯ್ಯ (೨೦೦೫-೨೦೦೮)ಐಮುಡಿಯಂಡ ರಾಣಿ ಮಾಚಯ್ಯ (೨೦೦೯-೧೧) ಅಡ್ಡಂಡ ಕಾರ್ಯಪ್ಪ (೨೦೧೨ ರಿಂದ)

## ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ಸರ್ಕಾರದ ಸಂ. ಕ.ಸಂ.ವಾ.ಪ್ರ ೧೭೨ ಕರ ೨೦೦೭ ದಿನಾಂಕ ೦೩-೧೦-೦೭ರ ಆದೇಶದಂತೆ ಸ್ಥಾಪಿಸಲಾಯಿತು. ದಿನಾಂಕ ೦೫-೦೨-೨೦೦೯ರಿಂದ ಚಾಲನೆ ನೀಡಿತು. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಪ್ರೆಸಿಡಿಯಂ ಕಾಂಪ್ಲೆಕ್ಸ್, ಅತ್ತಾವರ-ನಂದಿಗುಡ್ಡ ರಸ್ತೆ, ಮಂಗಳೂರು -೫೭೫೦೦೧, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬ್ಯಾರಿ ಭಾಷೆಯ ಅಭಿವೃದ್ಧಿ, ನಾಟಕ ಪ್ರದರ್ಶನ, ಬ್ಯಾರಿ ಸಾಹಿತ್ಯ ಸ್ಪರ್ಧೆ, ಬ್ಯಾರಿ ಜನಪದ ಉತ್ಸವ, ಜಾನಪದ ಮೇಳ, ಬ್ಯಾರಿ ಸಾಂಸ್ಕೃತಿಕ ಉತ್ಸವ, ಸಾಂಸ್ಕೃತಿಕ ಸಂಭ್ರಮ (ಪಡುಬಿದ್ರಿ) ರಾಜ್ಯಮಟ್ಟದ ಬ್ಯಾರಿ ಮಹಿಳಾ ಸಮ್ಮೇಳನ, ಮಂಗಳೂರು ಜಿಲ್ಲಾ ಮಟ್ಟದ ದಫ್ ಸ್ಪರ್ಧೆ, ಬ್ಯಾರಿ ಸಾಹಿತ್ಯ ಕಮ್ಮಟ, ವಿಚಾರಗೋಷ್ಠಿ ಮೈಸೂರಿನಲ್ಲಿ ಬ್ಯಾರಿ ಸಾಹಿತ್ಯ ಸಾಂಸ್ಕೃತಿಕ ಸಂಭ್ರಮ, ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆ ಸ್ಪರ್ಧೆ, ಬ್ಯಾರಿ ಸಂಗೀತ, ಹಾಸ್ಯ ಸಂಜೆ, ಬ್ಯಾರಿ ಜಾನಪದ ಕ್ರೀಡಾಕೂಟ, ಮುಂಬಯಿಯಲ್ಲಿ ಬ್ಯಾರಿ ತುಳು ಸಂಗಮ. ಪಂಚಭಾಷಾ ಸೌಹಾರ್ದ ಸಂಗಮ, ಬ್ಯಾರಿ ಸಾಂಸ್ಕೃತಿಕ ಸಂದೋಲ ಮುಂತಾದ ಕಾರ್ಯಕ್ರಮಗಳನ್ನು ಇದುವರೆಗೂ ನಡೆಸಲಾಗಿದೆ. ೧೫ ಕೃತಿಗಳನ್ನು ಪ್ರಕಟಿಸಿದೆ. ೨೦೦೮ರಲ್ಲಿ ಗೌರವ ಪ್ರಶಸ್ತಿ ಪಡೆದವರು ಮಹಮ್ಮದ್ ಕುಳಾಯಿ, (ಬ್ಯಾರಿ ಸಾಹಿತ್ಯ ಕ್ಷೇತ್ರ), ಯು.ಎ.ಕಾಸೀಮ್ ಉಳ್ಳಾಲ್ (ಬ್ಯಾರಿ ಭಾಷಾ), ಇಬ್ರಾಹಿಂ ತಣ್ಣೀರುಬಾವಿ(ಬ್ಯಾರಿ ಕಲೆ), ೨೦೦೯ರಲ್ಲಿ ಗೌರವ ಪ್ರಶಸ್ತಿ ಪಡೆದವರೆಂದರೆ ಅಹ್ಮದ್ ನೂರಿ(ಬ್ಯಾರಿ ಸಾಹಿತ್ಯ ಕ್ಷೇತ್ರ), ಅಬ್ದುಲ್ ಹಸನ್ ಮುಹಮ್ಮದ್ ಮೌಲವಿ(ಬ್ಯಾರಿ ಭಾಷಾ ಕ್ಷೇತ್ರ), ಇಸ್ಮಾಯಿಲ್ ಉಸ್ತಾದ್(ಬ್ಯಾರಿ ಜಾನಪದ ಕ್ಷೇತ್ರ), ೨೦೧೦ರಲ್ಲಿ ಗೌರವ ಪ್ರಶಸ್ತಿ ಪಡೆದವರು ಕೆ.ಪಿ.ಅಬ್ದುಲ್ ಖಾದರ್ ಕುತ್ತೆತ್ತೂರು (ಸಾಹಿತ್ಯ), ಮುಹಮ್ಮದ್ ಮಾರಿಪಳ್ಳ(ಭಾಷೆ), ರಹೀಂ ಬಿಸಿರೋಡ್(ಕಲೆ). ಈ ಪ್ರಶಸ್ತಿಗಳು ೧೦ ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ. ಇತ್ತೀಚೆಗೆ ಬ್ಯಾರಿ ಭಾಷೆಯ ಚಲನಚಿತ್ರಕ್ಕೆ ರಾಷ್ಟ್ರೀಯ ಸ್ವರ್ಣಕಮಲ ಪ್ರಶಸ್ತಿ ಲಭ್ಯವಾಗಿದೆ.

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನವು ಪ್ರಗತಿ ಮತ್ತು ಅವಿಷ್ಕಾರಗಳಿಗೆ ದ್ಯೋತಕವಾಗಿರುವು ದರಿಂದ ನಾಡು, ನುಡಿ ಸಂಸ್ಕೃತಿಗಳಂತೆಯೇ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯೂ ಪ್ರಮುಖವಾದ ಅಂಶವಾಗಿದೆ. ೦೧-೦೯-೨೦೦೫ರಲ್ಲಿ ಪ್ರಾರಂಭಿಸಲ್ಪಟ್ಟ ಈ ಅಕಾಡೆಮಿಗೆ ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಅಧ್ಯಕ್ಷರಾದರು. ೨೦೧೧ನೇ ಸಾಲಿಗೆ, ಪ್ರೊ.ರೊದ್ದಂ ನರಸಿಂಹ, ಪ್ರೊ.ಶ್ರೀನಿವಾಸ, ಕೆ.ಸೈದಾಪುರ, ಪ್ರೊ.ಎಸ್.ಸಿ.ಶರ್ಮ, ಡಾ.ರಾಜಶೇಖರ್ ಮುದ್ದು, ಪ್ರೊ.ಶೋಭನಾ ನರಸಿಂಹನ್ ಇವರುಗಳು ರಾಜ್ಯ ವಿಜ್ಞಾನಿ ಪ್ರಶಸ್ತಿ ಪಡೆದಿದ್ದಾರೆ.

## ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯ ವಿಕಸನ ಮತ್ತು ಬೆಳವಣಿಗೆಗಾಗಿ ರೂಪುಗೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು ಸ್ವಾಯತ್ತ ಸಂಸ್ಥೆಯಾಗಿದೆ. ಸರ್ಕಾರದ ಅನುದಾನ ಮತ್ತು ಸಹಕಾರಗಳಿಂದ ಅನೇಕ ಕಾರ್ಯಕ್ರಮ ಹಾಗೂ ಸಮ್ಮೇಳನಗಳನ್ನು ಆಯೋಜಿಸುತ್ತದೆ. ೧೯೧೫ರಲ್ಲಿ ಸ್ಥಾಪಿತವಾದ ಇದು ಎಲ್ಲಾ ಪ್ರಕಾರಗಳಲ್ಲಿಯೂ ಸಾವಿರಾರು ಕೃತಿಗಳನ್ನು ಪ್ರಕಟಿಸಿದೆ. ಇದುವರೆಗೂ ಅಂದರೆ ೨೦೧೬ರವರೆಗೆ ೨೩ ಜನ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಹೋಗಿರುತ್ತಾರೆ. ೧೯೧೫ರಲ್ಲಿ ಪ್ರಾರಂಭವಾದ ಅಖಿಲ ಭಾರತ ಕನ್ನಡ ಸಮ್ಮೇಳನವು ೨೦೧೬ರವರೆಗೆ ನಾಡಿನ ನಾನಾ ಭಾಗಗಳಲ್ಲಿ ೮೨ ಬಾರಿ ನಡೆದಿವೆ. ಬಿ.ಸರೋಜಾದೇವಿ ಪ್ರಶಸ್ತಿ (೧೯೯೭) ೧೦ ಸಾವಿರ ನಗದು, ಚಾವುಂಡರಾಯ ಪ್ರಶಸ್ತಿ (೧೯೯೫) ೨೦ ಸಾವಿರ ನಗದು, ಡಾ.ಟಿ.ವಿ.ವಿ.ಪ್ರಶಸ್ತಿ (ಪ್ರತಿ ಮೂರು ವರ್ಷಕ್ಕೊಮ್ಮ ೨೫ ಸಾವಿರ ನಗದು) ಹೀಗೆ ಸಾವಿರಾರು ದತ್ತಿ ಬಹುಮಾನ ಸ್ಥಾಪಿಸಿ ಅನೇಕ ಸಾಹಿತ್ಯಾಭಿಮಾನಿಗಳು ಕನ್ನಡಪ್ರೇಮ ಮೆರೆದಿದ್ದಾರೆ. ಸಂಶೋಧನಾ ಲೇಖನ ಪ್ರಕಟಿಸಲು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯನ್ನು ತ್ರೈಮಾಸಿಕವಾಗಿ ೧೯೧೬ರಲ್ಲಿ ಪ್ರಾರಂಭಿಸಿದ್ದು, ೧೯೩೮ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಎಂದಾಯಿತು. ೧೯೪೧ರಲ್ಲಿ ಷಾಣ್ಮಾಸಿಕವಾಗಿ ೧೯೪೨ರಲ್ಲಿ ಮತ್ತೆ ತ್ರೈಮಾಸಿಕವಾಗಿ, ಪುನಃ ೧೯೫೧ರಿಂದ ಷಾಣ್ಮಾಸಿಕ ವಾಣಿ ೨೦೦೧ರಿಂದ ತ್ರೈಮಾಸಿಕವಾಗಿದೆ. ಪರಿಷತ್ತು ತನ್ನದೇ ಆದ ಲಾಂಛನ ಹಾಗೂ ಬಾವುಟವನ್ನು ಹೊಂದಿದ್ದು ೧೯೯೦ರಿಂದ ಅಂಗೀಕರಿಸಿದೆ. ಪರಿಷತ್ತಿನ ಸಮಾಚಾರ ಪತ್ರಿಕೆಯಾಗಿ ೧೯೩೮ರಲ್ಲಿ 'ಕನ್ನಡನುಡಿ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಲಾಯಿತು. ಇದರ ಮೊದಲ ಸಂಪಾದಕರಾಗಿದ್ದವರು ಅ.ನ.ಕೃ. ೧೯೩೯ರಲ್ಲಿ ಕೆಲಕಾಲ ಪಾಕ್ಷಿಕ ಪತ್ರಿಕೆಯಾಗಿ, ೧೯೫೦ರ ಆಗಸ್ಟ್ ನಿಂದ ಮಾಸಪತ್ರಿಕೆಯಾಗಿ ೧೯೬೮ರಿಂದ ಮತ್ತೆ ಪಾಕ್ಷಿಕವಾಗಿ. ಈಗ ಮಾಸಿಕ ಪತ್ರಿಕೆಯಾಗಿ ಬರುತ್ತಿದೆ. ಜನಸಾಮಾನ್ಯರಲ್ಲಿ ಕನ್ನಡ ಭಾಷಾ ಸಾಹಿತ್ಯಾಧ್ಯಯನದಲ್ಲಿ ಆಸಕ್ತಿ ಮೂಡಿಸಲು ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ೧೯೪೦ರಲ್ಲಿ 'ಕನ್ನಡ ಅಣುಗ', ಕನ್ನಡ

ಕಾವ, ಕಾಜಾಣ ಪರೀಕ್ಷೆಗಳನ್ನು ಪ್ರಾರಂಭಿಸಲಾಯಿತು. ೧೯೬೮ರಲ್ಲಿ 'ಕನ್ನಡ ಅಣುಗ' ಪರೀಕ್ಷೆಯನ್ನು ಕೈಬಿಡಲಾಯಿತು.

೧೯೬೬ರಲ್ಲಿ 'ಕನ್ನಡ ರತ್ನ' ಪರೀಕ್ಷೆ ಪ್ರಾರಂಭವಾಯಿತು. ೧೯೯೨ರಿಂದ ಕನ್ನಡ ಪ್ರವೇಶ ಎಂಬ ಪ್ರಾಥಮಿಕ ಹಂತದ ಪರೀಕ್ಷೆ ಪ್ರಾರಂಭವಾಗಿದೆ. ನಿಘಂಟು, ಪ್ರಸಿದ್ಧ ಹಿರಿಯ ಸಾಹಿತಿಗಳಿಗೆ 'ಗೌರವ ಸದಸ್ಯತ್ವ' ನೀಡಿ ಗೌರವಿಸಲಾಗುತ್ತಿದ್ದು ೧೯೮೫ರಿಂದ ೨೦೧೦ರವರೆಗೆ ೧೯ ಸಾಹಿತಿಗಳಿಗೆ ಈ ಗೌರವ ಸಂದಿದೆ. ಅನೇಕ ಪ್ರಶಸ್ತಿ ಹಾಗೂ ದತ್ತಿ ಪುಸ್ತಕ ಬಹುಮಾನ, ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಗಳಿವೆ. ೨೦೦೮ರಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸ್ಥಾಪಿಸಿರುವ'ನೃಪತುಂಗ ಸಾಹಿತ್ಯ ಪ್ರಶಸ್ತಿ'(ಐದು ಲಕ್ಷ ನಗದು) ಹಾಗು 'ಅರಳುಮಲ್ಲಿಗೆ' ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ದೇ. ಜವರೇಗೌಡ (೨೦೦೮), ಪಾಟೀಲ ಪುಟ್ಟಪ್ಪ (೨೦೦೮),. ಜಿ.ಎಸ್. ಶಿವರುದ್ರಪ್ಪ(೨೦೧೦), ಸಿ.ಪಿ.ಕೃಷ್ಣಕುಮಾರ್ (೨೦೧೦), ಎಂ.ಎಂ.ಕಲ್ಬುರ್ಗಿ (೨೦೧೧) ಸಾರಾ ಅಬೂಬಕರ್ (೨೦೧೨), ಬರಗೂರು ರಾಮಚಂದ್ರಪ್ಪ (೨೦೧೩), ಕುಂ ವೀರಭದ್ರಪ್ಪ (೨೦೧೪), ಟಿ.ವಿ.ವೆಂಕಟಾಚಲಶಾಸ್ತ್ರೀ(೨೦೧೫) ಈವರೆಗೆ 'ನೃಪತುಂಗ ಪ್ರಶಸ್ತಿ' ಪಡೆದಿದ್ದಾರೆ.

### ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ

೨೦೧೨-೧೩ರಲ್ಲಿ ಪ್ರಾರಂಭವಾದ ಈ ಸಂಶೋಧನಾ ಕೇಂದ್ರವು ಕನಕದಾಸರ ಬದುಕು ಸಾಹಿತ್ಯ ಹಾಗೂ ಜೀವನ ದರ್ಶನವನ್ನು ಕುರಿತಂತೆ ಬಹುಮುಖಗಳಲ್ಲಿ ಅಧ್ಯಯನ ನಡೆಸುತ್ತಿದೆ. ಕನ್ನಡ ನಾಡು ಕಂಡ ಅಪೂರ್ವ ದಾಶನಿಕ ಕವಿ ಕನಕದಾಸರ ಸಮಗ್ರ ವ್ಯಕ್ತಿತ್ವವನ್ನು ಪರಿಚಯಿಸಲು ವಿಚಾರ ಸಂಕಿರಣ, ಕಮ್ಮಟ, ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಯುವ ಲೇಖಕರನ್ನು ಸಂಶೋಧನೆಗೆ ತೊಡಗಿಸಿಕೊಳ್ಳುವಿಕೆ, ಕನಕದಾಸರ ಸಮಗ್ರ ಸಾಹಿತ್ಯವನ್ನು ೧೫ ಭಾಷೆಗಳಿಗೆ ಅನುವಾದಿಸುವ ಯೋಜನೆಗಳಲ್ಲಿ ಕಾರ್ಯಪ್ರವೃತ್ತವಾಗಿದೆ.

ಅಧ್ಯಯನ ಕೇಂದ್ರವು ನಾಲ್ಕು ವರ್ಷಗಳಲ್ಲಿ ಸಾಹಿತ್ಯಾಸಕ್ತರಿಗೆ, ಸಂಶೋಧಕರಿಗೆ ಸಂಸ್ಕೃತಿ ಚಿಂತಕರಿಗೆ, ವಿದ್ಯಾರ್ಥಿಗಳಿಗೆ ಕನಕದಾಸರ ಸಾಹಿತ್ಯ-ಸಂಗೀತ ಕುರಿತಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ಅಧ್ಯಯನ ಕೇಂದ್ರದ ಎರಡು ಪ್ರಮುಖ ಯೋಜನೆಗಳೆಂದರೆ ಕನಕದಾಸರ ಸಮಗ್ರ ಸಾಹಿತ್ಯವನ್ನು ೧೫ ಭಾಷೆಗಳಿಗೆ ಅನುವಾದಿಸುವುದು ಮತ್ತು ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಸುಮಾರು ಐವತ್ತು ಸಂಪುಟಗಳಲ್ಲಿ ಹೊರತರುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಈ ಕೇಂದ್ರದ ಅಧ್ಯಕ್ಷರಾಗಿರುತ್ತಾರೆ.

### ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ, ಕಲೆ, ಜಾನಪದಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರದ ಅಧಿಸೂಚನೆ ಮೇರೆಗೆ ಶ್ರೀ ಎನ್.ಎಸ್.ದೇವಿ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ೮ ಜನ ಸದಸ್ಯರನ್ನು ಒಳಗೊಂಡಂತೆ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ೨೦೧೨ರಲ್ಲಿ ಸ್ಥಾಪನೆಯಾಗಿರುತ್ತದೆ. ಅರೆಭಾಷೆ ಜನಾಂಗದ ಪುರಾತನ ಕಾಲದ ಆಚಾರ ವಿಚಾರಗಳ ನಂಟು ಬೆಸೆದು ಕೊಂಡಿರುವ ಐನ್‌ಮನೆ ಬಗ್ಗೆ ಜನಾಂಗ ಬಾಂಧವರಿಗೆ ತಿಳಿಸುವ ನಿಟ್ಟಿನಲ್ಲಿ "ಐನ್‌ಮನೆ ಸಂಸ್ಕೃತಿ ಜಂಬರ" ಎಂಬ ಕಾರ್ಯಕ್ರಮ, ಅರೆಭಾಷಿಕರು ತಮ್ಮ ಭಾಷೆಯನ್ನು ಹಾಗೂ ಸಂಸ್ಕೃತಿಯ ಸೊಗಡನ್ನು ಬಿಂಬಿಸುವ ನಿಟ್ಟಿನಲ್ಲಿ "ಸಾಂಸ್ಕೃತಿಕ ಸಮ್ಮಿಲನ" ಎಂಬ ಜಿಲ್ಲಾ ಮಟ್ಟದ ಕಾರ್ಯಕ್ರಮ, ಹಿರಿಯ ತಲೆಮಾರಿನವರು ಆಚರಿಸಿಕೊಂಡು ಬಂದಂತಹ ಸಂಸ್ಕೃತಿಯ ವೈಶಿಷ್ಟ್ಯವನ್ನು ಬಿಂಬಿಸುವಂತಹ ಆಚಾರಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅರೆಭಾಷೆ ಸಂಸ್ಕೃತಿ ಕುರಿತಾದ ಚಿತ್ರಕಲೆ ಶಿಬಿರ, ಅರೆಭಾಷೆ ಬರಹಗಾರರ ಕಲಾವಿದರ ಮತ್ತು ಚಿತ್ರಕಲಾ ಜಾನಪದ ಸಮಾವೇಶ, ಅರೆಭಾಷಾ ಚಿಂತನ ಹಾಗೂ ತಜ್ಞರ ತರಬೇತಿ ಶಿಬಿರ ಇನ್ನಿತರ ಕಾರ್ಯಕ್ರಮಗಳು ಯೋಜನೆಯಲ್ಲಿವೆ.

### ಕರ್ನಾಟಕದಲ್ಲಿ ಪತ್ರಿಕೋದ್ಯಮ

ಕನ್ನಡ ವೃತ್ತ ಪತ್ರಿಕೆಗಳ ಇತಿಹಾಸವು ಒಂದೂವರೆ ಶತಮಾನಕ್ಕೂ ಮೀರಿದ್ದಾಗಿದೆ. ಕನ್ನಡದ ಮೊಟ್ಟ ಮೊದಲ ವೃತ್ತಪತ್ರಿಕೆಯು ಜುಲೈ ೧೮೪೩ರಲ್ಲಿ 'ಮಂಗಳೂರು ಸಮಾಚಾರ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಬಾಸೆಲ್ ಮಿಷನ್ನಿನ ಪಾದ್ರಿ ರೆವರೆಂಡ್ ಹರ್ಮನ್ ಮೊಗ್ಲಿಂಗ್ ಅದರ ಸಂಪಾದಕರಾಗಿದ್ದರು. ಈ ಕಲ್ಲಚ್ಚಿನ ಮುದ್ರಣ ಸಾಹಸದ ಹಿಂದಿದ್ದ ಮುಖ್ಯ ಉದ್ದೇಶ ಕ್ರೈಸ್ತ ಧರ್ಮ ಪ್ರಚಾರವಾಗಿದ್ದರೂ, ಅದು ಸುದ್ದಿಗಳನ್ನೂ ಒಳಗೊಂಡಿರುತ್ತಿತ್ತು. ಸ್ವಲ್ಪ ಕಾಲದಲ್ಲಿಯೆ ಇತರರು ಮೊಗ್ಲಿಂಗ್‌ನನ್ನು ಅನುಸರಿಸಿದರು ಮತ್ತು ಅನೇಕ ವೃತ್ತ ಪತ್ರಿಕೆಗಳು ಹುಟ್ಟಿಕೊಂಡವು.

ಹಿಂದಿನ ಮೈಸೂರು ಸಂಸ್ಥಾನದಲ್ಲಿ, ಮೈಸೂರು ನಗರವು ಎಲ್ಲ ಸಾಹಿತ್ಯಿಕ ಮತ್ತು ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ತತ್ಫಲವಾಗಿ ಅಲ್ಲಿ ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು ಹುಟ್ಟಿಕೊಂಡದ್ದು ಸಹಜ. 'ಮೈಸೂರು ವೃತ್ತಾಂತ ಬೋಧಿನಿ', ಮತ್ತು 'ಕರ್ನಾಟಕ ಪ್ರಕಾಶಿಕ' ಎಂಬವುಗಳು ಅವುಗಳಲ್ಲಿ ಕೆಲವು. ಅದೇ ಅವಧಿಯಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಮೈಸೂರು, ಶಿವಮೊಗ್ಗ, ಕಾರವಾರ ಮತ್ತು ಬೆಂಗಳೂರಿನಿಂದ ವೃತ್ತ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಪ್ರಕಟಗೊಂಡವು.

ಮೈಸೂರಿನ ಅತ್ಯಂತ ಹಿರಿಯರೆನಿಸಿ 'ತಾತಯ್ಯ' ಎಂದು ಪ್ರಸಿದ್ಧರಾಗಿದ್ದ ಎಂ.ವೆಂಕಟಕೃಷ್ಣಯ್ಯ ಅವರು ಪತ್ರಿಕಾ ವೃತ್ತಿಯಲ್ಲಿ ನಿಷ್ಣಾತರೆನಿಸಿದ್ದರು. 'ಹಿತ ಬೋಧಿನಿ' ಎಂಬ ಪ್ರತಿಷ್ಠಿತ ಪತ್ರಿಕೆಯ ಮೂಲಕ ೧೮೮೩ರಲ್ಲಿ ಪತ್ರಿಕೋದ್ಯಮಕ್ಕೆ ಧೈರ್ಯ ಮಾಡಿ ಮುನ್ನುಗ್ಗಿದ್ದರು. ಆ ಪತ್ರಿಕೆಯನ್ನು ಎಂ.ಬಿ.ಶ್ರೀನಿವಾಸ ಅಯ್ಯಂಗಾರ್ ಮತ್ತು ಎಂ.ಎಸ್.ಪುಟ್ಟಣ್ಣನವರು ಸಂಪಾದಿಸುತ್ತಿದ್ದರು. ವೆಂಕಟಕೃಷ್ಣಯ್ಯನವರು ೧೮೮೫ರಲ್ಲಿ 'ವೃತ್ತಾಂತ ಚಿಂತಾಮಣಿ' ಎಂಬ ಸ್ವಂತ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಓದುಗರು ಅವರ ಮೊನಚಾದ ಸಂಪಾದಕೀಯ, ಟೀಕೆ ಟಿಪ್ಪಣಿಗಳನ್ನು ಓದಿ ರೋಮಾಂಚನಗೊಳ್ಳುತ್ತಿದ್ದರು. ಮೈಸೂರಿನಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಅನೇಕ ಪತ್ರಿಕೆಗಳನ್ನು ಆರಂಭಿಸಿದರು. ೧೮೮೬ರಲ್ಲಿ 'ಮೈಸೂರ್ ಹೆರಾಲ್ಡ್' ಎಂಬ ಇಂಗ್ಲಿಷ್ ಪತ್ರಿಕೆಯನ್ನು, ೧೯೧೨ರಲ್ಲಿ ಇಂಗ್ಲಿಷ್ ಮಾಸಿಕ 'ವೆಲ್ತ್ ಆಫ್ ಮೈಸೂರ್'

ಹಾಗೂ 'ನೇಚರ್ ಕ್ಯೂರ್' ಎಂಬ ಪತ್ರಿಕೆಗಳನ್ನು ಆರಂಭಿಸಿದರು. ೧೯೧೨ರಲ್ಲಿಯೆ 'ಸಂಪದಾಭ್ಯುದಯ' ಮತ್ತು ಸಾಧ್ವಿ ಎಂಬ ಕನ್ನಡ ದಿನಪತ್ರಿಕೆಯನ್ನು ಆರಂಭಿಸಿದರು. ೧೯೧೨ರಲ್ಲಿ ಕನ್ನಡ ವಾರ ಪತ್ರಿಕೆಯಾಗಿ ಆರಂಭಗೊಂಡ ಸಾಧ್ವಿ ಪತ್ರಿಕೆಯು ದಿನ ಪತ್ರಿಕೆಯಾಗಿ ಇತ್ತೀಚಿನವರೆಗೂ ಪ್ರಕಟವಾಗುತ್ತಿತ್ತು. ಸುಧಾರಣಾ ಚಿಂತನೆಗಳನ್ನು ಹೊಂದಿದ್ದ ವೆಂಕಟಕೃಷ್ಣಯ್ಯನವರು ಕನ್ನಡ ಪತ್ರಿಕೋದ್ಯಮದ ಮೇಲೆ ಅಚ್ಚಳಿಯದಂತಹ ಕುರುಹುಗಳನ್ನು ಬಿಟ್ಟು ಹೋಗಿದ್ದಾರೆ.

೨೦ನೆಯ ಶತಮಾನದ ಆರಂಭದ ರಾಜಕೀಯ ಆಂದೋಲನ ಕನ್ನಡ ಪತ್ರಿಕೋದ್ಯಮದ ರೂಪವನ್ನು ಬದಲಾಯಿಸಿಬಿಟ್ಟವು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಭಾರತದ ರಾಜಕೀಯ ರಂಗಕ್ಕೆ ಮಹಾತ್ಮ ಗಾಂಧಿಯವರ ಪ್ರವೇಶ ಇವು ಪತ್ರಿಕಾ ಕ್ಷೇತ್ರದ ಮೇಲೆ ದಟ್ಟ ಪ್ರಭಾವವನ್ನು ಬೀರಿದವು. ಅನೇಕ ಉತ್ಸಾಹಿ ತರುಣರಿಗೆ ವೃತ್ತ ಪತ್ರಿಕೆಗಳು ರಾಷ್ಟ್ರದ ಸ್ವಾತಂತ್ರ್ಯದ ಕಲ್ಪನೆಯನ್ನು ಕುರಿತು ಬೋಧಿಸಲು ಶಕ್ತಿಯುತವಾದ ಮಾಧ್ಯಮಗಳಾದವು. ಹುಬ್ಬಳ್ಳಿಯ 'ಕನ್ನಡ ಕೇಸರಿ', ಧಾರವಾಡದ 'ಚಂದ್ರೋದಯ' (೧೯೧೩), ಹಾಗೂ ಕೆರೂರು ವಾಸುದೇವಾಚಾರ್ಯರ 'ಶುಭೋದಯ' (೧೯೧೭) 'ಸುಚಿತ್ರ ಭಾರತ' (೧೯೧೩) 'ಕರ್ಮವೀರ' (೧೯೨೧), ಧಾರವಾಡದ 'ವಿಜಯ' (೧೯೨೧), ಬಾಗಲ ಕೋಟೆಯ 'ಕನ್ನಡಿಗ' (೧೯೨೫), ಮುಂತಾದ ಪತ್ರಿಕೆಗಳು ರಾಷ್ಟ್ರೀಯ ಚಳವಳಿಗೆ ಹೆಚ್ಚಿನ ಬೆಂಬಲವನ್ನು ನೀಡಿದವು. ಕನ್ನಡದ ಪ್ರಸಿದ್ಧ ಸಾಹಿತಿ ಡಿ.ವಿ.ಗುಂಡಪ್ಪನವರೂ ಕೂಡ ಶ್ರೇಷ್ಠ ಪತ್ರಕರ್ತರಾಗಿದ್ದರು. ಅವರ ಪತ್ರಿಕೋದ್ಯಮದ ಸಾಹಸವಾಗಿ, ಬೆಂಗಳೂರಿನಿಂದ ಕನ್ನಡ ದೈನಿಕವಾಗಿ 'ಭಾರತಿ' (೧೯೦೭), ಪಾಕ್ಷಿಕವಾಗಿ 'ಮೈಸೂರು ಟೈಮ್ಸ್' (೧೯೦೯) ಮಾಸಿಕವಾಗಿ 'ಅರ್ಥಸಾಧಕ ಪತ್ರಿಕಾ'(೧೯೧೫), ಆಂಗ್ಲ ಭಾಷೆಯ ಪಾಕ್ಷಿಕ ಪತ್ರಿಕೆ 'ಕರ್ನಾಟಕ' (೧೯೧೨), ಹೊರಬಂದವು. ಹಿಂದುಳಿದ ವರ್ಗಗಳ ಚಳವಳಿಯ ನೇತಾರರಾಗಿದ್ದ ಪಂಡಿತಪ್ಪ ಚಿಕ್ಕೋಡಿ ಅವರು 'ವಿಭಾಕರ' ಎಂಬ ಕನ್ನಡಾಂಗ್ಲ ವಾರಪತ್ರಿಕೆಯನ್ನು ಬೆಳಗಾವಿಯಲ್ಲಿ ೧೯೧೭–೧೮ರಲ್ಲಿ ಆರಂಭಿಸಿದರು. ೧೯ನೇ ಶತಮಾನದ ಅಂತ್ಯದಲ್ಲಿ ಮೈಸೂರಿನಿಂದ ಪ್ರಕಟಣೆ ಆರಂಭಿಸಿದ 'ಮೈಸೂರು ಸ್ಟಾರ್' ಪತ್ರಿಕೆಯೂ ಕೂಡ ಹಿಂದುಳಿದ ವರ್ಗಗಳ ದನಿಯಾಗಿ ಕೆಲಸ ಮಾಡಿತು.

ಪಿ.ಆರ್. ರಾಮಯ್ಯ ಅವರ 'ತಾಯಿನಾಡು' ೧೯೨೬ರಲ್ಲಿ ಮೈಸೂರಿನಲ್ಲಿ ವಾರಪತ್ರಿಕೆಯಾಗಿ ಆರಂಭಗೊಂಡಿತು ಅದು ಅಚಲ ರಾಷ್ಟ್ರೀಯವಾದಿ ಪತ್ರಿಕೆಯಾಗಿತ್ತು. ನಂತರ ೧೯೨೮ರಲ್ಲಿ ಮೈಸೂರಿನಿಂದ ಬೆಂಗಳೂರಿಗೆ ವರ್ಗಾವಣೆಗೊಂಡು ದಿನಪತ್ರಿಕೆಯಾಗಿ ಪರಿವರ್ತನೆಗೊಂಡಿತು. ೧೯೩೧ರಲ್ಲಿ (ಸಿ.ಹಯವದನ ರಾವ್ ಸಂಪಾದಕತ್ವದಲ್ಲಿ) ಬೆಂಗಳೂರಿನಿಂದ ವಾರಪತ್ರಿಕೆ ಹಾಗೂ ದಿನಪತ್ರಿಕೆಯಾಗಿ ಪ್ರಕಟವಾಗತೊಡಗಿದ 'ದೇಶಬಂಧು' ಪತ್ರಿಕೆಯಲ್ಲಿ ಎನ್.ಎಸ್.ಸೀತಾರಾಮಶಾಸ್ತ್ರಿ ಅವರು ಕೆಲಸ ನಿರ್ವಹಿಸಿದ್ದಾರೆ. ನಂತರ ಎಸ್.ಎಸ್.ವೆಂಕೋಬರಾಯರು ಆ ಕೆಲಸವನ್ನು ಮುಂದುವರೆಸಿದರು. ೧೯೨೮ರಲ್ಲಿ ಬೆಂಗಳೂರಿನಿಂದ ಆರಂಭವಾದ ಎಂ.ಸೀತಾರಾಮಶಾಸ್ತ್ರಿಯವರ 'ವೀರಕೇಸರಿ' ಪತ್ರಿಕೆಯು ಹರಿತವಾದ ಸಂಪಾದಕೀಯಗಳಿಂದ ಪ್ರಸಿದ್ಧವಾಗಿತ್ತು. ಆಡಳಿತಗಾರರನ್ನು ವಿವಿಧ ಟೀಕಾಸ್ತ್ರಗಳ ಮೂಲಕ ಪೇಚಿಗೆ ಸಿಲುಕಿಸುತ್ತಿದ್ದ ತಿ.ತಾ.ಶರ್ಮರು ಸ್ವಾತಂತ್ರ್ಯ ಪ್ರಿಯರೆನಿಸಿ ಪ್ರಸಿದ್ಧರಾಗಿದ್ದರು. ೧೯೨೫ರಲ್ಲಿ ಪ್ರಕಟವಾದ ತಮ್ಮ 'ವಿಶ್ವ ಕರ್ನಾಟಕ' ದಲ್ಲಿ ಪತ್ರಿಕಾ ಬರಹಗಳ ಮೂಲಕ ಆಡಳಿತಕ್ಕೆ ಚುರುಕು ಮುಟ್ಟಿಸುತ್ತಿದ್ದರು. ಪತ್ರಿಕಾ ಕಾರ್ಯಗಳಲ್ಲಿ ತೊಡಗಲು ಕೆಲಕಾಲ ಶರ್ಮರಿಗೆ ಅಸಾಧ್ಯವಾದಾಗ ಸಿದ್ಧವನಹಳ್ಳಿ ಕೃಷ್ಣಶರ್ಮರು 'ವಿಶ್ವ ಕರ್ನಾಟಕ' ಪತ್ರಿಕೆಯನ್ನು ನಡೆಸಿದರು. ಬಿ.ಎನ್.ಗುಪ್ತ ಅವರು ಮದರಾಸಿನಿಂದ ಹೊರತಂದ 'ಪ್ರಜಾಮತ' (೧೯೩೧) ಪತ್ರಿಕೆ ಕೂಡ ಆಡಳಿತಕ್ಕೆ ನಿರಂತರವಾಗಿ ಕಣ್ಣುಬೇನೆ ತರಿಸುತ್ತಿತ್ತು. ಆದರೆ ಆ ಪತ್ರಿಕೆ ಬೆಂಗಳೂರಿಗೆ ವರ್ಗಾವಣೆಗೊಂಡ ಮೇಲೆ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಅಲ್ಲದೆ ಪತ್ರಿಕೆಯನ್ನು ನಿಷೇಧದಿಂದ ತಪ್ಪಿಸಲು ಬಿ.ಎನ್.ಗುಪ್ತ ಅವರು 'ಪ್ರಜಾಮಿತ್ರ' ಎಂಬ ಶೀರ್ಷಿಕೆಯಲ್ಲಿ ಹುಬ್ಬಳ್ಳಿಯಿಂದ ಪ್ರಕಟಿಸಲಾರಂಭಿಸಿದರು. ೧೯೩೪ರಲ್ಲಿ 'ಜನವಾಣಿ' ಎಂಬ ಸಂಜೆ ದೈನಿಕವನ್ನು ಕನ್ನಡದಲ್ಲಿ ತರಲಾರಂಭಿಸಿದರು. 'ಮಂಗಳೂರಿನ ಸ್ವದೇಶಾಭಿಮಾನಿ' (೧೯೦೭) 'ನಡೆಗನ್ನಡಿ' ಮಾಸಿಕ ಪತ್ರಿಕೆ 'ವಿಕಟ ವಿನೋದಿನಿ', 'ಕೊರವಂಜಿ' ಇತ್ಯಾದಿ ಪತ್ರಿಕೆಗಳು ಪ್ರಕಟವಾಗಲಾರಂಭಿಸಿದುವು. 'ವಿಕಟ ವಿನೋದಿನಿ' ಮತ್ತು 'ಕೊರವಂಜಿ' ಪತ್ರಿಕೆಗಳು ಹಾಸ್ಯಕ್ಕೆ ಮೀಸಲಾದ ಮಾಸ ಪತ್ರಿಕೆಯಾಗಿದ್ದವು.

ಯಾವಾಗ ರಾಷ್ಟ್ರೀಯತಾವಾದ ಚಳವಳಿಯ ಕಾವು ತಾರಕಕ್ಕೇರಿತೋ ಆಗ ಅನೇಕ ಸಾಹಿತ್ಯಕ ಪತ್ರಿಕೆಗಳೂ ತಮ್ಮ ಪ್ರಸಾರ ಸಂಖ್ಯೆಯನ್ನೂ, ಮುಂದಾಳತ್ವವನ್ನೂ ಹೆಚ್ಚಿಸಿಕೊಂಡವು. ಅವುಗಳಲ್ಲಿ ಮುಖ್ಯವಾದವೆಂದರೆ ಧಾರವಾಡದ ಆಲೂರು ವೆಂಕಟರಾಯರ 'ಜಯಕರ್ನಾಟಕ' (೧೯೨೨) ಅಗಡಿಯ ಗಳಗನಾಥರ 'ಸದ್ಬೋಧ ಚಂದ್ರಿಕೆ' (೧೯೦೭), ಧಾರವಾಡದ 'ಜಯಂತಿ' (೧೯೩೮), ಬೆಂಗಳೂರಿನ 'ಪ್ರಬುದ್ಧ ಕರ್ನಾಟಕ' (೧೯೩೨), 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' (೧೯೧೬), ಧಾರವಾಡದ 'ಜೀವನ' (೧೯೪೦) ಪತ್ರಿಕೆಗಳಾಗಿದ್ದುವು. 'ಜೀವನ' ಪತ್ರಿಕೆಯು ಮುಂದೆ ಬೆಂಗಳೂರಿಗೆ ವರ್ಗಾವಣೆಗೊಂಡಿತು. ಪ್ರಸಿದ್ಧ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅದರ ಸಂಪಾದಕರಾಗಿದ್ದರು.

ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಚಳವಳಿಯ ನೇತೃತ್ವವನ್ನು 'ಸಂಯುಕ್ತ ಕರ್ನಾಟಕ' ಪತ್ರಿಕೆಯು ವಹಿಸಿತು. ೧೯೨೯ರಲ್ಲಿ ಅದು ಕೆಲವು ಉತ್ಸಾಹಶೀಲ ವ್ಯಕ್ತಿಗಳ ತಂಡದಿಂದ ಬೆಳಗಾವಿಯಲ್ಲಿ ವಾರ ಪತ್ರಿಕೆಯಾಗಿ ಪ್ರಕಟಗೊಂಡಿತು. ಕಬ್ಬೂರ್ ಮಾಧವರಾವ್, ರಾಮರಾವ್ ಹುಕ್ಕೇರಿಕರ್ ಮತ್ತು ರಂಗನಾಥ ರಾಮಚಂದ್ರ ದಿವಾಕರ್ ಅವರು ಆ ಪತ್ರಿಕೆಯನ್ನು ಕೆಲಕಾಲ ನಡೆಸಿದರು. ೧೯೩೩ರಲ್ಲಿ ದಿವಾಕರರ ಲೋಕ ಶಿಕ್ಷಣ ಟ್ರಸ್ಟ್ ಸಂಸ್ಥೆಯು ಆ ಪತ್ರಿಕೆಯನ್ನು ಕೈಗೆ ತೆಗೆದುಕೊಂಡು ಹುಬ್ಬಳ್ಳಿಯಿಂದ ದಿನಪತ್ರಿಕೆಯಾಗಿ ಪ್ರಕಟಿಸಲಾರಂಭಿಸಿತು. ೧೯೫೯ರಲ್ಲಿ ಅದರ ಬೆಂಗಳೂರು ಆವೃತ್ತಿಯು ಆರಂಭವಾಯಿತು. ಹನುಮಂತರಾವ್ ಮೊಹರೆಯವರು 'ಸಂಯುಕ್ತ ಕರ್ನಾಟಕ' ಪ್ರಗತಿ ಹೊಂದುವಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸಿದರು. ಆರ್.ಆರ್.ದಿವಾಕರ್ ಸಂಪಾದಕತ್ವದಲ್ಲಿ ಆಂಗ್ಲ ವಾರಪತ್ರಿಕೆ 'ನವಶಕ್ತಿ'ಯು ಧಾರವಾಡದಿಂದ ೧೯೨೩ರಲ್ಲಿ ಆರಂಭಗೊಂಡಿತು. ಪಾಟೀಲ್ ಪುಟ್ಟಪ್ಪನವರು ಹುಬ್ಬಳ್ಳಿಯಿಂದ ೧೯೫೪ರಿಂದ 'ಪ್ರಪಂಚ' ವಾರಪತ್ರಿಕೆಯನ್ನು ಮತ್ತು ೧೯೫೯ರಿಂದ 'ವಿಶ್ವವಾಣಿ' ಎಂಬ ದಿನಪತ್ರಿಕೆಯನ್ನು ಹೊರತರುತ್ತಿದ್ದು, ಅವರೇ ಸಂಪಾದಕರಾಗಿರುವರು. ೧೯೫೬ರಿಂದ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ 'ಕಸ್ತೂರಿ', ಮಣಿಪಾಲದಿಂದ ೧೯೭೩ರಿಂದ ಬರುತ್ತಿರುವ 'ತುಷಾರ' ಕರ್ನಾಟಕದ ಜನಪ್ರಿಯ

ಕನ್ನಡ ಮಾಸ ಪತ್ರಿಕೆಗಳಾಗಿವೆ. ಬೆಂಗಳೂರಿನಿಂದ ಪ್ರಸಿದ್ಧ ಕಥೆಗಾರ ಭಾರತೀಪ್ರಿಯರ ಸಂಪಾದಕತ್ವದಲ್ಲಿ ಬರುತ್ತಿದ್ದ 'ಕೈಲಾಸ್' ಮಾಸಪತ್ರಿಕೆಯೂ ಜನಪ್ರಿಯ ಮಾಸಪತ್ರಿಕೆಯಾಗಿತ್ತು.

ಬೆಂಗಳೂರಿನ ದಿ ಪ್ರಿಂಟರ್ಸ್ (ಪ್ರೈವೇಟ್) ಲಿಮಿಟೆಡ್ ಎಂಬ ಜಾಯಿಂಟ್ ಸ್ಟಾಕ್ ಕಂಪೆನಿಯು 'ಪ್ರಜಾವಾಣಿ' ಕನ್ನಡ ದೈನಿಕ 'ಡೆಕ್ಕನ್ ಹೆರಾಲ್ಡ್' ಆಂಗ್ಲ ಭಾಷಾ ದೈನಿಕಗಳನ್ನು ೧೯೪೮ರಲ್ಲಿ ಆರಂಭಿಸಿ ಆ ವೃತ್ತ ಪತ್ರಿಕೆಗಳ ಮೂಲಕ ಇತಿಹಾಸವನ್ನೇ ನಿರ್ಮಿಸಿತು. ಇಂದು ಈ ಸಂಸ್ಥೆಯ ಇತರ ಪ್ರಕಟಣೆಗಳು ಅತ್ಯಧಿಕ ಸಂಖ್ಯೆಯ ಪತ್ರಿಕಾ ಪ್ರಸಾರ ಪಡೆದಿದ್ದು ರಾಜ್ಯದಲ್ಲಿ ಬೃಹತ್ ಸಂಸ್ಥೆಯಾಗಿ ಬೆಳೆದಿದೆ.

'ಸುಧಾ' ಕನ್ನಡದ ವಾರಪತ್ರಿಕೆ ಮತ್ತು 'ಮಯೂರ' ಕನ್ನಡ ಮಾಸಪತ್ರಿಕೆಗಳು ಈ ಸಂಸ್ಥೆಯ ಇತರ ಪ್ರಕಟಣೆಗಳು. ಎಕ್ಸ್‌ಪ್ರೆಸ್ ಗ್ರೂಪ್ ವೃತ್ತ ಪತ್ರಿಕೆಗಳ ಗುಂಪಿನಿಂದ 'ಕನ್ನಡ ಪ್ರಭ' ಕನ್ನಡ ದೈನಿಕವಾಗಿ ಪ್ರಕಟವಾಗುತ್ತಿದೆ. ೧೯೬೭ರ ನವೆಂಬರ್ ೪ ರಂದು ಅದರ ಮೊದಲ ಸಂಚಿಕೆ ಎನ್.ಎಸ್.ಸೀತಾರಾಮ ಶಾಸ್ತ್ರಿ ಅವರ ಸಂಪಾದಕತ್ವದಲ್ಲಿ ಹೊರ ಬಂದಿತು.

ಮೈಸೂರು ನಗರದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಸಂಜೆ ದೈನಿಕಗಳು ಹಾಗೂ ಇತರೆ ನಿಯತಕಾಲಿಕೆಗಳು, ಮತ್ತು ಜರ್ನಲ್‌ಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ 'ಮೈಸೂರು ಪತ್ರಿಕೆ' (೧೯೪೧), 'ವರ್ತಮಾನ' (೧೯೪೭), 'ವಿಶ್ವದೂತ' (೧೯೬೨), 'ಅಶೋಕ' (೧೯೬೪), 'ರಾಜ್ಯಧರ್ಮ' (೧೯೬೭), 'ಸುಧರ್ಮ' (೧೯೭೦), 'ಅರುಣ' (೧೯೪೭) ಮತ್ತು 'ವಿಜಯ' (೧೯೭೦), 'ಸಂಸ್ಕೃತ ದಿನಪತ್ರಿಕೆಗಳು', 'ಇಂಡಿಪೆಂಡೆಂಟ್' (೧೯೬೭) ಮತ್ತು 'ಸಂಕ್ರಾಂತಿ' (೧೯೩೬) ಇತ್ಯಾದಿಗಳು ಸೇರಿವೆ. 'ಸಾಧ್ವಿ' ಪತ್ರಿಕೆಯನ್ನು ನಡೆಸುತ್ತಿದ್ದ ಅಗರಂ ರಂಗಯ್ಯನವರು ಡಾ.ಅನಿಬೆಸೆಂಟರಿಂದ ಪತ್ರಿಕೋದ್ಯಮದ ತರಬೇತಿ ಪಡೆದಿದ್ದರು.

ಎಂಬತ್ತರ ದಶಕದ ಆರಂಭದವಧಿಯು ಸುದ್ದಿ ಪೂರ್ವ ಪರೀಕ್ಷೆಗೆ (ಸೆನ್ಸಾರ್ ಶಿಪ್) ಒಳಪಟ್ಟಿತ್ತು. ೧೯೭೫ರ ಕಾಲವು ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಂದರ್ಭವಾಗಿದ್ದು ಪತ್ರಿಕೋದ್ಯಮದಲ್ಲಿ ಒಂದು ರೀತಿ ಉಸಿರು ಕಟ್ಟಿಸುವ ವಾತಾವರಣವಾಗಿತ್ತು. ತುರ್ತುಪರಿಸ್ಥಿತಿಯಲ್ಲಿ ವಿಶೇಷವಾಗಿ ಪತ್ರಿಕೋದ್ಯಮವು ಅವಮಾನಕಾರೀ ನಿರ್ಬಂಧಗಳಿಂದಾಗಿ ಬಾಗಿ ಹೋಗುವಂಥ ಒತ್ತಡದಲ್ಲಿ ಸಿಲುಕಿ ಸಾಗಬೇಕಿತ್ತು. ಆ ಸಂದರ್ಭದ ಇನ್ನೊಂದು ಮುಖ್ಯ ಸಂದರ್ಭವೆಂದರೆ ದೇಶದಲ್ಲಿ ದೀರ್ಘಕಾಲ ಏಕಪಕ್ಷದ ಆಡಳಿತಕ್ಕೆ ಪರಿಣಾಮಕಾರಿಯಾದ ವಿರೋಧದ ಅವಶ್ಯಕತೆ ಒದಗಿ ಬರಲು ಸುದ್ದಿ ಮಾಧ್ಯಮದ ಪಾತ್ರದ ಅಗತ್ಯತೆ ಉಂಟಾದುದು. ಬಹುಶಃ ಆ ಸಂದರ್ಭದಲ್ಲಿ ಜನರಲ್ಲಿ ಉಂಟಾದ ಕ್ರಾಂತಿಕಾರಕ ಉತ್ಸಾಹದ ಹಾಗೂ ಮನೋಭಾವದ ಜಾಡನ್ನು ಹಿಡಿದು ಸ್ಫೂರ್ತಿ ಪಡೆದು, ಯಾವುದೇ ಮುಲಾಜಿಗೆ ಒಳಪಡದೇ ಕಟುವಾಗಿ ಟೀಕಿಸುವುದರಲ್ಲಿ ೧೯೭೮ ರಲ್ಲಿ ಪ್ರಾರಂಭವಾದ ವಾರಪತ್ರಿಕೆಯಾದ ಲಂಕೇಶ್ ಪತ್ರಿಕೆ ಯಶಸ್ವಿಯಾಯಿತು. ಇಂತಹ ಪ್ರಯತ್ನ ಹಿಂದೆ ಇರಲಿಲ್ಲವೆಂದಲ್ಲ. ಶೇಷಪ್ಪನವರು ಏಕವ್ಯಕ್ತಿ ಸ್ವರೂಪದಲ್ಲಿ ಪ್ರಕಟಿಸುತ್ತಿದ್ದ 'ಕಿಡಿ' ಪತ್ರಿಕೆ ಆ ತರಹದ ಪತ್ರಿಕೆಯಾಗಿತ್ತು. ಅದೇ ಮೇಲ್ಪಂಕ್ತಿ ಅನುಸರಿಸಿದರೂ 'ಲಂಕೇಶ್ ಪತ್ರಿಕೆ' ವಿಭಿನ್ನ ಮತ್ತು ಸಂಘಟಿತ ರೀತಿಯಲ್ಲಿ ತನ್ನದೇ ಛಾಪು ಮೂಡಿಸಿತು. ಆ ನಂತರದಲ್ಲಿ 'ಹಾಯ್ ಬೆಂಗಳೂರ್' ರವಿ ಬೆಳಗೆರೆ ಅವರ ಸಂಪಾದಕತ್ವದ ಪತ್ರಿಕೆಯಾಗಿ ಹಾಗೂ ಶ್ರೀಧರ್ ಅವರ 'ಅಗ್ನಿ'ವಾರಪತ್ರಿಕೆ ಅದೇ ಮಾದರಿಯಲ್ಲಿ ಮುಂದುವರೆದಿದೆ.

ಮಣಿಪಾಲದ ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಲಿಮಿಟೆಡ್ ಸಂಸ್ಥೆಯ ಮಾಲೀಕರು ತಮ್ಮ ಸೇವೆಯನ್ನು ಪತ್ರಿಕೋದ್ಯಮದಲ್ಲಿಯೂ, ೧೯೭೦ರಲ್ಲಿ ಕನ್ನಡ ದೈನಿಕ 'ಉದಯವಾಣಿ'ಯನ್ನು ಹೊರತರುವ ಮೂಲಕ ಆರಂಭಿಸಿದರು. ಅದು ಏಕಕಾಲಕ್ಕೆ, ಬೆಂಗಳೂರು, ಮಣಿಪಾಲ ಮತ್ತು ಮುಂಬೈಗಳಿಂದ ಪ್ರಕಟವಾಗುತ್ತಾ ಬಂದಿದೆ. 'ತುಷಾರ'ವು ಕಳೆದ ೨೫ ವರ್ಷಗಳಿಂದ ಪ್ರಕಟಗೊಳ್ಳುತ್ತಿದೆ. ಇದರ ನಿರ್ವಾಹಕ ಸಂಪಾದಕರು ಟಿ.ಸತೀಶ್ ಯು. ಪೈ, ಉದಯವಾಣಿಯ ಸಂಪಾದಕರಾಗಿ ಆರ್.ಪೂರ್ಣಿಮಾ ಅವರು ಸೇವೆ ಸಲ್ಲಿಸಿದ್ದಾರೆ. ಮಣಿಪಾಲದ ಪೈಗಳಿಂದ 'ತರಂಗ' ವಾರಪತ್ರಿಕೆಯು ಪ್ರಕಾಶನಗೊಳ್ಳುತ್ತಿದೆ. ಅನುಭವಿ ಪತ್ರಕರ್ತರಾದ ಸಂತೋಷ್ ಕುಮಾರ್ ಗುಲ್ವಾಡಿ ಅವರು ೧೯೯೬ರವರೆಗೆ ಅದರ ಸಂಪಾದಕರಾಗಿದ್ದರು. ಅವರ ನಂತರ ಸಂಧ್ಯಾ ಎಸ್.ಪೈ ಅವರು 'ತರಂಗ'ದ ಸಂಪಾದನೆಯ ಹೊಣೆ ಹೊತ್ತಿದ್ದಾರೆ. ಬಿ.ವಿ.ವೈಕುಂಠರಾಜು ಅವರ 'ವಾರಪತ್ರಿಕೆ' ಸಾರ್ವಜನಿಕ ವಿವಾದಿತ ಸಮಸ್ಯೆಗಳ ಬಗ್ಗೆ ತನ್ನ ನೇರ, ಸರಳ ಹಾಗು ಸಮಚಿತ್ತ ಪ್ರತಿಪಾದನೆಯಿಂದಾಗಿ ಸಾಕಷ್ಟು ಯಶಸ್ವಿಯಾಯಿತು; ಇದಲ್ಲದೆ 'ರಾಜು ಪತ್ರಿಕೆ' ಎಂಬ ಇನ್ನೊಂದು ಜನಪ್ರಿಯ ವಾರಪತ್ರಿಕೆಯನ್ನು ಸಂಪಾದಿಸುತ್ತಿದ್ದರು. ಹೀಗೆಯೇ ಪ್ರಶಂಸಾರ್ಹವಾದ ಪ್ರಯತ್ನ ಮಾಡಿದ ಪತ್ರಿಕೆಗಳೆಂದರೆ ಇಂಧೂಧರ ಹೊನ್ನಾಪುರ ಅವರ 'ಸುದ್ದಿ ಸಂಗಾತಿ', ಐ.ಕೆ.ಜಾಗೀರ್‌ದಾರ್ ಮತ್ತು ಎಂ.ಬಿ.ಸಿಂಗ್ ಅವರ ಪಾಕ್ಷಿಕ ಪತ್ರಿಕೆ 'ಸಂಕೇತ', ಅಶೋಕಬಾಬು ಅವರ 'ಮನ್ವಂತರ', ಜಾಣಗೆರೆ ವೆಂಕಟರಾಮಯ್ಯನವರ 'ಮಾರ್ದನಿ', ಟಿ.ವೆಂಕಟೇಶ್ ಅವರ 'ಅಭಿಮಾನಿ', 'ನೂತನ' ವಾರಪತ್ರಿಕೆ, 'ಭಾವನಾ' ಮಾಸಿಕ ಪತ್ರಿಕೆ, ಹಾಗೂ ಉಷಾಕಿರಣ ಎಂಬ ದಿನಪತ್ರಿಕೆಗಳು ವಿಜಯ ಆನಂದ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಕಂಪೆನಿಯಿಂದ ಪ್ರಕಟವಾಗುತ್ತಿದ್ದವು. ದೈನಿಕ 'ವಿಜಯ ಕರ್ನಾಟಕ'ವು ೨೦೦೦ನೇ ಇಸವಿಯಿಂದ ಹುಬ್ಬಳ್ಳಿ, ಬೆಂಗಳೂರು ಮತ್ತು ಕಲಬುರಗಿ ಆವೃತ್ತಿಗಳಾಗಿ ಹೊರಬರುತ್ತಿದ್ದು ಈಗ ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನ ನಿರ್ವಹಣೆಗೆ ಒಳಪಟ್ಟಿದೆ ಹಾಗೂ 'ವಿಜಯ ನೆಕ್ಸ್ಟ್' ಎಂಬ ವಾರಪತ್ರಿಕೆ ಕೂಡಾ ಹೊರಬರುತ್ತಿದೆ. ಬೆಂಗಳೂರು ಮತ್ತು ಶಿವಮೊಗ್ಗದಿಂದ 'ಹೊಸ ದಿಗಂತ' ಎಂಬ ಕನ್ನಡ ದೈನಿಕವು ಪ್ರಕಟವಾಗುತ್ತಿದೆ. ವಿಜಯ ಸಂಕೇಶ್ವರ ಅವರ ಸಾರಥ್ಯದಲ್ಲಿ ೨೦೧೨ರ 'ವಿಜಯವಾಣಿ' ದೈನಿಕ ಬರುತ್ತಿದೆ. ದಿನಪತ್ರಿಕೆಗಳ ಸಾಲಿನಲ್ಲಿ ಇತ್ತೀಚೆಗೆ ಸೇರ್ಪಡೆಯಾಗಿರುವ ಮತ್ತೊಂದು ಪತ್ರಿಕೆಯೆಂದರೆ ವಿಶ್ವೇಶ್ವರ ಭಟ್ ಸಂಪಾದಕತ್ವದ "ವಿಶ್ವವಾಣಿ". ಗ್ರಾಮೀಣ ಪತ್ರಿಕೋದ್ಯಮ ಕೂಡ ಶೀಘ್ರಗತಿಯಲ್ಲಿ ಬೆಳೆಯುತ್ತಿದ್ದು ಅನೇಕ ಪ್ರಾದೇಶಿಕ ಪತ್ರಿಕೆಗಳು ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಿವೆ.

ಸಾಹಿತ್ಯಕ ಪತ್ರಿಕೆಗಳಾಗಿ 'ಸಂಕ್ರಮಣ', 'ಗಾಂಧಿಬಜಾರ್' 'ಶೂದ್ರ', ಕರ್ನಾಟಕ ಲೋಚನ,ಮುಂತಾದ ಪತ್ರಿಕೆಗಳೂ ಪ್ರಕಟವಾಗುತ್ತಿವೆ. ೧೯೮೬-೮೭ರಿಂದ ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ವಿದ್ವತ್ ಸಂಪುಟವಾಗಿ 'ಇತಿಹಾಸ ದರ್ಶನ'ವು ಬೆಂಗಳೂರಿನಿಂದ, ಮಿಥಿಕ್ ಸೊಸೈಟಿಯಿಂದ

'ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ' ಎಂಬ ತ್ರೈಮಾಸಿಕ ಆಂಗ್ಲ ಭಾಷಾ ನಿಯತಕಾಲಿಕ ೧೯೦೯ರಿಂದ, 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಯು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗುತ್ತಾ ಬಂದಿವೆ. 'ಮಾಮಿಡಿ' ,'ಸಿದ್ಧಗಂಗಾ', 'ಪ್ರಸಾದ', 'ಬಸವಪಥ', 'ಮಹಾಮನೆ', 'ರಂಭಾಪುರಿ ಬೆಳಗು' ಮುಂತಾದ ಇನ್ನೂ ಅನೇಕ ಸಾಹಿತ್ಯಿಕ, ಸಂಶೋಧನೆ ಹಾಗೂ ವಾರ್ತಾ ಪತ್ರಿಕೆಗಳಿವೆ. ವಿಶ್ವವಿದ್ಯಾಲಯಗಳು, ಅಕಾಡೆಮಿಗಳು ಮತ್ತು ವಿವಿಧ ಸಾಹಿತ್ಯಕ ಸಂಸ್ಥೆಗಳು ಅನೇಕ ಸಾಹಿತ್ಯಕ ನಿಯತಕಾಲಿಕ ಹಾಗೂ ಜರ್ನಲ್‌ಗಳು ಪ್ರಕಟವಾಗುತ್ತಿವೆ.

ಆಂಗ್ಲ ದೈನಿಕಗಳಾದ ಡೆಕ್ಕನ್ ಹೆರಾಲ್ಡ್ (೧೯೪೮), ಇಂಡಿಯನ್ ಎಕ್ಸ್‌ಪ್ರೆಸ್(೧೯೬೫), ದಿ ಹಿಂದೂ, ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು ಮಿರರ್ ಮತ್ತು ಏಷ್ಯನ್ ಏಜ್ ಮುಂತಾದವುಗಳು ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದು ವ್ಯಾಪಕ ಪ್ರಸಾರವನ್ನೂ ಹೊಂದಿವೆ. ವಾರ್ತಾ ಮತ್ತು ಪ್ರಸಾರ ಇಲಾಖೆಯ ಸುದ್ದಿ ಮಾಧ್ಯಮಗಳ ಪಟ್ಟಿಯ ರೀತ್ಯಾ ಜನವರಿ ೨೦೦೫ರವರೆಗಿನ ಮಾಹಿತಿಯಲ್ಲಿ ರಾಜ್ಯದಲ್ಲಿ ಪ್ರಕಟವಾಗುತ್ತಿರುವ ಒಟ್ಟು ದೈನಿಕಗಳ ಸಂಖ್ಯೆ ೨೬೬, ನಿಯತಕಾಲಿಕೆಗಳ ಸಂಖ್ಯೆ ೧೫೦ ಆಗಿದೆ. ಸರಾಸರಿ ಸುಮಾರು ೧೪೫೫ ಮ್ಯಾಗಜೀನ್‌ಗಳು, ವೃತ್ತ ಪತ್ರಿಕೆಗಳು ರಾಜ್ಯದಲ್ಲಿ ಪ್ರಕಟವಾಗುತ್ತಿವೆ. (ಅವುಗಳಲ್ಲಿ ೨೯೬ ದೈನಿಕಗಳು, ೬ ತ್ರೈಮಾಸಿಕಗಳು, ಅಥವಾ ದ್ವೈ ಮಾಸಿಕಗಳು ೩೩೭ ವಾರಪತ್ರಿಕೆಗಳು, ೨೧೭ ಪಾಕ್ಷಿಕ ಪತ್ರಿಕೆಗಳು ೫೪೨ ಮಾಸಿಕ, ೧೭ ಷಾಣ್ಮಾಸಿಕ (ಅರ್ಧ ವಾರ್ಷಿಕ) ಮೂರು ವಾರ್ಷಿಕ ಸಂಚಿಕೆಗಳೂ ಸೇರಿವೆ.) ಇದರ ಜೊತೆಗೆ ಜನಪ್ರಿಯ ಮಲೆಯಾಳಂ, ತಮಿಳು ಮತ್ತು ಉರ್ದು ವೃತ್ತ, ನಿಯತಕಾಲಿಕ ಪತ್ರಿಕೆಗಳೂ ರಾಜ್ಯದಲ್ಲಿ ಇವೆ. ವಿದ್ಯುನ್ಮಾನ ಮಾಧ್ಯಮಗಳಾಗಿ ಅನೇಕ ಟಿ.ವಿ.ಚಾನಲ್‌ಗಳು ಜನಪ್ರಿಯವಾಗಿವೆ.

### ಕರ್ನಾಟಕ ಮಾಧ್ಯಮ ಅಕಾಡೆಮಿ

ಕಾರ್ಯನಿರತ ಪತ್ರಕರ್ತರ ಸಂಘದ ಅಭಿಲಾಷೆಯ ಮೇರೆಗೆ (ಪತ್ರಿಕಾ ಅಕಾಡೆಮಿ ಸ್ಥಾಪಿಸಬೇಕೆಂಬ) ಅಂದಿನ ಮುಖ್ಯಮಂತ್ರಿಗಳಾಗಿದ್ದ ಆರ್.ಗುಂಡೂರಾವ್ ಅವರು ಒಪ್ಪಿಗೆ ನೀಡಿ ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕ ೨೩ ಸದಸ್ಯರನ್ನೊಳಗೊಂಡ ಕರ್ನಾಟಕ ಪತ್ರಿಕಾ ಅಕಾಡೆಮಿ ೧೯೮೪ರ ಜನವರಿ ೨೫ರಲ್ಲಿ ಸ್ಥಾಪನೆಯಾಯಿತು. ದೂರದರ್ಶನ, ಅಂತರ್ಜಾಲಗಳ ಮೂಲಕ ಪತ್ರಿಕೋದ್ಯಮದ ವ್ಯಾಪ್ತಿ, ವಿಸ್ತೃತಗೊಂಡಂತೆ ೧೭-೦೫-೨೦೦೩ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಎಂಬುದಾಗಿ ಹೆಸರಾಯಿತು. ಡಾ.ನಾಡಿಗ್ ಕೃಷ್ಣಮೂರ್ತಿ ಅವರು ಮೊದಲ ಅಧ್ಯಕ್ಷರಾದರು. (೧೯೮೨-೮೩) ಕನ್ನಡಪ್ರಭ ಪತ್ರಿಕೆ ಸಂಪಾದಕರಾಗಿದ್ದ ಖಾದ್ರಿ ಶಾಮಣ್ಣ(೧೯೮೪-೧೯೮೭), ಜಿ.ನಾರಾಯಣ (೧೯೮೭-೧೯೯೦), ಕೆ.ಎನ್.ಹರಿಕುಮಾರ್ (೧೯೯೦-೯೨) ಎಸ್.ಜಿ.ಮೈಸೂರು ಮಠ (೧೯೯೩-೧೯೯೫) ಕೆ.ಶ್ರೀಧರ ಆಚಾರ್(೧೯೯೫-೧೯೯೮) ಗರುಡನಗಿರಿ ನಾಗರಾಜ್ (೧೯೯೮-೨೦೦೦) ಎನ್.ಅರ್ಜುನದೇವ (೨೦೦೧-೨೦೦೪) ವಿ.ಎನ್.ಸುಬ್ಬರಾವ್ (೨೦೦೫-೦೮) ಎ.ಪಿ.ಪರಮೇಶ್ವರ (೨೦೦೮-೨೦೧೧), ಎಂ.ವಿ. ಪೊನ್ನಪ್ಪ(೨೦೧೧-೨೦೧೩) ಅಧ್ಯಕ್ಷರಾಗಿದ್ದರು. ಸಿದ್ಧರಾಜು ಅವರು ೨೦೧೪ರಿಂದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶದ ಪತ್ರಕರ್ತರಿಗೆ ಜಿಲ್ಲಾ ಮಟ್ಟದಲ್ಲಿ ತರಬೇತಿ ಶಿಬಿರಗಳು, ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಾಹಿತ್ಯ ಇಲ್ಲದಿರುವುದನ್ನು ಗಮನಿಸಿ ಪುಸ್ತಕಗಳನ್ನು ಪ್ರಕಟಿಸುವುದು. 'ಪತ್ರಿಕೆ' ಹೊರತರುವುದು, ವಿಶಿಷ್ಟ ಸೇವೆ ಸಲ್ಲಿಸಿದ ಪತ್ರಕರ್ತರಿಗೆ ಪ್ರಶಸ್ತಿ ನೀಡುವುದು. 'ಕನ್ನಡ ಪತ್ರಿಕೋದ್ಯಮ' ಸಾಕ್ಷ್ಯ ಚಿತ್ರ ನಿರ್ಮಾಣ, ಪತ್ರಿಕೋದ್ಯಮ ದಿಗ್ಗಜರ 'ಧ್ವನಿಸಂಗ್ರಹ' ಕ್ಯಾಸೆಟ್, ಹಳೆಯ ಪತ್ರಿಕೆಗಳ 'ಮೈಕ್ರೋಫಿಲಂ' ವ್ಯಂಗ್ಯ ಚಿತ್ರಕಾರರ ಶಿಬಿರ, ಪತ್ರಿಕಾ ದಿನಾಚರಣೆ (ಜುಲೈ೧) ಮಾಧ್ಯಮ ಅಕಾಡೆಮಿಯ ಗ್ರಂಥಾಲಯ ಅಭಿವೃದ್ಧಿ. ಪತ್ರಕರ್ತರಿಗೆ ಕಂಪ್ಯೂಟರ್ ತರಬೇತಿ, ವೆಬ್ ಸೈಟ್ ವ್ಯವಸ್ಥೆ, ಛಾಯಾಗ್ರಾಹಕರ ತರಬೇತಿ, ದತ್ತಿ ಉಪನ್ಯಾಸಗಳು, ದತ್ತಿ ಪ್ರಶಸ್ತಿಗಳು, 'ಮಾಧ್ಯಮ-ಮಂಥನ' ಸಂವಾದ ಕಾರ್ಯಕ್ರಮ. ಡೆಸ್ಕ್ ಪತ್ರಕರ್ತರ ಪ್ರವಾಸ ಕಾರ್ಯಕ್ರಮ ಅನೇಕ ವಿಚಾರ ಸಂಕಿರಣ, ಕಮ್ಮಟಗಳು, ಉಪನ್ಯಾಸಗಳು ಮುಂತಾದ ಅನೇಕ ಕೆಲಸಗಳನ್ನು ಮಾಡಿದೆ.

ಭಾರತೀಯ ಪತ್ರಿಕೋದ್ಯಮ, ಮಾಧ್ಯಮ ಪಾರಿಭಾಷಿಕ, ಕರ್ನಾಟಕ ಪತ್ರಿಕಾ ಇತಿಹಾಸ-೯ ಸಂಪುಟಗಳು ಮುಂತಾದ ಸುಮಾರು ೩೦ ಕೃತಿಗಳನ್ನು ಪ್ರಕಟಿಸಲಾಗಿದೆ. ಅದು ಆರಂಭವಾದಂದಿನಿಂದ, ವಿವಿಧ ಪತ್ರಿಕಾ ಸಂಸ್ಥೆ ಸಹಿತವಾಗಿ ಪತ್ರಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಪ್ರಸಿದ್ಧ ಹಾಗೂ ಹಿರಿಯ ಪತ್ರಕರ್ತರಿಗೆ ಪ್ರತಿ ವರ್ಷ ಅಕಾಡೆಮಿಯು ಪ್ರಶಸ್ತಿಯನ್ನು ಕೊಡಮಾಡುತ್ತಿದೆ. ಕೆಲವು ವೃತ್ತ ಪತ್ರಿಕೆಗಳು ಹಾಗೂ ಸಂಸ್ಥೆಗಳೂ ಕೂಡ ಪತ್ರಕರ್ತರನ್ನು ಸನ್ಮಾನಿಸಿ ಪ್ರಶಸ್ತಿಗಳನ್ನು ಕೊಡುತ್ತ ಬಂದಿವೆ. ತನಿಖಾ (ಶೋಧನಾ) ವರದಿ, ಅಪರಾಧ ವರದಿ ಮುಂತಾದ ವರದಿಗಳನ್ನು ಒಳಗೊಂಡಂತೆ ಪ್ರಶಸ್ತಿಗಳನ್ನು ನೀಡಲಾರಂಭಿಸಿತು. ಜೊತೆಗೆ ವಿಶೇಷ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ೧೯೮೭ ರಿಂದ ೨೦೧೧ ರವರೆಗೆ ಮಾಧ್ಯಮ(ಮೀಡಿಯ) ದವರಿಗೆ ಪತ್ರಿಕಾ ಅಕಾಡೆಮಿಯಿಂದ ೬೨೮ ಗಮನಾರ್ಹ ಪತ್ರಕರ್ತರಿಗೆ, ಪ್ರಶಸ್ತಿಗಳನ್ನು ನೀಡಲಾಗಿದೆ. ವಿಶೇಷ ಪತ್ರಿಕಾ ಪ್ರಶಸ್ತಿಗಳನ್ನೊಳಗೊಂಡಂತೆ ಪ್ರಶಸ್ತಿಗಳನ್ನು ಕೆಳಕಂಡವರಿಗೆ ನೀಡಲಾಗಿದೆ. ಹೆಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) (೧೯೯೬), ವೆಂಕಟೇಶ ಕುಲಕರ್ಣಿ (೧೯೯೭), ಬಿ.ಚಂದ್ರೇಗೌಡ (೧೯೯೮), ಎಂ.ಮಲ್ಲಿಕಾರ್ಜುನಯ್ಯ (೧೯೯೯), ಪ್ರೊ. ಜಿ.ವೆಂಕಟ ಸುಬ್ಬಯ್ಯ (೨೦೦೦). ಹೆಚ್.ವೈ.ಶಾರದಾ ಪ್ರಸಾದ್ (೨೦೦೧), ಆರ್.ಕೆ.ಲಕ್ಷ್ಮಣ್ (೨೦೦೨), ಎಂ.ವಿ.ಕಾಮತ್ (೨೦೦೩), ಯು. ಆರ್.ರಾವ್ (೨೦೦೪), ಕೆ.ಎಸ್.ಸಚ್ಚಿದಾನಂದ ಮೂರ್ತಿ (೨೦೦೫), ರಾಜ್ ಚಂಗಪ್ಪ (೨೦೦೬), ಗಿರೀಶ್ ನಿಕ್ಕಂ (೨೦೦೭), ಕೆ.ಎನ್. ಶಾಂತಕುಮಾರ್ (೨೦೦೮), ಕೃಷ್ಣಪ್ರಸಾದ್ (೨೦೦೯) ಜಿ.ಎನ್. ರಂಗನಾಥರಾವ್ (೨೦೧೦) ಅರಕೆರೆ ಜಯರಾಂ(೨೦೧೧).

'ಆಂದೋಲನ' ಪ್ರಶಸ್ತಿಯನ್ನು ಈ ಕೆಳಕಂಡ ಪತ್ರಿಕೆಗಳಿಗೆ ನೀಡಲಾಗಿದೆ. ಕೋಲಾರ ಪತ್ರಿಕೆ (೧೯೯೭), ಜನತಾವಾಣಿ (೧೯೯೮), ಕನ್ನಡಮ್ಮ (೧೯೯೯), ಜನಮಿತ್ರ (೨೦೦೦), ಕ್ರಾಂತಿ (೨೦೦೧), ಹೊಸ ದಿಗಂತ (೨೦೦೨), ಕ್ರಾಂತಿ ದೀಪ (೨೦೦೩), ಪ್ರಜಾ ಪ್ರಗತಿ (೨೦೦೪), ಕರಾವಳಿ ಮುಂಜಾವು (೨೦೦೫), ಸುದ್ದಿ ಮೂಲ (೨೦೦೬), ಕನ್ನಡ ಜನತಾರಂಗ (೨೦೦೭), ಕರ್ನಾಟಕ ಸಂಧ್ಯಾಕಾಲ (೨೦೦೮), ನವೋದಯ (೨೦೦೯) ಲೋಕದರ್ಶನ (೨೦೧೦) ಸುಳ್ಯ ಸುದ್ದಿ ಬಿಡುಗಡೆ (೨೦೧೧).

'ಅಭಿಮಾನಿ' ಪ್ರಶಸ್ತಿಯು ರಾಜೇಶ್ ಶಿಬಾಜೆ (೨೦೦೦), ಅಬ್ಬೂರು ರಾಜಶೇಖರ್ (೨೦೦೧), ಡಿ.ಎನ್.ಶ್ರೀಪಾದು (೨೦೦೨), ಎಸ್.ಚಂದ್ರಶೇಖರ್(೨೦೦೩), ಓಂಕಾರ ಕಾಕಡೆ (೨೦೦೪), ಶೇಷಮೂರ್ತಿ ಅವಧಾನಿ (೨೦೦೫), ಶಿವಾನಂದ ತಗಡೂರು (೨೦೦೬), ವೈ.ಗ. ಜಗದೀಶ್ (೨೦೦೭), ಸುಚೇತನಾ ನಾಯ್ಕ (೨೦೦೮), ಹೆಚ್.ಟಿ. ಅನಿಲ್ (೨೦೦೯) ಎಸ್. ಎನ್.ಸುರೇಶ್(೨೦೧೦)ಕೆ.ನರಸಿಂಹಮೂರ್ತಿ(೨೦೧೧) ಅವರಿಗೆ ದತ್ತವಾಗಿದೆ.

'ಮೈಸೂರು ದಿಗಂತ' ಪತ್ರಿಕಾ ಪ್ರಶಸ್ತಿಯು ಎಂ.ಜಯರಾಮ್ (೨೦೦೨), ಹರ್ಷವರ್ಧನ ವಿ.ಶೀಲವಂತ (೨೦೦೩), ಮುನಿಯಾಲ ಗಣೇಶ್ ಶೆಣೈ (೨೦೦೪), ಬಸವರಾಜ ಹೊಂಗಲ್ (೨೦೦೫), ಬಿ.ಎನ್.ಶ್ರೀಧರ್ (೨೦೦೬), ಮಲ್ಲಿಕಾರ್ಜುನ ಸಿದ್ದಣ್ಣನವರ (೨೦೦೭), ಕೃ.ಪ. ಗಣೇಶ (೨೦೦೮), ಕೆ.ಶಶಿಕುಮಾರ್ (೨೦೦೯) ಭಾರತಿ ಹೆಗಡೆ (೨೦೧೦) ಟಿ.ಎಲ್.ಶ್ರೀನಿವಾಸ(೨೦೧೧) ಅವರಿಗೆ ದತ್ತವಾಗಿದೆ.

೧೯೮೯-೯೦ ರಲ್ಲಿ ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ; ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್, ಬೆಂಗಳೂರು; ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಲಿಮಿಟೆಡ್ ಮಣಿಪಾಲ್ ಮತ್ತು 'ನಾಡೋಜ' ಬೆಳಗಾವಿ ಈ ನಾಲ್ಕು ಸಂಸ್ಥೆಗಳನ್ನು ಗೌರವಿಸಲಾಗಿದೆ. ೨೦೦೮ರಿಂದ ವರ್ಷದ ವ್ಯಕ್ತಿ ಪ್ರಶಸ್ತಿ ನೀಡಲಾಗುತ್ತಿದ್ದು, ವಿಶ್ವೇಶ್ವರ ಭಟ್(೨೦೦೮), ಗೌರಿಲಂಕೇಶ್(೨೦೦೯), ಡಾ.ಎಸ್.ಆರ್. ರಾಮಸ್ವಾಮಿ(೨೦೧೦), ಹುಣಸವಾಡಿ ರಾಜನ್ (೨೦೧೧) ಇವರಿಗೆ ನೀಡಲಾಗಿದೆ.

### ಟಿ.ಎಸ್.ಆರ್.ಪ್ರಶಸ್ತಿ

ಶ್ರೇಷ್ಠ ಪತ್ರಿಕಾ ವಿನ್ಯಾಸಕ್ಕೆ, ವರದಿಗೆ, ದೂರದರ್ಶನದ ಸುದ್ದಿ ವಾಚನಕ್ಕೆ, ಸುದ್ದಿ ಸಾಕ್ಷ್ಯ ಚಿತ್ರಗಳು, ಮುಂತಾದ ವಿಭಾಗಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ ರಾಜ್ಯದ ಪ್ರಖ್ಯಾತ ಪತ್ರಕರ್ತರಿಗೆ ವಾರ್ತಾ ಮತ್ತು ಪ್ರಸಾರ ಇಲಾಖೆಯು ಪ್ರಜಾವಾಣಿಯ ಟಿ.ಎಸ್. ರಾಮಚಂದ್ರರಾವ್ ಹೆಸರಿನಲ್ಲಿ ಪತ್ರಿಕೋದ್ಯಮದ ಅತ್ಯುನ್ನತ ಪ್ರಶಸ್ತಿಯಾದ ಟಿ.ಎಸ್.ರಾಮಚಂದ್ರ ರಾವ್ ಪ್ರಶಸ್ತಿ ನೀಡುತ್ತದೆ. ೧೯೯೩ ರಲ್ಲಿ ಈ ಪ್ರಶಸ್ತಿಯನ್ನು ಸಂಸ್ಥಾಪಿಸಲಾಯಿತು. ಈ ಪ್ರಶಸ್ತಿಯು ಸನ್ಮಾನ ಪತ್ರ, ಪದಕ ಹಾಗೂ ಒಂದು ಲಕ್ಷ ನಗದು ಬಹುಮಾನವನ್ನು ಒಳಗೊಂಡಿರುತ್ತದೆ. ಈವರೆಗೆ ಟಿ.ಎಸ್. ಆರ್.ಪ್ರಶಸ್ತಿ ಪಡೆದವರ ಹೆಸರು ಇಂತಿವೆ. ಪುಟ್ಟಪ್ಪ (೧೯೯೩), ಎನ್.ಎಸ್.ಸೀತಾರಾಮ ಶಾಸ್ತ್ರಿ (೧೯೯೪), ಕೆ.ಶಾಮರಾವ್ (೧೯೯೫), ಪಿ.ಎಲ್.ಬಂಕಾಪುರ (೧೯೯೬), ಎಂ.ಬಿ.ಸಿಂಗ್, (೧೯೯೭), ಎಸ್.ವಿ.ಜಯಶೀಲ ರಾವ್ (೧೯೯೮), ವಡ್ಡರ್ಸೆ ರಘುರಾಮ ಶೆಟ್ಟಿ (೧೯೯೯), ಎಸ್.ಜಿ.ಮೈಸೂರು ಮಠ್ (೨೦೦೦), ಇ.ಆರ್.ಸೇತುರಾಮ್ (೨೦೦೧), ಕೆ.ಸತ್ಯನಾರಾಯಣ (೨೦೦೨), ಷಡಕ್ಷರಪ್ಪ (೨೦೦೩), ನಾಗಮಣಿ ಎಸ್.ರಾವ್ (೨೦೦೪) ಸುರೇಂದ್ರ ದಾನಿ (೨೦೦೫), ರಾಜಾ ಶೈಲೇಶ ಚಂದ್ರ ಗುಪ್ತ (೨೦೦೬), ಶಿವಾನಂದ ಜೋಷಿ (೨೦೦೭), ದಿ|| ಬಿ.ವಿ. ವೈಕುಂಠರಾಜು (೨೦೦೮), ರಾಜಶೇಖರ ಕೋಟಿ (೨೦೦೯). ಜಿ.ಎನ್.ರಂಗನಾಥರಾವ್ (೨೦೧೦), ಗರುಡನಗಿರಿ ನಾಗರಾಜ್ (೨೦೧೧), ಅಲ್ಲದೇ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳನ್ನು, ೨೦೧೦ ರಿಂದ ಮೊಹರೆ ಹನುಮಂತರಾಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

### ಕರ್ನಾಟಕ ರಂಗಭೂಮಿ

ಕನ್ನಡದಲ್ಲಿ ಮೊಟ್ಟಮೊದಲ ನಾಟಕ ರಚನೆಯಾದದ್ದು ೧೭ನೇ ಶತಮಾನದಲ್ಲಿ. ಮೈಸೂರು ಆಸ್ಥಾನ ಕವಿ ಸಿಂಗರಾರ್ಯನು ಬರೆದ 'ಮಿತ್ರಾವಿಂದ ಗೋವಿಂದ' ಎಂಬ ನಾಟಕ. ಶ್ರೀಹರ್ಷನ ಸಂಸ್ಕೃತ ಭಾಷೆಯ 'ರತ್ನಾವಳಿ' ನಾಟಕದ ಕನ್ನಡದ ಅವತರಣಿಕೆ ಇದಾಗಿದೆ. ಕರ್ನಾಟಕದಲ್ಲಿ ಸಾಹಿತ್ಯ ಕ್ಷೇತ್ರವು ಬಹಳವಾಗಿ ಸಂಸ್ಕೃತದಿಂದ ಪ್ರಭಾವಿತವಾಗಿದ್ದ ಕಾರಣ, ಸಂಸ್ಕೃತ ನಾಟಕಗಳನ್ನು ಸಾಮಾನ್ಯವಾಗಿ ಎಲ್ಲರೂ ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ಅಂದಿನ ಎಲ್ಲ ಕನ್ನಡ ಕವಿಗಳೂ, ಸಂಸ್ಕೃತ ಮಹಾಕಾವ್ಯದ ಮಾದರಿಯಲ್ಲಿಯೇ ತಮ್ಮ ಕಾವ್ಯಗಳನ್ನು ರಚಿಸುತ್ತಿದ್ದರು. ಅವರು ನಾಟಕ ರಚನೆಗಿಂತ ಕಾವ್ಯ ರಚನೆಯಿಂದ ಹೆಮ್ಮೆ ಪಡುತ್ತಿದ್ದರು. ಹೀಗಾಗಿ ೧೭ ನೆಯ ಶತಮಾನದವರೆಗೆ ಮಾತ್ರ ಸಂಸ್ಕೃತ ನಾಟಕಗಳು ಲಭಿಸುತ್ತವೆ.. ಕಾಲಕ್ರಮೇಣ ಪ್ರಸಿದ್ಧ ಕನ್ನಡ ಲೇಖಕರು ಕನ್ನಡದಲ್ಲಿ ನಾಟಕಗಳನ್ನು ಬರೆಯಲು ಉಪಕ್ರಮಿಸಿದರು. ಐತಿಹಾಸಿಕ ನೆಲೆಯಲ್ಲಿ ಈ ಪರಿಸ್ಥಿತಿಯನ್ನು ಗಮನಿಸಿದರೆ, ಆ ಕಾಲಕ್ಕೆ ನಾಟಕಗಳನ್ನು ಬರೆಯುವುದು ಅಸಭ್ಯ ಹಾಗೂ ಕೀಳು ಅಭಿರುಚಿಯೆಂದು ಪರಿಗಣಿಸಲಾಗುತ್ತಿತ್ತೆಂದು ಕಂಡುಬರುತ್ತದೆ.

ಸಂಸ್ಕೃತ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಮೌಖಿಕ ಸಂಪ್ರದಾಯದ ಮೂಲಕ ಕನ್ನಡ ಜನತಾ ರಂಗಭೂಮಿಗೆ ಲಭ್ಯವಾದಾಗ ಕ್ರಾಂತಿಕಾರಿ ಬದಲಾವಣೆ ಕಂಡುಬಂದಿತು. ಈ ಮಹಾಕಾವ್ಯಗಳ ಕಥೆಗಳೇ ಇಂದಿಗೂ ಕನ್ನಡದ ಬಹುತೇಕ ನಾಟಕಗಳ ಕಥಾವಸ್ತುಗಳಿಗೆ ಮೂಲವಾಗಿವೆ ಎಂಬ ಅಂಶ, ಅಶಿಕ್ಷಿತ ಸಾಮಾನ್ಯ ಜನರ ಮನಸ್ಸಿನ ಮೇಲೆ ಈ ಮಹಾಕಾವ್ಯಗಳು ಬೀರಿರುವ ಪ್ರಭಾವ ಎಷ್ಟೆಂಬುದನ್ನು ಸೂಚಿಸುತ್ತದೆ. ನೃತ್ಯ ಮತ್ತು ಸಂಗೀತಗಳು ನಾಟಕಗಳಲ್ಲಿ ಪ್ರಧಾನವಾಗಿದ್ದವು. ಕ್ರಮೇಣ ನಾಟಕಗಳಲ್ಲಿ ದೇವತೆಗಳು ಜನರನ್ನು ಹರಸಲಿ (ದೇವತೆಗಳನ್ನು ಕೊಂಡಾಡುವಂತೆ) ಎಂಬ ಭಾವ ಇರುವ ರೀತಿಯಲ್ಲಿ ನಾಟಕಗಳ ರಚನೆಯಾಯಿತು. ಇದು ಯಕ್ಷಗಾನ, ಬಯಲಾಟ, ಕೃಷ್ಣ ಪಾರಿಜಾತ ಹಾಗೂ ಜನಪದ ರಂಗಭೂಮಿಯ ವಿವಿಧ ಪ್ರಕಾರಗಳು ಉಗಮವಾಗಲು ಕಾರಣವಾಯಿತು. ಬ್ರಿಟಿಷ್ ವಸಾಹತು ಶಾಹಿಯೂ ರಂಗಭೂಮಿಯ ಬೆಳವಣಿಗೆಗೆ ದೊಡ್ಡ ಪ್ರಮಾಣದಲ್ಲಿ ಕೊಡುಗೆ ನೀಡಿತು. ಅವರು ತಮ್ಮೊಡನೆ ರಂಗನಾಟಕ ತಂಡಗಳನ್ನು ಕರೆತಂದರು. ಅವು ಷೇಕ್ಸ್‌ಪಿಯರನ ನಾಟಕ ಮತ್ತು ಇತರೆ ಜನಪ್ರಿಯ ಆಂಗ್ಲ ಭಾಷಾ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಇವುಗಳಿಂದ ಉತ್ತೇಜನಗೊಂಡು, ಆಂಗ್ಲನಾಟಕಗಳು ಕನ್ನಡಕ್ಕೆ ಅನುವಾದಗೊಂಡು ಯಶಸ್ವಿ ರಂಗಪ್ರದರ್ಶನಗಳಾದವು.

ಕಾಲಕ್ರಮೇಣ ಜನರ ಅಭಿರುಚಿಗನುಗುಣವಾಗಿ ನೃತ್ಯ ಮತ್ತು ಸಂಗೀತಗಳನ್ನೊಳಗೊಂಡ ನಾಟಕಗಳನ್ನು ರಚಿಸಲಾಯಿತು. ಪ್ರಾರಂಭದ ದಿನಗಳಲ್ಲಿ ಕೆಳಜಾತಿಯ, ಕೂಲಿ ಕೆಲಸ ಮಾಡುತ್ತಿದ್ದ ಅನಕ್ಷರಸ್ಥರು ರಂಗಭೂಮಿಯ ಮೇಲೆ ನಟಿಸುತ್ತಿದ್ದು. ಇದು ಕ್ರಮೇಣ ಬದಲಾಗಿ, ಎಲ್ಲ ಬಗೆಯ ಜನರು ನಾಟಕಗಳಲ್ಲಿ ಅಭಿನಯಿಸಲು ಆರಂಭಿಸಿದರು. ಅನೇಕ ವಿದ್ಯಾವಂತರು ಕೂಡ ಈ ನಾಟಕಗಳಲ್ಲಿ ಅಭಿನಯಿಸ ತೊಡಗಿದರು. ಕೇವಲ ಪುರುಷರು

ಮಾತ್ರ ರಂಗದ ಮೇಲೆ ಬಂದು ನಟಿಸುತ್ತಿದ್ದರು. ಸಮಾಜದಲ್ಲಾದ ಬದಲಾವಣೆಗಳ ಫಲವಾಗಿ ಸ್ತ್ರೀಯರೂ ರಂಗಭೂಮಿಯ ಮೇಲೆ ಬಂದು ಅಭಿನಯಿಸಲು ಪ್ರೋತ್ಸಾಹಿಸಲಾಯಿತು. ವೃತ್ತಿಪರ ನಾಟಕ ಕಂಪನಿಗಳು, ರಾಜ್ಯಾದ್ಯಂತ ಸಂಚರಿಸಿ ಅನೇಕ ಕಡೆ ಯಶಸ್ವಿಯಾಗಿ ನಾಟಕ ಪ್ರದರ್ಶಿಸತೊಡಗಿದವು. ಗುಬ್ಬಿ ನಾಟಕ ಕಂಪನಿಯಂತಹ ಕೆಲವು ಪ್ರಸಿದ್ಧ ಹಳೆಯ ನಾಟಕ ಕಂಪನಿಗಳು ರಾಜ್ಯದಲ್ಲಿ ಪ್ರವಾಸ ಮಾಡುತ್ತ ಯಶಸ್ವಿಯಾಗಿ ಪ್ರದರ್ಶನಗಳನ್ನು ನೀಡುತ್ತಿದ್ದುವು. ಅವು ಸ್ವರಾಜ್ಯದಲ್ಲಷ್ಟೇ ಅಲ್ಲದೆ, ನೆರೆರಾಜ್ಯಗಳಲ್ಲೂ ಪ್ರದರ್ಶನ ನೀಡಿ ಉಚ್ಛ್ರಾಯ ಸ್ಥಿತಿಗೇರಿ ಖ್ಯಾತಿ ಪಡೆದಿದ್ದವು. ಉತ್ತರ ಕರ್ನಾಟಕದಲ್ಲಿನ, ಕೊಣ್ಣೂರು ನಾಟಕ ಕಂಪನಿ, ಶಿರಹಟ್ಟಿ ನಾಟಕ ಕಂಪನಿ, ವಿಶ್ವಗುಣಾದರ್ಶ ನಾಟಕ ಕಂಪೆನಿ ಮೊದಲಾದ ಕಂಪನಿಗಳಲ್ಲಿ, ಯಲ್ಲಮ್ಮ, ಗುರುಸಿದ್ದಪ್ಪ, ವೆಂಕೋಬರಾವ್, ಗರೂಡ ಸದಾಶಿವರಾವ್, ಮಾಸ್ಟರ್ ವಾಮನರಾವ್ ಮುಂತಾದ ಪ್ರತಿಭಾವಂತ ನಟ–ನಟಿಯರೂ, ಸಂಗೀತಗಾರರೂ ಇದ್ದು ಪ್ರಾಮುಖ್ಯತೆ ಪಡೆದಿದ್ದರು.

ದಕ್ಷಿಣ ಕರ್ನಾಟಕದಲ್ಲಿ ವರದಾಚಾರ್, ಗುಬ್ಬಿವೀರಣ್ಣ, ಮಹಮದ್ ಪೀರ್, ಮಳವಳ್ಳಿ ಸುಂದರಮ್ಮ, ಜಿ.ವಿ. ಮಾಲತಮ್ಮ, ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ ಸುಬ್ಬಯ್ಯನಾಯ್ಡು (ಸಿನಿಮಾಗಳಲ್ಲಿಯೂ ನಟಿಸಿದ್ದರು) ಆರ್.ನಾಗೇಂದ್ರರಾವ್, ಬಿ.ಜಯಮ್ಮ, ಸ್ತ್ರೀ ನಾಟಕ ಕಂಪನಿ ಕಟ್ಟಿ ಬೆಳೆಸಿದ ಆರ್.ನಾಗರತ್ನಮ್ಮ, ಹಿರಣ್ಣಯ್ಯ ಸಿ.ಬಿ. ಮಲ್ಲಪ್ಪ, ಎಂ.ಎನ್.ಗಂಗಾಧರ ರಾಯರು ಮುಂತಾದವರು ಧೀಮಂತ ನಟರಾಗಿದ್ದರು. ದುರ್ಬಲ ಕಥಾವಸ್ತುವಿದ್ದರೂ, ಚುರುಕಾದ ಸಂಭಾಷಣೆ ಇಲ್ಲದಿದ್ದರೂ, ರೋಮಾಂಚಕ ನಾಟಕೀಯ ತಿರುವುಗಳಿಲ್ಲದಿದ್ದರೂ, ಈ ಅಭಿನಯ ವಿಶಾರದರು ತಮ್ಮ ಸುಮಧುರ ಕಂಠದಿಂದ ಅಪ್ರಾಸಂಗಿಕ ಹಾಸ್ಯಗಳಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಹೀಗೆಲ್ಲ ಇದ್ದರೂ ಬೆಳೆಯುತ್ತಿದ್ದ ಸಾಮಾಜಿಕ ಪ್ರಜ್ಞೆಯನ್ನು ಎದುರಿಸಿ ನಿಲ್ಲಲಾಗದೆ ನಾಟಕ ಕಂಪೆನಿಗಳು ವಿಫಲವಾಗಿ, ಮನರಂಜನೆಯ ಮೂಲವಾಗಿ ಬಂದ ಸಿನಿಮಾಗಳ ಎದುರು ಯಶಸ್ವಿಯಾಗಿ ಸ್ಪರ್ಧಿಸಲಾಗದೆ, ವೃತ್ತಿ ರಂಗಭೂಮಿ ಕ್ರಮೇಣ ಕ್ಷೀಣಗೊಂಡಿತು. ಆದರೂ ೧೯ನೇ ಶತಮಾನದ ಕೊನೆಯ ಭಾಗ ಮತ್ತು ೨೦ನೆಯ ಶತಮಾನದ ಆರಂಭಕಾಲವು ವೃತ್ತಿಪರ ರಂಗಭೂಮಿಗೆ ಅತ್ಯುತ್ತಮ ಕಾಲವೆನಿಸಿತ್ತು.

ಹವ್ಯಾಸಿ ರಂಗಭೂಮಿಯು ಸುಶಿಕ್ಷಿತರ ರಂಗಭೂಮಿಯೆನಿಸಿತ್ತು. ಅದು ಸದಭಿರುಚಿಯ ಪ್ರೇಕ್ಷಕರಿಗಾಗಿ ರೂಪುಗೊಂಡಿದ್ದು ವೈವಿಧ್ಯಮಯ ವಿಷಯಗಳು ನಾಟಕದ ವಸ್ತುವಾಗಿದ್ದುವು. ಮೈಸೂರು ಸಂಸ್ಥಾನದ ಆಸ್ಥಾನ ಕವಿ ಬಸವಪ್ಪಶಾಸ್ತ್ರಿಗಳು ಕಾಳಿದಾಸನ 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ಆದರೆ ಈ ಬಗೆಯ ನಾಟಕಗಳಲ್ಲಿ ಅಭಿನಯಿಸಲು ವಿದ್ಯಾವಂತ ಕಲಾವಿದರ ಅವಶ್ಯಕತೆ ಇತ್ತು. ಈ ರಂಗಚಳವಳಿಯು ಹೆಚ್ಚು ಹೆಚ್ಚು ವಿದ್ಯಾವಂತ ಹವ್ಯಾಸಿ ಕಲಾವಿದರನ್ನು ಬೆಳಕಿಗೆ ತರಲು ನೆರವಾಯಿತು. ೧೯೦೯ರಲ್ಲಿ 'ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್' (ಎ.ಡಿ.ಎ–ಹವ್ಯಾಸಿ ನಾಟಕ ಸಂಸ್ಥೆ) ಬೆಂಗಳೂರಿನಲ್ಲಿ ಆರಂಭವಾಯಿತು. 'ಭಾರತ ಕಲೋತ್ತೇಜಕ ಸಂಘವು' ಧಾರವಾಡದಲ್ಲಿ ೧೯೦ಳರಲ್ಲಿ ಆರಂಭವಾಯಿತು.

ರಂಗಚಳವಳಿಯು ೨೦ನೇ ಶತಮಾನದ ಎರಡನೆಯ ದಶಕದಲ್ಲಿ ಬೆಂಗಳೂರಿನ ಕೈಲಾಸಂ, ಗದಗಿನ ಹುಯಿಲುಗೋಳ ನಾರಾಯಣರಾವ್, ಸಂಸ (ವೆಂಕಟಾದ್ರಿ ಐಯ್ಯರ್) ಮುಂತಾದವರು ಸ್ವಂತ ನಾಟಕಗಳನ್ನು ಮೊದಲಿಗೆ ಬರೆದಾಗ, ರಂಗಚಳವಳಿಗೆ ಉತ್ತೇಜನ ದೊರಕಿದಂತಾಯಿತು. ಆರಂಭದಲ್ಲಿ, ಇವು ಅನೂಹ್ಯ ಘಟನೆಗಳು, ರೋಮಾಂಚಕ ತಿರುವು ಕೊಡುವ ಭಾವನಾತ್ಮಕ (ಆವೇಶಾತ್ಮಕ) ವ್ಯಾಪಾರಿ ದೃಷ್ಟಿಯ ರಂಗಭೂಮಿಯ ನಾಟಕಗಳ ವಿರುದ್ಧ ಪ್ರತಿಭಟನಾತ್ಮಕವಾಗಿ ರೂಪುಗೊಂಡ ನಾಟಕಗಳಾಗಿದ್ದವು. ಎರಡನೆಯದಾಗಿ ಅವು ಪ್ರಚಲಿತ ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ನಾಟಕಗಳಾಗಿದ್ದುವು. ಮೂರನೆಯದಾಗಿ ಸಂಗೀತ, ನೃತ್ಯ ಮತ್ತು ಅಸಂಗತ ಹಾಸ್ಯದಿಂದ ಹೊರತಾಗಿದ್ದವು. ಕೈಲಾಸಂ ಬುದ್ಧಿ ಚಾತುರ್ಯವುಳ್ಳ ಚಮತ್ಕಾರಿಕ ಮಾತುಗಳಿಂದ ಕೂಡಿದ ಪ್ರತಿಭಾಶಾಲಿ ನಾಟಕಕಾರರಾಗಿದ್ದರು. ವಾಸುದೇವ ವಿನೋದಿನಿ ಸಭಾ, ಕನ್ನಡ ಅಮೆಚೂರ್ಸ್ (ಹವ್ಯಾಸಿ) ನಾಟಕ ತಂಡ ಮುಂತಾದವು ಹೊಸ ನಾಟಕ ತಂಡಗಳಾಗಿದ್ದುವು.

ಅಲ್ಲದೆ, ಕ್ಷೀರಸಾಗರ, ಅ.ನ.ಕೃಷ್ಣರಾವ್, ಪರ್ವತವಾಣಿ, ಕೈವಾರ ರಾಜಾರಾವ್, ಶ್ರೀರಂಗ ಮುಂತಾದ ಪ್ರಸಿದ್ಧ ನಾಟಕಕಾರರಿದ್ದರು. ಮುಂಚಿನ ದಿನಗಳಲ್ಲಿ ಹವ್ಯಾಸಿ ರಂಗಭೂಮಿಯು ಕೇವಲ ಶ್ರವ್ಯ ರಂಗಭೂಮಿಯಾಗಿತ್ತು. ವಾಸ್ತವವಾಗಿ ಹವ್ಯಾಸಿ ರಂಗಭೂಮಿಯು ವೃತ್ತಿರಂಗಭೂಮಿಯ ಕೃತಕತೆಯನ್ನು ಪ್ರತಿಭಟಿಸುವ ಮೂಲಕ ರೂಪುಗೊಂಡಿತ್ತು. ಅಲ್ಲಿಯ ಸಂಭಾಷಣೆಯ ಭಾಷೆ ಆಡುಭಾಷೆಯಾಗಿತ್ತು. ವೃತ್ತಿರಂಗಭೂಮಿಯ ಆಡಂಬರದ, ಅಲಂಕಾರಿಕ, ಕೃತಕ ಭಾಷೆಯಿಂದ ಅದು ದೂರವಿತ್ತು. ಈ ಅಂಶವೇ ಪ್ರೇಕ್ಷಕರು ಮತ್ತು ನಾಟಕಗಳ ನಡುವೆ ಆತ್ಮೀಯ ಸಂಬಂಧವನ್ನು ಹೆಣೆದಿತ್ತು.

ಸ್ವಾತಂತ್ರ್ಯೋತ್ತರದಲ್ಲಿ ಹವ್ಯಾಸಿ ರಂಗಭೂಮಿಯ ಚಟುವಟಿಕೆಗಳ ವ್ಯಾಪಕತೆ ಹೆಚ್ಚಿತು. ಅಕಾಡೆಮಿಗಳು ಸ್ಥಾಪನೆಗೊಂಡವು, ಸಹಾಯಧನ (ಸಬ್ಸಿಡಿ)ವು ಮಂಜೂರಾಯಿತು. ನಾಟಕೋತ್ಸವಗಳು, ನಾಟಕ ಸ್ಪರ್ಧೆಗಳು ವ್ಯವಸ್ಥೆಗೊಂಡವು. ದೆಹಲಿಯಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ (ರಾಷ್ಟ್ರೀಯ ನಾಟಕ ತರಬೇತಿ ಶಾಲೆ) ಸ್ಥಾಪನೆಗೊಂಡಿತು. ಕರ್ನಾಟಕದ ಕೆಲವಾರು ರಂಗಾಸಕ್ತರು ಅಲ್ಲಿ ತರಬೇತಿ ಪಡೆದು ಬಂದವರನ್ನು, ಪ್ರಸಿದ್ಧ ನಾಟಕಕಾರ ಶ್ರೀರಂಗರು ಕನ್ನಡ ಹವ್ಯಾಸಿ ರಂಗಭೂಮಿಗೆ ಪರಿಚಯ ಮಾಡಿದರು. ವೃತ್ತಿರಂಗಭೂಮಿಯ ನಾಟಕಗಳ ಪ್ರೇಕ್ಷಕರು, ಆ ಕಂಪನಿಯ ಪ್ರಸಿದ್ಧ ನಟರನ್ನು ನೋಡಲಿಚ್ಛಿಸುತ್ತಿದ್ದರು ಇಲ್ಲವೇ, ಅಲ್ಲಿಯ ಪ್ರಸಿದ್ಧ ರಂಗಗೀತೆ ಗಾಯಕರ ಹಾಡುಗಳನ್ನು ಕೇಳುವಲ್ಲಿ ಆಸಕ್ತರಾಗಿರುತ್ತಿದ್ದರು. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ಪ್ರೇಕ್ಷಕರು 'ನಾಟಕ'ವನ್ನೇ ನೋಡಲು ಹೋಗುತ್ತಿದ್ದರು. ಹೀಗಾಗಿ ನಾಟಕಗಳಿಗೆ ದಕ್ಷ ನಿರ್ದೇಶಕನ ಅಗತ್ಯ ಕಂಡುಬಂದಿತು. ಬಿ.ವಿ.ಕಾರಂತರಂಥ ಪ್ರತಿಭಾವಂತರು ನಾಟಕ ನಿರ್ದೇಶಕರಾಗಿ ಬೆಳಕಿಗೆ ಬಂದರು.

೨೦ನೇ ಶತಮಾನದ ಉತ್ತರ ಭಾಗವು ಪಾಶ್ಚಿಮಾತ್ಯ ರಂಗಭೂಮಿಯ ಪರಿಕಲ್ಪನೆಗಳನ್ನು ನಮ್ಮ ರಂಗಭೂಮಿಯಲ್ಲಿ ಅನ್ವಯ ಮಾಡಿಕೊಳ್ಳುವ ಕಾಲವಾಗಿತ್ತು. ರಂಗಚಟುವಟಿಕೆಗಳಲ್ಲಿ ಪಾಶ್ಚಿಮಾತ್ಯ ಪ್ರಯೋಗಗಳನ್ನು ಅನುಸರಿಸುವುದಾಗಿತ್ತು. ಈ ರೀತಿಯ ಅಂತರನ್ವಯಗಳಿಂದಾಗಿ ಸಮಕಾಲೀನ ರಂಗ ಚಳವಳಿಗೆ

ತೀವ್ರ ಚಾಲನೆ ದೊರಕಿತು. ೧೯೪೫ರಲ್ಲಿ ಪರ್ವತವಾಣಿ ಅವರ 'ಬಹದ್ದೂರ್ ಗಂಡು' (ರೂಪಾಂತರ ಸೃಷ್ಟಿ) ನಾಟಕವು ನಿರಂತರ ೧೫೦ ರಂಗಪ್ರದರ್ಶನ ಕಂಡಿತು.

ಅದರಲ್ಲಿ ಯಮುನಾ ಮೂರ್ತಿ ಮೊಟ್ಟಮೊದಲ ಹವ್ಯಾಸಿ ರಂಗಭೂಮಿಯ ಸ್ತ್ರೀ ಕಲಾವಿದೆಯಾಗಿ ಪ್ರವೇಶಿಸಿ ಮುಖ್ಯ ಪಾತ್ರವನ್ನು ವಹಿಸಿದ್ದರು. ೧೯೫೪ರಲ್ಲಿ ವಿಮಲಾ ರಂಗಾಚಾರ್ ಅವರು 'ಕಲಾಜ್ಯೋತಿ' ಸಂಸ್ಥೆಯಲ್ಲಿ ಕೈಲಾಸಂ ಅವರ 'ಅಮ್ಮಾವ್ರ ಗಂಡ' ನಾಟಕದಲ್ಲಿ ಮೊದಲ ಬಾರಿಗೆ ನಟಿಸಿದ್ದರು. ಕನ್ನಡ, ಇಂಗ್ಲೀಷ್ ಸಂಸ್ಕೃತ ಮೂರೂ ಭಾಷೆಗಳನ್ನು ಕಲಿತಿದ್ದ ಇವರು ಮೂರೂ ಭಾಷೆಗಳಲ್ಲಿ ಒಟ್ಟು ೫೦ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ನವೋದಯ ಕಾಲದ ನಾಟಕಕಾರರಲ್ಲಿ ಶ್ರೀರಂಗ ಮತ್ತು ಜಿ.ಬಿ.ಜೋಶಿ ಅವರು ರಂಗಭೂಮಿಯ ಹೊಸ ಅಲೆಗಳನ್ನು ಅರ್ಥೈಸಿಕೊಂಡು ಅದಕ್ಕೆ ಅನುಗುಣವಾಗಿ ನಾಟಕಗಳನ್ನು ಬರೆದರು. ಇದು ೧೯೫೫ರ ನಂತರದ ಕಾಲದಲ್ಲಿ ಘಟಿಸಿತು. ಸ್ವಾತಂತ್ರ್ಯಾನಂತರದಲ್ಲಿ ದೇಶದ ಜನರಲ್ಲಿ ಮೂಡಿದ ಹೊಸ ದೃಷ್ಟಿಕೋನವೇ ಇದಕ್ಕೆ ಕಾರಣವಾಗಿತ್ತು.

ನಾಟಕಕಾರರಲ್ಲಿ ಗಿರೀಶ್ ಕಾರ್ನಾಡ್, ಲಂಕೇಶ್, ಚಂದ್ರಶೇಖರ ಪಾಟೀಲ್, ಚಂದ್ರಶೇಖರ ಕಂಬಾರ, ಬಿ.ಸಿ.ರಾಮಚಂದ್ರ ಶರ್ಮ, ಎ.ಕೆ.ರಾಮಾನುಜನ್, ಕೀರ್ತಿನಾಥ ಕುರ್ತುಕೋಟಿ, ಎನ್.ರತ್ನ, ಪೂರ್ಣಚಂದ್ರ ತೇಜಸ್ವಿ ಮುಂತಾದವರು ರಂಗಭೂಮಿ ಚಳವಳಿಗೆ ಒತ್ತಾಸೆಯಾದವರಲ್ಲಿ ಮುಖ್ಯರು. ಬಿ.ಚಂದ್ರಶೇಖರ್, ಬಿ.ವಿ.ಕಾರಂತ್, ಎಂ.ಎಸ್.ನಾಗರಾಜ್, ಕೆ.ವಿ.ಸುಬ್ಬಣ್ಣ, ಮತ್ತು ಎನ್.ರತ್ನ ರಂಥ ಹೊಸ ನಾಟಕ ನಿರ್ದೇಶಕರು ಸಂದರ್ಭಕ್ಕೆ ತಕ್ಕಂತೆ ಸೂಕ್ತತೆಯನ್ನರಿತು (ರಂಗಭೂಮಿ ಚಳವಳಿ) ನಾಟಕ ರಚಿಸಿದರು. ಈ ಅವಧಿಯಲ್ಲಿ 'ಯಯಾತಿ', 'ತುಘಲಕ್', 'ಕೇಳು ಜನಮೇಜಯ', 'ತೆರೆಗಳು', 'ಜೋಕುಮಾರಸ್ವಾಮಿ', 'ಅಪ್ಪ', 'ಕುಂಟಕುಂಟ ಕುರವತ್ತಿ', 'ನೀಲಿ ಕಾಗದ', 'ನೆರಳು', 'ಬ್ರಹ್ಮರಾಕ್ಷಸ', 'ಎಲ್ಲಿಗೆ', 'ಯಮಳ ಪ್ರಶ್ನೆ' ಮುಂತಾದ ನಾಟಕಗಳು ಪ್ರಮುಖವಾಗಿ ಪ್ರದರ್ಶನಗೊಂಡು, ಇಂದಿಗೂ ಜನಪ್ರಿಯವಾಗಿಯೇ ಉಳಿದಿವೆ.

ಶ್ರೀರಂಗರನ್ನು ನಾಟಕ ಕ್ಷೇತ್ರದ ಹರಿಕಾರರೆನ್ನಬಹುದು. ಸುಮಾರು ೪೫ ನಾಟಕಗಳನ್ನು ರಚಿಸಿದ ಕೀರ್ತಿ ಅವರದು. ಅವರ ಎಲ್ಲ ನಾಟಕಗಳು ರಾಜ್ಯದಲ್ಲಿನ ಸಾಮಾಜಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುವಂಥಹವು. 'ಹರಿಜನ್ವಾರ', 'ಪ್ರಪಂಚ ಪಾನಿಪತ್ತು', 'ಸಂಧ್ಯಾಕಾಲ', 'ಶೋಕಚಕ್ರ', 'ಕೇಳು ಜನಮೇಜಯ', 'ನೀ ಕೊಡೆ ನಾ ಬಿಡೆ', 'ಸ್ವರ್ಗಕ್ಕೆ ಮೂರೇ ಬಾಗಿಲು', 'ಅಗ್ನಿ ಸಾಕ್ಷಿ' ಮುಂತಾದವು ಶ್ರೀರಂಗರ ಪ್ರಖ್ಯಾತ ನಾಟಕಗಳಾಗಿವೆ. ಹೀಗೆಯೇ ಉಳಿದ ನಾಟಕಕಾರರ ಕೊಡುಗೆಯೂ ಅಷ್ಟೇ ಮಹತ್ವಪೂರ್ಣವಾಗಿವೆ. ಅವರಲ್ಲಿ ಜಿ.ಬಿ.ಜೋಷಿ, ಗಿರೀಶ್ ಕಾರ್ನಾಡ್, ಪಿ.ಲಂಕೇಶ್, ಚಂದ್ರಶೇಖರ ಕಂಬಾರರು ಅತ್ಯಂತ ಪ್ರಮುಖರು. ಸತ್ತವರ ನೆರಳು, ಮಾನಿಷಾದ, ಹಯವದನ, ಅಂಜುಮಲ್ಲಿಗೆ, ಹಿಟ್ಟಿನ ಹುಂಜ, ಕ್ರಾಂತಿ ಬಂತು ಕ್ರಾಂತಿ, ಸಂಗ್ಯಾ ಬಾಳ್ಯಾ, ಬಕ, ನೆರಳು, ನೀಲಿ ಕಾಗದ, ಜೋಕುಮಾರ ಸ್ವಾಮಿ, ಸಿರಿಸಂಪಿಗೆ, ಋಷ್ಯಶೃಂಗ, ಮಹಾಮಾಯಿ ಮುಂತಾದುವುಗಳು ಇವರ ಗಮನಾರ್ಹ ನಾಟಕಗಳು.

ಈಚಿನ ರಂಗಭೂಮಿ ವಲಯದ ಉತ್ಸಾಹಿಗಳಾದ ಬಿ.ಎಸ್. ವೆಂಕಟರಾಮ್, ಪ್ರಸನ್ನ, ಹೆಚ್.ಕೆ.ರಾಮಚಂದ್ರಮೂರ್ತಿ, ಜಿ.ವಿ.ಶಿವಾನಂದ, ಸಿ.ಆರ್.ಸಿಂಹ, ಮತ್ತು ಕ.ವೆಂ. ರಾಜಗೋಪಾಲ್ ಬ್ರೆಕ್ಟನ ಆಂಗ್ಲ ಭಾಷಾ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ರಂಗಪ್ರಯೋಗ ಮಾಡಿದ್ದಾರೆ. ಸಿದ್ದಗಂಗಯ್ಯ ಕಂಬಾಳು ಅವರು ಬೆನಕನ ಕೆರೆ, ಶುನಶ್ಯೇಫ, ತಿರುಕರಾಜ, ಚೋರಪುರಾಣ ಇತ್ಯಾದಿ ನಾಟಕಗಳನ್ನು ರಚಿಸಿದ್ದಾರೆ ಹಾಗೂ ನಾಟಕ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಎಲ್.ಎನ್.ಮುಕಂದರಾಜ್ ಅವರು ಶುವಾಲಿ ಮಿತ್ರ ಅವರ ಬಂಗಾಳ ನಾಟಕವನ್ನು 'ನಾಥರಿದ್ದೂ ಅನಾಥ' ಎಂದು ಕನ್ನಡಕ್ಕೆ ತಂದಿದ್ದಾರೆ; 'ವೈಶಂಪಾಯನ ತೀರ' ಎಂಬ ನಾಟಕವನ್ನು ಸಹ ರಚಿಸಿದ್ದಾರೆ. ೧೯೮೦ರ ದಶಕದ ನಾಟಕರಂಗದಲ್ಲಿ ಉತ್ಸಾಹಿಗಳೆನಿಸಿದ್ದ ಬಿ.ವಿ.ವೈಕುಂಠರಾಜು, ಶ್ರೀನಿವಾಸ ರಾಜು, ಟಿ.ಎನ್. ಸೀತಾರಾಮ್, ವಿಷ್ಣು(ವಿಶು) ಕುಮಾರ್, ಶೂದ್ರ ಶ್ರೀನಿವಾಸ್, ಮತ್ತು ಡಿ.ಆರ್. ನಾಗರಾಜ್ ರಂಗಭೂಮಿ ಪರಂಪರೆಯನ್ನು ಮುಂಚೂಣಿಗೊಯ್ಯುವಲ್ಲಿ ಯಶಸ್ವಿಯಾದರು. ಬಿ.ವಿ.ವೈಕುಂಠರಾಜು ಅವರ ಸಂದರ್ಭ, ಟಿ.ಎನ್.ಸೀತಾರಾಮ್ ಅವರ 'ಆಸ್ಫೋಟ', ಶ್ರೀನಿವಾಸರಾಜು ಅವರ 'ನಾಳೆ ಯಾರಿಗೂ ಇಲ್ಲ', 'ಯಾರಿಲ್ಲಿಗೆ ಬಂದವರು' ಮತ್ತು ವಿಷ್ಣುಕುಮಾರ್ ಅವರ 'ಡೊಂಕುಬಾಲದ ನಾಯಕರು', ಕೃತಿಗಳು ಈ ನಾಟಕಕಾರರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಿವೆ. ರಂಗಚಳವಳಿಯು ಮೈಸೂರು, ಧಾರವಾಡ ಮತ್ತು ಬೆಂಗಳೂರಿಗೆ ಮೊದಲಿಗೆ ಸೀಮಿತಗೊಂಡಿದ್ದುದು, ನಂತರ ರಾಜ್ಯದ ಎಲ್ಲ ಜಿಲ್ಲಾಕೇಂದ್ರಗಳಿಗೂ ಹರಡಿದೆ. ತರುಣ ನಿರ್ದೇಶಕರಾದ ಎಂ.ಎಸ್.ಪ್ರಭು, ಆರ್.ನಾಗೇಶ್, ಟಿ.ಎನ್.ನರಸಿಂಹನ್, ಸಿ.ಜಿ.ಕೃಷ್ಣಸ್ವಾಮಿ ಹಾಗೂ ಅನುಭವಿ ನಿರ್ದೇಶಕರಾದ ಪ್ರಸನ್ನ, ಬಿ.ಜಯಶ್ರೀ ಯಂಥವರಿಗೆ ಬಹಳ ಬೇಡಿಕೆಯಿದೆ. ಸಾಗರದ ಬಳಿಯ ಹೆಗ್ಗೋಡಿನ ಕೆ.ವಿ.ಸುಬ್ಬಣ್ಣ ಅವರು ರಂಗ ಸಂಸ್ಕೃತಿಯನ್ನು ಬೆಳೆಸಿ ಪೋಷಿಸಿದ ಕಾರಣ ಅಂತಾರಾಷ್ಟ್ರೀಯ ಪ್ರತಿಷ್ಠಿತ 'ರ್‍ಯಾಮನ್ ಮ್ಯಾಗ್ಸಸೆ' ಪ್ರಶಸ್ತಿಯನ್ನು ಪಡೆದರು. ಕರ್ನಾಟಕದ ಮುಡಿಗೆ ಇದೊಂದು ಹೆಮ್ಮೆಯ ಗರಿ.

ಕಳೆದ ದಶಕದಲ್ಲಿ ರಂಗಚಳವಳಿಯು ಸಾಗರದಷ್ಟು ವಿಶಾಲವಾದ ಮಾರ್ಪಾಟು ಹೊಂದಿತು. ಆದರೆ ಅದು 'ಪ್ರೇಕ್ಷಕರ' ಆಸಕ್ತಿಯನ್ನು ಹಿಡಿದಿಡುವಲ್ಲಿ ವಿಫಲಗೊಂಡು ಕೆಲವಾರು ನಾಟಕಗಳು ಮುಂದೆ ಹೇಳ ಹೆಸರಿಲ್ಲವಾದುವು. ರಂಗಭೂಮಿಯ ಅನೇಕ ಪ್ರಸಿದ್ಧ ನಟರು, ಸಿನಿಮಾದತ್ತ ಮುಖಮಾಡಿದರು. ಇನ್ನೂ ಕೆಲವರು ಕರ್ನಾಟಕದಾಚೆ ಅವಕಾಶಗಳನ್ನರಸಿ ಹೋದರು. ಹೀಗೆ ಮಂಕಾದ ರಂಗಪರಿಸ್ಥಿತಿಯನ್ನು ಹೋಗಲಾಡಿಸಲು ಈ ದಶಕದಲ್ಲಿ ಕೆಲವು ಹೊಸ ಒಲವುಗಳು ಚಿಗುರಿದವು. ಜನಪ್ರಿಯ ಕಾದಂಬರಿಗಳ, ಸಣ್ಣಕಥೆಗಳ ಹಾಗೂ ಕವನಗಳ ರಂಗರೂಪಾಂತರಗಳು ರಂಗಭೂಮಿಯ ಮೇಲೆ ಕಾಣಿಸಿಕೊಂಡವು. ಚೋಮನದುಡಿ, ಕರಿಮಾಯಿ, ತಬರನ ಕಥೆ, ಒಡಲಾಳ, ಸಂಸ್ಕಾರ, ಚಿದಂಬರ ರಹಸ್ಯ, ಚಿಕ್ಕವೀರರಾಜೇಂದ್ರ, ಕಾಕನ ಕೋಟೆ, ಕಲ್ಕಿ, ಹೇಳತೇನ ಕೇಳ, ಸಾವಿರಾರು ನದಿಗಳು, ವೈಶಾಖ, ಕುಸುಮಬಾಲೆ, ಭೂಮಿಗೀತ, ಕಿಂದರಿಜೋಗಿ, ಮೂಕಜ್ಜಿಯ ಕನಸುಗಳು ಇತ್ಯಾದಿ ನಾಟಕಗಳು ರಂಗದ ಮೇಲೆ ಪ್ರದರ್ಶಿತಗೊಂಡವು. ಹೀಗೆಯೇ ಜಂಗಮ ಬದುಕು, ಹೆಚ್.ಎಸ್. ಶಿವಪ್ರಕಾಶ್ ಅವರ 'ಸಿಂಗಿರಾಜ', 'ಮಹಾಚೈತ್ರ', ಕುವೆಂಪು ಅವರ 'ಜಲಗಾರ', ನಾಟಕಗಳು ಕೆ.ವಿ.ನಾಗರಾಜ ಮೂರ್ತಿ ನಿರ್ದೇಶನ'ದಲ್ಲಿ ಪ್ರದರ್ಶನಗೊಂಡವು.

೧೯೮೩ ರಲ್ಲಿ ಸಿ.ಆರ್.ಸಿಂಹ ಅವರಿಂದ ಏಕವ್ಯಕ್ತಿ ರಂಗಪ್ರದರ್ಶನವಾದ, ಟಿಪಿಕಲ್ ಟಿ.ಪಿ.ಕೈಲಾಸಂ ಎಂಬ ನಾಟಕ

ಹೊಸ ಪ್ರವೃತ್ತಿಗೆ ಉದಾಹರಣೆಯಾಯಿತು. ಅದರ ಯಶಸ್ವೀ ಪ್ರದರ್ಶನದಿಂದಾಗಿ 'ನೀಗಿಕೊಂಡ ಸಂಸ', 'ಷೇಕ್ಸ್‌ಪಿಯರನ ಸ್ವಪ್ನ ನೌಕೆ', 'ರಸಋಷಿ ಕುವೆಂಪು ದರ್ಶನ' ಮುಂತಾದ ಅನೇಕ ಸಾದೃಶ ನಾಟಕಗಳು ಬೆಳಕು ಕಂಡವು. ಈ ಅವಧಿಯಲ್ಲಿ ಅನೇಕ ನಾಟಕಗಳು ಶತದಿನೋತ್ಸವ ಆಚರಿಸುವ ಮೂಲಕ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಅಪೂರ್ವ ದಾಖಲೆ ನಿರ್ಮಿಸಿದವು. 'ಬೆನಕ' ತಂಡದ 'ಸತ್ತವರ ನೆರಳು', ಕಲಾಗಂಗೋತ್ರಿಯ 'ಮುಖ್ಯಮಂತ್ರಿ', 'ರಂಗಸಂಪದ'ದ 'ಸಂಗ್ಯಾಬಾಳ್ಯಾ', 'ಯಶಸ್ವೀ ಕಲಾವಿದರು' ತಂಡದ 'ಸಂಸಾರದಲ್ಲಿ ಸರಿಗಮ' 'ಸಂಕೇತ' ತಂಡದ 'ನೋಡಿ ಸ್ವಾಮಿ ನಾವಿರೋದೇ ಹೀಗೆ' ಮತ್ತು 'ನಾಗಮಂಡಲ', ನಟರಂಗದ 'ತುಘಲಕ್', ವೇದಿಕೆ ತಂಡದ ಟಿಪಿಕಲ್ 'ಟಿ.ಪಿ.ಕೈಲಾಸಂ' ಮುಂತಾದವುಗಳನ್ನು ಹೆಸರಿಸಬಹುದು. 'ಪ್ರಯೋಗರಂಗ' ತಂಡದ ಬಿ.ನಾಗರಾಜ ಮೂರ್ತಿ ನಿರ್ಮಿಸಿದ, ಸುರೇಶ್ ಆನಗಳ್ಳಿ ನಿರ್ದೇಶನದ 'ಮಂಟೇಸ್ವಾಮಿ ಕಥಾ ಪ್ರಸಂಗ'ವು ೨೩೬ ಪ್ರದರ್ಶನಗಳನ್ನು ಕಂಡಿದೆ.

'ನಮ್ಮ ನಿಮ್ಮೊಳಗೊಬ್ಬ' ನಾಟಕವು ೧೧೯ ಪ್ರದರ್ಶಗಳನ್ನು ನೀಡಿದೆ. 'ಒಂದು ಸೈನಿಕನ ವೃತ್ತಾಂತ'ದ ನಿರ್ದೇಶನಕ್ಕೆ ರಾಷ್ಟ್ರೀಯ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿದೆ. ಕರ್ನಾಟಕದ ವಿವಿಧ ಕೇಂದ್ರಗಳಲ್ಲಿ ರಂಗಭೂಮಿಗೆ ಸಮರ್ಪಿಸಿಕೊಂಡ ರಂಗಾಸಕ್ತರು ಹಾಗೂ ವಿವಿಧ ಸಂಸ್ಥೆಗಳು ರಂಗಚಳವಳಿಗೆ ವಿಶಿಷ್ಟ ಉಪಯುಕ್ತ ಸೇವೆಯನ್ನು ಸಲ್ಲಿಸುತ್ತಿವೆ. 'ರಂಗಶಂಕರ', 'ಅಮರ ಕಲಾ ಸಂಘ', 'ಸಮುದಾಯ', 'ಸಮತೆಂತೊ' (ಮೈಸೂರು), 'ಭೂಮಿಕಾ', ಅಭಿವ್ಯಕ್ತಿ, ಯವನಿಕಾ, ಅಭಿನಯ, ರಂಗಭೂಮಿ, ಕಲಾಮಂದಿರ, ನಟರಂಗ, ಪ್ರಯೋಗರಂಗ, ರಥಬೀದಿ ಗೆಳೆಯರು (ಉಡುಪಿ), ರಂಗನಿರಂತರ ಮುಂತಾದ ನಾಟಕ ತಂಡಗಳು ರಂಗಭೂಮಿಯನ್ನು ಜೀವಂತವಿರಿಸಿ ತಮ್ಮ ಸೇವೆಯನ್ನು ಸಲ್ಲಿಸಿವೆ.

ನಾ.ದಾಮೋದರ ಶೆಟ್ಟಿ, ಆನಂದ ಗಾಣಿಗ, ದೇವಿ ಪ್ರಸಾದ್, ಐ.ಕೆ.ಬೋಳುವಾರು (ದ.ಕನ್ನಡ); ಶ್ರೀನಿವಾಸ ತಾವರಗೇರಿ, ಅಶೋಕ ಬಾದರದಿನ್ನಿ, ಧ್ರುವರಾಜ್ ದೇಶಪಾಂಡೆ, (ವಿಜಯಪುರ), ಶ್ರೀಪತಿ ಮಂಜನಬೈಲು (ಬೆಳಗಾವಿ), ಎಂ.ಬಿ.ಪಾಟೀಲ್ ಮತ್ತು ಗಿರೀಶ್ ಹಿರೇಮಠ (ರಾಯಚೂರು); ಮುದೇನೂರು ಸಂಗಣ್ಣ (ಚಿಗಟೇರಿ), ಡಾ.ಬಸವರಾಜ ಮಲಸೆಟ್ಟಿ (ಹೊಸಪೇಟೆ), ವಿಶ್ವನಾಥ ವಂಶೀಕೃತಮಠ (ಇಳಕಲ್ಲು), ಕಾರಿಯಪ್ಪ (ಕೊಡಗು) ಸುರೇಶ್ ಆನಗಳ್ಳಿ. ಆರ್.ನಾಗೇಶ್, ಪ್ರಸನ್ನ, ಬಸವಲಿಂಗಯ್ಯ ಮತ್ತಿತರರು ರಂಗಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ರಾಜ್ಯದ ಹೊರಗಡೆಯಲ್ಲೂ ಅನೇಕ ರಂಗಾಸಕ್ತರು, ಸಂಸ್ಥೆಗಳು, ಕನ್ನಡ ನಾಟಕಗಳ ಸತ್ವವನ್ನು ಪ್ರಸರಿಸುವಲ್ಲಿ ಸಕ್ರಿಯವಾಗಿ ಶ್ರಮಿಸುತ್ತಿವೆ. ಅಂತವರಲ್ಲಿ ವೇಣುಗೋಪಾಲ್ (ಕಾಸರಗೋಡು) ಮುಂಬಯಿಯ ಬಲ್ಲಾಳರು, ಮಂಜುನಾಥ್, ಕರ್ನಾಟಕ ಸಂಘ, ಮತ್ತು ಮೈಸೂರು ಅಸೋಸಿಯೇಷನ್; ಕನ್ನಡ ಭಾರತಿ ನಾರಾಯಣ ರಾವ್, ಪ್ರಭಾಕರ ರಾವ್ ಮತ್ತು ನಾಗರಾಜ್ (ಹಳೆ ದಿಲ್ಲಿ) ಮುಂತಾದವರನ್ನು ಪ್ರಮುಖವಾಗಿ ಈ ದಿಸೆಯಲ್ಲಿ ಹೆಸರಿಸಬಹುದು.

ಈ ದಶಕದ ಉತ್ತರಾರ್ಧದಲ್ಲಿ ಮಹತ್ವದ ನಾಟಕಗಳು ಮೂಡಿಬಂದುವು. ಎಚ್.ಎಸ್.ಶಿವಪ್ರಕಾಶ್ 'ಮಂಟೇಸ್ವಾಮಿ ಕಥಾಪ್ರಸಂಗ' ಮತ್ತು 'ಮಾದಾರಿ ಮಾದಯ್ಯ' ನಾಟಕಗಳನ್ನು ಬರೆದರು. ಟಿ.ಎನ್.ಸೀತಾರಾಮ್ ಅವರ 'ನಮ್ಮೊಳಗೊಬ್ಬ ನಾಜೂಕಯ್ಯ', ಗೋಪಾಲ ವಾಜಪೇಯಿ ಅವರ 'ದೊಡ್ಡಪ್ಪ', ಸಿ.ಆರ್.ಸಿಂಹ ಅವರ 'ಭೈರವಿ', ಚಂದ್ರಶೇಖರ ಕಂಬಾರರ 'ಸಿರಿ ಸಂಪಿಗೆ', ಗಿರೀಶ್ ಕಾರ್ನಾಡರ 'ತಲೆದಂಡ' ಮತ್ತು 'ನಾಗಮಂಡಲ' ನಾಟಕಗಳೂ ಪ್ರಕಟವಾದವು. 'ಸೂತ್ರಧಾರ' ವಾರ್ತಾ ಪತ್ರಿಕೆಯು ಈಗ ತನ್ನ ಹೆಸರನ್ನು 'ಈ ಮಾಸ ನಾಟಕ' ಎಂದು ಬದಲಾಯಿಸಿಕೊಂಡು ಎಲ್.ಕೃಷ್ಣಪ್ಪ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದೆ. 'ರಂಗ ತರಂಗ', 'ರಂಗತೋರಣ' ಮುಂತಾದ ರಂಗ ವಾರ್ತಾಪತ್ರಿಕೆಗಳು ಹಾಗೂ ಅನೇಕ ಸಾಂಸ್ಕೃತಿಕ ಪತ್ರಿಕೆ, ನಿಯತಕಾಲಿಕೆಗಳು ಪ್ರಕಟವಾಗುತ್ತಿದೆ. ಇವುಗಳು ರಂಗಭೂಮಿಯ ಚಟುವಟಿಕೆಗಳನ್ನು ದಾಖಲಿಸಿಕೊಂಡು ಬರುತ್ತಿದೆ.

೧೯೯೦ರಲ್ಲಿ ಪ್ರತಿಭಾವಂತ ತರುಣ, ನಟ-ನಿರ್ದೇಶಕ ಶಂಕರನಾಗ್ ಅವರ ಅನಿರೀಕ್ಷಿತ ನಿಧನದಿಂದಾಗಿ ಹವ್ಯಾಸಿ ರಂಗ ಭೂಮಿಗೆ ತುಂಬಲಾರದ ನಷ್ಟ ಉಂಟಾಯಿತೆನ್ನಬಹುದು. ಮುಂದೆ ೨೦೦೨ರಲ್ಲಿ ಬಿ.ವಿ.ಕಾರಂತರ ಮರಣ; ಜೊತೆಗೆ ಅಶೋಕ ಬಾದರದಿನ್ನಿ ಧ್ರುವರಾಜ ದೇಶಪಾಂಡೆ, ಸಿ.ಜಿ.ಕೃಷ್ಣಸ್ವಾಮಿ ಪ್ರೇಮಾಕಾರಂತರೂ ಕೂಡ ಇಂದಿಲ್ಲ. ಈ ದಶಕದಲ್ಲಿ ಕನ್ನಡ ಹವ್ಯಾಸಿ ರಂಗಭೂಮಿಯು ವಿದೇಶಕ್ಕೂ ಹೋಗಿ ಹೆಸರು ಮಾಡಿತು. ಸಿ.ಆರ್.ಸಿಂಹ ಅವರ 'ಟಿಪಿಕಲ್ ಟಿ.ಪಿ.ಕೈಲಾಸಂ' ೧೯೮೬ರಲ್ಲಿ, ಅಮೇರಿಕ ಮತ್ತು ಕೆನಡಾಗಳಿಗೆ ಹೋಗಿ ೧೬ ಪ್ರದರ್ಶನಗಳನ್ನು ನೀಡಿ, ವಿದೇಶಕ್ಕೆ ಹೋದ ಕನ್ನಡದ ಮೊಟ್ಟ ಮೊದಲ ನಾಟಕ ಎಂದು ದಾಖಲೆ ನಿರ್ಮಿಸಿತು. ಬಿ.ಜಯಶ್ರೀ ಅವರು 'ಲಕ್ಷಾಪತಿ ರಾಜನ ಕಥೆ' ನಾಟಕವನ್ನು ಈಜಿಪ್ಟ್ ಮತ್ತು ಬಲ್ಗೇರಿಯ ದೇಶಗಳಲ್ಲಿ ಪ್ರದರ್ಶಿಸಿದರು. ಪ್ರಭಾತ್ ಕಲಾವಿದರು ಪೂರ್ವಾಂತ್ಯ ದೇಶ ಮತ್ತು ಸಂಯುಕ್ತ ಸಂಸ್ಥಾನಗಳಿಗೆ ಹೋಗಿ ಪ್ರದರ್ಶನ ನೀಡಿದರು. ಮೈಸೂರಿನ ರಂಗಾಯಣವು ನ್ಯೂಯಾರ್ಕ್‌ನಲ್ಲಿ 'ಹಿಪ್ಪೊಲೈಟಸ್' ನಾಟಕದ ಪ್ರದರ್ಶನವನ್ನು ನೀಡಿತು.

ಕೆ.ವಿ.ಸುಬ್ಬಣ್ಣ ಅವರ 'ನೀನಾಸಂ', 'ತಿರುಗಾಟ' ಮತ್ತು ರಾಜ್ಯ ಸರ್ಕಾರದ ಮೈಸೂರಿನ 'ರಂಗಾಯಣ' ನಾಟಕ ಸಂಸ್ಥೆಗಳು ಕ್ರಿಯಾಶೀಲವಾಗಿವೆ. ಚಿದಂಬರರಾವ್ ಜಂಬೆ, ಕೆ.ವಿ.ಅಕ್ಷರ, ಕೆ.ಜಿ.ಕೃಷ್ಣಮೂರ್ತಿ ಮತ್ತು ಅತಿಥಿ ನಿರ್ದೇಶಕ ಪ್ರಸನ್ನರಂತಹ ಪ್ರತಿಭಾನ್ವಿತ ರಂಗಭೂಮಿ ನಿರ್ದೇಶಕರ ಸಹಕಾರದಿಂದ 'ತಿರುಗಾಟ'ವು ಪ್ರತಿವರ್ಷ ಮೂರು ಅಥವಾ ನಾಲ್ಕು ನಾಟಕಗಳನ್ನು ಪ್ರದರ್ಶಿಸುತ್ತಿದೆ. 'ರಂಗಾಯಣ'ವು ಬಿ.ವಿ.ಕಾರಂತರ ನೇತೃತ್ವದಲ್ಲಿ ರಂಗ ಪ್ರಶಿಕ್ಷಣ ಸಂಸ್ಥೆಯಾಗಿ ರಾಜ್ಯ ಸರ್ಕಾರದ ಆಶ್ರಯದಲ್ಲಿ ನಡೆದು ಬಂದಿತು. ಜಯತೀರ್ಥ ಜೋಶಿ, ಬಸವಲಿಂಗಯ್ಯ, ರಘುನಂದನ, ಗಂಗಾಧರಸ್ವಾಮಿ ಮೊದಲಾದ ತರಬೇತಿಗೊಂಡ ನುರಿತ, ಪ್ರತಿಭಾನ್ವಿತರ ಸಹಕಾರದಿಂದ ರಂಗಾಯಣವು 'ಕಿಂದರಿಜೋಗಿ', 'ಷೇಕ್ಸ್ ಪ್ರಿಯರಿಗೆ ನಮಸ್ಕಾರ', 'ಕುಸುಮಬಾಲೆ', 'ಭೂಮಿಗೀತ' ಮತ್ತು 'ಹಿಪ್ಪೊಲೈಟಸ್' ಮುಂತಾದ ಮಹತ್ವದ ನಾಟಕ ನಿರ್ಮಾಣಗಳಿಂದ ಹೆಸರು ಗಳಿಸಿವೆ. ಕಾರಂತರ ನಂತರ ಸಿ.ಆರ್.ಜಂಬೆಯವರ ನೇತೃತ್ವವು ರಂಗಾಯಣಕ್ಕಿತ್ತು. ಆ ನಂತರದಲ್ಲಿ ಬಸವಲಿಂಗಯ್ಯ ಅವರು ರಂಗಾಯಣದ ನಿರ್ದೇಶಕರಾದರು. ಇವರು ನಿರ್ದೇಶಿಸಿದ ರಾಷ್ಟ್ರಕವಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿನ ದಟ್ಟ ಮಲೆನಾಡಿನ ಅನುಭವವನ್ನು ತಂದುಕೊಡುವ ರೀತಿಯಲ್ಲಿ ರಂಗರೂಪವನ್ನು ಪ್ರದರ್ಶಿಸಿ ಅಪಾರ ಜನಮನ್ನಣೆಗಳಿಸಿ ದಾಖಲೆಯ ನಾಟಕವಾಗಿದೆ.

ಲೇಖಕರೂ, ನಾಟಕಕಾರರೂ ಆಗಿದ್ದ ಲಿಂಗದೇವರು ಹಳೆಮನೆಯವರು ರಂಗಾಯಣದ ನಿರ್ದೇಶಕರಾಗಿದ್ದರು. ಪ್ರಸ್ತುತ ಬಿ.ವಿ.ರಾಜಾರಾಂ ನಿರ್ದೇಶಕರಾಗಿದ್ದಾರೆ. ಇಂದು ಪ್ರಯೋಗರಂಗ ಮತ್ತು ಯುವರಂಗಗಳು ತಮ್ಮ ಸ್ವಂತ ನಿರ್ಮಾಣಗಳಲ್ಲದೆ ಬೆಂಗಳೂರಿನಲ್ಲಿ ಕಾಲೇಜು ಮತ್ತು ಕೈಗಾರಿಕಾ ಸಂಸ್ಥೆಗಳ ನಾಟಕ ತಂಡಗಳನ್ನು ಪ್ರೋತ್ಸಾಹಿಸಲು ನಾಟಕ ಸ್ಪರ್ಧೆಗಳನ್ನು ಸತತವಾಗಿ ಏರ್ಪಡಿಸುತ್ತಿದೆ. ಸಿ.ಜಿ.ಕೆ.ಅವರ 'ರಂಗ ನಿರಂತರ'ವು, ತರುಣ ಬರಹಗಾರರ ತಂಡದ ಮೂಲಕ ನಾಟಕರಚನಾ ಶಿಬಿರವನ್ನು ಏರ್ಪಡಿಸುತ್ತಿದೆ.

ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ರಾಜ್ಯಾದ್ಯಂತ ನಾಟಕ ಕಾರ್ಯಾಗಾರ ಹಾಗೂ ನಾಟಕೋತ್ಸವಗಳನ್ನು ಏರ್ಪಡಿಸಿ ಅರ್ಹ ವೃತ್ತಿ ನಾಟಕ ಕಂಪನಿಗಳಿಗೆ ಅನುದಾನ ನೀಡಿ, ರಂಗಾಸಕ್ತರಿಗೆ ಉತ್ತೇಜನವನ್ನು ನೀಡುತ್ತಿದೆ. ರಂಗಭೂಮಿಯ ನಟರಿಗೆ ಮಾಸಾಶನದ ನೆರವನ್ನೂ ನೀಡುತ್ತಿದೆ. ಪ್ರಸಿದ್ಧ ಚಲನಚಿತ್ರ ನಟರಾದ ಡಾ.ರಾಜಕುಮಾರ್ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿಯು 'ಕಲಾ ಕೌಸ್ತುಭ' ಎಂಬ ಬಿರುದನ್ನೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಕರ್ನಾಟಕ ರತ್ನ' ಎಂಬ ಪ್ರಶಸ್ತಿಯನ್ನೂ ನೀಡಿ ಗೌರವಿಸಿವೆ.

### ಗುಬ್ಬಿ ವೀರಣ್ಣ ಪ್ರಶಸ್ತಿ

ವೃತ್ತಿ ರಂಗಭೂಮಿಯಲ್ಲಿ ಗಣನೀಯ ಸೇವೆ ಸಂದಾಯ ಮಾಡಿದ ಕಲಾವಿದರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ೧೯೯೪ರಿಂದ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ' ಒಂದು ಲಕ್ಷಗಳನ್ನೊಳಗೊಂಡಿದ್ದು, ಈ ಪ್ರಶಸ್ತಿ ಪಡೆದ ಕಲಾವಿದರು; ಏಣಗಿ ಬಾಳಪ್ಪ (೧೯೯೪), ಬಿ.ವಿ.ಕಾರಂತ್ (೧೯೯೫), ಗಿರೀಶ್ ಕಾರ್ನಾಡ್ (೧೯೯೬), ಮಾಸ್ಟರ್ ಹಿರಣ್ಣಯ್ಯ (೧೯೯೭), ಹೆಚ್. ಕೆ.ಯೋಗಾನರಸಿಂಹ (೧೯೯೮), ಪಿ.ಬಿ.ಧುತ್ತರಗಿ (೧೯೯೯), ಎಚ್.ಎನ್.ಹೂಗಾರ (೨೦೦೦), ಆರ್.ನಾಗರತ್ನಮ್ಮ (೨೦೦೧), ಚಿಂದೋಡಿ ಲೀಲ (೨೦೦೨), ಬಿ.ಆರ್.ಅರಿಶಿನಗೋಡಿ (೨೦೦೩), ಬಸವರಾಜುಗುಡಿಗೇರಿ (೨೦೦೪), ರೇಣುಕಮ್ಮ ಮುರುಗೋಡು (೨೦೦೫), ಜಿ.ವಿ.ಮಾಲತಮ್ಮ (೨೦೦೬) ಸುಭದ್ರಮ್ಮ ಮನ್ಸೂರ್ (೨೦೦೭). ಹೆಚ್.ಟಿ.ಅರಸು (೨೦೦೮) ಪಿ.ವಜ್ರಪ್ಪ(೨೦೦೯), ಪ್ರಮೀಳಮ್ಮ ಗುಡೂರು(೨೦೧೦).ಎಲ್.ಬಿ.ಕೆ. ಅಲ್ದಾಳ (೨೦೧೧), ಲಕ್ಷ್ಮೀಬಾಯಿ ಏಣಗಿ (೨೦೧೨), ಫಕೀರಪ್ಪ ವರವಿ (೨೦೧೩), ರಂಗನಾಯಕಮ್ಮ (೨೦೧೪), ಆರ್.ಪರಮಶಿವನ್ (೨೦೧೫).

### ಜಾನಪದ ರಂಗಭೂಮಿ

ಕರ್ನಾಟಕದಲ್ಲಿ ಜಾನಪದ ರಂಗಭೂಮಿಗೂ ಶ್ರೀಮಂತ ಪರಂಪರೆ ಇದೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಹೇಗೆ 'ಯಕ್ಷಗಾನ'ದ ಹೆಸರನ್ನು ಕೇಳದವರಿಲ್ಲವೋ, ಹಾಗೇ ಕರ್ನಾಟಕದ ವಿವಿಧ ಭಾಗಗಳಲ್ಲಿ ದೊಡ್ಡಾಟ, ಬಯಲಾಟಗಳನ್ನು ಕೇಳದವರಿಲ್ಲ. ಬೊಂಬೆಯಾಟವು ಜನಪದದ ಇನ್ನೊಂದು ರೂಪವಾಗಿದ್ದು, ಅದನ್ನು ತೊಗಲು ಬೊಂಬೆಯಾಟ, ಕೀಲು ಬೊಂಬೆಯಾಟ ಎಂದು ವರ್ಗೀಕರಿಸಿದೆ. ತೊಗಲು ಗೊಂಬೆಯಾಟವು ಮನುಷ್ಯ ಅಥವಾ ಪ್ರಾಣಿ ಅಥವಾ ಅತಿಮಾನುಷ ರೂಪಗಳನ್ನು ತೊಗಲು ಬಳಸಿ ಮಾಡಿದ್ದು, ಛಾಯಾನಾಟಕವಾಗಿ ಪ್ರದರ್ಶಿತವಾಗುತ್ತದೆ. ಕೀಲುಗೊಂಬೆಯಾಟವು, ಬೊಂಬೆಗಳನ್ನು ಸೂತ್ರಗಳಿಗೆ(ದಾರ) ಹೊಂದಿಸಿ ಬೆರಳಿನಿಂದ ಅಭಿನಯವನ್ನು ನಿಯಂತ್ರಿಸಿ ಚಲಿಸುವಂತೆ ಮಾಡುವ ಆಟವಾಗಿದೆ. ಕಥಾಪ್ರಸಂಗಕ್ಕೆ ಸಾಹಿತ್ಯ ರೂಪವನ್ನು ಕೊಟ್ಟು ಆಟಗಳಲ್ಲಿ ತನ್ಮಯವಾಗಿಸುವಂತಹ ನಿರೂಪಣಾ ವಿಧಾನವಿರುತ್ತದೆ.

ಜನಪದ ಸಾಹಿತ್ಯದೊಡನೆ ನಿಕಟ ಸಂಬಂಧ ಹೊಂದಿರುವ ಇತರ ಜನಪದ ಕಲೆಗಳೆಂದರೆ, ಕಂಸಾಳೆ, ಚೌಡಿಕೆ, ಏಕತಾರಿ ಇತ್ಯಾದಿ. ಕುಣಿತಗಳ ಪೈಕಿ ಲಂಬಾಣಿ ನೃತ್ಯ, ಪಟ್ಟದ ಕುಣಿತ, ನಂದಿಕೋಲು ಕುಣಿತ, ವೀರಗಾಸೆ, ಡೊಳ್ಳು ಕುಣಿತ, ಗೊರವರ ಕುಣಿತ, ಗೊಂಡಾಲ ಇತ್ಯಾದಿಗಳೂ ಸೇರಿವೆ. ಇವೆಲ್ಲವು ಧಾರ್ಮಿಕ ಆಚರಣೆಗಳು ಗ್ರಾಮ ದೇವತೆಯೊಡನೆ ತಳಕುಹಾಕಿಕೊಂಡಿವೆ. ಯಕ್ಷಗಾನ ಹಾಗೂ ಬೊಂಬೆಯಾಟಗಳೂ ಇದೇ ಬಗೆಯ ಮೂಲಗಳಿಂದ ಹುಟ್ಟಿಕೊಂಡಿವೆ. ಉಡುಪಿ (ಎಂ.ಜಿ.ಎಂ ಕಾಲೇಜು) ಯ 'ಗೋವಿಂದ ಪೈ ಸಂಶೋಧನಾ ಕೇಂದ್ರವು'ವಿಶಿಷ್ಟವಾಗಿ ದಾಖಲೀಕರಣ ಕಾರ್ಯವನ್ನು ಮಾಡುತ್ತಾ ಸ್ಪ್ಯಾನಿಷ್ ವಿಶ್ವವಿದ್ಯಾಲಯದೊಂದಿಗೆ ಸಹಯೋಗವನ್ನು ಹೊಂದಿದೆ.

### ಯಕ್ಷಗಾನ

ಕರ್ನಾಟಕದ ಜನಪದ ರಂಗಭೂಮಿಯ ಅನೇಕ ಪ್ರಕಾರಗಳಲ್ಲಿ ಒಂದಾದ ಯಕ್ಷಗಾನವನ್ನು ಇತ್ತೀಚೆಗೆ ಆ ಹೆಸರಿನಿಂದಲೇ ಕರೆಯಲಾಗುತ್ತಿದೆ. ಮೊದಲು ಇದನ್ನು 'ಬಯಲಾಟ', ಭಾಗವತರಾಟ ಅಥವಾ 'ದಶಾವತಾರ ಆಟ' ಎಂಬುದಾಗಿ ಕರೆಯಲಾಗುತ್ತಿತ್ತು. 'ಯಕ್ಷಗಾನ' ಎಂಬ ಸದ್ಯದ ಹೆಸರನ್ನು ಪಡೆಯಲು ಕಾರಣ, ಈ ನಾಟಕಗಳನ್ನು ಗೀತನಾಟಕ ಸ್ವರೂಪದಲ್ಲಿ ಬರೆದು, ಒಂದು ನಿರ್ದಿಷ್ಟ ಸಂಗೀತ ಶೈಲಿಯನ್ನು ಅಳವಡಿಸಿಕೊಂಡಿರುವುದೇ ಆಗಿದೆ. ಈ ಶಬ್ದವು ಈಗ ರಂಗನಾಟಕ ರೂಪಕ್ಕೂ ಪ್ರಕಾರಕ್ಕೂ ಸಮಾನಾರ್ಥಕ ಪದವಾಗಿ ಬಳಕೆಗೊಳ್ಳುತ್ತಿದೆ.

ಸುಮಾರು ೧೬-೧೮ನೇ ಶತಮಾನದ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ಯಕ್ಷಗಾನ ನಾಟಕಗಳ ಸಮೃದ್ಧ ಸುಗ್ಗಿಯನ್ನು ಕಾಣಬಹುದಾಗಿದೆ. ೧೬-೧೭ನೇ ಶತಮಾನದ ನಡುವೆ ಕೂಚುಪುಡಿ ನೃತ್ಯ ಶೈಲಿಯ ಸಂಸ್ಥಾಪಕ ಸಿದ್ಧೇಂದ್ರಯೋಗಿಯು ಯಕ್ಷಗಾನ ಶೈಲಿಯಲ್ಲಿ ನಾಟಕಗಳನ್ನು ರಚಿಸಿದ. ಸಿದ್ಧೇಂದ್ರಯೋಗಿಯ ಶಿಷ್ಯ ತೀರ್ಥನಾರಾಯಣಯತಿಯು ಈ ನಾಟಕಗಳನ್ನು ತಂಜಾವೂರಿಗೆ ಒಯ್ದನು. ಕಾಲಾಂತರದಲ್ಲಿ ಕರ್ನಾಟಕದ ಕರಾವಳಿ ಪ್ರಾಂತದಿಂದ ಪ್ರಮುಖವಾಗಿ ಅವಿಭಜಿತ ದಕ್ಷಿಣ ಕನ್ನಡ ಪ್ರದೇಶದಿಂದ ಸುಮಾರು ೩೦೦ಕ್ಕೂ ಮೀರಿದ ಸಂಖ್ಯೆಯಲ್ಲಿ (ಯಕ್ಷಗಾನ) ನಾಟಕಕಾರರು ಬಂದರು. ಹಿಂದಿನ ನಾಟಕಕಾರರು ಯಕ್ಷಗಾನ ಶೈಲಿಯ ಸಂಗೀತವನ್ನು ತಮ್ಮ ಹಾಡು ಹಾಗೂ ನಾಟಕಗಳಲ್ಲಿ ಎಲ್ಲ ಬಗೆಯ ಭಾವ ಪ್ರಕಟನೆಗಳಿಗೆ ಮತ್ತು ಸನ್ನಿವೇಶಗಳಿಗೆ, ಬಳಸಿಕೊಂಡರು. ತಮ್ಮ ರಚನೆಯಲ್ಲಿ ಇಂದಿನ ಭಾಗವತರಿಗೆ ೩೦ ರಾಗಗಳ ಪ್ರಾವೀಣ್ಯವಿರುವುದಾದರೂ ಅಂದು ಸುಮಾರು ೧೬೦ಕ್ಕೂ ಹೆಚ್ಚಿನ ರಾಗಗಳನ್ನು ಪ್ರಯೋಗಿಸುತ್ತಿದ್ದರು. ಅವುಗಳಲ್ಲಿ ಶಾಸ್ತ್ರೀಯ ಸಂಗೀತದಲ್ಲಿರದ ನೇಪಾಳ, ಗುಜರಾತಿ, ಮಾಧವಿ, ಪಂಚಗತಿ, ಗೋಪಗೀತೆ, ಹೂವು, ದೀವಾಲಿ, ಚರಿತೆ, ಹರದಿ, ಮೇಚಲೆ ಮುಂತಾದ ಹಲವು ರಾಗಗಳಿವೆ.

ಯಕ್ಷಗಾನ ನಾಟಕದ ವಸ್ತುವನ್ನು ರಾಮಾಯಣ, ಮಹಾಭಾರತ, ಭಾಗವತ ಮತ್ತು ಇತರ ಪುರಾಣಗಳಿಂದ

ಆಯ್ದುಕೊಳ್ಳಲಾಗುತ್ತದೆ. ಕೆಲವು ಕಥನ ಪ್ರಸಂಗದ ಸಾಲುಗಳನ್ನು ಬಿಟ್ಟರೆ ಉಳಿದುದೆಲ್ಲ ರಾಗ ಮತ್ತು ತಾಳದ ಲಯಕ್ಕೆ ಬದ್ಧವಾದಂತಾಗಿರುತ್ತದೆ. ನಾಟಕ ಚಿತ್ರಣದಲ್ಲಿ ಅಗತ್ಯವಾಗಿರಲೇಬೇಕಾದಂಥ ಅಂಶವೆಂದರೆ ಒಂದು ಸಂಗೀತ, ಇನ್ನೊಂದು ಕುಣಿತ. ಇವೆರಡಕ್ಕೂ ಮೂಲಪಾಠವಾಗಿ ಒಂದು ಸರಳ ಸಾಹಿತ್ಯಕ ವಿಷಯವಿರುತ್ತದೆ. ನೃತ್ಯಾಂಶಗಳಿಗೆ ಚಂಡೆ, ಮದ್ದಳೆ, ತಾಳಗಳಂಥ ತಾಡನ ವಾದ್ಯಗಳ ಸಮರ್ಥ ಬೆಂಬಲ ಇರುತ್ತದೆ. ನಾಟಕದ ಪಾತ್ರಧಾರಿಗಳು ಕಾಲಿಗೆ ಗೆಜ್ಜೆಯನ್ನು ಧರಿಸಿರುತ್ತಾರೆ. ನಾಟಕದ ಸಾರಾಂಶವನ್ನು ಹಾಡುಗಳಲ್ಲಿನ ವಿಷಯವನ್ನು ಅವಲಂಬಿಸಿ ಪ್ರೇಕ್ಷಕರಿಗೆ ಗದ್ಯರೂಪದಲ್ಲಿ ಹೇಳಲಾಗುತ್ತದೆ.

ಕನ್ನಡ ಭಾಷೆಯ ಪರಿಚಯವಿಲ್ಲದ ಪ್ರೇಕ್ಷಕರನ್ನೂ, ವೇಷಭೂಷಣಗಳಿಂದ ವರ್ಣಾಲಂಕಾರಗಳಿಂದ, ಅಮೋಘ ಸಂಗೀತ ಘೋಷದ ಹಿನ್ನೆಲೆಯಲ್ಲಿ, ವಿಸ್ಮಯಕಾರಕ ವೈಭವದ ಭ್ರಮಾಲೋಕ ಸೃಷ್ಟಿಸಿ ಪ್ರೇಕ್ಷಕರನ್ನು ಹಿಡಿದಿಡುತ್ತಿದ್ದರು. ಒಟ್ಟಿನಲ್ಲಿ ಯಕ್ಷಗಾನ ರಂಗಭೂಮಿಯು ಇಂದಿಗೂ ಚಾಲ್ತಿಯಲ್ಲಿರುವ ಕೆಲವೇ ಶ್ರೀಮಂತ ರಂಗಕಲಾ ಪ್ರಕಾರಗಳಲ್ಲಿ ಒಂದಾಗಿದೆ. ದೇವಾಲಯಗಳಿಂದ ಒದಗಿರುವ ನೈತಿಕ ಮತ್ತು ಧಾರ್ಮಿಕ ಹಿನ್ನೆಲೆ ಇದ್ದರೂ ಇಂದು ಈ ಕಲಾಪ್ರಕಾರವು ವ್ಯಾಪಾರೀಕರಣಕ್ಕೆ ಸಿಲುಕಿ, ಕುದೃಷ್ಟಿಯನ್ನೊಳಗೊಂಡು ಜನಪ್ರಿಯ ರೀತಿಯ ಮನರಂಜನೆಯೊದಗಿಸುತ್ತಿದೆ.

ಈ ಶತಮಾನದ ಆರಂಭಕಾಲದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರಮುಖ ದೇಗುಲ ಆಶ್ರಯಿತ ಯಕ್ಷಗಾನ ನಾಟಕ ಮಂಡಳಿಗಳು ಅನೇಕವಿದ್ದುವು. ಉತ್ತರ ಭಾಗದಲ್ಲಿ ಸೌಕೂರ್, ಮಾರನಕಟ್ಟೆ, ಮಂದಾರ್ತಿ; ದಕ್ಷಿಣ ಭಾಗದಲ್ಲಿ ಮೂಲ್ಕಿ, ಧರ್ಮಸ್ಥಳ ಮತ್ತು ಕೂಡ್ಲುವಿನ ಯಕ್ಷಗಾನ ನಾಟಕ ಮಂಡಲಿಗಳು ಪ್ರಮುಖವೆನಿಸಿದ್ದುವು. ತತ್ಸಂಬಂಧೀ ದೇವಸ್ಥಾನಗಳು ದೇಗುಲ ನಿಧಿಯ ನೆರವಿನಿಂದ ಆ ನಾಟಕ ಮಂಡಲಿಗಳನ್ನು ಪೋಷಿಸುತ್ತಿದ್ದು, ಆಯಾ ದೇಗುಲದ ಭಕ್ತರು ಪ್ರತಿ ನಾಟಕ ಪ್ರದರ್ಶನದ ಖರ್ಚನ್ನು ಭರಿಸಿ, ಪ್ರೇಕ್ಷಕರಿಗೆ ಉಚಿತವಾಗಿ ಪ್ರದರ್ಶನ ನೋಡಲವಕಾಶ ಕಲ್ಪಿಸುತ್ತಿದ್ದರು. ಈ ರೀತಿ ಸ್ಥಳೀಯ ಯಕ್ಷಗಾನ ಪೋಷಕರೂ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ವಿಶೇಷ ಕೋರಿಕೆಗನುಸಾರವಾಗಿ ಪ್ರತಿ ರಾತ್ರಿ ಯಕ್ಷಗಾನಗಳು ಪ್ರದರ್ಶಿತವಾಗುತ್ತಿದ್ದುವು. ಪಾತ್ರಧಾರಿಗಳು ಮತ್ತು ನೃತ್ಯಗಾರರು ಮೂಲತಃ ಕೃಷಿಕರಾಗಿರುತ್ತಿದ್ದರು. ಈ ನಾಟಕಗಳಲ್ಲಿ, ವೃತ್ತಿಪರ ಎನ್ನುವುದಕ್ಕಿಂತ, ದೇವರ ಸೇವೆ ಎಂದುಕೊಂಡು ಅಭಿನಯಿಸುತ್ತಿದ್ದರು.

೧೯೪೦ರ ನಂತರದ ಕಾಲದಲ್ಲಿ ಯಕ್ಷಗಾನ ತಂಡಗಳ ಸಾಂಸ್ಥಿಕ ಸ್ವರೂಪದಲ್ಲಿ ತೀವ್ರ ಮಾರ್ಪಾಟು ಕಾಣಲಾರಂಭಿಸಿತು. ದೇಗುಲಗಳು ಪ್ರದರ್ಶನ ನಿರ್ವಹಣೆಯ ಹಕ್ಕನ್ನು ಹರಾಜಿಗಿಡಲೆತ್ನಿಸಿದುವು. ಆ ವೇಳೆಗಾಗಲೇ ವೃತ್ತಿಪರ ನಾಟಕ ತಂಡಗಳು ಜನರನ್ನು ಬಹಳವಾಗಿ ಆಕರ್ಷಿಸತೊಡಗಿದ್ದವು. ಯಕ್ಷಗಾನ ಕಲಾವಿದರು ರಂಗಭೂಮಿಯ ವೇಷ ಭೂಷಣಗಳನ್ನು ಅನುಕರಣೆ ಮಾಡುತ್ತಾ, ಪಾರಂಪರಿಕ ನೃತ್ಯ ಪ್ರಕಾರವನ್ನು ದೂರಮಾಡುತ್ತ ಬಂದರು. ಇನ್ನೊಂದು ಲಕ್ಷಣವಾಗಿ, ವೃತ್ತಿಪರ ತಂಡಗಳು ಡೇರೆಗಳನ್ನು ಹಾಕಿ ಟಿಕೆಟ್‌ಗಳ ಮೂಲಕ ಪ್ರೇಕ್ಷಕರಿಗೆ ಪ್ರವೇಶಕೊಟ್ಟು ಅವರ ಮುಂದೆ ಪ್ರದರ್ಶನಗಳನ್ನು ಏರ್ಪಡಿಸುವ ವಿಶಿಷ್ಟ ಪದ್ಧತಿ ರೂಢಿಗೆ ಬಂದಿತು. ಇದರೊಡನೆ ಯಕ್ಷಗಾನ ರಂಗಭೂಮಿಯ ಇಡೀ ಮನೋವೃತ್ತಿಯೇ ಸಂಪೂರ್ಣ ಬದಲಾವಣೆಗೊಂಡಿತು.

ಈಗಿನ ದಿನಗಳಲ್ಲಿ ಸುಮಾರು ೧೨ ವೃತ್ತಿಪರ ತಂಡಗಳು ಇವೆ. ಅಲ್ಲದೆ ದೇಗುಲದ ಭಕ್ತರಿಂದ ನಿರ್ವಹಣೆಗೊಂಡು, ಉಚಿತ ಪ್ರದರ್ಶನ ನೀಡುತ್ತಿರುವ ಕೆಲವೇ ಕೆಲವು ತಂಡಗಳೂ ಇವೆ. ಯಕ್ಷಗಾನವಂತೂ ಜನಸಾಮಾನ್ಯರ ಅಭಿರುಚಿಗಳಿಗನುಗುಣವಾಗಿ ಸ್ಪಂದಿಸುವುದರಿಂದ ಆರ್ಥಿಕವಾಗಿ ಯಶಸ್ಸುಗಳಿಸಿ ಜನಪ್ರಿಯವಾಗಿದೆ. ಯಕ್ಷಗಾನ ರಂಗಭೂಮಿಯಲ್ಲಿ ಅನೇಕ ಸಾಂಪ್ರದಾಯಿಕ ಅಂಶಗಳು ಕೈಬಿಟ್ಟು ಹೋಗಿವೆ. ಅಲ್ಲಿನ ನೃತ್ಯ ಪರಂಪರೆಯನ್ನು ಗದ್ಯೋಕ್ತಿಗಳು ಮರೆಮಾಡಿವೆ. ಚಲನಚಿತ್ರ ರಂಗದಲ್ಲಿ ಹೊಸತಿಗಾಗಿ ಕಾತರಿಸುವಂತೆ, ಹೊಸ ನಾಟಕ ವಸ್ತುವಿಷಯಗಳು ಕ್ರಮೇಣ ಹಳೆಯ ಜನಪ್ರಿಯ ಪೌರಾಣಿಕ ಮತ್ತು ಮಹಾಕಾವ್ಯಗಳ ವಸ್ತುವಿಷಯಗಳ ಸ್ಥಾನವನ್ನು ಆಕ್ರಮಿಸಿವೆ. ಜನಸಾಮಾನ್ಯರನ್ನು ಮೆಚ್ಚಿಸಲು ಅಸಭ್ಯ ಸಂಭಾಷಣೆಗಳು ಮುಖ್ಯ ಪಾತ್ರ ವಹಿಸಿವೆ.

ಕೆಲವು ಪ್ರಸಿದ್ಧ ಯಕ್ಷಗಾನ ಮಂಡಲಿಗಳು ಇರಾ, ಸೂರತ್ಕಲ್, ಸಾಲಿಗ್ರಾಮ, ಅಮೃತೇಶ್ವರ, ಪೆರ್ಡೂರು ಮತ್ತು ಇಡುಗುಂಜಿಗೆ ಸೇರಿದವುಗಳಾಗಿವೆ. ಹಳೆಯ ದೇಗುಲ ಯಕ್ಷಗಾನ ಮೇಳಗಳ ಪೈಕಿ, ಮಂದರ್ತಿ, ಧರ್ಮಸ್ಥಳ, ಕಟೀಲು ಮತ್ತು ಮಾರನಕಟ್ಟೆ ಯಕ್ಷಗಾನ ಮೇಳಗಳು ಇಂದಿಗೂ ಜೀವಂತವಾಗಿವೆ. ಆದರೆ ಅಲ್ಲಿಯೂ ಹಳೆ ಬಗೆಯ ಯಕ್ಷಗಾನ ನಾಟಕಗಳನ್ನು ಕೈಬಿಡುವ ಪ್ರವೃತ್ತಿಯು ಕಾಣಬರುತ್ತಿದೆ. ಉಡುಪಿಯ ಎಂ.ಜಿ.ಎಂ.ಕಾಲೇಜಿನಲ್ಲಿ ಯಕ್ಷಗಾನ ಕೇಂದ್ರವಿದೆ. ಅಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಪಾರಂಪರಿಕ ನೃತ್ಯ ಮತ್ತು ಯಕ್ಷಗಾನ ವಿಧಾನಗಳನ್ನು ಕಲಿಸಲಾಗುತ್ತಿದೆ. ೧೯೭೨ರಲ್ಲಿ ಕೋಟ ಮತ್ತು ಧರ್ಮಸ್ಥಳದಲ್ಲಿ ಎರಡು ಯಕ್ಷಗಾನ ತರಬೇತಿ ಕೇಂದ್ರಗಳನ್ನು ಆರಂಭಿಸಲಾಯಿತು. ಯಕ್ಷಗಾನದ ಸೃಜನಶೀಲ ಕಲಾವಂತಿಕೆಯು ವೇಷಭೂಷಣ, ನೃತ್ಯ ಮತ್ತು ಸಂಗೀತಗಳನ್ನು ಮೇಳೈಸಿಕೊಂಡ ಸಮರ್ಥ ಕಲೆಯಾಗಿದ್ದು ಅಂತಸ್ಸತ್ವವುಳ್ಳದ್ದಾಗಿದೆ. ಜನತೆ ಈ ಮಹತ್ವವನ್ನು ಅರಿತುಕೊಳ್ಳಬೇಕಿದೆ.

ಅನೇಕ ಯಕ್ಷಗಾನ ಕಲಾವಿದರು, ಯಕ್ಷಗಾನ ಕಲೆಯನ್ನು ಸ್ವಂತ ಪ್ರಯತ್ನದಿಂದ ಶ್ರೀಮಂತಗೊಳಿಸಿದ್ದಾರೆ. ವೀರಭದ್ರ ನಾಯಕ್, ಉಪ್ಪೂರು ನಾರಾಯಣ ಭಾಗವತ, ಇರೋಡಿ ಸದಾನಂದ ಹೆಬ್ಬಾರ್, ಪೊಳಲಿಶಾಸ್ತ್ರಿ, ಮಲ್ಪೆ ಶಂಕರನಾರಾಯಣ ಸಾಮಗ, ಮೋವಾರು ಕಿಟ್ಟಣ್ಣ ಭಾಗವತ, ಅಳಿಕೆ ರಾಮಯ್ಯ ರೈ, ಹಾರಾಡಿ ಕೃಷ್ಣ ಗಾಣಿಗ, ಹಾರಾಡಿ ನಾರಾಯಣ ಗಾಣಿಗ, ಹಾರಾಡಿ ರಾಮ ಗಾಣಿಗ, ದಾಮೋದರ ಮಂಡೆಚ್ಚ, ಬಸವನಾಯಕ, ಬಲಿಪ ಸುಬ್ಬರಾಯ, ಹಿರಿಯಡ್ಕ ಗೋಪಾಲರಾವ್,ಅಗರಿ ಶ್ರೀನಿವಾಸ ಭಾಗವತ, ಕುರಿಯ ವಿಠಲಶಾಸ್ತ್ರಿ, ಉದ್ಯಾವರ ಮಾಧವ ಆಚಾರ್ಯ ಮುಂತಾದವರು ದಕ್ಷಿಣ ಕನ್ನಡದ ಪ್ರಸಿದ್ಧ ಯಕ್ಷಗಾನ ಪ್ರತಿಪಾದಕರಾಗಿದ್ದಾರೆ. ಕೆರೆಮನೆ ಶಿವರಾಮ ಹೆಗ್ಗಡೆ (೧೯೭೧ರ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತರು), ಕೆ.ಸದಾನಂದ ಹೆಗ್ಗಡೆ, ಗಣಪತಿ ಭಟ್ಟ, ಮೂಡಕಣಿ ನಾರಾಯಣ ಹೆಗ್ಗಡೆ (ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ), ಬಾಬು ಭಟ್ಟ ಮುಂತಾದವರು ಉತ್ತರ ಕನ್ನಡ

ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾವಿದರಾಗಿದ್ದಾರೆ. ಕರ್ನಾಟಕದ ಇತರ ಭಾಗಗಳಲ್ಲೂ ಯಕ್ಷಗಾನವು ಬಹಳ ಜನಪ್ರಿಯವಾಗಿದ್ದು ಅದನ್ನು 'ಮೂಡಲಪಾಯ' ಎಂದು ಗುರುತಿಸಲಾಗಿದೆ. 'ಶ್ರೀ ಕೃಷ್ಣ ಪಾರಿಜಾತ'ದ ಗ್ರಂಥಕರ್ತೃ, ಅಪರಾಲ ತಮ್ಮಣ್ಣ, ಬೆಳಗಾವಿ ಜಿಲ್ಲೆಯ ಕುಳಗೋಡು ತಮ್ಮಣ್ಣ, ಮೈಸೂರು ಅರಸು ವಂಶದ ಅಳಿಯ ಲಿಂಗರಾಜ ಮುಂತಾದವರು ಪ್ರಸಿದ್ಧ ಯಕ್ಷಗಾನ ಕವಿಗಳಾಗಿದ್ದಾರೆ. ಕರಾವಳಿ ಪ್ರದೇಶದಲ್ಲಿ ನಂಜಯ್ಯ, ಪಾರ್ತಿಸುಬ್ಬ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮ ಭಟ್ಟ, ವೆಂಕಟ ಅಜ್ಜಾಪುರ, ನಿತ್ಯಾನಂದ ಅವಧೂತ, ಪಾಂಡೇಶ್ವರ ವೆಂಕಟ, ಗೇರುಸೊಪ್ಪೆ ಶಾಂತಪ್ಪಯ್ಯ, ನಗಿರೆ ಸುಬ್ರಮಣ್ಯ, ಧ್ವಜಪುರದ ನಾಗಪ್ಪಯ್ಯ, ಖ್ಯಾತ ಕನ್ನಡ ಕವಿ ಮುದ್ದಣ್ಣ ಮತ್ತು ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ಮುಂತಾದವರು ಪ್ರಸಿದ್ಧ ಯಕ್ಷಗಾನ ಬರಹಗಾರರಲ್ಲಿ ಕೆಲವರು.

ಯಕ್ಷಗಾನದಲ್ಲಿ ಎರಡು ಸಂಪ್ರದಾಯ ಮಾದರಿ ಇವೆ. ಅವುಗಳನ್ನು ದಕ್ಷಿಣ ಸಂಪ್ರದಾಯದ ತೆಂಕುತಿಟ್ಟು, ಉತ್ತರ ಸಂಪ್ರದಾಯದ ಬಡಗುತಿಟ್ಟು ಎಂದು ಕರೆಯುತ್ತಾರೆ. ಅವು ವೇಷಭೂಷಣದಲ್ಲಿ, ನೃತ್ಯದಲ್ಲಿ ಹಾಗೂ ಇತರ ಲಕ್ಷಣಗಳಲ್ಲಿ ಪರಸ್ಪರ ವ್ಯತ್ಯಾಸಗಳನ್ನು ಹೊಂದಿವೆ. ಅನೇಕ ತೆಲುಗು ಯಕ್ಷಗಾನಗಳನ್ನು ಕನ್ನಡನಾಡಿನಲ್ಲಿ ಬರೆಯಲಾಗಿದೆ. ಅವುಗಳಲ್ಲಿ ಬೆಂಗಳೂರಿನ ಸಾಮಂತ ದೊರೆ ಕೆಂಪೇಗೌಡನು 'ಗಂಗಾ ಗೌರಿ ವಿಲಾಸಂ' ಎಂಬ ಕೃತಿಯನ್ನು ರಚಿಸಿದ್ದಾನೆ. ಮೈಸೂರು ಆಸ್ಥಾನದಲ್ಲಿ ಅಂತಹ ಅನೇಕ ಕೃತಿಗಳು ರಚಿತವಾಗಿವೆ. ಸೂತ್ರದ ಬೊಂಬೆಯಾಟದಲ್ಲಿಯೂ ಸಹ, ಪಾಠ ಮತ್ತು ವಸ್ತು ಯಕ್ಷಗಾನದ್ದೇ ಆಗಿದೆ. ದಕ್ಷಿಣ ಕನ್ನಡದ ಉಪ್ಪಿನಕುದುರಿನ ಕೊಗ್ಗ ಕಾಮತ್ ಈ ಕಲೆಯಲ್ಲಿ ಸಿದ್ಧಹಸ್ತರಾಗಿದ್ದಾರೆ.

ಯಕ್ಷಗಾನದ ಒಂದು ಮಾದರಿಯಾದ ಮೂಡಲಪಾಯವು ಬಯಲು ಸೀಮೆಯಲ್ಲಿ ರೂಢಿಯಲ್ಲಿದೆ. ಪ್ರಸಿದ್ಧ ಜಾನಪದ ವಿದ್ವಾಂಸರಾದ ಜೀ.ಶಂ.ಪರಮಶಿವಯ್ಯನವರ ಪರಿಶ್ರಮ, ಪ್ರಯತ್ನದ ಫಲವಾಗಿ ತಿಪಟೂರು ತಾಲೂಕಿನ ಕೊನೆಹಳ್ಳಿಯಲ್ಲಿ ಮೂಡಲಪಾಯ ಸಂಸ್ಥೆಯೊಂದು ಪ್ರಾರಂಭವಾಗಿತ್ತು. ಮೈಸೂರು ವಿಶ್ವವಿದ್ಯಾಲಯದ ಜಾನಪದ ಕಲಾ ವಿಭಾಗವೂ ಕೂಡ ಈ ಕಲೆಯನ್ನು ಬೋಧಿಸಿ ತರಬೇತಿ ಕೊಡುತ್ತಿದೆ. ಕಲಬುರಗಿ ಮತ್ತು ಧಾರವಾಡ ಪ್ರದೇಶಗಳಲ್ಲಿ ಯಕ್ಷಗಾನ ಮಾದರಿಯನ್ನು 'ದೊಡ್ಡಾಟ' ವೆಂದು ಕರೆಯುತ್ತಾರೆ. ಕರಿಭಂಟನ ಕಾಳಗ, ಸಾರಂಗಧರ, ಕುಮಾರರಾಮನಕಥೆ ಮುಂತಾದ ಕಥಾವಸ್ತುಗಳು ಜನಪ್ರಿಯವಾಗಿವೆ. ಬಸವರಾಜ ಮಲಶೆಟ್ಟಿ ಹೊಸಪೇಟೆ, ಬಸವಲಿಂಗಯ್ಯ ಹಿರೇಮಠ ಕಿತ್ತೂರು, ಈ ಕ್ಷೇತ್ರದಲ್ಲಿ ಪ್ರಸಿದ್ಧ ನಿರ್ದೇಶಕರೆನಿಸಿದ್ದಾರೆ. ತುಮಕೂರು ಜಿಲ್ಲೆಯ ಕೊನೆಹಳ್ಳಿಯ ನರಸಪ್ಪ ಭಾಗವತ, ತುರುವೇಕೆರೆ ತಾಲೂಕು ಮುನಿಯೂರಿನ ದಾಸಾಚಾರ್, ಮಂಡ್ಯ ಜಿಲ್ಲೆ ಬೆಳ್ಳೂರಿನ ಪುಟ್ಟಶಾಮಾಚಾರ್, ಗೊಂಡೇದಹಳ್ಳಿಯ ಯತಿರಾಜಯ್ಯ, ಬೆಂಗಳೂರು ಜಿಲ್ಲೆಯ ಭಾಗವತ್ ಮುನಿಯಪ್ಪ ಮುಂತಾದ ಕಲಾವಿದರು ದಕ್ಷಿಣ ಕರ್ನಾಟಕವರಾಗಿದ್ದಾರೆ. ಅಫಜಲ್ಪುರದ ಮೋನಪ್ಪ ಸುತರ್, ಬ್ಯಾಹಟ್ಟಿಯ ಬುಡೆಪ್ಪ, ಸಂಡೂರು ತಾಲೂಕು ತಾಳೂರಿನ ನಂಜುಂಡಯ್ಯ ಹಿರೇಮಠ್, ಗೋಗಿಯ ಗಣಾಚಾರಿ, ಶಹಾಪುರ ತಾಲೂಕು ಹೂಗಾರದ ಚಂದಣ್ಣ ಗೋಗಿ ಈ ಸಂಪ್ರದಾಯದ ಪ್ರಸಿದ್ಧ ಕಲಾವಿದರಾಗಿದ್ದಾರೆ.

### ಕರ್ನಾಟಕದಲ್ಲಿ ಚಿತ್ರಕಲೆ

ಕರ್ನಾಟಕದ ಅತ್ಯಂತ ಪ್ರಾಚೀನ ವರ್ಣಚಿತ್ರಗಳು ಕ್ರಿ.ಪೂ. ೨೦೦೦-೧೦೦೦ದ ಪ್ರಾಗಿತಿಹಾಸ ಕಾಲದವಾಗಿವೆ. ಪ್ರಾಗೈತಿಹಾಸಿಕ ಮಾನವ ಸಮುದಾಯವು ವಾಸಿಸುತ್ತಿದ್ದ ಚಾಚು ಬಂಡೆಗಳ ಕೆಳಮುಖದಲ್ಲಿ ಚಿತ್ರಿತವಾದ ಪ್ರಾಣಿಗಳ, ಮಾನವಾಕೃತಿಗಳ ಕಲಾವಶೇಷಗಳನ್ನು ಬಳ್ಳಾರಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ರಾಯಚೂರು, ಚಿತ್ರದುರ್ಗ ಮುಂತಾದ ಜಿಲ್ಲಾ ಪ್ರದೇಶಗಳಲ್ಲಿ ಕಾಣಬಹುದು. ಹಿರೇಬೆನಕಲ್, ಪಿಕ್ಲಿಹಾಳ ಮುಂತಾದ ಪ್ರಾಗೈತಿಹಾಸಿಕ ನಿವೇಶನಗಳಲ್ಲಿ ಆಯುಧ ಸಹಿತವಾದ ಬೇಟೆಗಾರರ, ಕುದುರೆ ಸವಾರರ, ಗೂಳಿ ಮುಂತಾದ ಚಿತ್ರಗಳು ಬಂಡೆಗಳ ಮೇಲೆ ಕಾಣಬರುತ್ತವೆ. ಮಣ್ಣಿನ ಮಡಕೆಗಳ ಮೇಲೆ ಬಣ್ಣದಲ್ಲಿ ಚಿತ್ರಿತವಾದ ಅನೇಕ ಆಕೃತಿಗಳು ಬ್ರಹ್ಮಗಿರಿ, ಚಂದ್ರವಳ್ಳಿ, ಹೆಮ್ಮಿಗೆ, ಹಿರೇಬೆನಕಲ್, ಮಸ್ಕಿ ಮತ್ತು ಬೆಂಗಳೂರು ಪ್ರದೇಶಗಳಲ್ಲಿ ಹೇರಳವಾಗಿ ದೊರಕಿವೆ.

ಇತಿಹಾಸ ಕಾಲದಲ್ಲಿನ, ಚಿತ್ರಕಲೆ ಹಾಗೂ ಅದರ ಅಸ್ತಿತ್ವದ ಕುರಿತು ಸಮಕಾಲೀನ ಸಾಹಿತ್ಯ ಮತ್ತು ಶಾಸನಗಳಲ್ಲಿ ಉಲ್ಲೇಖಗಳಿವೆ. ಚಿತ್ರಕಲೆಗೆ (ವರ್ಣಚಿತ್ರ) ಕರ್ನಾಟಕದಲ್ಲಿ ಇದ್ದ ಪ್ರೋತ್ಸಾಹದ ಬಗೆಗಿನ ಮೂಲವನ್ನು ಬಾದಾಮಿ ಚಾಲುಕ್ಯರ ಮಂಗಲೇಶನ ಕಾಲದಲ್ಲಿಯೇ ಕಾಣಬಹುದು. ಬಾದಾಮಿಯ ಮೂರನೇ ಗುಹೆಯಲ್ಲಿ ಅವನ ಕಾಲದ ವರ್ಣಚಿತ್ರಗಳ ಕುರುಹುಗಳನ್ನು ಕಾಣಬಹುದಾಗಿದೆ. ಐತಿಹಾಸಿಕ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಈ ಪರಂಪರೆಯ ನಿರಂತರತೆಯಲ್ಲಿ ಅಂತರವಿರುವುದು ಕಂಡು ಬರುತ್ತದೆ. ಮೂಡಬಿದರೆಯಲ್ಲಿ ದೊರಕಿರುವ ಹೊಯ್ಸಳರ ಕಾಲದಲ್ಲಿ ನಕಲಿಸಿರುವ ರಾಷ್ಟ್ರಕೂಟ ಕಾಲದ ಚಿತ್ತಾಕರ್ಷಕವಾದ ವರ್ಣಚಿತ್ರಗಳನ್ನು 'ಧವಳ' ಗ್ರಂಥದಲ್ಲಿ ಕಾಣಬಹುದು. ಈ ಚಿತ್ರಗಳು ದೃಶ್ಯ ಜೋಡಣೆ, ಭಂಗಿ ವಿನ್ಯಾಸ, ಸಮಾನ ಕಥಾವಸ್ತುಗಳನ್ನು ಆಧರಿಸಿ ಚಿತ್ರಿತವಾಗಿದ್ದರೂ, ಗುಜರಾತಿನ ಕಲ್ಪಸೂತ್ರ ವರ್ಣಚಿತ್ರಗಳಿಗಿಂತ ವಿಭಿನ್ನವಾಗಿವೆ. ಕಲಾಶೈಲಿಯು ಸ್ಪಷ್ಟವಾಗಿ ದೇಶಿಯವಾಗಿದ್ದು ಹೊಯ್ಸಳ ಶಿಲ್ಪಗಳಲ್ಲಿ ಕಾಣಬರುವ ಅಲಂಕಾರಿಕ ಶೈಲಿಯಂತೆ ಭಾವವನ್ನು ಮೂಡಿಸುತ್ತದೆ. ರುದ್ರಭಟ್ಟನಂಥ ಕನ್ನಡ ಕವಿಗಳು ಭಾವಚಿತ್ರ ಮತ್ತು ಇತರೆ ಚಿತ್ರಗಳ ಬಗ್ಗೆ ಉಲ್ಲೇಖಿಸಿರುವರು. ಚಾಲುಕ್ಯ ಚಕ್ರವರ್ತಿ ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ' ಕೃತಿಯಲ್ಲಿ 'ಕಲೆ'ಯ ಕುರಿತೇ ಒಂದು ಭಾಗವಿದೆ.

ವಿಜಯನಗರ ಕಾಲದ ವರ್ಣಚಿತ್ರಗಳನ್ನು ಅಧ್ಯಯನ ಮಾಡಿದರೆ ಭಿತ್ತಿಚಿತ್ರಗಳು ಬಹಳ ಪ್ರಮಾಣದಲ್ಲಿ ಬಳಕೆಯಲ್ಲಿದ್ದುವು ಎಂದು ತಿಳಿಯುತ್ತದೆ. ಹಂಪಿಯ ವಿರೂಪಾಕ್ಷ ದೇಗುಲದ ಛತ್ತಿನಲ್ಲಿ ಆ ಬಗೆಯ ಅತ್ಯಂತ ಪ್ರಾಚೀನ ಮಾದರಿಗಳು ಕಾಣಬರುತ್ತವೆ. ಕರ್ನಾಟಕದ ವರ್ಣಚಿತ್ರಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದರೆ, ಅಂದಿನ ಜೀವನ ಸಂಗತಿಗಳನ್ನು ಪ್ರತಿಬಿಂಬಿಸುವ ಬದಲು ಚಿತ್ರಕಾರರು ಆಗಮಾದಿಗಳ ಸಿದ್ಧ ಸೂತ್ರಗಳ ಪ್ರಕಾರವಾಗಿ ಸಾಂಪ್ರದಾಯಿಕ ದೃಶ್ಯ ಜೋಡಣೆಗಳನ್ನು, ಅತಿ ಬೆಡಗಿನ ಭಂಗಿಗಳನ್ನು ಆರಿಸಿಕೊಂಡು ಅನುಸರಿಸಿರುವುದು ಕಾಣಬರುತ್ತದೆ.

ಈ ವರ್ಣಚಿತ್ರಗಳು ವಿಪುಲವಾಗಿ ಇಂದಿಗೂ ಕಾಣಬರುವ ಶಿಲ್ಪಗಳ, ಚಿತ್ರಕಲಾ ರೂಪದಂತೆ ಕಾಣುತ್ತವೆ. ಜಾತ್ಯಾತೀತ

ಕಥಾವಸ್ತುಗಳನ್ನು ಹೊಂದಿರುವ ಚಿತ್ರಗಳು ಕೂಡ ಇಂಥದೇ ಶೈಲಿಯನ್ನು ಅನುಸರಿಸಿವೆ. ಕರ್ನಾಟಕದ ಮುಖ್ಯ ದೇಗುಲಗಳನ್ನು ಬಹುತೇಕ ಇದೇ ಬಗೆಯ ಭಿತ್ತಿಚಿತ್ರಗಳಿಂದ ಅಲಂಕರಿಸುತ್ತಿದ್ದಿರಬೇಕು. ಸಿ.ಹಯವದನರಾಯರು ಸಂಪಾದಿಸಿರುವ ಮೈಸೂರು ಗ್ಯಾಸೆಟಿಯರ್‌ನಲ್ಲಿ ಈ ಬಗೆಯ ಭಿತ್ತಿಚಿತ್ರಗಳಿರುವ ಅಥವಾ ಚಿತ್ರಗಳಿದ್ದ ಹಳೆಯ ಮೈಸೂರು ಭಾಗದಲ್ಲಿನ ಅನೇಕ ದೇಗುಲಗಳನ್ನು ಹೆಸರಿಸಲಾಗಿದೆ; ಹಿರಿಯೂರಿನ ತೇರು ಮಲ್ಲೇಶ್ವರ ದೇಗುಲ, ಸೀಬಿಯ ನರಸಿಂಹ ದೇಗುಲ, ಶ್ರವಣಬೆಳಗೊಳದ ಜೈನಮಠ, ಮುಡುಕುತೊರೆ ಮಲ್ಲಿಕಾರ್ಜುನ ದೇಗುಲ, ಹಂಪಿ ವಿರೂಪಾಕ್ಷ ದೇಗುಲ, ಮೈಸೂರಿನ ಪ್ರಸನ್ನ ಕೃಷ್ಣಸ್ವಾಮಿ, ಕೃಷ್ಣ ಮತ್ತು ವರಾಹ ದೇಗುಲಗಳು, ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇಗುಲ, ಸಾಲಿಗ್ರಾಮದ ಜಿನಾಲಯ ಮುಂತಾದವು ಪ್ರಮುಖವಾಗಿವೆ. ಶ್ರೀರಂಗಪಟ್ಟಣದ ದರಿಯಾದೌಲತ್, ಮೈಸೂರಿನ ಜಗನ್ಮೋಹನ ಅರಮನೆ, ನರಗುಂದದ ಮಹಲುಗಳು, ವಿಜಯಪುರದ ಬಳಿಯ ಕಮತಗಿ ಮತ್ತು ನಿಪ್ಪಾಣಿ, ಧಾರವಾಡದ ಬಳಿಯ ಅಮ್ಮಿನಭಾವಿ, ಹಳಿಯಾಳದ ಬಳಿಯ ಬಿ.ಕೆ.ಹಳ್ಳಿಯ ರಾಮದೇಗುಲ, ರಾಯಚೂರು ಮತ್ತು ಗುಳೇದ ಗುಡ್ಡದ ಖಾಸಗಿ ಮನೆಗಳಲ್ಲಿ ಚಿತ್ರಗಳು (ಭಿತ್ತಿ) ಕಾಣಬರುತ್ತವೆ.

ವಿಜಯನಗರೋತ್ತರ ಕಾಲದಲ್ಲಿ, ಚಿತ್ರಕಲೆಯು ಎರಡು ವಿಭಾಗಗಳಾಗಿ ಬೇರ್ಪಟ್ಟಂತೆ ಕಾಣುತ್ತದೆ. ವಿಜಯನಗರದರಸರು ಮತ್ತು ಅವರ ಸಾಮಂತರು (ಪಾಳೆಪಟ್ಟುಗಳು) ಆಗಮಾನುಸಾರಿಯಾದ ಪ್ರಾಚೀನ ಸಂಪ್ರದಾಯವನ್ನು ಅನುಸರಿಸಿದರು; ವಿಜಯಪುರ, ಕಲಬುರಗಿ ಮತ್ತು ಬೀದರ್ ಪ್ರದೇಶದ ದೊರೆಗಳು, ವಿಶಿಷ್ಟ ಶೈಲಿ ಎನಿಸಿದ ದಖ್ಖನಿ ಶೈಲಿಯ ಅಭಿವೃದ್ಧಿಗೆ ಕಾರಣರಾದರು. ಈ ಸಂಪ್ರದಾಯದ ಅತ್ಯುತ್ತಮ ಮಾದರಿಗಳು ವಿಜಯಪುರ, (ಬಿಜಾಪುರ)ದಲ್ಲಿ ಮೂಡಿಬಂದುವು. ಈ ಸಂಪ್ರದಾಯವು ಮೊಗಲ್ ಮಾದರಿಯಿಂದ ಪ್ರಭಾವಿತವಾದರೂ, ಪ್ರಬಲ ದೇಶೀಯ ಲಕ್ಷಣಗಳ ಎಳೆಗಳೂ ಅದರಲ್ಲಿವೆ.

ಕರ್ನಾಟಕದ ದಕ್ಷಿಣ ಪ್ರದೇಶಗಳು, ವಿಜಯನಗರ ಕಾಲದಲ್ಲಿ ಅಭಿವೃದ್ಧಿಗೊಂಡ ಪ್ರಾಚೀನ ಶೈಲಿಯನ್ನೇ ಮುಂದುವರೆಸಿದವು. ವಿಜಯನಗರ ಪತನಾನಂತರ, ಆಸ್ಥಾನದ ಕಲಾವಿದರು ದಕ್ಷಿಣ ಭಾರತದ ವಿವಿಧ ಕಡೆಗೆ ವಲಸೆ ಹೋದರು. ಮೈಸೂರು ಅರಸರು ಕಲೆಗೆ ಆಶ್ರಯವನ್ನು ಮುಂದುವರೆಸಿದರು. ಬಹಳಷ್ಟು ಕಲಾವಿದರ ತಂಡವು ಶ್ರೀರಂಗಪಟ್ಟಣದಲ್ಲಿ ರಾಜಒಡೆಯರ ಆಶ್ರಯದಲ್ಲಿ ನೆಲೆಗೊಂಡಿತು. ಶ್ರೀರಂಗಪಟ್ಟಣದ 'ದರಿಯಾದೌಲತ್'ನಲ್ಲಿ ಸ್ತಂಭ, ಭಿತ್ತಿ, ಛತ್ತು (ಛಾವಣಿ) ಮುಂತಾದವುಗಳ ಮೇಲೆ ವಿವಿಧ ವಸ್ತು-ವಿಷಯಗಳನ್ನು ಹೊಂದಿದ ವರ್ಣರಂಜಿತ ಚಿತ್ರಗಳಿವೆ. ಹೀಗೆಯೇ ಬೆಂಗಳೂರಿನ ಟಿಪ್ಪೂ ಅರಮನೆಯಲ್ಲಿ, ವರ್ಣಚಿತ್ರಗಳ ಕುರುಹುಗಳಿವೆ. ಭಿತ್ತಿ ಚಿತ್ರಗಳಲ್ಲಷ್ಟೇ ಅಲ್ಲದೆ, ಹಸ್ತಪ್ರತಿಗಳಲ್ಲಿಯೂ ಸಾಂದರ್ಭಿಕ ಚಿತ್ರಗಳನ್ನು ಬರೆಯಲು ವರ್ಣಚಿತ್ರಗಾರರಿಗೆ ವಹಿಸಲಾಯಿತು. ಅಂಥ ಚಿತ್ರಗಳಿರುವ ಹಸ್ತಪ್ರತಿಗಳಲ್ಲಿ ಆಕರ್ಷಕ ಹಾಗೂ ವರ್ಣರಂಜಿತ ರೇಖಾಕೃತಿಗಳಿದ್ದು, ಅವು ಹಳೆಯ ತಲೆಮಾರಿನ ಅನೇಕ ಮನೆತನಗಳಲ್ಲಿ ಕಾಣಸಿಗುತ್ತವೆ. ಅಂಥ ಹಸ್ತಪ್ರತಿಗಳಲ್ಲಿ ಅತ್ಯಂತ ಪ್ರಸಿದ್ಧವಾದುದು 'ಶ್ರೀತತ್ತ್ವ ನಿಧಿ' ಎಂಬ ಬೃಹತ್ ಕೃತಿ. ಮುಮ್ಮಡಿಕೃಷ್ಣರಾಜ ಒಡೆಯರ ಕೃಪಾ ಪೋಷಣೆಯಿಂದಾಗಿ ರಚಿತವಾದ ಈ ಹಸ್ತಪ್ರತಿಯು ಒಂಬತ್ತು ವಿಭಾಗಗಳನ್ನು ಹೊಂದಿದೆ. ಅದರಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಬ್ರಹ್ಮನಿಧಿ, ಶಿವನಿಧಿ ಇತ್ಯಾದಿ ವಿವಿಧ ವಿಷಯಗಳ ವಿವರಣೆ ಇದೆ.

ವರ್ಣಚಿತ್ರಗಳು ಆಗಮದ ವಿವಿಧ ಶಾಖೆಗಳಲ್ಲಿರುವ ಶಿಲ್ಪ, ಜ್ಯೋತಿಷ್ಯ, ತಂತ್ರ ಮುಂತಾದ ಪ್ರಾಚೀನ ಜ್ಞಾನವನ್ನು ಬಿಂಬಿಸುತ್ತವೆ. ಜಗನ್ಮೋಹನ ಅರಮನೆಯಲ್ಲಿ ದೊರೆಗಳೂ ಸೇರಿದಂತೆ ಉನ್ನತಾಧಿಕಾರಿಗಳ ವರ್ಣಚಿತ್ರಗಳಿವೆ. ಪೌರಾಣಿಕ ವಸ್ತುವನ್ನೊಳಗೊಂಡ ಜಲವರ್ಣ ಅಥವಾ ತೈಲವರ್ಣ ಚಿತ್ರಗಳು ಬಟ್ಟೆ ಹಾಗೂ ಗಾಜಿನ ಮೇಲೆ ಚಿತ್ರಿತವಾಗಿವೆ. ಸುಂದರಯ್ಯ, ಕೊಂಡಪ್ಪ, ಎಲ್ಲಪ್ಪ, ದುರ್ಗದ ವೆಂಕಟಪ್ಪ, ನರಸಿಂಹಯ್ಯ, ತಿಪ್ಪಾಜಪ್ಪ ಮತ್ತಿತರರು ಈ ಶೈಲಿಯನ್ನು ಅನುಸರಿಸಿ ಅಭಿವೃದ್ಧಿಗೊಳಿಸಿದರು. ಆ ಕಾಲಕ್ಕೆ ವರ್ಣಚಿತ್ರಕಾರರು ಬಣ್ಣಗಳನ್ನು ಇತರೆ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಆ ಬಣ್ಣಗಳನ್ನು ನಿಸರ್ಗಮೂಲದಿಂದ ಅಂದರೆ, ಸಸ್ಯಮೂಲ, ಖನಿಜಮೂಲ ಹಾಗೂ ಜೈವಿಕ ಮೂಲಗಳಿಂದ ತಯಾರಿಸುತ್ತಿದ್ದರು. ಸ್ವರ್ಣರೇಕುಗಳನ್ನು ಲೇಪಿಸಿದ 'ಜೆಸ್ಸೊ' ಎಂಬ ಕುಸುರಿ ಕೆಲಸದ ಶೈಲಿಯು ಕರ್ನಾಟಕದ ಸಾಂಪ್ರದಾಯಿಕ ವರ್ಣಚಿತ್ರಗಳ ಶ್ರೇಷ್ಠತೆಯ ಗುರುತಾಗಿರುತ್ತಿತ್ತು. ಕಾಗದಗಳ ಮೇಲಲ್ಲದೆ ವರ್ಣಚಿತ್ರಕಾರರು ಗಾಜಿನ ಮೇಲೂ ಚಿತ್ರಗಳನ್ನು ಬಿಡಿಸುತ್ತಿದ್ದರು.

ರಾಜಾ ರವಿವರ್ಮನು ೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ಮೈಸೂರಿನಲ್ಲಿ ಚಿತ್ರಕಲೆಯಲ್ಲಿ ಸಮಕಾಲೀನ ವರ್ಣಚಿತ್ರಕಾರರ ಮೇಲೆ ಪ್ರಭಾವ ಬೀರಿದ್ದನು. ಮೈಸೂರಿನ ಶ್ರೀ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ವ್ಯಾಸಂಗ ಕ್ರಮದ ಭಾಗವಾಗಿ ಯೂರೋಪಿಯನ್ ವರ್ಣಚಿತ್ರ ಶೈಲಿಯನ್ನು ಆರಂಭಿಸಿದಾಗ ಹಳೆಯ ಸಾಂಪ್ರದಾಯಕ ವರ್ಣಚಿತ್ರ ಶೈಲಿ ಕಣ್ಮರೆಯಾಗಿ ಪಾಶ್ಚಿಮಾತ್ಯ ಪದ್ಧತಿ ಮತ್ತು ಶೈಲಿಗಳಲ್ಲಿ ತರಬೇತಿ ಪಡೆದ ಹೊಸ ಪೀಳಿಗೆಯ ಚಿತ್ರಕಾರರ ಸೃಷ್ಟಿಯಾಯಿತು. ಭಾರತದ ವಿವಿಧ ಕೇಂದ್ರಗಳಲ್ಲಿ ಹಾಗೂ ವಿದೇಶಗಳಲ್ಲಿ ಅನೇಕ ವರ್ಣಚಿತ್ರಕಾರರು ತರಬೇತಿ ಪಡೆದರು. ಕೆ.ವೆಂಕಟಪ್ಪ, ಪಾವಂಜೆ, ಕೆ.ಕೆ.ಹೆಬ್ಬಾರ್, ಕೆ.ಎಸ್.ಕುಲಕರ್ಣಿ, ಅಲಮೇಲಕರ್, ಎಸ್.ಜಿ.ವಾಸುದೇವ, ಎನ್.ಎಸ್.ಸ್ವಾಮಿ, ಸುಬ್ಬುಕೃಷ್ಣ, ಕೆ.ಕೇಶವಯ್ಯ, ಎಸ್.ನರಸಿಂಹಸ್ವಾಮಿ, ಎಸ್.ನಂಜುಂಡಸ್ವಾಮಿ, ವೈ.ಸುಬ್ರಮಣ್ಯರಾಜು, ದಂಡಾವತಿಮಠ ಮತ್ತು ಎನ್. ಹನುಮಯ್ಯ ಮುಂತಾದವರು ಖ್ಯಾತಿವೆತ್ತ ಕಲಾವಿದರಾಗಿದ್ದಾರೆ. ರಾಜ್ಯದ ಕಲಾವಿದರ ಪೈಕಿ, ಮೈಸೂರಿನ ಎಸ್.ನಂಜುಂಡಸ್ವಾಮಿ ಅವರು ವರ್ಣಚಿತ್ರಕಲೆಯ ಎಲ್ಲ ಆಯಾಮಗಳಲ್ಲೂ ತಮ್ಮ ಪ್ರತಿಭೆ ತೋರಿ, ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಎಂ.ವೀರಪ್ಪ, ಎಸ್.ಆರ್.ಸ್ವಾಮಿ ಮತ್ತು ಎಚ್.ಎಸ್. ಇನಾಮತಿ ಅವರು ತಮ್ಮ ಭಾರತೀಯ ಸಂಪ್ರದಾಯದ ಸಂಯೋಜನಾ ಮತ್ತು ವರ್ಣಚಿತ್ರಗಳಿಗೆ ಖ್ಯಾತರಾಗಿದ್ದಾರೆ.

ಕಲಬುರಗಿಯ ಶಂಕರ್‌ರಾವ್ ಅಳಂಧ್ಕರ್ ಭಾವ ಪ್ರಧಾನ ವರ್ಣಚಿತ್ರಗಳ ರಚನೆಯಲ್ಲಿ ಪ್ರಸಿದ್ಧರು. ವಿ.ಆರ್. ರಾವ್, ಎಸ್. ಎಸ್. ಕುಕ್ಕೆ ಮತ್ತು ಆರ್.ಸೀತಾರಾಮ್ ಭಾವಚಿತ್ರಗಳ ರಚನೆಯಲ್ಲಿ ನಿಷ್ಣಾತರು. ಜನಾಬ್ ಸೂಫಿ ಅವರ ವರ್ಣಚಿತ್ರಗಳ ಸಂಯೋಜನೆ ಹಾಗೂ ವರ್ಣಚಿತ್ರಕಲೆಯನ್ನು ಮನೋಹರವಾಗಿ ಕಲಾಕೃತಿಗಳಲ್ಲಿ ಅಳವಡಿಸುವ ಮೈಸೂರಿನ ಮೀರ್ ಶೌಕತ್ ಅಲಿ ಅವರ ಕಲಾತ್ಮಕತೆ ಚಿರಸ್ಮರಣೀಯ. ವೈ. ಸುಬ್ರಮಣ್ಯ ರಾಜು ಅವರ ಇತಿಹಾಸದ

ಪ್ರಾಸಂಗಿಕ ಘಟನೆಗಳ ವರ್ಣಚಿತ್ರಗಳು, ಭಾರತೀಯ ಮತ್ತು ಪಾಶ್ಚಿಮಾತ್ಯ ಕಲಾಶೈಲಿಗಳ ಸಂಮಿಶ್ರಣವಾಗಿದೆ. ಎಂ.ಪಿ.ಮಿಣಜಗಿ ಅವರ ರಾಗಮಾಲ ವರ್ಣಚಿತ್ರಗಳು ಮತ್ತು ಎಂ.ಎ.ಚೆಟ್ಟಿ ಅವರು ತಮ್ಮ ವರ್ಣಚಿತ್ರಗಳಲ್ಲಿ ಜಲವರ್ಣಗಳನ್ನು ಸಂಮಿಶ್ರ ಮಾಡುವ ತಂತ್ರಕೌಶಲವು ಉತ್ಕೃಷ್ಟವಾದುದಾಗಿದೆ. ಎಂ.ಟಿ.ವಿ.ಆಚಾರ್ಯರ ವರ್ಣಚಿತ್ರಗಳು ಪೌರಾಣಿಕ ವಸ್ತು ಆಧಾರಿತವೆಂದು ಪ್ರಸಿದ್ಧವಾಗಿವೆ. ಎಸ್.ಎನ್.ಸ್ವಾಮಿ ಅವರ ತೈಲವರ್ಣದ ಭಾವಚಿತ್ರಗಳು ಹಾಗೂ ಪೆನ್ಸಿಲಿನ ರೇಖಾಚಿತ್ರಗಳು, ಟಂಕಸಾಲೆ ಅವರ ನಿಸರ್ಗ ದೃಶ್ಯದ ವರ್ಣಚಿತ್ರಗಳು, ಎನ್.ಹನುಮಯ್ಯ ಮತ್ತು ಎಫ್.ಜಿ.ಯಲವತ್ತಿ ಅವರ ಚೆಲುವಾದ ಜಲವರ್ಣದ ಚಿತ್ರಗಳು ಎಂತಹವರಿಗೂ ಖುಷಿ ಕೊಡುತ್ತವೆ. ವೈ. ನಾಗರಾಜು, ಬಿ.ಎಚ್. ರಾಮಚಂದ್ರ, ಎನ್.ಆರ್. ಐಯ್ಯಂಗಾರ್, ಡಿ.ವಿ. ಹಾಲಭಾವಿ, ಎಸ್.ಎಮ್.ಪಂಡಿತ್, ಎಸ್. ಎನ್.ಸುಬ್ಬುಕೃಷ್ಣ,ಮತ್ತು ಎಂ.ಎಚ್.ರಾಮು ಅವರು ವರ್ಣಭಾವಚಿತ್ರ ರಚನೆಯಲ್ಲಿ ಪರಿಣಿತರಾಗಿದ್ದರು. ರುಮಾಲೆ ಚನ್ನಬಸವಯ್ಯ, ಶುದ್ಧೋದನ, ಸುಬ್ಬುಕೃಷ್ಣ, ಎಂ.ಎಸ್. ಚಂದ್ರಶೇಖರ್ ಮತ್ತು ಪಿ.ಆರ್. ತಿಪ್ಪೇಸ್ವಾಮಿ ಅವರು ಗ್ರಾಮೀಣ ಜೀವನವನ್ನು ವಿವಿಧ ವರ್ಣಚಿತ್ರಗಳಲ್ಲಿ ಬಿಡಿಸುವ ವಿಶಿಷ್ಟ ಶೈಲಿಯನ್ನು ಹೊಂದಿದ್ದರು. ಪಿ.ಆರ್. ತಿಪ್ಪೇಸ್ವಾಮಿಯವರು ದೇಗುಲ ಮತ್ತು ತೀರ್ಥ ಕ್ಷೇತ್ರಗಳ ವರ್ಣಚಿತ್ರಗಳನ್ನು ಬಿಡಿಸುವುದರಲ್ಲಿ ನಿಷ್ಣಾತರಾಗಿದ್ದರು. ದೇವನಹಳ್ಳಿಯ ಅಶ್ವತ್ಥಮ್ಮ ಅವರು ಪ್ರಾರಂಭದಲ್ಲಿ ಮಣ್ಣಿನಿಂದ, ನಂತರ ಕಲ್ಲಿನಲ್ಲಿ ಪ್ರತಿಮೆ ಮಾಡುತ್ತಿದ್ದು, ಶಿಲ್ಪಕಲಾ ಶಾಲೆಯಲ್ಲಿ ಡ್ರಾಯಿಂಗ್ ಮತ್ತು ಮಾಡೆಲಿಂಗ್ ಶಿಕ್ಷಕಿಯಾಗಿದ್ದರು.

ಪರಿಣಾಮಕಾರಿ ರೇಖಾಚಿತ್ರ ಹಾಗೂ ವ್ಯಂಗ್ಯಚಿತ್ರಗಳನ್ನು ಬಿಡಿಸುವುದು ತಾಂತ್ರಿಕ ಕಲಾಶಿಕ್ಷಣದ ಇನ್ನೊಂದು ಆಯಾಮವೇ ಆಗಿದೆ. ಅನೇಕ ಖಾಸಗಿ ಕಲಾ ಸಂಸ್ಥೆಗಳು, ಕರ್ನಾಟಕದ ವಿವಿಧ ಭಾಗಗಳಲ್ಲಿ ಈ ಬಗೆಯ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿವೆ. ಸರ್ಕಾರವು ನಮೂನೆ/ಪ್ರತಿಮೆ ತಯಾರಿಕೆ (ಮಾಡೆಲಿಂಗ್) ಕುರಿತು ಪರೀಕ್ಷೆಗಳನ್ನು ನಡೆಸುತ್ತದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೭೭ರಲ್ಲಿ ಈಗಿರುವ ಸ್ವರೂಪ ರೂಪಿಸಿಕೊಂಡಿದ್ದು ವಾರ್ಷಿಕ ಕಲಾಮೇಳ ಹಾಗೂ ಕಲಾ ಪ್ರದರ್ಶನಗಳನ್ನು ವ್ಯವಸ್ಥೆ ಮಾಡುತ್ತಿದೆ. ವಾರ್ಷಿಕವಾಗಿ ಬಹು ಉತ್ಕೃಷ್ಟ ಕಲಾಕೃತಿಗಳಿಗೆ ಪ್ರಶಸ್ತಿಯನ್ನು ನೀಡುತ್ತದೆ. ಅಕಾಡೆಮಿಯು ಕಲಾಪ್ರದರ್ಶನ/ ಕಲಾಮೇಳಗಳನ್ನು ಏರ್ಪಡಿಸಲು ಪ್ರೋತ್ಸಾಹಿಸುತ್ತದೆ ಹಾಗೂ ಕಲೆಗೆ ಸಂಬಂಧಿಸಿದ ಪುಸ್ತಕಗಳನ್ನು ಕೊಳ್ಳಲು ಉದಾರ ಅನುದಾನವನ್ನು ನೀಡುತ್ತದೆ. ರಾಜ್ಯದ ವಿವಿಧ ಕೇಂದ್ರಗಳಲ್ಲಿ ಕಲಾ ಶಿಬಿರಗಳನ್ನು ವ್ಯವಸ್ಥೆ ಮಾಡುತ್ತದೆ. ಕೇಂದ್ರ ಲಲಿತಕಲಾ ಅಕಾಡೆಮಿಯು ದೆಹಲಿಯಲ್ಲಿದ್ದು ಅದರ ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರವು ಚೆನ್ನೈನಲ್ಲಿದೆ. ದಕ್ಷಿಣ ಮಧ್ಯವಲಯದ ಸಾಂಸ್ಕೃತಿಕ ಕೇಂದ್ರವು ನಾಗಪುರದಲ್ಲಿದೆ. ನ್ಯಾಷನಲ್ ಗ್ಯಾಲರಿ ಆಫ್ ಮಾಡ್ರನ್ ಆರ್ಟ್ (ಎನ್‌ಜಿಎಂಎ) ದಕ್ಷಿಣವಲಯ ಕೇಂದ್ರವು ೨೦೦೮ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಬೆಂಗಳೂರು ನಗರವು ಅನೇಕ ಪ್ರತಿಷ್ಠಿತ ಕಲಾಪ್ರದರ್ಶನಗಳನ್ನು ಏರ್ಪಡಿಸಿದ ಗೌರವಕ್ಕೆ ಪಾತ್ರವಾಗಿದೆ. ವಲಯ ಕೇಂದ್ರಗಳು ಅನೇಕ ಕಲಾಶಿಬಿರಗಳನ್ನು ಸಂಘಟಿಸಿದ್ದು, ರಾಜ್ಯದಿಂದ ಆಯ್ಕೆಯಾದ ಅನೇಕ ಕಲಾವಿದರು ಭಾಗವಹಿಸಿದ್ದಾರೆ. ಅಕಾಡೆಮಿಗಳೂ ಕೂಡ ಕಲೆಯ ಕುರಿತಾಗಿ ಆಗಾಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಅಲ್ಲಿ ಮಂಡಿತವಾದ ವಿಷಯಗಳ ಮೇಲಿನ ಪ್ರಬಂಧಗಳನ್ನು ಪ್ರಕಟಿಸುತ್ತಿವೆ. ಲಲಿತಕಲಾ ಅಕಾಡೆಮಿಯಿಂದ ಈ ದಿಸೆಯಲ್ಲಿ 'ಕಲಾವಾರ್ತೆ' ಸಂಚಿಕೆಯನ್ನು ಪ್ರಕಟಿಸುತ್ತಿದೆ. ಕರ್ನಾಟಕ ಸರ್ಕಾರವು ಒಂದು ಬಸ್ಸನ್ನು ಕೂಡ ಮಾಡಿದ್ದು, ಇದರಿಂದ ಅಕಾಡೆಮಿಯು ಸಂಚಾರಿ ಕಲಾ ಪ್ರದರ್ಶನಗಳನ್ನು ಏರ್ಪಡಿಸಲು ಅನುಕೂಲವಾಗಿದೆ. ಈ ಕಲಾ ಕೃತಿಗಳನ್ನೊಳಗೊಂಡ ವಾಹನವು ವಿವಿಧ ಸ್ಥಳಗಳಿಗೆ ಸಂಚರಿಸುತ್ತದೆ. ಅಕಾಡೆಮಿಯು ವ್ಯವಸ್ಥೆಗೊಳಿಸುವ ಕಲಾ ಪ್ರದರ್ಶನ, ಕಲಾ ಶಿಬಿರ, ವಿಚಾರಗೋಷ್ಠಿ ವಿಚಾರ ಸಂಕಿರಣ ನಡೆಯುವ ಸ್ಥಳಗಳಲ್ಲಿ ಸಂಚಾರಿ ಕಲಾ ಪ್ರದರ್ಶನದ ವ್ಯವಸ್ಥೆ ಮಾಡುತ್ತದೆ. ದಸರ ಮತ್ತು ಸಾಹಿತ್ಯ ಸಮ್ಮೇಳನ ನಡೆಯುವ ಸ್ಥಳಗಳಲ್ಲಿಯೂ ಸಂಚಾರಿ ವಾಹನ ಕಲಾ ಪ್ರದರ್ಶನವನ್ನು ಏರ್ಪಡಿಸುತ್ತದೆ.

ಬಳ್ಳಾರಿಯ ಕೊಂಡಾಚಾರಿ, ಪುರುಷೋತ್ತಮ, ಅಗರಂ ಕೃಷ್ಣಮೂರ್ತಿ, ಶೇರಿಗಾರ್, ಬಾಯಿರಿ, ಟಿ.ಕೆ.ರಾಮರಾವ್ ಮತ್ತು ಹುಬ್ಬಳ್ಳಿಯ ಕೆ.ಬಿ.ಕುಲಕರ್ಣಿ ಮತ್ತಿತರರು ರೇಖಾಚಿತ್ರಗಳ ಬಿಡಿಸುವಿಕೆಗೆ ಪ್ರಸಿದ್ಧಿಯಾಗಿದ್ದಾರೆ. ಆರ್.ಕೆ.ಲಕ್ಷ್ಮಣ್, ಆರ್. ಎಸ್.ನಾಯ್ಡು, ಆರ್.ಮೂರ್ತಿ, ರಮೇಶ್, ಗೋಪಾಲ್, ಜಿ.ವೈ ಹುಬ್ಳೀಕರ್ ರಂಗನಾಥ್ ಎನ್.ಸಿ.ರಘು, ಗುಜ್ಜಾರ, ಪ.ಸ.ಕುಮಾರ್, ಎಸ್.ಕೆ.ನಾಡಿಗ್, ಗೋವಿಂದು ಮತ್ತಿತರರು ವ್ಯಂಗ್ಯ ಚಿತ್ರಗಳಿಗೆ ಹೆಸರುವಾಸಿಯಾದವರು. ಪಿ.ಸುಬ್ಬರಾವ್, ಆರ್.ಎಂ.ಹಡಪದ್, ಜಿ.ಎಸ್.ಶೆಣೈ, ಎಸ್.ಜಿ.ವಾಸುದೇವ್, ದಂಡಾವತಿಮಠ್, ಹಾಲಭಾವಿ, ಎಂ.ಸಿ.ಚಟ್ಟಿ, ವಿಜಯಸಿಂಧೂರ್, ಯು.ಭಾಸ್ಕರರಾವ್, ಎಂ.ಬಿ.ಪಾಟೀಲ್, ವಿ.ಎಮ್.ಸೋಲಾಪುರ್‌ಕರ್, ವಿ.ಟಿ.ಕಾಳೆ, ಎಂ.ಎಸ್.ಚಂದ್ರಶೇಖರ್, ರವಿಕುಮಾರ್‌ಕಾಶಿ, ಸಿ.ಚಂದ್ರಶೇಖರ, ಬಾಬು ಈಶ್ವರಪ್ರಸಾದ್, ವಿ.ಜಿ.ಅಂದಾನಿ, ಪೀಟರ್ ಲೂಯಿಸ್, ವಿ.ಬಿ.ಹಿರೇಗೌಡರ್, ಯೂಸುಫ್ ಅರಕಲ್, ಎಂ.ಎಸ್. ಮೂರ್ತಿ, ಪಿ.ಎಸ್.ಕಡೆಮನಿ, ಮಧುದೇಸಾಯಿ, ರಾಮದಾಸ್ ಅಡ್ಯಂತಾಯ, ಜಾನ್ ದೇವರಾಜ್, ಶಂಕರ್ ಪಾಟೀಲ್, ಚಂದ್ರನಾಥ್ ಆಚಾರ್ಯ, ಜೆ.ಎಮ್.ಎಸ್.ಮಣಿ, ಇ.ಜಿ.ಬಡಿಗೇರ, ಟಿ.ಪಿ.ಅಕ್ಕಿ, ಎಸ್.ಎಂ.ಪಂಡಿತ್, ರಾಮನರಸಯ್ಯ, ರಘೋತ್ತಮ್‌ಪುತ್ತಿ, ಗೂಳಣ್ಣನವರ್, ಎಂ.ಇ.ಗುರು, ಎಸ್.ಕಾಳಪ್ಪ, ಎಂ.ಎಸ್.ನಂಜುಂಡರಾವ್, ಎಂ.ಬಿ.ಬಸವರಾಜ್, ವಿಷ್ಣುದಾಸ್ ರಾಮದಾಸ್, ಸುಂಕದ್, ಮನೋಳಿ ಮತ್ತಿತರು ರಾಜ್ಯದಲ್ಲಿ ಚಿತ್ರ ಕಲಾಕ್ಷೇತ್ರವನ್ನು ನಳನಳಿಸುವಂತೆ ಮಾಡಿದ್ದಾರೆ. ಪಿ.ಆರ್. ಕಮಲಮ್ಮ, ಸುಭಾಷಿಣಿ ದೇವಿ, ಎಸ್.ಧನಲಕ್ಷ್ಮಿ, ಎಂ.ಜೆ.ಕಮಲಾಕ್ಷಿ, ಶೀಲಾಗೌಡ, ಪುಷ್ಪದ್ರಾವಿಡ್, ಪುಷ್ಪಮಾಲ, ಶಾಂತಾಮಣಿ, ಸುರೇಖ, ರೇಣುಕ ಮಾರ್ಕಂಡೆ, ಗಾಯಿತ್ರಿ ದೇಸಾಯಿ, ರೇಣುಕಾ ಕೆಸರಮಡು ಮುಂತಾದವರು ಮುಖ್ಯ ಚಿತ್ರಕಲಾವಿದೆಯರಾಗಿದ್ದಾರೆ, ಸಿದ್ದಲಿಂಗಸ್ವಾಮಿ, ನಾಗೇಂದ್ರ ಸ್ಥಪತಿ, ಮತ್ತು ಮಹದೇವಸ್ವಾಮಿ ಶಾಸ್ತ್ರೀಯ ವರ್ಣ ಚಿತ್ರಕಲೆಯಲ್ಲಿ ಸಾಂಪ್ರದಾಯಿಕ ವಸ್ತು ಆಧಾರಿತ ರೇಖಾಚಿತ್ರಗಳನ್ನು ಬಿಡಿಸುವಲ್ಲಿ ಪರಿಣಿತರಾಗಿದ್ದಾರೆ.

ರಚನಾತ್ಮಕ ಕಲಾವಿಮರ್ಶಕರಾಗಿ, ಪಾಂಡವಪುರದ ಜಿ.ವೆಂಕಟಾಚಲಮ್, ಶಿವರಾಮ ಕಾರಂತ, ಅ.ನ.ಕೃಷ್ಣರಾವ್, ಎಸ್.ಕೆ.ರಾಮಚಂದ್ರರಾವ್, ಬಿ.ವಿ.ಕೆ.ಶಾಸ್ತ್ರಿ, ಪಿ.ಆರ್.ತಿಪ್ಪೇಸ್ವಾಮಿ, ಸಿ.ಎಸ್.ಕೃಷ್ಣಶೆಟ್ಟಿ, ಕೆ.ವಿ.ಸುಬ್ರಮಣ್ಯಂ, ಅ.ಲ.ನರಸಿಂಹನ್, ಅನಿಲ್ ಕುಮಾರ್, ಮೊದಲಾದವರು ಹೆಸರು ಗಳಿಸಿದವರಲ್ಲಿ

ಗಮನಾರ್ಹವಾಗಿದ್ದಾರೆ. ಅ.ನ.ಸುಬ್ಬರಾವ್, ಆರ್.ಎಂ.ಹಡಪದ್, ಎಂ.ಎಸ್.ನಂಜುಂಡರಾವ್ ಬೆಂಗಳೂರಿನಲ್ಲಿ ಕಲಾ ಶಾಲೆಯನ್ನು ಪ್ರಾರಂಭಿಸಿದರು. ಧಾರವಾಡದಲ್ಲಿ ಹಾಲಭಾವಿ, ಹುಬ್ಬಳ್ಳಿಯಲ್ಲಿ ಮಿಣಜಗಿ, ಗದಗ್‌ನಲ್ಲಿ ಅಕ್ಕಿ, ಗುಲಬರ್ಗಾದಲ್ಲಿ ಅಂದಾನಿ, ತುಮಕೂರು, ಮೈಸೂರು, ಮತ್ತು ಮಂಗಳೂರಿನಲ್ಲಿ ಬಾಬುರಾವ್ ಕಂದಗೋಳ ಅವರು ಆರಂಭಿಸಿದ ಕಲಾ ಶಾಲೆಗಳು ಪ್ರಸಿದ್ಧಿಯನ್ನು ಪಡೆದಿವೆ. ಸರ್ಕಾರವೂ ಈ ಕ್ಷೇತ್ರದಲ್ಲಿ ತರಬೇತಿ ಶಾಲೆಗಳನ್ನು ಸ್ಥಾಪಿಸಿದೆ. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯನ್ನು ೧೯೧೩ರಲ್ಲಿ ಆರಂಭಿಸಲಾಯಿತು. ಚಿತ್ರಕಲೆ ಮತ್ತು ಕುಶಲಕಲಾ ಶಾಲೆಯನ್ನು (ಈಗ ಲಲಿತ ಕಲಾ ಕಾಲೇಜು), ದಾವಣಗೆರೆಯಲ್ಲಿ ೧೯೬೪ರಲ್ಲಿ ಆರಂಭಿಸಲಾಯಿತು. ರಾಜ್ಯ ಸರ್ಕಾರವು ರಾಜ್ಯೋತ್ಸವ ಸಂದರ್ಭದಲ್ಲಿ ಪ್ರಸಿದ್ಧ ಕಲಾವಿದರಿಗೆ ಲಲಿತಕಲಾ ಅಕಾಡೆಮಿಯು ಯೋಜನೆಗೊಳಿಸಿರುವ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸುತ್ತಿದೆ. ರಾಜ್ಯದಲ್ಲಿ ಈಚಿನ ವರ್ಷಗಳಲ್ಲಿ ಅಲ್ಲಲ್ಲಿ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದು ಖಾಸಗಿ ಕಲಾಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ೧೯೮೨ರಲ್ಲಿ ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿಯನ್ನು (ಚಾಮರಾಜೇಂದ್ರ ಅಕಾಡೆಮಿ ಆಫ್ ವಿಶುಯಲ್ ಆರ್ಟ್) ಮೈಸೂರಿನಲ್ಲಿ ಆರಂಭಿಸಲಾಗಿದೆ. ಹಂಪಿ ವಿಶ್ವವಿದ್ಯಾಲಯವೂ ಕಲಾ ಪರೀಕ್ಷೆಗಳನ್ನು ನಡೆಸಿ, ಪ್ರಮಾಣಪತ್ರಗಳನ್ನು ನೀಡುತ್ತಿದೆ.

ದಿ. ಎಂ.ಎಸ್. ನಂಜುಂಡರಾವ್ ಅವರಿಂದ ಆರಂಭಗೊಂಡ ಚಿತ್ರಕಲಾಪರಿಷತ್ತು ಮುಂದೆ ಪ್ರಧಾನ ಕಾರ್ಯದರ್ಶಿ ಕಮಲಾಕ್ಷಿ ಗೌಡ ಅವರ ನೇತೃತ್ವದಲ್ಲಿ ಕಲಾ ಕಾಲೇಜಾಗಿ ಮುಂದುವರಿಯಿತು. ಆ ಸಂಸ್ಥೆಯು ಕಲಾ ಶಿಬಿರ, ಕಲಾ ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸುತ್ತಿದೆ. ವಿಶಿಷ್ಟ ಪರಿಕಲ್ಪನೆಯಾದ 'ಚಿತ್ರ ಸಂತೆ'ಯ ಮೂಲಕ ಕಲಾಕೃತಿಗಳನ್ನು ಕೊಳ್ಳಲು ಪ್ರೋತ್ಸಾಹಿಸುತ್ತಿದೆ.

**ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ:** ಚಿತ್ರಕಲಾ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸಿದ ಕರ್ನಾಟಕದ ಚಿತ್ರ ಕಲಾವಿದರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ೧೯೯೪ರಲ್ಲಿ ಸ್ಥಾಪಿಸಲಾಗಿದ್ದು, ' ಒಂದು ಲಕ್ಷ ನಗದು ಒಳಗೊಂಡಿರುತ್ತದೆ. ಈ ಪ್ರಶಸ್ತಿ ಪಡೆದ ಕಲಾವಿದರು; ಕೆ.ಕೆ. ಹೆಬ್ಬಾರ್ (೧೯೯೪). ಡಿ.ವಿ. ಹಾಲಭಾವಿ (೧೯೯೫), ಎಂ.ಸಿ. ಚೆಟ್ಟಿ (೧೯೯೬), ಪಿ.ಆರ್.ತಿಪ್ಪೇಸ್ವಾಮಿ (೧೯೯೭), ಆರ್.ಎಂ.ಹಡಪದ್ (೧೯೯೮), ಎಂ.ಜೆ. ಶುದ್ಧೋದನ (೧೯೯೯), ಎಂ.ಎಸ್. ಚಂದ್ರಶೇಖರ್ (೨೦೦೦), ಎಸ್.ಎಸ್.ಮನೋಳಿ (೨೦೦೧), ಜೆ.ಎಸ್.ಖಂಡೇರಾವ್ (೨೦೦೨), ಎಸ್.ಜಿ.ವಾಸುದೇವ್ (೨೦೦೩), ಯೂಸುಫ್ ಅರಕಲ್ (೨೦೦೪), ವಿಜಯ ಸಿಂಧೂರ್ (೨೦೦೫), ಬಿ.ಕೆ.ಹುಬ್ಲಿಕರ್ (೨೦೦೬), ಶಂಕರ ಗೌಡ ಬೆಟ್ಟದೂರು (೨೦೦೭), ಎಂ.ಬಿ.ಪಾಟೀಲ್ (೨೦೦೮), ವಿ.ಜಿ.ಅಂದಾನಿ (೨೦೦೯), ಚಂದ್ರನಾಥ ಆಚಾರ್ಯ (೨೦೧೦).ವಿ.ಬಿ.ಹಿರೇಗೌಡರ್ (೨೦೧೧), ಯು.ಭಾಸ್ಕರರಾವ್ (೨೦೧೨), ಕೆ.ಟಿ.ಶಿವಪ್ರಸಾದ್ (೨೦೧೩), ವಿ.ಟಿ.ಕಾಳೆ (೨೦೧೪), ಪೀಟರ್ ಲೂಯಿಸ್ (೨೦೧೫). ಈ ಮುಂದೆ ಸೂಚಿತ ರಾಜ್ಯದ ಕಲಾವಿದರು ೧೯೫೮ರಿಂದ ೨೦೦೦ದವರೆಗೆ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳನ್ನು ಪಡೆದವರಾಗಿದ್ದಾರೆ. ಕೆ.ಕೆ.ಹೆಬ್ಬಾರ್ ಎಸ್.ಜಿ.ವಾಸುದೇವ್, ಬಾಲನ್ ನಂಬಿಯಾರ್, ಯೂಸುಫ್ ಅರಕ್ಕಲ್, ವಿಜಯ ಸಿಂಧೂರ್, ಎಲ್.ಪಿ.ಅಂಚನ್, ಕೆ.ಆರ್.ಸುಬ್ಬಣ್ಣ, ಎನ್.ಪುಷ್ಪಮಾಲ, ಕೆ.ಎಸ್. ರಾವ್, ಆರ್.ಉಮೇಶ್, ವಿ.ಜಿ.ಅಂದಾನಿ, ಎಂ.ಬಿ.ಲೋಹರ್, ಶೇಷರಾವ್ ಬಿರಾದಾರ್, ಜಿ.ಆರ್.ಈರಣ್ಣ, ವೀರೇಂದ್ರ ಷಾ, ರವಿ ಕುಮಾರ್ ಕಾಶಿ, ರಾಮದಾಸ್ ಆಡ್ಯಂತಾಯ, ಸುನೀಲ್ ಮುದ್ದಾಪುರ್, ರಾಜೇಶ್ ಆಚಾರ್, ಗುರುಸಿದ್ದಪ್ಪ, ಅವರುಗಳು. ಕೆ.ಕೆ.ಹೆಬ್ಬಾರ್ ಮತ್ತು ಎಸ್.ರೋರಿಚ್ ಅವರುಗಳಿಗೆ ಫೆಲೋಶಿಪ್ ನೀಡಿ ಅಕಾಡೆಮಿಯು ಗೌರವಿಸಿದೆ.

### ಕರ್ನಾಟಕದಲ್ಲಿ ಸಂಗೀತ

ಭಾರತೀಯ ಶಾಸ್ತ್ರೀಯ ಸಂಗೀತವು, ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಎಂಬ ಎರಡು ಪ್ರಕಾರಗಳನ್ನು ಹೊಂದಿದೆ. ಕುತೂಹಲಕಾರಿ ಅಂಶವೆಂದರೆ ಇವೆರಡೂ ಪ್ರಕಾರಗಳು ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವುದು. ತುಂಗಭದ್ರಾ ನದಿಯು ರಾಜ್ಯದಲ್ಲಿ ಹೆಚ್ಚು ಕಡಿಮೆ ಇವೆರಡು (ಪ್ರಕಾರಗಳ) ಗಡಿಯನ್ನು ವಿಭಜಿಸುತ್ತದೆ. 'ಕರ್ನಾಟಕ' ಎಂಬ ಪದ ದಕ್ಷಿಣ ಭಾರತದ ನಾಲ್ಕು ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದಲ್ಲಿ ಪ್ರಚಲಿತವಿರುವ ಸಂಗೀತ ಸಂಪ್ರದಾಯವನ್ನು ಸೂಚಿಸುತ್ತದೆ. ಈ ಸಂಗೀತ ವಿಕಾಸವಾಗುವಲ್ಲಿ ಕರ್ನಾಟಕದ ಪಾತ್ರ ಮಹತ್ವದ್ದಾಗಿದೆ.

ಸಂಗೀತವು, ಸಾಹಿತ್ಯ ಹಾಗೂ ಇತರೆ ಸೃಜನಶೀಲ ಕಲೆಗಳಂತೆ ಕರ್ನಾಟಕದಲ್ಲಿ ಪ್ರಾಚೀನಕಾಲದಿಂದಲೂ ಕೃಷಿಗೊಳ್ಳುತ್ತ ಬಂದಿದೆ. ಅದು ಇಲ್ಲಿನ ಜನರ ಸಾಮಾಜಿಕ, ಧಾರ್ಮಿಕ ಬದುಕಿನಲ್ಲಿ ಅವಿಭಾಜ್ಯ ಭಾಗವಾಗಿ ಬಂದಿದೆ. ಸಂಗೀತ ಪಠ್ಯಗಳು ಸಾಮಾನ್ಯವಾಗಿ ಪ್ರಾಚೀನ ಸಂಗೀತ ಸಿದ್ಧಾಂತಕಾರರನ್ನು ಹೆಸರಿಸುತ್ತವೆಯೇ ವಿನಃ ಸಂಗೀತದ ಪರಿಕಲ್ಪನೆಗೆ ಒಂದು ಸುಸ್ವರೂಪ ಕೊಟ್ಟ ಹಾಡುಗಾರರ ಹೆಸರನ್ನು ಹೇಳುವುದಿಲ್ಲ. ಭರತನ 'ನಾಟ್ಯ ಶಾಸ್ತ್ರ'ವು ಬಹುಶಃ ಸಂಗೀತ ಶಾಸ್ತ್ರ ಕುರಿತ ಅತ್ಯಂತ ಪ್ರಾಚೀನ ಗ್ರಂಥವೆನ್ನಬಹುದಾಗಿದೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಅದು ಜನಬಳಕೆಯಲ್ಲಿದ್ದಂತೆ ತೋರುತ್ತದೆ. ಈ ಪೈಕಿ ಮತಂಗನ 'ಬೃಹದ್ದೇಶಿ' ಗ್ರಂಥವು ಬಹಳ ಗಮನಾರ್ಹ ಕೃತಿಯಾಗಿ ಕಾಣಬರುತ್ತದೆ. ಈ ಗ್ರಂಥದಲ್ಲಿ ಸಂಗೀತ ಶಾಸ್ತ್ರದ ವಿಶಾಲ ವೈಜ್ಞಾನಿಕ ವಿವರಣೆ ಇದೆ. ಆ ಕಾಲದ ಪ್ರಚಲಿತ ಸ್ವರವಿನ್ಯಾಸಗಳಿಗೆ ಮೊಟ್ಟ ಮೊದಲಿಗೆ 'ರಾಗ' ಎಂಬ ಶಬ್ದವನ್ನು ಬಳಸಿದ್ದಾನೆ. ಬಹುಶಃ ಇಂದಿನ ಸಂಗೀತದ ರಾಗ ಪದ್ಧತಿಗೆ ಇದು ಆಧಾರವಾಗಿರುವಂತಿದೆ. ದೇವಗಿರಿಯ ಯಾದವ (ಸೇವುಣ) ದೊರೆಗಳ ಆಶ್ರಿತನಾಗಿದ್ದ ಶಾಙ್ಗದೇವನು ತನ್ನ ಕೃತಿ 'ಸಂಗೀತರತ್ನಾಕರ'ದಲ್ಲಿ ೨೬ ರಾಗಗಳ ಕುರಿತು ಹೇಳಿದ್ದಾನೆ. ಸುಮಾರು ೧೧ ಮತ್ತು ೧೭ ನೆಯ ಶತಮಾನಗಳಲ್ಲಿ ೩೨ ರಾಗಗಳು ಮಾತ್ರ ಚಾಲ್ತಿಯಲ್ಲಿದ್ದುವು ಎಂಬ ಅಂಶ ಬಸವಣ್ಣನ ವಚನದಿಂದ ವಿದಿತವಾಗುತ್ತದೆ. ಕ್ರಿ.ಶ. ೧೬೬೦ರ ವೆಂಕಟಮುಖಿಯು ೭೨ ಮೇಳ ಕರ್ತ ರಾಗಗಳನ್ನು ಸೂತ್ರೀಕರಿಸಿ ಸ್ವರ ವಿನ್ಯಾಸಗೊಳಿಸಿ ರಾಗಗಳ ವರ್ಗೀಕರಣ ಕಾರ್ಯವನ್ನು ಪೂರ್ಣಗೊಳಿಸಿದ್ದು ಕಂಡುಬರುತ್ತದೆ.

ಕರ್ನಾಟಕದ ಗ್ರಂಥಕರ್ತರಿಂದ ಬಹುಸಂಖ್ಯೆಯಲ್ಲಿ ಸಂಗೀತ ಮತ್ತು ನೃತ್ಯಗಳ ಬಗ್ಗೆ ಮೀಮಾಂಸೆ ಗ್ರಂಥಗಳು ಬರೆಯಲ್ಪಟ್ಟಿವೆ. ಅವುಗಳಲ್ಲಿ 'ರಾಜಮಾನಸೋಲ್ಲಾಸ' ಎಂದು ಕರೆಯಲ್ಪಡುವ 'ಅಭಿಲಾಷಿತಾರ್ಥ ಚಿಂತಾಮಣಿ', ಹರಿಪಾಲನ ಭಾರತಭಾಷ್ಯ, 'ಸಂಗೀತ ಸುಧಾಕರ', 'ಸಂಗೀತ ಚೂಡಾಮಣಿ', ವಿದ್ಯಾರಣ್ಯರ

'ಸಂಗೀತಸಾರ', 'ಭಾರತಸಾರ ಸಂಗ್ರಹ', ನಿಜಗುಣ ಶಿವಯೋಗಿಗಳ 'ವಿವೇಕಚಿಂತಾಮಣಿ', ಭಂಡಾರು ಲಕ್ಷ್ಮೀನಾರಾಯಣನ 'ಸಂಗೀತ ಸೂರ್ಯೋದಯ', ಗೋಪತಿಪ್ಪನ 'ತಾಳದೀಪಿಕಾ', ರಾಮಾಮಾತ್ಯನ 'ಸ್ವರಮೇಳ ಕಳಾನಿಧಿ', ಗೋವಿಂದ ದೀಕ್ಷಿತನ 'ಸಂಗೀತ ಸುಧಾ', ವೆಂಕಟಮುಖಿಯ 'ಚತುರ್ದಂಡಿ ಪ್ರಕಾಶಿಕೆ', ಪುಂಡರೀಕ ವಿಠಲ ವಿರಚಿತ 'ಷಡ್ರಾಗ ಚಂದ್ರೋದಯ', 'ರಾಗ ಮಂಜರಿ', 'ರಾಗ ಮಾಲ' ಮತ್ತು 'ನರ್ತನ ನಿರ್ಣಯ', ಇಮ್ಮಡಿ ಬಸವಪ್ಪ ನಾಯಕನ 'ಶಿವತತ್ವ ರತ್ನಾಕರ', ೨೦ನೇ ಶತಮಾನದ ದಿ. ಹುಲಗೂರು ಕೃಷ್ಣಾಚಾರ್ಯರ 'ಶ್ರುತಿ ಸಿದ್ಧಾಂತ' ಹಾಗೂ ಮೈಸೂರಿನ ಡಾ. ರಾ. ಸತ್ಯನಾರಾಯಣರ 'ನಿಶ್ಯಂಕ ಹೃದಯ' ಮುಂತಾದವು ಮುಖ್ಯ ಕೃತಿಗಳಾಗಿವೆ. ಕರ್ನಾಟಕದಲ್ಲಿ ವೈವಿಧ್ಯಮಯ ವಾದ್ಯಗಳು ಬಳಕೆಯಲ್ಲಿದ್ದವು. ಕನ್ನಡ ಕವಿಗಳಿಗೆ ತಂತಿವಾದ್ಯ, ಗಾಳಿವಾದ್ಯ ತಾಳವಾದ್ಯ (ತಾಡನ) ಮತ್ತು ಘನವಾದ್ಯಗಳೆಂಬ ನಾಲ್ಕು ಬಗೆಯ ಶಾಸ್ತ್ರೀಯ ವಾದ್ಯ ಪ್ರಕಾರಗಳ ಸಂಪೂರ್ಣ ತಿಳಿವಳಿಕೆ ಇತ್ತು. ಇಂದು ರೂಢಿಯಲ್ಲಿಲ್ಲದ ಅನೇಕ ವಾದ್ಯೋಪಕರಣಗಳ ಪರಿಚಯವೂ ಅವರಿಗಿದ್ದುದು ಆಶ್ಚರ್ಯಕರ.

ತಂತಿವಾದ್ಯಗಳ ಪೈಕಿ ಕಿನ್ನರಿ, ವೆಲ್ಲಕಿ, ವಿಪಂಚಿ, ರಾವಣಹಸ್ತ, ದಂಡಿಕ, ತ್ರಿಸರಿ, ಜಂತ್ರ, ಸ್ವರಮಂಡಲ, ಮತ್ತು ಪರಿವಾದಿನಿ ಮುಂತಾದವು ಗಮನಾರ್ಹ. ಶಂಖ, ಶೃಂಗ, ತಿತ್ತಿರ, ಕಹಳೆ, ವಂಶ, ಬೊಂಬುಳ ಇತ್ಯಾದಿಗಳು ಗಾಳಿವಾದ್ಯಗಳಾಗಿವೆ. ಅಧಿಕ ಸಂಖ್ಯೆಯಲ್ಲಿರುವ ತಾಳ (ತಾಡನ) ವಾದ್ಯಗಳ ಪೈಕಿ, ಮುಖ್ಯವಾದ ತಾಳ (ತಾಡ) ಕರಡಿ, ಮೃದಂಗ, ತಬಲ, ತಮಟೆ, ಢಕ್ಕೆ, ಪಟಹ, ದುಂದುಭಿ, ಪಣವ, ಭೇರಿ, ಡಿಂಡಿಮ, ತ್ರಿವಳಿ, ನಿಸ್ಸಳ, ಢಮರು, ಚಂಬಕ, ದಂಡೆ, ಡೊಳ್ಳು, ಡೋಲು ಮತ್ತು ರುಂಜಗಳನ್ನು ಮುಖ್ಯವಾಗಿ ಹೆಸರಿಸಲಾಗುತ್ತದೆ. ಘನವಾದ್ಯಗಳಾದ ಘಂಟೆ, ಜಯಗಂಟೆ ಕಿಂಕಿಣಿ, ಝುಲ್ಲರಿ, ತಾಳ ಮತ್ತು ಕಂಸಾಳೆ ಮುಂತಾದವು ಕಂಡುಬರುತ್ತವೆ. ಪಾಲ್ಕುರಿಕೆ ಸೋಮನಾಥನು ೩೨ ಬಗೆಯ ವೀಣೆ ಮತ್ತು ೧೮ ಬಗೆಯ ಕೊಳಲುಗಳನ್ನು ಹೆಸರಿಸಿದ್ದಾನೆ.

ಖಂಡ, ಶುಕಸಾರಿಕ, ತ್ರಿಪದಿ, ಚತುಷ್ಪದಿ, ಷಟ್ಪದಿ, ಧವಳ, ಸುಳಾದಿ, ಪದ, ವಚನ, ಕೀರ್ತನ, ತತ್ವ, ಉಗಾಭೋಗಗಳು ಪದ್ಯ ರಚನೆಯ ವಿಧಗಳಾಗಿವೆ. ಕರ್ನಾಟಕದಲ್ಲಿ ಹಿಂದಿನಿಂದಲೂ ಜನಪ್ರಿಯವಾಗಿದ್ದು ಇಂದಿಗೂ ಪ್ರಸ್ತುತವೆನಿಸಿರುವ ರಚನೆಗಳನ್ನು ಹಲವಾರು ಸಂಗೀತ ರಚನಕಾರರು ರಚಿಸಿದ್ದಾರೆ. ಅಂತಹವರಲ್ಲಿ, ಸಕಲೇಶ ಮಾದರಸ, ಬಸವಣ್ಣ, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಂತ ಶಿವಯೋಗಿ, ನಾಗಭೂಷಣ, ಘನಮಠಾಚಾರ್ಯ, ಮಡಿವಾಳಪ್ಪ ಕಡಕೋಳ, ನಂಜುಂಡ ಶಿವಯೋಗಿ, ಕರಿಬಸವಸ್ವಾಮಿ ಹಾಗೂ ಸರ್ಪಭೂಷಣ ಶಿವಯೋಗಿ ಮುಂತಾದವರು ಪ್ರಮುಖರು. ಮಧ್ವಾಚಾರ್ಯರ ಶಿಷ್ಯರಾದ ನರಹರಿ ತೀರ್ಥರು ಹರಿದಾಸ ಕೂಟವನ್ನು ಸ್ಥಾಪಿಸಿದರೆನ್ನಲಾಗಿದೆ. ಶ್ರೀಪಾದರಾಯರನ್ನು ಹರಿದಾಸ ಪಿತಾಮಹರೆನ್ನುತ್ತಾರೆ. ಹರಿದಾಸರು ಭಗವಾನ್ ವಿಷ್ಣುವನ್ನು ಸ್ತುತಿಸುವ ಗೀತೆಗಳನ್ನು ಕನ್ನಡದಲ್ಲಿ ರಚಿಸಿರುವರು. ವ್ಯಾಸರಾಯ, ವಾದಿರಾಜ, ಪುರಂದರದಾಸ, ಕನಕದಾಸ, ಮೊದಲಾದವರು ಕೀರ್ತನೆಗಳನ್ನು ರಚಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಕೂಡ ಸಮರ್ಥ ಗೀತ ರಚನಕಾರರಾಗಿದ್ದರು. ಜಯಚಾಮರಾಜ ಒಡೆಯರ್ ಅವರು ಕರ್ನಾಟಕ ಸಂಗೀತ ಪದ್ಧತಿಯಲ್ಲಿ ವಿವಿಧ ಭಾಷೆಗಳಲ್ಲಿ ೯೪ ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕದ ಸಂಗೀತಶಾಸ್ತ್ರದ ಚರಿತ್ರೆಯಲ್ಲಿ ಪುರಂದರದಾಸರು ತ್ರಿವಿಕ್ರಮನಂತೆ ಬೆಳೆದವರು. ಅವರು ರಚಿಸಿದ 'ಪಿಳ್ಳಾರಿಗೀತೆ'ಗಳು ಕರ್ನಾಟಕ ಸಂಗೀತವನ್ನು ಕಲಿಯುವವರಿಗೆ ಇಂದಿಗೂ ಆಧಾರಸ್ತಂಭದಂತಿವೆ. ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ'ರೆಂದು ಗೌರವಿಸಲಾಗಿದೆ. ಅವರು ಕರ್ನಾಟಕ ಸಂಗೀತ ಪ್ರವಾಹಕ್ಕೆ ಹೊಸ ತಿರುವು ನೀಡಿದ ಮಹಾನ್ ವ್ಯಕ್ತಿಯಾಗಿದ್ದಾರೆ. ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಜನಪ್ರಿಯ ಹಾಗೂ ಶಾಸ್ತ್ರೀಯ ಸಂಗೀತ ರಚನೆಯಲ್ಲಿ ಸ್ಪಷ್ಟವಾದ ಭಿನ್ನತೆ ಕಂಡು ಬಂದಿತು. ಮೈಸೂರು ಆಸ್ಥಾನ ವಿದ್ವಾಂಸರಾದ ಮೈಸೂರು ಸದಾಶಿವರಾಯರು, ವೀಣೆ ಸುಬ್ಬಣ್ಣ, ವೀಣೆ ಶೇಷಣ್ಣ, ಮುಂತಾದ ಪ್ರಖ್ಯಾತರಿಗೆ ಗುರುವಾಗಿದ್ದರು. ಮೈಸೂರು ಸದಾಶಿವರಾವ್ ಸುಬ್ಬಣ್ಣ, ಶೇಷಣ್ಣ, ಸಾಂಬಯ್ಯ, ಮುತ್ತಯ್ಯ ಭಾಗವತರ್, ಮೈಸೂರು ಕೆ.ವಾಸುದೇವಾಚಾರ್ಯ (ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಯ ವಾಗ್ಗೇಯಕಾರರು), ದೇವೋತ್ತಮ ಜೋಯಿಸ್, ಕರಿಗಿರಿರಾವ್, ಬಿಡಾರಂ ಕೃಷ್ಣಪ್ಪ, ಮೈಸೂರು ಟಿ.ಚೌಡಯ್ಯ ಜಯಚಾಮರಾಜ ಒಡೆಯರ್, ಅಳಿಯ ಲಿಂಗರಾಜು, ವೀಣೆ ಕೃಷ್ಣಾಚಾರ್ಯ ರುದ್ರಪಟ್ಟಣಂ ವೆಂಕಟರಮಣಯ್ಯ, ತಿರುಪ್ಪಾಂಡಾಳ್ ಪಟ್ಟಾಭಿರಾಮಯ್ಯ, ಕೋಲಾರ ಚಂದ್ರಶೇಖರ ಶಾಸ್ತ್ರಿ, ಬಳ್ಳಾರಿ ರಾಜಾರಾವ್ ಮತ್ತಿತರರು ತಮ್ಮ ವಾಗ್ಗೇಯ ಕೃತಿಗಳ ಶ್ರೀಮಂತ ಪರಂಪರೆಯನ್ನು ಬಿಟ್ಟುಹೋಗಿದ್ದಾರೆ. ಸಂಗೀತ ವಿದೂಷಿಯರ ಪೈಕಿ, ಬೆಂಗಳೂರು ನಾಗರತ್ನಮ್ಮನವರು ಶ್ರೀ ತ್ಯಾಗರಾಜರ ಸಮಾಧಿಯನ್ನು ತಿರುವೈಯಾರಿನಲ್ಲಿ ಜೀರ್ಣೋದ್ಧಾರ ಮಾಡಿದರು.

ಮೈಸೂರು ಒಡೆಯರ ಆಳ್ವಿಕೆಯ ಕಾಲವನ್ನು ಕರ್ನಾಟಕ ಸಂಗೀತದ ಸುವರ್ಣಯುಗವೆಂದು ಹೇಳಬಹುದು. ಮೈಸೂರು ಅರಸರು ಸ್ಥಳೀಯ ಸಂಗೀತಗಾರರಿಗಲ್ಲದೇ ಇತರೆ ಪ್ರದೇಶದ ಸಂಗೀತಗಾರರಿಗೂ ಆಶ್ರಯದಾತರಾಗಿದ್ದರು. ವೀಣೆ ಭಕ್ಷಿ ವೆಂಕಟಸುಬ್ಬಯ್ಯ, ಶಿವರಾಮಯ್ಯ, ಪಲ್ಲವಿ ರಾಮಲಿಂಗಯ್ಯ ಮತ್ತು ಲಕ್ಷ್ಮೀನಾರಾಯಣ ಅವರುಗಳು ರಾಜ್ಯದ ಪ್ರಮುಖ ಸಂಗೀತಗಾರರೆನಿಸಿದ್ದು ರಾಜಾಶ್ರಯವನ್ನು ಪಡೆದವರಾಗಿದ್ದರು. ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದು ಅಥವಾ ಬೇರೆಡೆ ವಾಸವಿದ್ದವರೂ ಸೇರಿದಂತೆ ಉಳಿದ ಪ್ರಸಿದ್ಧ ಸಂಗೀತಗಾರರೆಂದರೆ, ಸದಾಶಿವರಾಯರು, ಲಾಲ್ಗುಡಿ ರಾಮಯ್ಯರ್, ಮೂಗೂರು ಸುಬ್ಬಣ್ಣ, ಕೃಷ್ಣಯ್ಯ, ಕರಿಗಿರಿರಾಯರು, ಭೈರವಿ ಕೆಂಪೇಗೌಡ, ರುದ್ರಪ್ಪ, ಜಂಝು ಮಾರುತಮ್ ಸುಬ್ಬಯ್ಯ, ಲಾಲ್ಗುಡಿ ಗುರುಸ್ವಾಮಿ ಐಯ್ಯರ್, ಬಿಡಾರಂ ಕೃಷ್ಣಪ್ಪ, ಕೆ.ವಾಸುದೇವಚಾರ್ಯ, ತಿರುವೈಯ್ಯಾರು ಸುಬ್ರಮಣ್ಯ ಅಯ್ಯರ್, ಕೋಲಾರ ನಾಗರತ್ನಮ್ಮ, ಷಟ್ಕಾಲ ನರಸಯ್ಯ, ಚಿಕ್ಕರಾಮರಾವ್, ಬೆಳಕವಾಡಿ ಶ್ರೀನಿವಾಸ ಐಯ್ಯಂಗಾರ್, ಚಿಂತಲಪಲ್ಲಿ ವೆಂಕಟರಾವ್, ಬಿ.ದೇವೇಂದ್ರಪ್ಪ, ಟಿ.ಚೌಡಯ್ಯ ಮುಂತಾದವರು.

**ಹಿಂದೂಸ್ಥಾನಿ ಸಂಗೀತ:** ಮಾಗಡಿ ಬಳಿಯ ಸಾತನೂರಿನ ಪುಂಡರೀಕ ವಿಠಲನು (ಕ್ರಿ.ಶ.೧೫೬೨–೧೫೯೯) ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತಗಳೆರಡರಲ್ಲೂ ಪ್ರವೀಣನಾಗಿದ್ದನು. ಮೈಸೂರು ಅರಸರು ಪ್ರಮುಖವಾಗಿ ಕರ್ನಾಟಕ ಸಂಗೀತಕ್ಕೆ ಆಶ್ರಯದಾತರಾಗಿದ್ದರೂ, ಹಿಂದೂಸ್ಥಾನಿ ಸಂಗೀತಕ್ಕೂ ಉತ್ತೇಜನ ನೀಡಿದರು. ಉತ್ತರ ಕರ್ನಾಟಕ ಭಾಗದಲ್ಲಿ ರಾಮದುರ್ಗ ಮತ್ತು

ಜಮಖಂಡಿಯಂಥ ಸಣ್ಣ ಸಂಸ್ಥಾನಿಕರು ಹಿಂದೂಸ್ಥಾನಿ ಸಂಗೀತಕ್ಕೆ ಆಶ್ರಯದಾತರಾಗಿದ್ದರು. ಅವರ ದರ್ಬಾರಿನಲ್ಲಿ ಪ್ರಸಿದ್ಧ ಹಿಂದೂಸ್ಥಾನಿ ಸಂಗೀತಗಾರರಿದ್ದರು. ಬಾಲಕೃಷ್ಣ ರಾಸ್ತೆ, ಗಣಪತ್‌ರಾವ್ ರಾಸ್ತೆ, ನಂದೋಪಂತ್ ಜೋಗಳೇಕರ್, ಬಲವಂತರಾವ್ ವೈದ್ಯ, ದಾದಾಖಾರೆ, ಅಂತುಬುವಾ ಆಪ್ಟೆ, ಬಲವಂತರಾವ್ ಕಾಟ್ಕರ್, ಅಲ್ಲಾದಿಯಾ ಖಾನ್, ಅಬ್ದುಲ್ ಕರೀಮ್ ಖಾನ್, ರಹಮತ್ ಖಾನ್, ರಾಮಕೃಷ್ಣ ಬುವಾ ವಜೆ, ಶಿವರಾಂ ಬುವಾ, ಮುಂಜೀಖಾನ್, ವಿಷ್ಣುಪಂತ್ ಛತ್ರೆ, ನೀಲಕಂಠ ಬುವಾ, ಶಂಕರ ದೀಕ್ಷಿತ್ ಜಂತಲಿ, ಸಿದ್ಧರಾಮ ಜಂಬಲದಿನ್ನಿ, ದತ್ತೋಪಂತ್ ಪಾಠಕ್, ಪಂಚಾಕ್ಷರಿ ಗವಾಯಿ, ಹನುಮಂತರಾವ್ ವಾಳ್ವೇಕರ್, ವಿಠಲರಾವ್ ಕೋರೆಗಾಂವ್ಕರ್ ಮತ್ತು ರಾಮಬಾಹು ಕುಂದಗೋಳ್ಕರ್ (ಸವಾಯಿ ಗಂಧರ್ವ) ಮುಂತಾದ ಪ್ರಖ್ಯಾತ ಹಿಂದೂಸ್ಥಾನಿ ಸಂಗೀತಗಾರರು ಉತ್ತರ ಕರ್ನಾಟಕದಲ್ಲಿದ್ದು ತಮ್ಮ ಅಸಾಮಾನ್ಯ ಸಂಗೀತ ಪ್ರಭೆಯಿಂದ ತಾವಿದ್ದ ಪ್ರದೇಶಕ್ಕೆ ಶೋಭೆಯನ್ನು ಹಾಗೂ ಧನ್ಯತೆಯನ್ನು ತಂದುಕೊಟ್ಟರು.

ಕರ್ನಾಟಕದಿಂದ ಹಿಂದೂಸ್ಥಾನಿ ಸಂಗೀತದ ದಿಗ್ಗಜರೆನಿಸಿದ ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಭೀಮಸೇನ ಜೋಶಿ, ಕುಮಾರ ಗಂಧರ್ವ, ದೇವೇಂದ್ರ ಮುರಡೇಶ್ವರ್, ವಿಷ್ಣುದಾಸ್ ಶಿರಾಲಿ, ಪುಟ್ಟರಾಜ ಗವಾಯಿ, ಬಸವರಾಜ ಮನ್ಸೂರ್, ಕೃಷ್ಣಬಾಯಿ ರಾಮದುರ್ಗ, ಫಕೀರಪ್ಪ ಗವಾಯಿ, ಪಂ. ಶೇಷಾದ್ರಿಗವಾಯಿ, ಗುರುಬಸವಯ್ಯ ಹಿರೇಮಠ, ವಿ.ವಿ.ಉತ್ತರಕರ್, ಡಿ.ಗರೂಡ, ಎನ್.ಜಿ. ಮಜುಮ್‌ದಾರ್, ಆರ್.ಎಸ್.ದೇಸಾಯಿ, ಅರ್ಜುನ್‌ಸಾ ನಾಕೋಡ್, ಶೇಷಗಿರಿ ಹಾನಗಲ್, ಲಕ್ಷ್ಮೀ ಜಿ.ಭಾವೆ, ಮಾಣಿಕ್‌ರಾವ್ ರಾಯಚೂರ್‌ಕರ್, ಸಂಗಮೇಶ್ವರ್ ಗುರವ ಮತ್ತು ಶ್ಯಾಮಲಾ ಜಿ. ಭಾವೆ ಪ್ರಖ್ಯಾತರಾಗಿದ್ದಾರೆ. ಕರ್ನಾಟಕ ಸಂಗೀತ ಪರಂಪರೆಯನ್ನು ಅನೇಕ ಗಾಯಕರು ಮತ್ತು ವಾದ್ಯ ಸಂಗೀತಗಾರರು ತಮ್ಮ ಪ್ರತಿಭಾ ಶಕ್ತಿಯಿಂದ ಶ್ರೀಮಂತಗೊಳಿಸಿದ್ದು, ಸಂಗೀತ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನೂ ಗಳಿಸಿದ್ದಾರೆ. ಹಾಡುಗಾರಿಕೆಯಲ್ಲಿ ಚಿಂತನಪಲ್ಲಿ ರಾಮಚಂದ್ರರಾವ್, ಚನ್ನಕೇಶವಯ್ಯ, ಪದ್ಮನಾಭರಾವ್, ಟಿ.ಎನ್.ಪುಟ್ಟಸ್ವಾಮಯ್ಯ, ಆರ್.ಎಸ್.ನಾರಾಯಣಸ್ವಾಮಿ, ಆರ್.ಕೆ.ರಾಮನಾಥನ್, ಆರ್. ಕೆ.ಶ್ರೀಕಂಠನ್, ಕುರೂಡಿ ವೆಂಕಣ್ಣಾಚಾರ್ಯ, ತಿಟ್ಟೆ ಕೃಷ್ಣಯ್ಯಂಗಾರ್, ಎಲ್.ಎಸ್.ನಾರಾಯಣಸ್ವಾಮಿ ಭಾಗವತರ್, ಬಿ.ಎಸ್.ಆರ್. ಐಯ್ಯಂಗಾರ್, ಎ.ಸುಬ್ಬರಾವ್, ಆರ್.ಚಂದ್ರಶೇಖರಯ್ಯ, ಪಲ್ಲವಿ ಚಂದ್ರಪ್ಪ ಎಂ.ಎ. ನರಸಿಂಹಾಚಾರ್, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಸಂಧ್ಯಾವಂದನಮ್ ಶ್ರೀನಿವಾಸರಾವ್, ಶ್ರೀನಿವಾಸಯ್ಯಂಗಾರ್, ವಸದಂ ಅಯ್ಯಂಗಾರ್, ಚೊಕ್ಕಮ್ಮ, ನೀಲಮ್ಮ ಕಡಾಂಬಿ, ಚನ್ನಮ್ಮ, ಪಾಪ ಚೂಡಾಮಣಿ ಮುಂತಾದವರು ಬಹಳ ಪ್ರಸಿದ್ಧರು.

ವಾದ್ಯ ಸಂಗೀತಗಾರರ ಪೈಕಿ ವೀಣಾವಾದಕರಾದ ಶ್ರೀಕಂಠ ಅಯ್ಯರ್, ವಿ.ದೊರೆಸ್ವಾಮಿ ಅಯ್ಯಂಗಾರ್, ಬಾಲಕೃಷ್ಣ, ಆರ್.ಎನ್.ದೊರೆಸ್ವಾಮಿ, ಎಂ.ಜೆ.ಶ್ರೀನಿವಾಸ ಐಯ್ಯಂಗಾರ್, ಆರ್.ಕೆ.ಶ್ರೀನಿವಾಸಮೂರ್ತಿ, ಆರ್.ಕೆ.ಸೂರ್ಯನಾರಾಯಣ, ಆರ್.ಎ.ವಿಶ್ವೇಶ್ವರ, ಚೊಕ್ಕಮ್ಮ, ಆರ್.ಅಲಮೇಲು, ಸುಮಾ ಸುಧೀಂದ್ರ, ಹಾಗೂ ರಾಜಲಕ್ಷ್ಮಿ ತಿರುನಾರಾಯಣ ಪ್ರಸಿದ್ಧರು. ಕೊಳಲುವಾದಕರಲ್ಲಿ ಎಂ.ಆರ್.ದೊರೆಸ್ವಾಮಿ, ಬಿ.ಶಂಕರರಾವ್, ವಿ.ದೇಶಿಕಾಚಾರ್, ಎಂ.ಪಿ.ಉಪಾಧ್ಯಾಯ, ರಾಜನಾರಾಯಣ, ಶಶಿಧರ್ ಮತ್ತು ಶಶಾಂಕ (ಬಾಲ ಪ್ರತಿಭೆ), ಹೆಸರುವಾಸಿಯಾಗಿದ್ದಾರೆ. ಪ್ರಸಿದ್ಧ ಪಿಟೀಲು ವಾದಕರಾಗಿ, ಆರ್.ಆರ್.ಕೇಶವಮೂರ್ತಿ, ಅನೂರ್ ರಾಮಕೃಷ್ಣ, ಎಚ್.ವಿ.ಕೃಷ್ಣಮೂರ್ತಿ, ಎ.ವೀರಭದ್ರಯ್ಯ, ಮಹದೇವಪ್ಪ, ಎಂ.ನಾಗರಾಜ್, ಎಂ.ಮಂಜುನಾಥ್, ಶೇಷಗಿರಿರಾವ್, ಎ.ವಿ.ಕೃಷ್ಣಮಾಚಾರ್, ಹೆಚ್.ಕೆ.ವೆಂಕಟರಾಮ್, ತಾತಾಚಾರ್, ಕಾಂಚನ ಸುಬ್ಬರತ್ನಂ, ಎಂ.ಎಸ್.ಸುಬ್ರಹ್ಮಣ್ಯಂ, ಎಂ.ಎಸ್.ಗೋವಿಂದಸ್ವಾಮಿ, ಎಚ್.ಕೆ.ನರಸಿಂಹಮೂರ್ತಿ, ಟಿ.ಜಿ.ತ್ಯಾಗರಾಜನ್, ಎ.ವಿ.ವೆಂಕಟರಾಮಯ್ಯ, ಬಿ.ವಿಶ್ವನಾಥ್ ಮುಂತಾದವರು ಕಂಡುಬರುತ್ತಾರೆ.

ತಾಳವಾದ್ಯಗಾರರಾದ ಎಂ.ಎಸ್.ರಾಮಯ್ಯ, ವಿ.ವಿ.ರಂಗನಾಥನ್, ರಾಮಾಚಾರ್, ಎಂ.ಎಸ್.ಶೇಷಪ್ಪ ಬೆಂಗಳೂರು, ಕೆ.ವೆಂಕಟರಾಮ್, ಎ.ವಿ.ಆನಂದ್, ಟಿ.ಎ.ಎಸ್ ಮಣಿ, ಕೆ.ಎನ್.ಕೃಷ್ಣಮೂರ್ತಿ, ವಿ.ಎಸ್.ರಾಜಗೋಪಾಲ್, ರಾಜಾಚಾರ್, ರಾಜಕೇಸರಿ, ಚಂದ್ರಮೌಳಿ, ಭದ್ರಾಚಾರ್, ಪ್ರವೀಣ್, ಸೋಸಲೆ ಶೇಷಗಿರಿದಾಸ್, ಬಿ.ಜಿ.ಲಕ್ಷ್ಮೀನಾರಾಯಣ, ಸುಕನ್ಯಾ ರಾಮಗೋಪಾಲ್, ದತ್ತಾತ್ರೇಯ ಶರ್ಮ, ಅನಂತಕೃಷ್ಣಶರ್ಮ ಮತ್ತು ಕೆ.ಮುನಿರತ್ನಂ, ರವೀಂದ್ರ ಯಾವಗಲ್ (ತಬಲಾ), ನಾರಣಪ್ಪ (ಮುಖವೀಣೆ), ರಾಮದಾಸಪ್ಪ, ರವಿಕಿರಣ್ (ಗೋಟುವಾದ್ಯ) ಮತ್ತು ಕದ್ರಿಗೋಪಾಲನಾಥ್ (ಸಾಕ್ಸೋಫೋನ್), ನರಸಿಂಹಲು ವಡವಾಟಿ (ಕ್ಲಾರಿಯೋನೆಟ್), ಬಿಂದು ಮಾಧವ್ ಪಾಠಕ್ (ರುದ್ರವೀಣೆ) ಮತ್ತು ರಾಜೀವ್ ತಾರಾನಾಥ್ (ಸರೋದ್) ಮುಂತಾದ ವಾದ್ಯ ಸಂಗೀತಗಾರರು ಜನಪ್ರಿಯರಾಗಿದ್ದಾರೆ.

ಗಮಕ ಕಲೆಯೂ ಒಂದು ಪ್ರಾಚೀನ ಕಲೆ. ಈ ಕಲೆಯಲ್ಲಿ ಹೆಸರು ಮಾಡಿರುವವರೆಂದರೆ, ಜೋಳದರಾಶಿ ದೊಡ್ಡನಗೌಡ, ಎಸ್.ನಾಗೇಶರಾವ್, ಬಿ.ಎಸ್.ಎಸ್.ಕೌಶಿಕ್, ಹೆಚ್. ಕೆ.ರಾಮಸ್ವಾಮಿ, ಗುಂಡುರಾಮಯ್ಯ, ಎಸ್.ವಾಸುದೇವರಾವ್, ಆರ್.ಶಂಕರನಾರಾಯಣ, ಹೊಸಬೆಲೆ ಸೀತಾರಾಮರಾವ್, ಜಿ.ಬಿ.ಗೋಪಿನಾಥರಾವ್, ತಲಕಾಡು ಮಾಯಿಗೌಡ, ಎಂ.ರಾಘವೇಂದ್ರರಾವ್ ಮುಂತಾದವರು. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಗಮಕ ಕಲಾ ಪರಿಷತ್ ಸ್ಥಾಪಿತವಾಗಿದ್ದು, ಗಮಕ ಕಲೆಯನ್ನು ಪ್ರೋತ್ಸಾಹಿಸುತ್ತಿದೆ.

ಆಧುನಿಕ ಯುಗದಲ್ಲಿ ನವೋದಯ ಕಾವ್ಯವು ಹೊಸಶೈಲಿ, ಸ್ವರ ಮಾಧುರ್ಯ ಹಾಗೂ ಹೊಸ ಸಂಗೀತ ರೂಪವನ್ನು ರೂಪಿಸಿಕೊಂಡು, ಸುಗಮ ಸಂಗೀತ ಎಂಬ ಪ್ರಕಾರಕ್ಕೆ ಎಡೆಕೊಟ್ಟಿದೆ. ಈ ಪ್ರಕಾರದ ಸಂಗೀತವು ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನಿ ಸಂಗೀತ ಮತ್ತು ಪಾಶ್ಚಿಮಾತ್ಯ ಸಂಗೀತದಿಂದ ಪ್ರಭಾವಿತಗೊಂಡಿದೆ. ಪಿ.ಕಾಳಿಂಗರಾವ್ ಅವರು ಈ ಕ್ಷೇತ್ರದ ಮುಂಚೂಣಿ ಸಂಗೀತಗಾರರಾಗಿದ್ದಾರೆ. ಅವರನ್ನನುಸರಿಸಿ ಬೆಳಕಿಗೆ ಬಂದ ಮೈಸೂರು ಅನಂತಸ್ವಾಮಿ ಅವರು ಈ ಸುಗಮ ಸಂಗೀತ ಪ್ರಕಾರವನ್ನು ಬಹು ಜನಪ್ರಿಯ ಗೊಳಿಸಿದರು. ಸಿ.ಅಶ್ವಥ್, ಎಚ್. ಆರ್.ಲೀಲಾವತಿ ಜಯಂತಿದೇವಿ ಹಿರೇಬೆಟ್, ಅನುರಾಧಾ ಧಾರೇಶ್ವರ್, ಶಿವಮೊಗ್ಗ ಸುಬ್ಬಣ್ಣ, ಟಿ.ವಿ. ರಾಜು, ರತ್ನಮಾಲಾ ಪ್ರಕಾಶ್, ಮಾಲತಿಶರ್ಮ, ಕಸ್ತೂರಿ ಶಂಕರ್, ಶ್ಯಾಮಲಾ ಜಿ.ಭಾವೆ, ಬಿ.ಆರ್.ಛಾಯಾ, ಬಿ.ಕೆ.ಸುಮಿತ್ರ, ಶ್ಯಾಮಲಾ ಜಾಗೀರ್‌ದಾರ್, ಯಶವಂತ ಹಳಬಂಡಿ, ಉಷಾ ಗಣೇಶ್, ಪುತ್ತೂರು

ನರಸಿಂಹನಾಯಕ್, ಇಂದುವಿಶ್ವನಾಥ್, ಎಚ್.ಕೆ.ನಾರಾಯಣ, ಇ.ಜಿ.ರಾಮನಾಥ್, ವೈ.ಕೆ.ಮುದ್ದುಕೃಷ್ಣ, ದಿ.ರಾಜು ಅನಂತಸ್ವಾಮಿ, ಎಂ.ಡಿ.ಪಲ್ಲವಿ, ಅರ್ಚನ ಉಡುಪ, ಸಂಗೀತ ಕಟ್ಟಿ ಮತ್ತಿತರರು ಸುಗಮ ಸಂಗೀತವನ್ನು ಬಹಳ ಜನಪ್ರಿಯಗೊಳಸಿದ್ದಾರೆ.

ವಿದೇಶದಲ್ಲಿ ನೆಲೆಸಿರುವ ಅನೇಕ ಕನ್ನಡಿಗರು ಅಲ್ಲಿ ಸುಗಮ ಸಂಗೀತಕ್ಕೆ ಸೇವೆ ಸಲ್ಲಿಸುತ್ತಿರುವುದನ್ನು ಕಾಣಬಹುದು. ಟಿ. ನರಸೀಪುರದಲ್ಲಿ ಜನಿಸಿ, ಹಾಲಿ ನ್ಯೂಜೆರ್ಸಿಯಲ್ಲಿರುವ ವಸಂತಾ ಶಶಿ ಅವರು ಕಂಪ್ಯೂಟರ್ ತಾಂತ್ರಿಕ ಶಿಕ್ಷಣ ಪಡೆದಿದ್ದರೂ ಕೂಡಾ, ಸಂಗೀತದತ್ತ ಆಕರ್ಷಣೆ ಹೊಂದಿ, ವಿವಿಧ ಭಾಷೆಗಳಲ್ಲಿ ನೂರಕ್ಕೂ ಹೆಚ್ಚು ಕಾರ್ಯಕ್ರಮ ನೀಡಿರುತ್ತಾರೆ. ೨೦ಕ್ಕೂ ಹೆಚ್ಚು ಸಿ.ಡಿ.ಗಳನ್ನು ಹೊರತಂದಿರುವುದಲ್ಲದೆ ಸ್ವತಃ ಗೀತರಚನಕಾರರೂ ಕೂಡ. ಅನೇಕ ಸುಗಮ ಸಂಗೀತ ದಿಗ್ಗಜರೊಂದಿಗೆ ಹಾಡಿ, 'ಗಾನಕೋಗಿಲೆ' ಎಂಬ ಬಿರುದು ಸಂಪಾದಿಸಿದ್ದಾರೆ.

ಕರ್ನಾಟಕ ಸರ್ಕಾರವು, ಕರ್ನಾಟಕದಲ್ಲಿ ಸಂಗೀತದ ಅಭಿವೃದ್ಧಿಗಾಗಿಯೇ ಪ್ರತ್ಯೇಕ ವಿಭಾಗವನ್ನು ತೆರೆದಿದೆ. ಸೆಕೆಂಡರಿ ಎಜುಕೇಷನ್ ಬೋರ್ಡ್ (ಮಾಧ್ಯಮಿಕ ಶಿಕ್ಷಣ ಮಂಡಳ), ಸಂಗೀತ ಪರೀಕ್ಷೆಗಳನ್ನು ನಡೆಸಿ, ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರವನ್ನು ನೀಡುತ್ತಿದೆ. ರಾಜ್ಯದ ಅನೇಕ ವಿಶ್ವವಿದ್ಯಾಲಯಗಳು ಪದವಿ ಮಟ್ಟದಲ್ಲಿ ಹಾಗೂ ಸ್ನಾತಕೋತ್ತರ ಮಟ್ಟದಲ್ಲಿ, ಸಂಗೀತ ಶಿಕ್ಷಣ ತರಗತಿಗಳನ್ನು ಹೊಂದಿವೆ. ಸಂಗೀತ ಕಲಿಯಲು ಆಸಕ್ತಿ ಇರುವ ಪ್ರತಿಭಾವಂತ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ರಾಜ್ಯ ಸರ್ಕಾರವು ನೀಡುತ್ತದೆ. ಕ್ಯಾಸೆಟ್ ಸಂಗೀತ ಕ್ರಾಂತಿಯು ಸುಗಮ ಸಂಗೀತ ಮತ್ತು ಶಾಸ್ತ್ರೀಯ ಸಂಗೀತವನ್ನು ರಾಜ್ಯದ ಮನೆಮನೆಗೆ ತಲುಪಿಸಿ ಜನಪ್ರಿಯಗೊಳಸುವಲ್ಲಿ ಮಹತ್ತರ ಕೊಡುಗೆಯನ್ನು ಕೊಟ್ಟಿದೆ. ಸಂಗೀತವನ್ನು ಜನಪ್ರಿಯಗೊಳಸುವಲ್ಲಿ ಕನ್ನಡ ರಂಗಭೂಮಿಯ ಪಾತ್ರವು ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲ. ವರದಾಚಾರ್, ಮಳವಳ್ಳಿ ಸುಂದರಮ್ಮ, ಅಶ್ವತ್ಥಮ್ಮ, ನಾಗೇಶ್ ರಾವ್, ಸುಬ್ಬಯ್ಯ ನಾಯ್ಡು, ಗಂಗೂಬಾಯಿ ಗುಳೇದಗುಡ್ಡ, ಸೋನೂಬಾಯಿ, ಸುಭದ್ರಮ್ಮ ಮನ್ಸೂರ್, ವಜ್ರಪ್ಪ, ಬಿ.ಎನ್.ಚಿನ್ನಪ್ಪ, ಸರೋಜಮ್ಮ ಧುತ್ತರಗಿ, ಹೆಚ್.ಕೆ.ಯೋಗಾನರಸಿಂಹ ಮುಂತಾದ ಕೆಲವು ಕಲಾವಿದರು ಈ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಇವುಗಳ ಜೊತೆಗೆ ರಾಮನವಮಿ, ಗಣೇಶ ಚತುರ್ಥಿ ಮುಂತಾದ ವಾರ್ಷಿಕ ಹಬ್ಬಗಳಲ್ಲದೇ ಬೆಂಗಳೂರು ಮತ್ತು ಮೈಸೂರಿನಲ್ಲಿ ನಾಡ ಹಬ್ಬಗಳ ಸಂದರ್ಭದಲ್ಲಿ ಸಂಗೀತೋತ್ಸವಗಳು ನಡೆಯುತ್ತವೆ. ಹುಬ್ಬಳ್ಳಿಯಲ್ಲಿ ಕಲಾ ಉತ್ಸವ, ಕುಂದಗೋಳದಲ್ಲಿ ಸವಾಯಿ ಗಂಧರ್ವ ಉತ್ಸವ ಹಾಗೂ ವಿವಿಧ ಸಂಘಸಂಸ್ಥೆಗಳು ನಡೆಸುವ ವಾರ್ಷಿಕ ಸಂಗೀತೋತ್ಸವಗಳಿಗೆ ಆತಿಥ್ಯ ನೀಡುವುದೇ ಮುಂತಾದ ಕ್ರಮಗಳು ರಾಜ್ಯದಲ್ಲಿ ಸಂಗೀತವು ಜನಪ್ರಿಯಗೊಳ್ಳಲು ಉತ್ತೇಜನಕಾರಿಯಾಗಿವೆ. ಸಂಗೀತ ಕಲಿಯಲು ಆಸಕ್ತಿ ಇರುವ ಯುವಕ-ಯುವತಿಯರಿಗೆ ಅನೇಕ ಸಂಘ-ಸಂಸ್ಥೆಗಳು ನಡೆಸುವ ಸಂಗೀತ ತರಬೇತಿ ಪ್ರಯೋಜನಕಾರಿಯಾಗಿವೆ.

ಶ್ರೀ ಅಯ್ಯನಾರ್ ಕಾಲೇಜ್ ಆಫ್ ಮ್ಯೂಸಿಕ್, (ಅಯ್ಯನಾರ್ ಸಂಗೀತ ಮಹಾವಿದ್ಯಾಲಯ), ವಿಜಯ ಕಾಲೇಜ್ ಆಫ್ ಮ್ಯೂಸಿಕ್, ಗಾನ ಕಲಾಮಂದಿರ, ವಿಜಯ ಕಲಾಮಂದಿರ, ಶ್ರೀ ವೆಂಕಟೇಶ್ವರ ಗಾನನಿಲಯ, ಶ್ರೀ ವಿಜಯ ಸಂಗೀತ ವಿದ್ಯಾಲಯ, ಆದರ್ಶ ಫಿಲ್ಮ್ ಇನ್ಸ್ಟಿಟ್ಯೂಟ್ , ವಿಜಯ ಫಿಲಂ ಇನ್ಸ್ಟಿಟ್ಯೂಟ್, (ಎಲ್ಲವೂ ಬೆಂಗಳೂರಿನಲ್ಲಿವೆ), ಶ್ರೀ ಪಂಚಾಕ್ಷರಿ ಕೃಪಾಪೋಷಿತ ಸಂಗೀತ ಶಾಲಾ (ಗೂಡೂರು, ವಿಜಯಪುರ), ಶ್ರೀ ರಾಘವೇಂದ್ರ ಸಂಗೀತ ವಿದ್ಯಾಲಯ (ರಾಯಚೂರು), ತ್ಯಾಗರಾಜ ಸಂಗೀತ ವಿದ್ಯಾಲಯ(ರಾಮನಗರ), ಶ್ರೀ ವಾಣಿ ವಿದ್ಯಾ ಸೊಸೈಟಿ (ಶಿವಮೊಗ್ಗ), ಶ್ರೀ ಪಂಚಾಕ್ಷರಿ ಲಲಿತ ಕಲಾ ಮತ್ತು ಸಂಗೀತ ಕಲಾ ಸಂಘ(ವಿಜಯಪುರ) ಲಲಿತ ಕಲಾವೃಂದ ಕಾರ್ಕಳ, ಏಕನಾಥೇಶ್ವರಿ ಸಂಗೀತ ಕಲಾಮಂದಿರ (ಚಿತ್ರದುರ್ಗ) ಇತ್ಯಾದಿ ಸಂಗೀತ ಸಂಸ್ಥೆಗಳು, ಬೆಂಗಳೂರಿನ ಕರ್ನಾಟಕ ಸಂಗೀತ ನಾಟಕ ಅಕಾಡೆಮಿಗೆ ಸಂಯೋಜನೆಗೊಂಡ ಸಂಸ್ಥೆಗಳಾಗಿವೆ. ಇವಲ್ಲದೆ ಬಹಳಷ್ಟು ಖಾಸಗಿ ಸಂಗೀತ ಸಂಸ್ಥೆಗಳು ರಾಜ್ಯದ ಪಟ್ಟಣಗಳಲ್ಲಿ ಸಂಗೀತ ತರಗತಿಗಳನ್ನು ನಡೆಸುತ್ತಿವೆ.

**ಶ್ರೀ ನಿಜಗುಣ-ಪುರಂದರ ಪ್ರಶಸ್ತಿ:** ಕನ್ನಡ ನಾಡಿನ ದಾಸಶ್ರೇಷ್ಠರೂ, ಕೀರ್ತನೆ ಉಗಾಭೋಗಾದಿಗಳ ರಚನಕಾರರೂ ಕರ್ನಾಟಕ ಸಂಗೀತದ ದಿಗ್ಗಜರೂ ಆದ ಪುರಂದರದಾಸ ಹಾಗೂ ಕನಕದಾಸರ ಹೆಸರಿನಲ್ಲಿ, ಸಂಗೀತ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಸಂಗೀತಗಾರರಿಗೆ ೧೯೯೧ರಿಂದ **'ಕನಕ-ಪುರಂದರ ಪ್ರಶಸ್ತಿ'** ನೀಡಲಾಗುತ್ತಿತ್ತು. ೨೦೧೦ರಿಂದ ಈ ಪ್ರಶಸ್ತಿಯನ್ನು **'ನಿಜಗುಣ-ಪುರಂದರ ಪ್ರಶಸ್ತಿ'**ಎಂಬುದಾಗಿ ಮರುನಾಮಕರಣ ಮಾಡಲಾಗಿದೆ. ಕರ್ನಾಟಕ, ಹಿಂದೂಸ್ಥಾನಿ ಗಾಯನ ಮತ್ತು ವಾದ್ಯ ಪರಿಕರಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಇದುವರೆಗೂ ಈ ಪ್ರಶಸ್ತಿ ಪಡೆದ ಸಾಧಕರು ಕೆಳಕಂಡಂತಿದ್ದಾರೆ.

ವಿದ್ವಾನ್ ತಿಟ್ಟೆ ಕೃಷ್ಣಯ್ಯಂಗಾರ್ (೧೯೯೧), ಡಾ.ಗಂಗೂಬಾಯಿ ಹಾನಗಲ್ (೧೯೯೨), ಆರ್.ಆರ್. ಕೇಶವಮೂರ್ತಿ (೧೯೯೩), ಡಾ.ಬಿಂದು ಮಾಧವ ಪಾಠಕ್ (೧೯೯೪), ಗಮಕಿ ರಾಘವೇಂದ್ರರಾವ್ (೧೯೯೫), ವಿದ್ವಾನ್ ಆರ್.ಕೆ.ಶ್ರೀಕಂಠನ್ (೧೯೯೬), ಡಾ. ಪುಟ್ಟರಾಜ ಗವಾಯಿ (೧೯೯೭), ಎಂ.ಎಸ್.ರಾಮಯ್ಯ (೧೯೯೮), ಶೇಷಗಿರಿ ಹಾನಗಲ್ (೧೯೯೯), ಭದ್ರಗಿರಿ ಅಚ್ಯುತದಾಸ್ (೨೦೦೦), ಎ.ಸುಬ್ಬರಾವ್ (೨೦೦೧), ಪಂಡಿತ್ ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ (೨೦೦೨), ಎಂ.ಜೆ.ಶ್ರೀನಿವಾಸ ಅಯ್ಯಂಗಾರ್(೨೦೦೩), ಪಂಡಿತ್ ವಸಂತ ಕನಕಾಪುರ(೨೦೦೪), ಬಿ.ಎಸ್.ಎಸ್.ಕೌಶಿಕ್(೨೦೦೫), ಪ್ರೊ.ವಿ.ರಾಮರತ್ನಂ (೨೦೦೬), ಚಂದ್ರಶೇಖರ್ ಪುರಾಣಿಕ ಮಠ್(೨೦೦೭) ಎನ್. ಚೊಕ್ಕಮ್ಮ (೨೦೦೮). ಲಕ್ಷ್ಮಣದಾಸ್ (೨೦೧೦), ಕುರುಡಿ ವೆಂಕಣ್ಣಾಚಾರ್ (೨೦೧೧), ಸಂಗಮೇಶ್ವರ ಗುರವ (೨೦೧೨), ರಾಜಲಕ್ಷ್ಮಿ ತಿರುನಾರಾಯಣನ್ (೨೦೧೩), ರಘುನಾಥ ನಾಕೋಡ್ (೨೦೧೪), ಬೆಳಕವಾಡಿ ರಂಗಸ್ವಾಮಿ ಅಯ್ಯಂಗಾರ್ (೨೦೧೫).

**ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ:** ಪ್ರತಿವರ್ಷವೂ ಮೈಸೂರು ದಸರಾ ಉತ್ಸವದ ಸಂದರ್ಭದಲ್ಲಿ ೧೯೯೩ರಿಂದ ಈ ಪುರಸ್ಕಾರ ನೀಡಲಾಗುತ್ತಿದೆ. ಸಂಗೀತ ಕ್ಷೇತ್ರದಲ್ಲಿ ಮಹತ್ತರ ಸಾಧನೆಗೈದ ಅಗ್ರಗಣ್ಯ ವಿದ್ವಾಂಸರಿಗೆ ನೀಡಲಾಗುವ ಈ ಪ್ರಶಸ್ತಿಯು ಸರಸ್ವತಿ ಪುತ್ಥಳಿ, ಪ್ರಶಸ್ತಿ ಪತ್ರವನ್ನೊಳಗೊಂಡಿರುತ್ತದೆ. ಕೆಳಕಂಡವರು ಈ ಪ್ರಶಸ್ತಿ ಪಡೆದ ಮಹನೀಯರಾಗಿದ್ದಾರೆ.

ಡಾ.ಪುಟ್ಟರಾಜ ಗವಾಯಿ (೧೯೯೩), ವಿದ್ವಾನ್ ಆರ್. ಕೆ.ಶ್ರೀಕಂಠನ್ (೧೯೯೪), ಪಂಡಿತ್ ರಾಮರಾವ್ ವಿ.ನಾಯಕ್ (೧೯೯೫), ಎ.ಸುಬ್ಬರಾವ್ (೧೯೯೬), ಸಂಗಮೇಶ್ವರಗುರವ (೧೯೯೭), ಎನ್.ಚೊಕ್ಕಮ್ಮ (೧೯೯೮), ಎಂ.ಎ.ನರಸಿಂಹಾಚಾರ್ (೧೯೯೯), ಟಿ.ಎಸ್.ತಾತಾಚಾರ್ (೨೦೦೦), ಆರ್.ಕೆ.ಬಿಜಾಪುರೆ (೨೦೦೧), ಆರ್.ವಿಶ್ವೇಶ್ವರನ್ (೨೦೦೨), ವಿದ್ವಾನ್ ಆರ್.ಆರ್.ಕೇಶವಮೂರ್ತಿ (೨೦೦೩), ಪಂಡಿತ್ ಚಂದ್ರಶೇಖರ ಪುರಾಣಿಕಮಠ (೨೦೦೪), ವಿದ್ವಾನ್ ಎಸ್.ಮಹದೇವಪ್ಪ (೨೦೦೫), ಪಂಡಿತ್ ಮಾಣಿಕ್‌ರಾವ್ ರಾಯಚೂರ್‌ಕರ್ (೨೦೦೬), ಪಂಡಿತ್ ಕೆ.ಸಿದ್ಧರಾಮಸ್ವಾಮಿ ಕೋರವಾರ್ (೨೦೦೭), ಡಾ.ಎಂ.ಆರ್. ಗೌತಮ್, ಸಿಕಂದರಾಬಾದ್ (೨೦೦೮). ಬೆಳಕವಾಡಿ ರಂಗಸ್ವಾಮಿ ಅಯ್ಯಂಗಾರ್ (೨೦೦೯) ಪಂಡಿತ್ ಶೇಷಗಿರಿ ಹಾನಗಲ್ (೨೦೧೦) ರಾ.ಸತ್ಯನಾರಾಯಣ (೨೦೧೧). ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ (೨೦೧೨), ವಿ.ಎಸ್.ಸಂಪತ್ಕುಮಾರಾಚಾರ್ಯ (೨೦೧೩), ಇಂದೂಧರ ನಿಕೋಡೆ (೨೦೧೪), ವಿ.ಎಸ್.ರಾಜಗೋಪಾಲ್ (೨೦೧೫), ಸೋಮನಾಥ ಮರಡೂರ (೨೦೧೬).

**ಟಿ.ಚೌಡಯ್ಯ ಪ್ರಶಸ್ತಿ:** ಕರ್ನಾಟಕದ ಮಹೋನ್ನತ ಸಂಗೀತ ವಿದ್ವಾಂಸರಾದ ಪಿಟೀಲು ಟಿ.ಚೌಡಯ್ಯನವರ ನೆನಪಿನಲ್ಲಿ ೧೯೯೫ ರಿಂದ ಶಾಸ್ತ್ರೀಯ ವಾದ್ಯ ಸಂಗೀತ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕಲಾವಿದರಿಗೆ ರಾಷ್ಟ್ರೀಯ ಪುರಸ್ಕಾರ ನೀಡಲಾಗುತ್ತದೆ. ಪ್ರಶಸ್ತಿ ಮೊತ್ತ ೧.೫೦ ಲಕ್ಷಗಳು. ಇದುವರೆಗೂ ಕೆಳಕಂಡವರು ಈ ಪ್ರಶಸ್ತಿ ಪಡೆದಿರುತ್ತಾರೆ.

ಉಸ್ತಾದ್ ಬಿಸ್ಮಿಲ್ಲಾ ಖಾನ್ (೧೯೯೫), ವೀಣಾ ದೊರೆಸ್ವಾಮಿ ಅಯ್ಯಂಗಾರ್ (೧೯೯೬), ರಾಜೀವ ತಾರಾನಾಥ್ (೧೯೯೭), ಕುನ್ನೈಕುಡಿ ಆರ್.ವೈದ್ಯನಾಥನ್ (೧೯೯೮), ಪಂಡಿತ್ ಉಸ್ತಾದ್ ಅಲ್ಲಾರಖಾ (೧೯೯೯), ಟಿ.ಕೆ.ಮೂರ್ತಿ (೨೦೦೦), ಆರ್. ಕೆ.ಬಿಜಾಪುರೆ (೨೦೦೧), ಲಾಲ್ಗುಡಿ ಜಯರಾಮನ್ (೨೦೦೨), ಪಂಡಿತ್ ಬಿ.ಆರ್.ನಿಂಬರಗಿ (೨೦೦೩), ಎನ್.ರಮಣಿ (೨೦೦೪), ದತ್ತಾತ್ರೇಯ ಸದಾಶಿವಗರೂಡ (೨೦೦೫), ವೆಲ್ಲೂರ್ ಜಿ.ರಾಮಭದ್ರನ್ (೨೦೦೬), ಪುಟ್ಟರಾಜ ಗವಾಯಿ (೨೦೦೭), ಎ.ಕೆ.ಸಿ.ನಟರಾಜನ್, ತಿರುಚಿನಾಪಳ್ಳಿ (೨೦೦೮), ಎನ್.ರಾಜಮ್ (೨೦೦೯). ಎಸ್.ಮಹದೇವಪ್ಪ (೨೦೧೦), ಶೇಷಗಿರಿ ಹಾನಗಲ್ (೨೦೧೧), ಆರ್.ವಿಶ್ವೇಶ್ವರನ್ (೨೦೧೨), ರಾಮನಾರಾಯಣ್ (೨೦೧೩), ಎಲ್.ಭೀಮಾಚಾರ್ (೨೦೧೪), ಹಾಗೂ ಸುರೇಶ್ ತಲ್ವಾಲ್ಕರ್ (೨೦೧೫).

**ಸಂತ ಶಿಶುನಾಳ ಷರೀಫ ಪ್ರಶಸ್ತಿ:** ತತ್ವಪದ, ದಾಸರಪದ, ವಚನ ಸಂಗೀತ, ಸುಗಮ ಸಂಗೀತ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕಲಾವಿದರಿಗೆ ೧೯೯೫ರಿಂದ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿಯು ಒಂದು ಲಕ್ಷ ನಗದು ಬಹುಮಾನವನ್ನೊಳಗೊಂಡಿದ್ದು, ಇದುವರೆಗೂ ಕೆಳಕಂಡ ಕಲಾವಿದರು ಪಡೆದಿರುವರು. ಜಯವಂತಿದೇವಿ ಹಿರೇಬೆಟ್ (೧೯೯೫), ಸಿ. ಅಶ್ವತ್ಥ್ (೧೯೯೬), ಎಚ್.ಆರ್. ಲೀಲಾವತಿ (೧೯೯೭), ಅನುರಾಧಾ ಧಾರೇಶ್ವರ್ (೧೯೯೮), ಶಿವಮೊಗ್ಗ ಸುಬ್ಬಣ್ಣ (೧೯೯೯), ಎಚ್.ಕೆ. ನಾರಾಯಣ (೨೦೦೦), ಎಂ. ಪ್ರಭಾಕರ್ (೨೦೦೧), ಗರ್ತಿಕೆರೆ ರಾಘಣ್ಣ (೨೦೦೨), ಶ್ಯಾಮಲಾ ಜಾಗಿರ್‌ದಾರ್ (೨೦೦೩), ಮುರುಗೋಡು ಕೃಷ್ಣದಾಸ (೨೦೦೪), ಈಶ್ವರಪ್ಪ ಜಿ. ಮಿಣಚಿ (೨೦೦೫), ಸಿ.ಕೆ. ತಾರಾ (೨೦೦೬), ಕೇಶವ ಗುರಂ (೨೦೦೭), ಗುಡಿಬಂಡೆ ರಾಮಾಚಾರ್ (೨೦೦೮), ಟಿ.ವಿ.ರಾಜು (೨೦೦೯), ಬಿ.ಕೆ.ಸುಮಿತ್ರ (೨೦೧೦). ನಾರಾಯಣ ರಾವ್ ಮಾನೆ (೨೦೧೧), ಎಸ್.ಸೋಮಸುಂದರಂ (೨೦೧೨), ಎಸ್.ಕೆ.ವಸುಮತಿ (೨೦೧೩), ರಾಜಗುರು ಗುರುಸ್ವಾಮಿ ಕಲಗೇರಿ (೨೦೧೪), ರತ್ನಮಾಲಾ ಪ್ರಕಾಶ್ (೨೦೧೫).

**ಕುಮಾರವ್ಯಾಸ ಪ್ರಶಸ್ತಿ:** ಕುಮಾರ ವ್ಯಾಸನ ಹೆಸರಿನಲ್ಲಿ ನೀಡಲಾಗುವ ಈ ಪ್ರಶಸ್ತಿಯನ್ನು ೨೦೦೯ರಲ್ಲಿ ಸ್ಥಾಪಿಸಿದ್ದು, ಗಮಕ ಕಲೆಯಲ್ಲಿ ವಿಶೇಷ ಸಾಧನೆ ತೋರಿದ ವ್ಯಕ್ತಿಗಳಿಗೆ ಈ ಪ್ರಶಸ್ತಿ ನೀಡಲಾಗುವುದು. ಪ್ರಶಸ್ತಿಯು ‘ ಒಂದು ಲಕ್ಷ ನಗದು ಬಹುಮಾನವನ್ನೊಳಗೊಂಡಿದ್ದು, ಇದುವರೆಗೂ ಕೆಳಕಂಡ ಕಲಾವಿದರು ಪಡೆದಿರುವರು. ರಘುಪತಿ ಶಾಸ್ತ್ರಿ (೨೦೧೦), ಹೆಚ್.ಕೆ. ರಾಮಸ್ವಾಮಿ (೨೦೧೧), ಮಾರ್ಕಂಡೇಯ ಅವಧಾನಿ (೨೦೧೨), ಬಾಲಚಂದ್ರ ಶಾಸ್ತ್ರಿ ಹಿರೇಮಠ (೨೦೧೩), ಕಮಲಾ ರಾಮಕೃಷ್ಣ (೨೦೧೪), ಕಮಲಮ್ಮ ವಿಠಲರಾವ್ (೨೦೧೫).

### ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ

ದೇಶದ ಎಲ್ಲಾ ಭಾಗಗಳಿಂದ ಕಲಾವಿದರನ್ನು ಆರಿಸಿ ಗೌರವಿಸಿ ಸನ್ಮಾನ ಮಾಡುತ್ತಿದ್ದು, ಸನ್ಮಾನಿತರಾದ ಕಲಾವಿದರು; ಕೆ.ವಾಸುದೇವಾಚಾರ್ಯ (೧೯೫೪), ಟಿ.ಚೌಡಯ್ಯ (೧೯೫೭), ಬಿ.ದೇವೇಂದ್ರಪ್ಪ (೧೯೬೩), ವಿ.ದೊರೆಸ್ವಾಮಿ ಅಯ್ಯಂಗಾರ್ (೧೯೭೦), ಶಾಂತಾರಾವ್ (೧೯೭೦), ಎನ್.ಚನ್ನಕೇಶವಯ್ಯ (೧೯೭೧), ಟಿ.ಚಂದ್ರಕಾಂತಮ್ಮ (೧೯೭೧), ಮಲ್ಲಿಕಾರ್ಜುನ ಮನ್ಸೂರ್ (೧೯೭೧), ಗಂಗೂಬಾಯಿ ಹಾನಗಲ್ (೧೯೭೩), ಭೀಮಸೇನ ಜೋಶಿ (೧೯೭೫), ಆರ್.ಕೆ.ಶ್ರೀಕಂಠನ್ (೧೯೭೯), ಬಸವರಾಜ ರಾಜಗುರು (೧೯೮೧), ದೇವೇಂದ್ರ ಮುರುಡೇಶ್ವರ (೧೯೮೬), ಯು.ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ (೧೯೮೭), ತಿಟ್ಟೆ ಕೃಷ್ಣಯ್ಯಂಗಾರ್ (೧೯೮೯), ಮಾಯಾರಾವ್ (೧೯೮೯), ಹೊನ್ನಪ್ಪ ಭಾಗವತರ್ (೧೯೯೦), ಬಿ.ವಿ.ಕೆ.ಶಾಸ್ತ್ರಿ (೧೯೯೯), ಆರ್.ಆರ್.ಕೇಶವಮೂರ್ತಿ (೧೯೯೯), ಹೆಚ್.ಆರ್. ಕೇಶವಮೂರ್ತಿ (೧೯೯೯), ಪ್ರತಿಭಾ ಪ್ರಹ್ಲಾದ್ (೨೦೦೧), ಸಂಗಮೇಶ್ವರ ಗುರವ್ (೨೦೦೧), ಆರ್.ಎನ್.ದೊರೆಸ್ವಾಮಿ (೨೦೦೧), ಎಂ.ಎ.ನರಸಿಂಹಾಚಾರ್ (೨೦೦೨), ಕದ್ರಿ ಗೋಪಾಲನಾಥ್ (೨೦೦೨), ನಾಗಮಣಿ ಶ್ರೀನಾಥ್ (೨೦೧೦), ಎಂ.ವೆಂಕಟೇಶ ಕುಮಾರ್ (೨೦೧೧), ಬೆಳಗಲ್ ವೀರಣ್ಣ (೨೦೧೧).

### ಕರ್ನಾಟಕದಲ್ಲಿ ನೃತ್ಯ

ನೃತ್ಯವು ಒಂದು ದೃಶ್ಯ ಕಲೆ. ಈ ಚೈತನ್ಯಶೀಲ ಕಲೆಯ ದೃಶ್ಯ ಪ್ರಭಾವವು ಕಾಲಾಂತರದಲ್ಲಿ ಇಲ್ಲವಾಗುತ್ತಿದೆ. ಕರ್ನಾಟಕದಲ್ಲಿ ಸದ್ಯ ಪ್ರಚಲಿತವಿರುವ ನೃತ್ಯ ಪರಂಪರೆಯನ್ನು ಸ್ಥೂಲವಾಗಿ ಜನಪದ ಮತ್ತು ಶಿಷ್ಟ ಎಂದು ವಿಂಗಡಿಸಬಹುದು. ದೇಸಿ ಅಥವಾ ಸ್ಥಳೀಯ/ಜನಪದ ಪರಂಪರೆ ಆಯಾಪ್ರದೇಶಗಳಿಗೆ ಸೀಮಿತಗೊಂಡಿರುತ್ತದೆ. ಶಿಷ್ಟ ಪರಂಪರೆಯ ನೃತ್ಯ ಸಂಪ್ರದಾಯವು ರಾಜ್ಯದಾಚೆಗೂ ವ್ಯಾಪಿಸಿರುವಂಥದ್ದು.

ಪ್ರಾಚೀನ ಕಾಲದ ನೃತ್ಯಗಳ ಕುರಿತ ಲಿಖಿತ ಸಾಹಿತ್ಯವನ್ನು ಕೆಲವೇ ಕಲಾಪ್ರಿಯರು ಬಿಟ್ಟು ಹೋಗಿದ್ದಾರೆ. ತಮಿಳು ಗ್ರಂಥವಾದ 'ಶಿಲಪ್ಪದಿಕಾರಂ'ನಲ್ಲಿ ಚೇರ ದೊರೆ 'ಸೆಂಗುಟ್ಟವನ್' ಕನ್ನಡಿಗರ ನೃತ್ಯ ವೀಕ್ಷಿಸಿದ ಕುರಿತು ಉಲ್ಲೇಖವಿದೆ. ಪಟ್ಟದಕಲ್ಲಿನ ಶಾಸನವೊಂದು ದೇವದಾಸಿಯರು ದೇಗುಲಗಳಲ್ಲಿ ನೃತ್ಯ ಸೇವೆಯನ್ನು ಸಲ್ಲಿಸುತ್ತಿದ್ದ ಬಗ್ಗೆ ತಿಳಿಸುತ್ತದೆ. ಗಂಗರ ದೊರೆಗಳಾದ ದುರ್ವಿನೀತ ಮತ್ತು ನರಸಿಂಹದೇವ ಸತ್ಯವಾಕ್ಯರು ಸಂಗೀತ ಮತ್ತು ನೃತ್ಯಗಳ ಬಗ್ಗೆ ಪಾರಂಗತರಾಗಿದ್ದರೆನ್ನಲಾಗಿದೆ. ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಆಸ್ಥಾನ ನರ್ತಕಿಯರಿಗೆ ದೇಗುಲದಲ್ಲಿ ನೃತ್ಯಸೇವೆ ಸಲ್ಲಿಸುವುದು ಕರ್ತವ್ಯವಾಗಿದ್ದು, ಅವರು ಪ್ರವೀಣ ನರ್ತಕಿಯರೂ ಆಗಿರುತ್ತಿದ್ದರು. ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲಾದೇವಿಯನ್ನು ನೃತ್ಯ ಕಲಾಪ್ರವೀಣೆ ಎಂದು ಅನೇಕ ಶಾಸನಗಳು ಹೊಗಳಿವೆ.

ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ನಾಟ್ಯಾಚಾರ್ಯ ಭಂಡಾರು ಲಕ್ಷ್ಮೀನಾರಾಯಣನನ್ನು 'ಅಭಿನವ ಭರತ' ಎಂದು ಕರೆಯಲಾಗುತ್ತಿತ್ತು. ವಿಜಯನಗರದರಸರ ಕಾಲದಲ್ಲಿ ವಾರ್ಷಿಕ ದಸರಾ ಮಹೋತ್ಸವದಲ್ಲಿ ನರ್ತಕರು ಮತ್ತು ಕಲಾವಿದರುಗಳಿಗೆ ತಮ್ಮ ನೃತ್ಯ ಮತ್ತು ಕಲಾಪ್ರದರ್ಶನಗಳನ್ನು ನೀಡಲು ಪ್ರೋತ್ಸಾಹ ನೀಡಲಾಗುತ್ತಿತ್ತು. ಮೈಸೂರು ಆಸ್ಥಾನವೂ ಕೂಡ ವಿಜಯನಗರ ಮಾದರಿಯನ್ನನುಸರಿಸಿ, ಪಾರಂಪರಿಕ ನೃತ್ಯ ಸಂಪ್ರದಾಯಕ್ಕೆ ಉತ್ತೇಜನ ನೀಡಿತು. ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ', ಪುಂಡರೀಕ ವಿಠಲನ 'ನರ್ತನ ನಿರ್ಣಯ', ಸಿಂಹಭೂಪಾಲನ 'ಲಾಸ್ಯರಂಜನ', ಮತ್ತು ವೆಂಕಟಮುದ್ರಸಾನಿ ಬರೆದ 'ರಸಿಕಜನ ಮನೋಲ್ಲಾಸಿನಿ'; 'ಸಾರಸಂಗ್ರಹ' ಮತ್ತು 'ಭರತ ನಾಟ್ಯ ಶಾಸ್ತ್ರ' ಕೃತಿಗಳು ಸಂಗೀತ ಮತ್ತು ನೃತ್ಯ ಕಲೆಗಳನ್ನು ಕುರಿತು ಬರೆದವುಗಳಾಗಿವೆ. ರಾಜ್ಯದಲ್ಲಿ ನೃತ್ಯ ಕಲೆಯ ಜೀವಂತಿಕೆ ಮತ್ತು ಏಳ್ಗೆಗೆ ಒತ್ತಾಸೆ ಕೊಟ್ಟ ಮಹತ್ವದ ಸಂಗತಿ ಎಂದರೆ ದೇವಾಲಯಗಳಲ್ಲಿ ದೇವದಾಸಿಯರು ನೃತ್ಯಸೇವೆ ಸಲ್ಲಿಸುವ ಪದ್ಧತಿ.

೧೯ನೆಯ ಶತಮಾನದ ಅಂತ್ಯದ ವೇಳೆಗೆ ಮುಳಬಾಗಿಲು, ಮೂಗೂರು, ಟಿ.ನರಸೀಪುರ ಮತ್ತು ಚಿಂತಾಮಣಿ ಬಳಿಯ ಮೂವಲವಾಡಿ ಸ್ಥಳಗಳಲ್ಲಿ ಸುಮಾರು ೨೦೦ ಮಂದಿ ವೃತ್ತಿಪರ ನೃತ್ಯಗಾರ್ತಿಯರಿದ್ದು, ನಟುವರರೊಂದಿಗೆ (ನೃತ್ಯ ಶಿಕ್ಷಕರೊಡನೆ) ವಾಸಿಸುತ್ತಿದ್ದರು. ಸಂಸ್ಕೃತಭಾಷೆ, ಭರತನಾಟ್ಯ ಮತ್ತು ಅಭಿನಯ ವಿಶಾರದರಾಗಿದ್ದ ಅನೇಕ ಬ್ರಾಹ್ಮಣ ವಿದ್ವಾಂಸರಿದ್ದರು. ಅವರು ಅಭಿನಯದ ಜಟಿಲವಾದ ಕಲಾಸೂಕ್ಷ್ಮಗಳನ್ನು ದೇವದಾಸಿಯರಿಗೆ ಕಲಿಸುತ್ತಿದ್ದರು. ಇವರುಗಳ ಪರಿಶ್ರಮದಿಂದಾಗಿ ಭರತನಾಟ್ಯವು ಹಳೆಮೈಸೂರು ಸಂಸ್ಥಾನದಲ್ಲಿ ತನ್ನದೇ ಆದ ಶೈಲಿಯೊಂದನ್ನು ರೂಪಿಸಿಕೊಂಡದ್ದು ಹೆಮ್ಮೆಯ ವಿಷಯ. ಮಂಗಲಮ್, ಸ್ತುತಿ, ಅಲರಿಪು, ಜತಿಸ್ವರ, ವೆಮಮ್, ಪದ ಮತ್ತು ತಿಲ್ಲಾನಗಳಿಂದ ಕೂಡಿದ ಭರತ ನಾಟ್ಯ ವಿನ್ಯಾಸವೊಂದು ರೂಢಿಗೆ ಬಂತು. ಈ ಅವಧಿಯಲ್ಲಿ ಕವೀಶ್ವರ ಗಿರಿಯಪ್ಪ, ಕಾಶಿ ಗುರು, ಅಮೃತಪ್ಪ, ಅಪ್ಪಯ್ಯ, ದಾಸಪ್ಪ, ಕಿಟ್ಟಪ್ಪ ಮತ್ತು ಜೆಟ್ಟಿ ತಾಯಮ್ಮ ಅವರು ಪ್ರಸಿದ್ಧ ನೃತ್ಯ ಗುರುಗಳಾಗಿದ್ದರು; ವೆಂಕಟಲಕ್ಷ್ಮಮ್ಮ, ಪುಟ್ಟದೇವಮ್ಮ, ರಮಾಮಣಿ ಮತ್ತು ಮೂಗೂರು ತ್ರಿಪುರಸುಂದರಮ್ಮ ಅವರೂ ಪ್ರಸಿದ್ಧ ನರ್ತಕಿಯರಾಗಿದ್ದರು.

ಭರತನಾಟ್ಯದ ಬಹುಪ್ರಮುಖ ಶಿಕ್ಷಣ ಕೇಂದ್ರವೆಂದು ಬೆಂಗಳೂರು ಗುರುತಿಸಲ್ಪಟ್ಟಿತ್ತು. ೧೯೧೦-೩೦ರ ಅವಧಿಯಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಹಾಗೂ ಸಾಮಾಜಿಕ ಮೌಲ್ಯಗಳ ಕುಸಿತದ ಫಲವಾಗಿ, ಕಲೆ ಮತ್ತು ಕಲಾವಿದರಿಗೆ ಕ್ಷೀಣದೆಸೆ ಒದಗಿತು. ತತ್ಫಲವಾಗಿ ಪಾರಂಪರಿಕ ಹಾಗೂ ದೇಸೀ ಕಲೆಗಳಿಗೆ ಗ್ರಹಣ ಹಿಡಿದಂತಾಗಿತ್ತು. ೧೯೩೦ರ ತರುವಾಯ ಇ.ಕೃಷ್ಣ ಅಯ್ಯರ್, ರುಕ್ಮಿಣಿ ಅರುಂಡೇಲ್, ರಾಮಗೋಪಾಲ್, ಯು.ಎಸ್.ಕೃಷ್ಣರಾವ್ ಮತ್ತು ಅವರ ಪತ್ನಿ ಚಂದ್ರಭಾಗಾದೇವಿ ಅವರು ಭರತನಾಟ್ಯ ಕಲೆಯನ್ನು ೧೯೪೦ರ ದಶಕದಲ್ಲಿ ಜನಪ್ರಿಯಗೊಳಿಸಿದರು. ಈ ನಲವತ್ತರ ದಶಕದಲ್ಲಿ ನಾಟ್ಯ ಪುನರುಜ್ಜೀವನಗೊಂಡು ಅನೇಕ ನೃತ್ಯ ಶಿಕ್ಷಕರು ಕರ್ನಾಟಕದಲ್ಲಿ ನೆಲೆಯನ್ನು ಬಲಪಡಿಸಿಕೊಂಡರು.

೫೦ರ ದಶಕದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ನೃತ್ಯ-ನಾಟಕ-ಸಂಗೀತ ಅಕಾಡೆಮಿಗಳು ಸ್ಥಾಪನೆಗೊಂಡು, ಹಿಂದಿನ ಪರಿಸ್ಥಿತಿಯು ಬದಲಾಯಿಸಿತು. ಈ ಅಕಾಡೆಮಿಗಳು ಉತ್ತಮ ನೃತ್ಯ ಶಿಕ್ಷಕರಿಗೆ ಮತ್ತು ನಾಟ್ಯ ಸಂಸ್ಥೆಗಳಿಗೆ ಅನುದಾನ ಮತ್ತು ನೆರವನ್ನು ನೀಡಿದವು. ಕಾಲಕ್ರಮೇಣ ಹಳೆ ಮೈಸೂರು ಸಂಸ್ಥಾನ ಕರ್ನಾಟಕ ರಾಜ್ಯದಲ್ಲಿ ನಾಟ್ಯ ಕಲಾವಿದ್ಯಾ ಪ್ರಸಾರವು ಅಭಿವೃದ್ಧಿ ಹೊಂದಿತು. ಆ ನಂತರ ಸರ್ಕಾರವು ಭರತನಾಟ್ಯ ಕಲೆಯಲ್ಲಿ, ಜ್ಯೂನಿಯರ್, ಸೀನಿಯರ್ ಮತ್ತು ವಿದ್ವತ್(ಪ್ರೊಫಿಶಿಯನ್ಸಿ) ಪರೀಕ್ಷೆಗಳನ್ನು ನಡೆಸಲಾರಂಭಿಸಿತು. ರಾಜ್ಯ ಪುನರ್ವಿಂಗಡನೆಯ ನಂತರ ಭರತನಾಟ್ಯ ಕಲೆಯ ಇಡೀ ಕ್ಷಿತಿಜವೇ ಮಾರ್ಪಾಟುಗೊಂಡಿತು. ೧೯೭೦ರ ದಶಕದ ಆರಂಭದಲ್ಲಿ ಕರ್ನಾಟಕದಲ್ಲಿ ವಿಶೇಷತಃ ಬೆಂಗಳೂರು ಮತ್ತು ಮೈಸೂರು ನಗರಗಳು ಅನೇಕ ನೃತ್ಯ ಶಿಕ್ಷಕರನ್ನು ಮತ್ತು ನೃತ್ಯ ಪಟುಗಳನ್ನು ತಯಾರುಮಾಡುವ ಅನೇಕ ಸಮರ್ಥ ನೃತ್ಯ ಶಿಕ್ಷಣ ಸಂಸ್ಥೆಗಳನ್ನು ಹೊಂದಲಾದ ಬಗ್ಗೆ ಹೆಮ್ಮೆ ಪಡುವಂತಾಯಿತು. ಬೆಂಗಳೂರು ವಿಶ್ವವಿದ್ಯಾಲಯವು, ನೃತ್ಯ-ನಾಟಕ-ಸಂಗೀತ ವಿಭಾಗವನ್ನು, ಆರಂಭಿಸಿತು. ಹೀಗಾಗಿ ಭರತನಾಟ್ಯದ ಭವಿಷ್ಯಕ್ಕೆ ಕರ್ನಾಟಕದಲ್ಲಿ ಉಜ್ವಲ ಭವಿಷ್ಯದ ಭರವಸೆ ಕಂಡುಬಂದಿತು.

ಕಲಾಪ್ರವೀಣರಿಂದ ನಡೆಸಲ್ಪಡುತ್ತಿರುವ ಅನೇಕ ಸಂಸ್ಥೆಗಳು ಭರತನಾಟ್ಯ ಮತ್ತು ವಿವಿಧ ನಾಟ್ಯ ಶೈಲಿಗಳ ಬಗ್ಗೆ ತರಬೇತಿ ನೀಡುತ್ತಿವೆ. ಬೆಂಗಳೂರು ನಗರದಲ್ಲಿ ಡಾ.ಯು.ಎಸ್.ಕೃಷ್ಣರಾವ್ ಅವರ 'ಮಹಾಮಾಯ ನೃತ್ಯ ಪೀಠ'ವಲ್ಲದೆ ಎಚ್.ಆರ್. ಕೇಶವಮೂರ್ತಿ ಅವರ 'ಕೇಶವ ನೃತ್ಯಶಾಲಾ', ಟಿ.ಎಸ್.ಭಟ್ ಅವರ 'ಮೇನಕ ನೃತ್ಯಶಾಲಾ', ಮಾಣಿಕ್ಯಮ್ ಅವರ 'ಭರತನಾಟ್ಯ ಕಲಾಶಾಲೆ', ಭಾರತೀಯ ವಿದ್ಯಾಭವನದ ನೃತ್ಯ ಕೇಂದ್ರ, ಲಲಿತ ದೊರೈ ಅವರ 'ಗಣೇಶ ನೃತ್ಯಶಾಲೆ', ಶೇಖರ್ ಅವರ 'ಸರಸ್ವತಿ ನೃತ್ಯಶಾಲೆ', ರಾಧಾ ಶ್ರೀಧರ್ ಅವರ 'ವೆಂಕಟೇಶ್ವರ ನಾಟ್ಯ ಮಂದಿರ', ಲೀಲಾ ರಾಮನಾಥನ್ ಅವರ 'ಮೀನಾಕ್ಷಿ ಸುಂದರಂ ಪಿಳ್ಳೈ ಶಾಲೆ', ಸಿ.ರಾಧಾಕೃಷ್ಣ ಅವರ 'ಚಿತ್ತರಂಜನ್ ಕಲಾಕ್ಷೇತ್ರ', 'ಎಂ.ವಿ.ಸ್ಕೂಲ್ ಆಫ್ ಭರತನಾಟ್ಯಮ್', ಮತ್ತು ವಿ.ಎಸ್.ಲೋಕಯ್ಯ ಅವರ 'ಗಣನೃತ್ಯ ಕಲಾಶಾಲೆ', ರಾಜರಾಜೇಶ್ವರಿ ನೃತ್ಯ ಕಲಾಮಂದಿರ ಹಾಗೂ ಮಾಯಾರಾವ್, ನರ್ಮದಾ, ಪ್ರತಿಭಾ ಪ್ರಹ್ಲಾದ್, ಮತ್ತು ವಾಣಿ ಗಣಪತಿ ಅವರು ನಡೆಸುತ್ತಿರುವ ನೃತ್ಯಶಾಲೆಗಳು ಪ್ರಮುಖವಾದವು. ರಾಜ್ಯದ ವಿವಿಧ ಕೇಂದ್ರಗಳಲ್ಲಿ ಅನೇಕ ನಾಟ್ಯಶಾಲೆಗಳು ಖ್ಯಾತಿ ಗಳಿಸಿವೆ.

ದಿವಂಗತ ಪ್ರತಿಮಾ ಗೌರಿ ಅವರಿಂದ ಬೆಂಗಳೂರು ನಗರದ ಹೊರವಲಯದ ಹೆಸರುಘಟ್ಟದಲ್ಲಿ 'ನೃತ್ಯ ಗ್ರಾಮ' ಸ್ಥಾಪಿಸಿದ್ದಾರೆ. ಅವರು ನೃತ್ಯ ಗ್ರಾಮದಲ್ಲಿ ಒಂದೇ ಸೂರಿನಡಿ ಭಾರತೀಯ ಸಾಂಪ್ರದಾಯಿಕ ನೃತ್ಯದ ಎಲ್ಲ ಪ್ರಕಾರಗಳಲ್ಲೂ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವ ವ್ಯವಸ್ಥೆಯನ್ನು ಮಾಡಿದ್ದರು. ಆಕೆಯು ತೀರಿಹೋದ ಮೇಲೆ ನೃತ್ಯ ಬೋಧನೆಯನ್ನು ಸದರಿ ಸಂಸ್ಥೆಯು ಮುಂದುವರಿಸಿದೆ.

ನೃತ್ಯ ಕಲಾವಿದೆಯರಿಂದ ಬಹಳವಾಗಿ ತುಂಬಿಕೊಂಡಿದ್ದ ಭರತನಾಟ್ಯಕಲೆಗೆ ಅನೇಕ ಪುರುಷರೂ ಮನಸೋತು ಈ ಭದ್ರಕೋಟೆಗೆ ಲಗ್ಗೆ ಹಾಕಿ, ಸಮರ್ಥವಾಗಿ ನೈಪುಣ್ಯತೆ ಪಡೆದು ಯಶಸ್ಸನ್ನು ಗಳಿಸಿದ್ದಾರೆ. ಅವರಲ್ಲಿ ಕೆ.ಆರ್.ಎಸ್.ಪ್ರಸನ್ನ, ಎ.ಆರ್.ಶ್ರೀಧರ್, ರಾಮು, ಅರುಣ್, ಬಿ.ಕೆ.ಶ್ಯಾಮ್‌ಪ್ರಕಾಶ್ ಮತ್ತು ರಾಜೇಂದ್ರ ಹೆಸರುವಾಸಿಯಾಗಿದ್ದಾರೆ. ಈ ಭರತನಾಟ್ಯ ಕಲೆಯನ್ನು ಜನಪ್ರಿಯಗೊಳಿಸಲು ಪರಿಶ್ರಮಿಸಿದವರಲ್ಲಿ ಅನೇಕ ಪ್ರಖ್ಯಾತ ಕಲಾವಿದರಲ್ಲಿ ಎನ್.ಗುಂಡಪ್ಪ, ಕೆ.ವೆಂಕಟಲಕ್ಷ್ಮಮ್ಮ, ಎಸ್.ಸುಂದರಮ್ಮ, ಎಂ.ಜೇಜಮ್ಮ, ಸುಬ್ಬಮ್ಮ, ಚಂದ್ರಕಾಂತಮ್ಮ, ಮಾಯಾರಾವ್, ಶಾಂತಾರಾವ್, ಚಿನ್ನಮ್ಮ, ಯು.ಎಸ್. ಕೃಷ್ಣರಾವ್, ಹೆಚ್.ಆರ್.ಕೇಶವಮೂರ್ತಿ ಮತ್ತು ವಿ.ಎಸ್. ಕೌಶಿಕ್ ಕೆ.ಎಂ.ರಾಮನ್ ಅವರು ಉಲ್ಲೇಖಾರ್ಹರು. ಇವರಲ್ಲದೆ ಲೀಲಾರಾಮನಾಥನ್, ಬಿ.ಕೆ.ವಸಂತಲಕ್ಷ್ಮಿ, ಸಿ.ರಾಧಾಕೃಷ್ಣ, ರಾಧಾಶ್ರೀಧರ್ ಲಲಿತಾ ಶ್ರೀನಿವಾಸ, ಸತ್ಯವತಿ ಸುರೇಶ್, ಪದ್ಮಿನಿ ರಾಮಚಂದ್ರನ್, ಪದ್ಮಿನಿ ರವಿ, ಉಷಾದಾತಾರ್, ಗಿರೀಶ್ ರಾಮನ್ ಮುಂತಾದವರು ಪ್ರಸಿದ್ಧರಾಗಿದ್ದು, ಅಂತರರಾಷ್ಟ್ರೀಯವಾಗಿಯೂ ಗುರುತಿಸಲ್ಪಟ್ಟು ಖ್ಯಾತಿ ಗಳಿಸಿದ್ದಾರೆ.

### ಶಾಂತಲಾ ನಾಟ್ಯ ಪ್ರಶಸ್ತಿ:

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೫ರಲ್ಲಿ ಈ ಪ್ರಶಸ್ತಿಯು ಸಂಸ್ಥಾಪಿತಗೊಂಡಿದೆ. ನೃತ್ಯರಂಗಕ್ಕೆ ಸಂಬಂಧಿಸಿದಂತೆ ಅಪೂರ್ವ ಸೇವೆ ಸಲ್ಲಿಸಿದ ಹಿರಿಯ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯ ಮೊತ್ತ ' ಒಂದು ಲಕ್ಷ. ಇದುವರೆಗೂ ಈ ಪ್ರಶಸ್ತಿ ಪಡೆದ ಕಲಾವಿದರು; ಕೆ.ವೆಂಕಟಲಕ್ಷ್ಮಮ್ಮ (೧೯೯೫), ಡಾ.ಯು.ಎಸ್.ಕೃಷ್ಣರಾವ್ (೧೯೯೬), ಯು.ಎಸ್. ಕೃಷ್ಣರಾವ್ (ಮಂಗಳೂರು ೧೯೯೭), ಎಚ್.ಆರ್. ಕೇಶವಮೂರ್ತಿ(೧೯೯೮), ಮಾಯಾರಾವ್(೧೯೯೯), ಕೆ.ಮುರಳೀಧರ ರಾವ್ (೨೦೦೦), ನರ್ಮದಾ(೨೦೦೧), ಪದ್ಮಶ್ರೀ ಶಾಂತಾರಾವ್(೨೦೦೨), ಸಿ.ರಾಧಾಕೃಷ್ಣ (೨೦೦೩), ಜಯಲಕ್ಷ್ಮಿಆಳ್ವ (೨೦೦೪), ಲೀಲಾರಾಮನಾಥನ್ (೨೦೦೫), ಕೆ.ಬಿ.ಮಾಧವರಾವ್(೨೦೦೬), ಟಿ.ಎಸ್.ಭಟ್ (೨೦೦೭), ಕೆ.ಎಂ.ರಾಮನ್ (೨೦೦೮), ಉಲ್ಲಾಳ ಮೋಹನ್ ಕುಮಾರ್ (೨೦೦೯), ರಾಧಾ ಶ್ರೀಧರ್ (೨೦೧೦) ಲಲಿತಾ ಶ್ರೀನಿವಾಸನ್ (೨೦೧೧), ವಸುಂಧರಾ ದೊರೆಸ್ವಾಮಿ (೨೦೧೨), ಪದ್ಮಿನಿ ರಾಮಚಂದ್ರನ್ (೨೦೧೩), ವಿಠ್ಠಲ ಶೆಟ್ಟಿ (೨೦೧೪), ಎಂ.ಶಕುಂತಲಾ (೨೦೧೫).

### ಕರ್ನಾಟಕದಲ್ಲಿ ಚಲನಚಿತ್ರ

ಚಲನಚಿತ್ರೋದ್ಯಮಕ್ಕೆ ಕರ್ನಾಟಕದಲ್ಲಿ ಆರು ದಶಕಗಳ ಇತಿಹಾಸವಿದೆ. ಆರಂಭದ ಹಂತದಲ್ಲಿ ಕರ್ನಾಟಕದಲ್ಲಿ ನಿರ್ಮಿತವಾದ ಚಲನಚಿತ್ರಗಳು ಕನ್ನಡ ರಂಗಭೂಮಿಯ ನಾಟಕದ ಕಥಾವಸ್ತುಗಳನ್ನು ಆಧರಿಸಿರುತ್ತಿದ್ದುವು. ಮೊದಲ 'ಮೂಕಿ'(ಸೈಲೆಂಟ್) ಚಿತ್ರ 'ಮೃಚ್ಛಕಟಿಕ' ಚಿತ್ರವನ್ನು ನಿರ್ಮಾಪಕ ಹಾಗೂ ನಿರ್ದೇಶಕರಾದ ಮೋಹನ್ ಭವನಾನಿ ಅವರು ನಿರ್ಮಿಸಿದರು. ಏಣಾಕ್ಷಿ ರಾಮರಾವ್ ಜೊತೆ ಕಮಲಾದೇವಿ ಚಟ್ಟೋಪಾಧ್ಯಾಯ, ಟಿ.ಪಿ.,ಕೈಲಾಸಂ, ಓ.ಕೆ.ನಂದ ಮತ್ತಿತರರು ಈ ಚಿತ್ರದಲ್ಲಿ ಪಾತ್ರಧಾರಿಗಳಾಗಿದ್ದರು. ೧೯೩೦ರ ದಶಕದಲ್ಲಿ ಹರಿಬಾಯ್ ಆರ್.ದೇಸಾಯ್ ಮತ್ತು ಭೋಗಿಯಲ್ ದವೆ ಎಂಬ ಇಬ್ಬರು ಬಾಂಬೆ ಉದ್ಯಮಿಗಳು, ಮೊದಲ ದಕ್ಷಿಣ ಭಾರತೀಯ ಸ್ಟುಡಿಯೋ (ಸ್ಟುಡಿಯೋ ಆಫ್ ಸದರನ್ ಇಂಡಿಯ) ವನ್ನು ಬೆಂಗಳೂರಿನಲ್ಲಿ ಸೂರ್ಯ ಫಿಲಂ ಕಂಪೆನಿ ಎಂಬ ಹೆಸರಿನಲ್ಲಿ ಸ್ಥಾಪಿಸಿದರು. ಸುಮಾರು ನಾಲ್ಕು ವರ್ಷಗಳಲ್ಲಿ ನಲವತ್ತು 'ಮೂಕಿ' ಚಲನಚಿತ್ರಗಳನ್ನು ಪ್ರದರ್ಶಿಸಿದರು. ೧೯೨೮ರಲ್ಲಿ ದೇವುಡು ನರಸಿಂಹಶಾಸ್ತ್ರಿ, ಗುಬ್ಬಿ ವೀರಣ್ಣ ಮತ್ತು ಬೆಳಗಾವಿಯ ಆಲ್ಗೋಡ ಅವರ ಸಹಕಾರದಿಂದ 'ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದರ ಮೂಲಕ ಮೂಕ ಚಿತ್ರಗಳಾದ 'ಹರಿಮಾಯ', ಸಾಂಗ್ ಆಫ್ ಲೈಫ್, ಮತ್ತು 'ಹಿಸ್ ಲವ್ ಅಫೇರ್'ಎಂಬ ಚಿತ್ರಗಳನ್ನು ನಿರ್ಮಿಸಲಾಯಿತು. 'ಸದಾರಮೆ' (೧೯೩೫), ಹೇಮರೆಡ್ಡಿ ಮಲ್ಲಮ್ಮ (೧೯೪೫), 'ಗುಣಸಾಗರಿ', ಬೇಡರ ಕಣ್ಣಪ್ಪ(೧೯೫೪), ಭೂತರಾಜ್ಯ ಮತ್ತು ಡೊಮಿಂಗೋ ಎಂಬ ಪ್ರಮುಖ ಚಲನಚಿತ್ರಗಳು ಆ ಕಾಲದಲ್ಲಿ ನಿರ್ಮಾಣಗೊಂಡವು. ಡಾ.ಶಿವರಾಮ ಕಾರಂತರು 'ಭೂತರಾಜ್ಯ' ಮತ್ತು 'ಡೊಮಿಂಗೋ' ಚಿತ್ರಗಳ ನಿರ್ಮಾಪಕರಾಗಿದ್ದರು. ಇತರ ಗಮನಾರ್ಹ ಚಿತ್ರಗಳೆಂದರೆ 'ಸತಿಸುಲೋಚನ', ಸಂಸಾರನೌಕೆ, ವಸಂತಸೇನ, ಪುರಂದರದಾಸ, ಭಕ್ತ ಕುಂಬಾರ, ಮಹಾತ್ಮ ಕಬೀರ್, ಕೃಷ್ಣಲೀಲಾ, ಚಂದ್ರಹಾಸ, ಭಾರತಿ, ನಾಗಕನ್ನಿಕಾ ಮತ್ತು ಜಗನ್ಮೋಹಿನಿ.

ಆರಂಭಕಾಲದಲ್ಲಿ ರಜತಪರದೆಯ ಚಿತ್ರಗಳ ಮೇಲೆ ಪರಿಣಾಮ ಬೀರಿದ ಪ್ರಸಿದ್ಧ ವ್ಯಕ್ತಿಗಳೆಂದರೆ ಟಿ.ಪಿ.ಕೈಲಾಸಂ, ಎಂ.ಜಿ.ಮರಿರಾವ್, ಗುಬ್ಬಿವೀರಣ್ಣ, ಆರ್. ನಾಗೇಂದ್ರರಾವ್, ಎಂ.ವಿ. ಸುಬ್ಬಯ್ಯನಾಯ್ಡು, ತ್ರಿಪುರಾಂಬ, ಸಿ.ಟಿ. ಶೇಷಾಚಲಮ್, ಎಂ.ವಿ. ರಾಜಮ್ಮ, ಬಿ.ಆರ್. ಪಂತುಲು, ಕೆಂಪರಾಜ್ ಅರಸ್, ಶಂಕರ್ ಸಿಂಗ್, ಬಿ.ವಿ.ವಿಠಲಾಚಾರ್ಯ, ಎಚ್.ಎಲ್.ಎನ್. ಸಿಂಹ ಮತ್ತು ಬಿ.ಎಸ್. ರಂಗಾ. ಅದರಲ್ಲೂ ಕೊನೆಯ ಇಬ್ಬರು ಕನ್ನಡ ಚಿತ್ರಂಗವನ್ನು ಮದರಾಸಿನಿಂದ ಬೆಂಗಳೂರಿಗೆ ತರಲು ಕಾರಣಕರ್ತರಾದರು. ಕನ್ನಡ ಚಲನಚಿತ್ರರಂಗದಲ್ಲಿ ದಂತಕತೆಯಾಗುವಷ್ಟರ ಮಟ್ಟಿಗೆ ಬೆಳೆದು ೧೯೯೭ರಲ್ಲಿ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ'ವಿಜೇತರಾಗಿ ಕನ್ನಡ ಚಲನಚಿತ್ರರಂಗಕ್ಕೆ ಹೆಮ್ಮೆ ತಂದುಕೊಟ್ಟ ಕನ್ನಡ ಚಿತ್ರರಂಗದ ಏಕಮೇವಾ ದ್ವಿತೀಯರೆನಿಸಿದ ರಾಜಕುಮಾರ್‌ರವರನ್ನು ಪರಿಚಯಿಸಿದ ಚಿತ್ರ ಬೇಡರ ಕಣ್ಣಪ್ಪ, (೧೯೫೪). ೧೯೫೦ರ ದಶಕದಲ್ಲಿ ಸಾಮಾಜಿಕ ಚಿತ್ರಗಳ ಪ್ರದರ್ಶನ ಪ್ರವೃತ್ತಿ ಬೆಳೆಯಿತು. ಅವುಗಳಲ್ಲಿ ಪ್ರಮುಖವಾಗಿ 'ಪ್ರೇಮದ ಪುತ್ರಿ', 'ಮೊದಲ ತೇದಿ', 'ಸ್ಕೂಲ್ ಮಾಸ್ಟರ್', 'ಕನ್ಯಾದಾನ', 'ಆದರ್ಶಸತಿ', 'ಭಕ್ತ ಮಾರ್ಕಂಡೇಯ', 'ರತ್ನಗಿರಿ ರಹಸ್ಯ', 'ನಳದಮಯಂತಿ', ಭೂಕೈಲಾಸ', 'ಜಗಜ್ಯೋತಿ ಬಸವೇಶ್ವರ', 'ದಶಾವತಾರ', 'ರಣಧೀರ ಕಂಠೀರವ', 'ಭಕ್ತ ಕನಕದಾಸ' ಮುಂತಾದ ಚಿತ್ರಗಳು ಗಮನಾರ್ಹವಾದವು.

ಕ್ರಿ.ಶ.೧೯೬೪ ಕನ್ನಡ ಚಲನಚಿತ್ರರಂಗದ ಇತಿಹಾಸದಲ್ಲಿ ಮಹತ್ವದ ವರ್ಷವಾಗಿತ್ತು. ಏಕೆಂದರೆ 'ಅಮರಶಿಲ್ಪಿ ಜಕಣಾಚಾರಿ' ಸಂಪೂರ್ಣವಾಗಿ ವರ್ಣಚಲನಚಿತ್ರವಾಗಿ ನಿರ್ಮಾಣವಾಯಿತು. ಅದೇ ವರ್ಷ ಎನ್.ಲಕ್ಷ್ಮೀನಾರಾಯಣ್ ಅವರ ಹೊಸ ಅಲೆಯ ಚಿತ್ರ 'ನಾಂದಿ' ಬಿಡುಗಡೆಯಾಗಿತ್ತು. ೧೯೬೦ರ ದಶಕದಲ್ಲಿ ಕನ್ನಡ ಚಲನಚಿತ್ರದ ಇತಿಹಾಸದಲ್ಲಿ ಸರ್ವರಿಂದಲೂ ಅತಿ ಶ್ರೇಷ್ಠ ನಿರ್ದೇಶಕರೆಂಬ ಪ್ರಶಂಸೆಗೆ ಪಾತ್ರರಾದ ಪುಟ್ಟಣ್ಣ ಕಣಗಾಲ್ ಅವರು 'ಬೆಳ್ಳಿಮೋಡ'(೧೯೬೭), 'ಗೆಜ್ಜೆಪೂಜೆ'(೧೯೬೮), 'ಶರಪಂಜರ'ಗಳಂತಹ ಅವಿಸ್ಮರಣೀಯ ಚಿತ್ರಗಳನ್ನು ಮತ್ತು ೧೯೭೦ರ ದಶಕದಲ್ಲಿ 'ಸಾಕ್ಷಾತ್ಕಾರ', 'ನಾಗರಹಾವು' ಮುಂತಾದ ಚಲನಚಿತ್ರಗಳನ್ನೂ ಮಾಡಿದರು. ಇದೇ ದಶಕದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಥಾವಸ್ತುವನ್ನೊಳಗೊಂಡ ಮೊದಲ ಮಕ್ಕಳ ಚಲನಚಿತ್ರ 'ಮಕ್ಕಳ ರಾಜ್ಯ' ಕೂಡ ಬಿಡುಗಡೆ ಆಯಿತು.

೧೯೭೦ರ ದಶಕದಲ್ಲಿ ಚಲನಚಿತ್ರ ನಿರ್ಮಾಪಕರು ಪ್ರಸಿದ್ಧ ಕಾದಂಬರಿಕಾರರ ಕನ್ನಡ ಕಾದಂಬರಿಗಳನ್ನು ಚಲನಚಿತ್ರಗಳಿಗೆ ಅಳವಡಿಸಿಕೊಳ್ಳಲಾರಂಭಿಸಿದರು. ಈ ಪ್ರವೃತ್ತಿಯು ಅತ್ಯಂತ ಜನಪ್ರಿಯವಾಯಿತು. ಅನಕೃ, ತ.ರಾ.ಸು, ಕೃಷ್ಣಮೂರ್ತಿ ಪುರಾಣಿಕ್, ತ್ರಿವೇಣಿ, ನೀಳಾದೇವಿ, ಎಂ.ಕೆ.ಇಂದಿರಾ, ಪೂರ್ಣಚಂದ್ರ ತೇಜಸ್ವಿ, ಎಸ್.ಎಲ್. ಭೈರಪ್ಪ, ಸಾಯಿಸುತೆ, ಟಿ.ಕೆ. ರಾಮರಾವ್ ಮುಂತಾದ ಪ್ರಸಿದ್ಧ ಕಾದಂಬರಿಕಾರರ ಕಾದಂಬರಿಗಳು ಚಲನಚಿತ್ರಗಳಾದವು.

ಶ್ರೇಷ್ಠ ಕವಿಗಳಾದ ಕುವೆಂಪು, ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ ಮುಂತಾದವರ ಕವನಗಳನ್ನು ಚಲನಚಿತ್ರ ಗೀತೆಗಳನ್ನಾಗಿ ಮಾರ್ಪಡಿಸಿದ್ದು ಅಪಾರ ಮೆಚ್ಚುಗೆ ಪಡೆದಿವೆ. ೧೯೭೦ರ ದಶಕವು ಹೊಸಅಲೆಯ ಚಿತ್ರಗಳ ಯುಗವೆಂದು ಪರಿಗಣಿತವಾಯಿತು. ಪ್ರಯೋಗಾತ್ಮಕ ಚಿತ್ರಗಳೆಂಬ ಪ್ರಸಿದ್ಧಿಗೂ ಕಾರಣವಾಯಿತು. ಸಂಸ್ಕಾರ (೧೯೭೦), ವಂಶವೃಕ್ಷ (೧೯೭೨), ಅಬಚೂರಿನ ಪೋಸ್ಟಾಫೀಸು (೧೯೭೩), ಕಾಡು(೧೯೭೪), ಹಂಸಗೀತೆ (೧೯೭೫), ಚೋಮನದುಡಿ (೧೯೭೫), ಪಲ್ಲವಿ (೧೯೭೬), ಕರಾವಳಿ(೧೯೭೭), ಕನ್ನೇಶ್ವರರಾಮ (೧೯೭೭), ಘಟಶ್ರಾದ್ಧ (೧೯೭೭), ಚಿತೆಗೂ ಚಿಂತೆ (೧೯೭೮), ಒಂದು ಊರಿನ ಕಥೆ, ಒಂದಾನೊಂದು ಕಾಲದಲ್ಲಿ, ಮಲೆಯ ಮಕ್ಕಳು, ಸ್ಪಂದನ (ಎಲ್ಲವೂ ೧೯೭೮), ಕಾಡುಕುದುರೆ ಮತ್ತು ಅರಿವು (೧೯೭೯), ಎಲ್ಲಿಂದಲೋ ಬಂದವರು (೧೯೮೦), ಗ್ರಹಣ ಮತ್ತು ಮೂರುದಾರಿಗಳು(೧೯೮೧), ಬರ (೧೯೮೨).

ಈಚಿನ ವರ್ಷಗಳಲ್ಲಿ ಅವಸ್ಥೆ, ಪುಷ್ಪಕ ವಿಮಾನ, ಸೂರ್ಯ, ತಬರನ ಕಥೆ, ಕಾಡಿನ ಬೆಂಕಿ, ತರ್ಕ, ಇದು ಸಾಧ್ಯ, ಸಂತ ಶಿಶುನಾಳ ಷರೀಫ್, ಬಣ್ಣದ ಗೆಜ್ಜೆ, ಹಗಲುವೇಷ, ನಾಗಮಂಡಲ, ದೇವೀರಿ, ವಿಮುಕ್ತಿ, ಹಸೀನಾ, ಶಬರಿ, ಮೌನಿ, ಅತಿಥಿ, ಬೆಟ್ಟದ ಜೀವ, ಪುಟ್ಟಕ್ಕನ ಹೈವೆ, ಭಗವತಿ ಕಾಡು, ಹೆಜ್ಜೆಗಳು ಇತ್ಯಾದಿ ಚಿತ್ರಗಳು ಕಂಡು ಬರುತ್ತವೆ.

ಹಣಗಳಿಕೆಯ ದೃಷ್ಟಿಯಿಂದ ಯಶಸ್ವೀ ಚಲನಚಿತ್ರಗಳಾಗಿ ನಾಗರಹಾವು ಮತ್ತು ಬಂಗಾರದ ಮನುಷ್ಯ(೧೯೭೨), ಎಡಕಲ್ಲು ಗುಡ್ಡದ ಮೇಲೆ ಮತ್ತು ಪ್ರೊಫೆಸರ್ ಹುಚ್ಚೂರಾಯ(೧೯೭೩), ಉಪಾಸನೆ ಮತ್ತು ಭೂತಯ್ಯನ ಮಗ ಅಯ್ಯು(೧೯೭೪), ಅಪರಿಚಿತ ಮತ್ತು ಪರಸಂಗದ ಗೆಂಡೆತಿಮ್ಮ(೧೯೭೮), ಮದರ್, ಮಿಥುನ (೧೯೮೦), ಗಾಳಿಮಾತು (೧೯೮೧), ಮಾನಸ ಸರೋವರ(೧೯೮೨), ಫಣಿಯಮ್ಮ(೧೯೮೩), ಅನುಭವ (೧೯೮೪), ಬೆಟ್ಟದಹೂವು, ಮಸಣದ ಹೂವು(೧೯೮೫), ಮಲಯ ಮಾರುತ(೧೯೮೬), ಒಂದುಮುತ್ತಿನ ಕಥೆ(೧೯೮೭), ಸುಪ್ರಭಾತ(೧೯೮೮), ಸಂಕ್ರಾಂತಿ(೧೯೮೯), ಉದ್ಭವ, ಶಬರಿಮಲೆ ಸ್ವಾಮಿ ಅಯ್ಯಪ್ಪ(೧೯೯೦), ರಾಮಾಚಾರಿ(೧೯೯೧), ಕ್ರೌರ್ಯ, ಪಲ್ಲವಿ, ಅನುರೂಪ, ಖಂಡವಿದೆಕೋ ಮಾಂಸವಿದೆಕೊ, ಸಂಕಲ್ಪ, ಬ್ಯಾಂಕರ್ ಮಾರ್ಗಯ್ಯ, ಗೀಜಗನ ಗೂಡು, ಸಾವಿತ್ರಿ, ಗಿಡ್ಡ, ಘಟಶ್ರಾದ್ಧ (ರಾಷ್ಟ್ರಪತಿ ಸ್ವರ್ಣಪದಕ ವಿಜೇತ), ಆಕ್ರಮಣ, ಮನೆ, ತಾಯಿಸಾಹೇಬ (ರಾಷ್ಟ್ರಪತಿ ಸ್ವರ್ಣಪದಕ ವಿಜೇತ), ಬೆಳದಿಂಗಳ ಬಾಲೆ, ಚೈತ್ರದ ಚಿಗುರು, ಹೂಮಾಲೆ, ದೋಣಿಸಾಗಲಿ(೧೯೯೮), ಕಾನೂರು ಹೆಗ್ಗಡತಿ, ಚಂದ್ರಮುಖಿ ಪ್ರಾಣಸಖಿ (೧೯೯೯), ಮುಸ್ಸಂಜೆ, ಶಾಪ, ಕುರಿಗಳು ಸಾರ್ ಕುರಿಗಳು(೨೦೦೦), ದ್ವೀಪ, ಏಕಾಂಗಿ, ಶಾಂತಿ, ನೀಲ (೨೦೦೧), ಅರ್ಥ, ಕ್ಷಾಮ, ಲಾಲಿಹಾಡು(೨೦೦೨), ಚಿಗುರಿದ ಕನಸು(೨೦೦೩), ಮೊನಾಲಿಸ, ಬೇರು, ಗೌಡ್ರು, ಮುನ್ನುಡಿ (ರಾಷ್ಟ್ರೀಯ ಪ್ರಶಸ್ತಿ, ತಾರಾ ಅತ್ಯತ್ತಮ ನಟಿ), ಮಿಠಾಯಿ ಮನೆ(೨೦೦೪), ತುತ್ತೂರಿ (೨೦೦೫), ನಾಯಿನೆರಳು, ನೆನೆಪಿರಲಿ, ಅಮೃತಧಾರೆ (೨೦೦೬), ಕಲ್ಲರಳಿ ಹೂವಾಗಿ, ಕಾಡಬೆಳದಿಂಗಳು, ಕೇರಾಫ್ ಫುಟ್‌ಪಾತ್ (೨೦೦೭), ಗುಲಾಬಿ ಟಾಕೀಸ್, ಮೊಗ್ಗಿನ ಜಡೆ, ಪ್ರೀತಿ ಪ್ರೇಮ ಪ್ರಣಯ, ಮಾತಾಡ್ ಮಾತಾಡ್ ಮಲ್ಲಿಗೆ, ಬನದ ನೆರಳು (೨೦೦೮) ಇತ್ಯಾದಿ ಚಿತ್ರಗಳು ಪ್ರದರ್ಶಿತವಾಗಿವೆ.

೧೯೮೦ರ ದಶಕಗಳಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿಯೇ ಪೂರ್ಣವಾಗಿ ತಯಾರಿಸಿದ ಕನ್ನಡ ಚಲನಚಿತ್ರಗಳಿಗೆ ಶೇ.೫೦ರಷ್ಟು ತೆರಿಗೆ ವಿನಾಯಿತಿಯನ್ನು ಮಂಜೂರು ಮಾಡಿತು ಅಲ್ಲದೇ ಆ ಚಿತ್ರಗಳಿಗೆ ಸಹಾಯಧನ(ಸಬ್ಸಿಡಿ) ಮೊತ್ತವನ್ನೂ ಹೆಚ್ಚಿಸಿತು. ಇಂದು ಯಾವುದೇ ಕನ್ನಡ ಚಲನಚಿತ್ರವು ರಾಜ್ಯದಲ್ಲಿಯೇ ನಿರ್ಮಿಸಲ್ಪಟ್ಟದ್ದಾದರೆ ಅದು ಕಪ್ಪು ಬಿಳುಪಿನ ಚಿತ್ರವಾಗಿದ್ದರೆ ರೂ.೨.೫೦ ಲಕ್ಷ, ವರ್ಣಚಿತ್ರವಾದರೆ ರೂ. ೩.೫೦ ಲಕ್ಷಗಳನ್ನು ಸರ್ಕಾರದಿಂದ ಪಡೆಯಲು ಅರ್ಹವಾಗಿರುತ್ತದೆ. ಎಲ್.ವಿ.ಪ್ರಸಾದ್ ಅವರು ಬೆಂಗಳೂರಿನಲ್ಲಿ ವರ್ಣ ಸಂಸ್ಕರಣ ಪ್ರಯೋಗಶಾಲೆಯನ್ನು (ಕಲರ್ ಪ್ರಾಸೆಸಿಂಗ್ ಲ್ಯಾಬೊರೇಟರಿ) ಸ್ಥಾಪಿಸಿದ್ದಾರೆ. ಜೊತೆಗೆ ನಾಗ್ ಸಹೋದರರಿಂದ ರೆಕಾರ್ಡಿಂಗ್ ಸ್ಟುಡಿಯೋ 'ಸಂಕೇತ್' ಮತ್ತು 'ಚಾಮುಂಡೇಶ್ವರಿ ಸ್ಟುಡಿಯೋ'ಗಳೂ ಸ್ಥಾಪಿಸಲ್ಪಟ್ಟಿವೆ.

ಉತ್ತಮ ಮೂಲಭೂತ ಸೌಕರ್ಯಗಳು, ಸರ್ಕಾರದಿಂದ ದೊರೆತ ಪ್ರೋತ್ಸಾಹ ಮತ್ತು ವೀಕ್ಷಕರ ಸಂಖ್ಯೆಯಲ್ಲಿ ಹೆಚ್ಚಳ ಇವೆಲ್ಲವುಗಳಿಂದ ಪ್ರತಿ ವರ್ಷವೂ ಚಲನಚಿತ್ರ ನಿರ್ಮಾಣದ ಸಂಖ್ಯೆಯು ಹೆಚ್ಚುತ್ತ ಬಂದಿದೆ. ರಾಜಕೀಯ ಮತ್ತು ಸಾಮಾಜಿಕ ವಸ್ತುಗಳನ್ನುಳ್ಳ ಚಲನಚಿತ್ರಗಳಾದ 'ಆಕ್ಸಿಡೆಂಟ್', 'ಅಂತ', 'ಬರ', 'ಚಕ್ರವ್ಯೂಹ', 'ಆಸ್ಫೋಟ' ಮುಂತಾದವು ನಿರ್ಮಾಣವಾಗಿವೆ. ಹೆಚ್ಚು ಹಣ ಹೂಡದೆಯೂ ಗಟ್ಟಿಯಾದ ಚಿತ್ರಕಥೆ, ಉತ್ತಮ ಛಾಯಾಗ್ರಹಣ, ಪರಿಣಾಮಕಾರಿಯಾದ ಸಂಗೀತ ಮುಂತಾದ ಅಂಶಗಳಿಂದ ಪ್ರೇಕ್ಷಕರಲ್ಲಿ ಭಾರೀ ಜನಪ್ರಿಯತೆಯನ್ನು ಗಳಿಸಿದ ಚಿತ್ರಗಳು ಕನ್ನಡದಲ್ಲಿ ಗಮನಾರ್ಹವಾಗಿ ಹೆಚ್ಚುತ್ತಿವೆ. ರಂಗಿತರಂಗ, ಯುಟರ್ನ್, ಇದೊಳ್ಳೆ ರಾಮಾಯಣ, ತಿಥಿ, ಲೂಸಿಯಾ, ಗೋಧಿ ಬಣ್ಣ ಸಾಧಾರಣ ಮೈ ಕಟ್ಟು, ರಾಮಾ ರಾಮಾ ರೇ ಮುಂತಾದವು ಈ ಮಾತಿಗೆ ನಿದರ್ಶನ.

ಮೂಕಿ ಚಿತ್ರಗಳಲ್ಲಿ ಹಿನ್ನೆಲೆ ವಾದ್ಯಸಂಗೀತ ರೂಢಿಯಲ್ಲಿತ್ತು. ಆದರೆ ಮೊದಲ ಮಾತಿನ (ಟಾಕೀ) ಚಿತ್ರ ೧೯೩೪ರಲ್ಲಿ ಬಂದಾಗ ಹಾಡುಗಳನ್ನು ಹಾಡಲಾಯಿತು. ಆಧುನಿಕ ವಾದ್ಯ ಮೇಳ (ವೃಂದಗಾನ) ಚಲನಚಿತ್ರಗಳಲ್ಲಿ ಹೆಚ್ಚು ಬಳಕೆಗೊಳ್ಳಲು ೧೯೪೧ರಲ್ಲಿ ಪಿ.ಕಾಳಿಂಗರಾಯರು ನಡೆಸಿದ ಪ್ರಯತ್ನ, ಪರಿಶ್ರಮವೇ ಕಾರಣವೆನ್ನಬಹುದು. ಆನಂತರ ಹಿನ್ನೆಲೆ ಗಾಯನ (ಹಿನ್ನೆಲೆ ಗಾಯಕರ ಹಾಡು) ಜನಪ್ರಿಯವಾಯಿತು. ಸಂಗೀತ ನಿರ್ದೇಶಕರಾದ ಪಿ.ಶಾಮಣ್ಣ, ಆರ್.ಸುದರ್ಶನ್, ಜಿ.ಕೆ.ವೆಂಕಟೇಶ್, ಟಿ.ಜಿ.ಲಿಂಗಪ್ಪ, ವಿಜಯಭಾಸ್ಕರ್, ರಾಜನ್ ನಾಗೇಂದ್ರ ಮತ್ತು ಹಂಸಲೇಖ ಜನಪ್ರಿಯ ಚಲನಚಿತ್ರ ಸಂಗೀತ ನಿರ್ದೇಶಕರೆನಿಸಿದರು. ಪರಭಾಷಿಕರಾದರೂ ಎಸ್.ಪಿ.ಬಾಲಸುಬ್ರಮಣ್ಯಂ ಜೇಸುದಾಸ್ ಮೊದಲಾದವರು ಕನ್ನಡ ಚಲನಚಿತ್ರಗಳಿಗೆ ಹಾಡುಗಳನ್ನು ಹಾಡಿದ್ದಾರೆ. ಬಿ.ವಿ.ಕಾರಂತ್, ಪ್ರೇಮಾ ಕಾರಂತ್, ಗಿರೀಶ್ ಕಾಸರವಳ್ಳಿ, ಎಂ.ಎಸ್.ಸತ್ಯು, ಸಿದ್ದಲಿಂಗಯ್ಯ, ಗಿರೀಶ್ ಕಾರ್ನಾಡ್, ಸುವರ್ಣ, ಜಿ.ವಿ.ಅಯ್ಯರ್, ನಾಗಾಭರಣ, ಬರಗೂರು ರಾಮಚಂದ್ರಪ್ಪ, ಪಿ.ಶೇಷಾದ್ರಿ, ಮೊದಲಾದವರು ಚಲನಚಿತ್ರಗಳನ್ನು ನಿರ್ದೇಶಿಸಿ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ದೇವೀರಿ ಚಲನಚಿತ್ರದ ಮೂಲಕ ಕವಿತಾ ಲಂಕೇಶ್ ಅವರು ಯುವ ಜನಾಂಗದಲ್ಲಿ ಭರವಸೆ ಮೂಡಿಸಿದ್ದಾರೆ. ಅತ್ಯಂತ ಚಿಕ್ಕ ವಯಸ್ಸಿನ ನಿರ್ದೇಶಕನೆಂದು ಖ್ಯಾತಿಗಳಿಸಿದ 'ಕೇರಾಫ್ ಫುಟ್‌ಪಾತ್' ಚಿತ್ರ ಮಾಡಿದ ಮಾಸ್ಟರ್ ಕಿಷನ್ ಗಿನ್ನಿಸ್ ದಾಖಲೆಗೆ ಸೇರಿದ್ದಾನೆ. ಅನೇಕ ಕನ್ನಡ ಚಲನಚಿತ್ರಗಳು, ಬಹಳ ಸಂಖ್ಯೆಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದುಕೊಂಡಿವೆ. ಕರ್ನಾಟಕ ಸರ್ಕಾರವು ೧೯೬೬ರಿಂದ ಚಲನಚಿತ್ರಗಳಿಗೆ ರಾಜ್ಯ ಪ್ರಶಸ್ತಿ ನೀಡುತ್ತಾ ಬಂದಿದೆ. ಕರ್ನಾಟಕ ಫಿಲಂ ಚೇಂಬರ್ ಆಫ್ ಕಾಮರ್ಸ್ (ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿ) ೧೯೪೪ರಲ್ಲಿ ಬೆಂಗಳೂರಿನಲ್ಲಿ ಆರಂಭವಾಯಿತು. ಕೆಲವು ಹವ್ಯಾಸಿ ಚಲನಚಿತ್ರ ಸಂಸ್ಥೆಗಳು ೧೫ ಎಂ.ಎಂ.ಅಥವಾ ೮ ಎಂ.ಎಂ ಕ್ಯಾಮರಾ ಬಳಸಿ ಚಿತ್ರಗಳನ್ನು ನಿರ್ಮಿಸುತ್ತಿವೆ. ಅವೆಂದರೆ, ಅಸೀಮ, ಸೃಷ್ಟಿ, ಸೃಜನ್ ಮತ್ತು ಸುಚಿತ್ರ ಮುಂತಾದ ಸಂಸ್ಥೆಗಳು. ಪುಣೆ ರಾಷ್ಟ್ರೀಯ ಚಲನಚಿತ್ರ ಚಿತ್ರಾಗಾರದ ಮೊದಲ ಪ್ರಾದೇಶಿಕ ಕಛೇರಿಯು (ನ್ಯಾಷನಲ್ ಫಿಲ್ಮ್ ಆರ್ಕೀವ್ಸ್ ಆಫ್ ಇಂಡಿಯಾ) ಬೆಂಗಳೂರಿನಲ್ಲಿ ೧೯೮೨ರಲ್ಲಿ ಚೌಡಯ್ಯ ಸ್ಮಾರಕ ಭವನದಲ್ಲಿ ಆರಂಭಗೊಂಡಿತು. ದಕ್ಷಿಣ ಭಾರತದ ಪ್ರಾಂತೀಯ ಭಾಷೆಗಳಲ್ಲಿ ನಿರ್ಮಿಸಿರುವ ಹಳೆಯ ಮತ್ತು ಸ್ಮರಣೀಯ ಚಿತ್ರಗಳನ್ನು ಸಂಗ್ರಹಿಸುವ ಕಾರ್ಯವನ್ನು ಮಾಡುತ್ತಿದೆ. ಕರ್ನಾಟಕದ ಜನಪ್ರಿಯ ಚಿತ್ರ ಸ್ಟುಡಿಯೋಗಳಾಗಿ ಮೈಸೂರಿನಲ್ಲಿ ಪ್ರೀಮಿಯರ್ ಮತ್ತು ಚಾಮುಂಡೇಶ್ವರಿ ಸ್ಟುಡಿಯೋಗಳೂ, ಶ್ರೀ ಕಂಠೀರವ ಮತ್ತು ಅಭಿಮಾನ್ ಸ್ಟುಡಿಯೋಗಳೂ ಬೆಂಗಳೂರಿನಲ್ಲಿವೆ. ಅನೇಕ ವರ್ಣ ಲ್ಯಾಬೋರೇಟರಿಗಳಲ್ಲದೆ, ಸಂಸ್ಕರಣ ಮತ್ತು ಧ್ವನಿಮುದ್ರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಬೆಂಗಳೂರು ಕರ್ನಾಟಕದ 'ಚಿತ್ರನಗರಿ'(ಫಿಲಂ ಸಿಟಿ) ಎನಿಸಿದೆ.

ಕರ್ನಾಟಕ ಚಲನಚಿತ್ರರಂಗವು ಪ್ರತಿಭಾವಂತ ಚಲನಚಿತ್ರ ಕಲಾವಿದರ ದಂಡನ್ನೇ ಸೃಷ್ಟಿಸಿದೆ. ಡಾ.ರಾಜಕುಮಾರ್ ಅಲ್ಲದೇ ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು, ಕಲ್ಯಾಣ ಕುಮಾರ್, ಉದಯಕುಮಾರ್, ಗಂಗಾಧರ್, ವಿಷ್ಣುವರ್ಧನ್, ಅಂಬರೀಶ್, ಪ್ರಭಾಕರ್, ಶ್ರೀಧರ್, ರವಿಚಂದ್ರನ್, ಕಾಶಿನಾಥ್, ಶಂಕರನಾಗ್, ಅನಂತನಾಗ್, ಲೋಕೇಶ್, ರಾಜೇಶ್, ಸುದರ್ಶನ್, ಶ್ರೀನಾಥ್, ಸಿ.ಆರ್.ಸಿಂಹ, ದ್ವಾರಕೀಶ್, ವಜ್ರಮುನಿ, ಮುಸರಿ ಕೃಷ್ಣಮೂರ್ತಿ, ಹೆಚ್.ಜಿ. ದತ್ತಾತ್ರೇಯ, ರಮೇಶ್ ಅರವಿಂದ್, ಧೀರೇಂದ್ರ ಗೋಪಾಲ್, ಮುಂತಾದ ನಟರು, ಎಂ.ವಿ.ರಾಜಮ್ಮ, ಲೀಲಾವತಿ, ಬಿ.ವಿ.ರಾಧಾ, ಜಯಮ್ಮ, ಪಂಡರಿಬಾಯಿ, ಬಿ.ಸರೋಜಾದೇವಿ, ಭಾರತಿ, ಜಯಂತಿ, ಕಲ್ಪನಾ, ಆರತಿ, ಮಂಜುಳ, ಹರಿಣಿ, ಜಯಮಾಲ, ಮಾಲಾಶ್ರೀ, ಸುಧಾರಾಣಿ, ವೈಶಾಲಿ ಕಾಸರವಳ್ಳಿ, ತಾರಾ, ಶೃತಿ, ಉಮಾಶ್ರೀ ಮುಂತಾದ ನಟಿಯರಿಂದ ಕರ್ನಾಟಕವು ಸಮೃದ್ಧವಾಗಿದೆ.

ಜಿ.ವಿ.ಅಯ್ಯರ್ ಅವರು 'ಆದಿಶಂಕರಾಚಾರ್ಯ'ದ ಮೂಲಕ ೧೯೮೪ರಲ್ಲಿ ಮೊಟ್ಟ ಮೊದಲ ಸಂಸ್ಕೃತ ಚಲನಚಿತ್ರ ನಿರ್ಮಾಪಕ-ನಿರ್ದೇಶಕರೆನಿಸಿದರು. ಇದು ಅವರಿಗೆ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿಯನ್ನು ತಂದುಕೊಟ್ಟಿತು. ೧೯೮೬ರಲ್ಲಿ ಕನ್ನಡದಲ್ಲಿ 'ಮಧ್ವಾಚಾರ್ಯ', ೧೯೮೮ರಲ್ಲಿ ತಮಿಳಿನಲ್ಲಿ 'ರಾಮಾನುಜಾಚಾರ್ಯ' ಚಲನಚಿತ್ರಗಳನ್ನು ತಯಾರಿಸಿದರು; ಸಿನಿಮಾ ಮಾಧ್ಯಮದ ಮೂಲಕ ಈ ಸಂತ ತತ್ತ್ವಜ್ಞಾನಿಗಳ ಬೋಧೆಗಳನ್ನು ನಿರೂಪಿಸುವ ಪ್ರಯತ್ನ ಮಾಡಿದರು. ೧೯೯೩ರಲ್ಲಿ ಅವರು ತಯಾರಿಸಿದ 'ಭಗವದ್ಗೀತೆ' ಚಲನಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿಯೂ ದೊರಕಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕವಾಗಿ ವಿವಿಧ ಪ್ರಶಸ್ತಿಗಳನ್ನು ಸ್ಥಾಪಿಸಿವೆ, ಚಲನಚಿತ್ರ ನಟ-ನಟಿಯರನ್ನು, ನಿರ್ಮಾಪಕರನ್ನು, ನಿರ್ದೇಶಕರನ್ನು, ತಾಂತ್ರಿಕ ಕುಶಲರನ್ನು ಹಾಗೂ ಚಿತ್ರರಂಗಕ್ಕೆ ಸಂಬಂಧಿಸಿದ ವಿವಿಧ ವ್ಯಕ್ತಿಗಳನ್ನು ವಾರ್ಷಿಕವಾಗಿ ಸನ್ಮಾನಿಸಿವೆ. ಡಾ.ರಾಜಕುಮಾರ್ ಅವರಿಗೆ ರಾಷ್ಟ್ರೀಯ ಪ್ರತಿಷ್ಠಿತ ಪ್ರಶಸ್ತಿ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ'ಯನ್ನು ಕೇಂದ್ರ ಸರ್ಕಾರವು ೧೯೯೫ರಲ್ಲಿ ನೀಡಿ ಸನ್ಮಾನಿಸಿದೆ. ೨೦೦೮ರಲ್ಲಿ ಸಿನಿಮಾ ಛಾಯಗ್ರಾಹಕ ವಿ.ಕೆ.ಮೂರ್ತಿ ಅವರಿಗೆ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ' ದೊರೆತ್ತಿದ್ದು, ಇದು ಕನ್ನಡಿಗರಿಗೆ ದೊರೆತ ಎರಡನೆ ಪ್ರಶಸ್ತಿ. ಅತ್ಯುತ್ತಮ ಕನ್ನಡ ಚಲನಚಿತ್ರಕ್ಕೆ 'ಸ್ವರ್ಣಕಮಲ' ಪ್ರಶಸ್ತಿಯನ್ನು ಅತ್ಯುತ್ತಮ ತಾರಾ ಪ್ರಶಸ್ತಿಯನ್ನೂ ಕನ್ನಡ ಚಲನಚಿತ್ರ ಕಲಾವಿದರಿಗೆ ಸತತವಾಗಿ ಕೇಂದ್ರ ಸರ್ಕಾರವು ನೀಡುತ್ತಾ ಬಂದಿದೆ. ಅನೇಕ ಕನ್ನಡ ಸಿನಿಮಾಗಳು ಹಾಗೂ ನಟ-ನಟಿಯರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಚಲನ ಚಿತ್ರ ಕುರಿತಾಗಿ ಕೆ.ಪುಟ್ಟಸ್ವಾಮಿಯವರು ರಚಿಸಿದ 'ಸಿನಿಮಾ ಯಾನ' ಕೃತಿಗೆ ಕನ್ನಡದಲ್ಲಿ ಮೊದಲ ಬಾರಿಗೆ 'ಸ್ವರ್ಣಕಮಲ' ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿಗಳಲ್ಲದೇ ಚಲನಚಿತ್ರರಂಗದ ವಿವಿಧ ಕ್ಷೇತ್ರಗಳ ಸಾಧನೆಗೆ ಪ್ರಶಸ್ತಿಗಳನ್ನು ನೀಡಲಾಗಿದೆ. ಭಾರತ ಸರ್ಕಾರವು ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ನೀಡುವ ಪರಿಪಾಠವನ್ನು ಆರಂಭಿಸಿತು. ಅಖಿಲ ಭಾರತ ಮಟ್ಟದಲ್ಲಿ ಕನ್ನಡ ಚಲನಚಿತ್ರಗಳು ಮತ್ತು ಚಿತ್ರ ನಿರ್ಮಾಪಕರು ಹಾಗೂ ನಿರ್ದೇಶಕರು ಅಂಥ ಪ್ರಶಸ್ತಿಗಳನ್ನು ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ. ಡಾ.ರಾಜಕುಮಾರ್ ಅವರ ಹೆಸರಿನಲ್ಲಿ ಅಂಚೆ ಇಲಾಖೆಯು ೨೦೦೯ರಲ್ಲಿ ಸ್ಟಾಂಪನ್ನು ಹೊರಡಿಸಿರುವುದು ಕನ್ನಡ ಚಲನಚಿತ್ರರಂಗಕ್ಕೆ ಒಂದು ಪ್ರತಿಷ್ಠಿತ ಐತಿಹಾಸಿಕ ಗೌರವ ದೊರೆತಂತಾಗಿದೆ. ಕರ್ನಾಟಕ ಸರ್ಕಾರವು

೨೦೦೮ರಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿಯನ್ನು ಸ್ಥಾಪಿಸಿದ್ದು, ೨೦೦೮–೨೦೧೧ರವರೆಗೆ ಟಿ.ಎಸ್. ನಾಗಾಭರಣ (೨೦೦೮–೨೦೧೧),ತಾರಾ(೨೦೧೧–೨೦೧೩) ಇದರ ಅಧ್ಯಕ್ಷರಾಗಿದ್ದರು. ಇದೀಗ ಎಸ್.ಕೆ.ರಾಜೇಂದ್ರಸಿಂಗ್ ಬಾಬು ಅಧ್ಯಕ್ಷರಾಗಿದ್ದಾರೆ. ಸರ್ಕಾರದ ಒಬ್ಬ ಅಧಿಕಾರಿಯನ್ನೊಳಗೊಂಡಂತೆ ಒಂಭತ್ತು ಮಂದಿ ಸದಸ್ಯರಿರುತ್ತಾರೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಬೆಳ್ಳಿ ಹೆಜ್ಜೆ ಕಾರ್ಯಕ್ರಮ, ಚಿತ್ರರಂಗದ ಗಣ್ಯರೊಂದಿಗೆ ಸಂವಾದ, ಛಾಯಾಚಿತ್ರ, ಸಾಕ್ಷ್ಯ ಚಿತ್ರ ಪ್ರದರ್ಶನ, ಚಿತ್ರಕಥಾ ರಚನಾ ಕಾರ್ಯಾಗಾರ, ರಸಗ್ರಹಣ ಶಿಬಿರ, ಚಿತ್ರೋತ್ಸವ, ಬೆಳ್ಳಿ ಮಂಡಲ, ಬೆಳ್ಳಿಸಾಕ್ಷಿ ಘಟಕಗಳ ಪ್ರಾರಂಭ, ಗ್ರಂಥ ಪ್ರಕಟಣೆ ಮುಂತಾದವುಗಳನ್ನು ನಡೆಸಿಕೊಂಡು ಬರುತ್ತಿದೆ.

## ರಾಷ್ಟ್ರ ಮಟ್ಟದ ಕೆಲವು ಸಾಹಿತ್ಯಕ ಪ್ರಶಸ್ತಿಗಳನ್ನು ಗಳಿಸಿರುವ ಕನ್ನಡಿಗರು

### ಜ್ಞಾನಪೀಠ ಪ್ರಶಸ್ತಿ

ಭಾರತ ಸಂವಿಧಾನದ ಎಂಟನೇ ಶೆಡ್ಯೂಲ್ ನಲ್ಲಿರುವ ಯಾವುದೇ ಭಾರತೀಯ ಭಾಷೆಗಳಲ್ಲಿ ಯಾವುದೇ ಭಾರತೀಯ ನಾಗರಿಕರು ಬರೆದ ಅತ್ಯುತ್ತಮ ಸೃಜನಾತ್ಮಕ ಕೃತಿಗಳಿಗೆ ಜ್ಞಾನಪೀಠ ಪ್ರಶಸ್ತಿ ನೀಡಲಾಗುವುದು. ಶ್ರೀಮತಿ ರಮಾ ಜೈನ್ ಎಂಬುವವರಿಂದ ೧೯೬೫ರಲ್ಲಿ ಸೃಜಿಸಲ್ಪಟ್ಟಿತು. ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ ಇದಾಗಿದ್ದು ' ಏಳು ಲಕ್ಷ ನಗದು, ಪ್ರಶಸ್ತಿ ಫಲಕ, ಪುತ್ಥಳಿಯನ್ನೊಳಗೊಂಡಿರುತ್ತವೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ೨೦೧೬ರವರೆಗೆ ಒಟ್ಟು ಎಂಟು ಮಂದಿಗೆ ಈ ಪ್ರಶಸ್ತಿ ಲಭಿಸಿದೆ.

### ೧) ಕುವೆಂಪು

ಕನ್ನಡ ನವೋದಯ ಕಾಲದ ಹರಿಕಾರರಲ್ಲಿ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಒಬ್ಬರು. ಕುವೆಂಪು ಇವರ ಕಾವ್ಯನಾಮ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅಪೂರ್ವ ಸಾಧನೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಸೇವೆ ಸಲ್ಲಿಸಿದ ಇವರು ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಜಾರಿಗೊಳ್ಳಲು ಶ್ರಮಿಸಿದರು.

ವೈಚಾರಿಕ ಪ್ರಜ್ಞೆ, ಸಾಮೂಹಿಕ ಕಳಕಳ, ನಿಸರ್ಗಪ್ರೇಮ ಇವು ಕುವೆಂಪು ಸಾಹಿತ್ಯದಲ್ಲಿ ಕಂಡುಬರುವ ಜೀವಂತ ಧೋರಣೆಗಳು. ಭಾವಗೀತೆ, ಪ್ರಬಂಧ, ವಿಮರ್ಶೆ, ನಾಟಕ, ಆತ್ಮಚರಿತ್ರೆ, ಜೀವನಚರಿತ್ರೆ – ಈ ಕ್ಷೇತ್ರಗಳಲ್ಲಿ ಕುವೆಂಪು ಸಾಧನೆ ಅಪೂರ್ವವಾದುದು. ನವಿಲು, ಕಲಾಸುಂದರಿ, ಪಕ್ಷಿಕಾಶಿ, ಅನಿಕೇತನ, ಕೋಗಿಲೆ ಮತ್ತು ಸೋವಿಯಟ್ ರಶಿಯಾ (ಭಾವಗೀತೆಗಳು), ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿಗಳು), ಮಲೆನಾಡಿನ ಚಿತ್ರಗಳು (ಪ್ರಬಂಧ. ವಿಭೂತಿಪೂಜೆ, ರಸೋ ವೈ ಸಃ, ಕಾವ್ಯ ವಿಹಾರ (ವಿಮರ್ಶೆ), ಶೂದ್ರ ತಪಸ್ವಿ, ಜಲಗಾರ, ಯಮನಸೋಲು, ಬೆರಳ್‌ಗೆ ಕೊರಳ್, ರಕ್ತಾಕ್ಷಿ (ನಾಟಕಗಳು), ನೆನಪಿನ ದೋಣಿಯಲ್ಲಿ (ಆತ್ಮಚರಿತ್ರೆ), ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ (ಜೀವನ ಚರಿತ್ರೆ) – ಮೊದಲಾದವು ಇವರ ಪ್ರಸಿದ್ಧ ಕೃತಿಗಳು. ಶ್ರೀಯುತರ 'ಮಹಾಛಂದಸ್ಸಿನ ಶ್ರೀ ರಾಮಾಯಣ ದರ್ಶನಂ' ಆಧುನಿಕ ಕಾಲದ ಕನ್ನಡದ ಮೊತ್ತ ಮೊದಲ ಮಹಾಕಾವ್ಯ. ಕನ್ನಡವು ಪಡೆದ ಮೊದಲ 'ಜ್ಞಾನಪೀಠ ಪ್ರಶಸ್ತಿ' ಪುರಸ್ಕಾರಕ್ಕೆ ಇದು ಪಾತ್ರವಾಗಿದೆ. ಋಷಿಕವಿ ಎಂದು ಕರೆಸಿಕೊಳ್ಳುವ ಕುವೆಂಪು ಅವರ ಸಾಹಿತ್ಯಿಕ, ಸಾಂಸ್ಕೃತಿಕ ಕೊಡುಗೆಗಳನ್ನು ಗಮನಿಸಿ ಕೇಂದ್ರ ಸರ್ಕಾರವು 'ರಾಷ್ಟ್ರಕವಿ', 'ಪದ್ಮಭೂಷಣ' ಎಂಬ ಗೌರವಗಳನ್ನಿತ್ತು ಗೌರವಿಸಿದೆ. ಕರ್ನಾಟಕ ಸರ್ಕಾರವು ೧೯೯೨ರಲ್ಲಿ 'ಕರ್ನಾಟಕ ರತ್ನ' ಗೌರವವನ್ನು ನೀಡಿದೆ.

### ೨) ದ.ರಾ.ಬೇಂದ್ರೆ

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಧಾರವಾಡದಲ್ಲಿ ಹುಟ್ಟಿ, ಕನ್ನಡ ಕಾವ್ಯ ಪರಂಪರೆಗೆ ಜಾನಪದದ ಗೇಯ ಗುಣವನ್ನು, ಮಣ್ಣಿನ ಸತ್ವವನ್ನು ತಂದು ರೂಪಿಸಿ, ಬೆಳೆಸಿದ ಮಹತ್ವದ ಕವಿಗಳಲ್ಲಿ ಒಬ್ಬರು. 'ಅಂಬಿಕಾತನಯದತ್ತ' ಕಾವ್ಯನಾಮದಿಂದ ಪ್ರಸಿದ್ಧರಾದವರು. ಕೃಷ್ಣಕುಮಾರಿ, ಗರಿ, ಸಖೀಗೀತ, ಉಯ್ಯಾಲೆ ಮೊದಲಾದ ಕವನ ಸಂಕಲಗಳು; ಜಾತ್ರೆ, ಸಾಯೋ ಆಟ, ಉದ್ಧಾರ ಮೊದಲಾದ ನಾಟಕಗಳು; ಕಾವ್ಯೋದ್ಯೋಗ, ಸಾಹಿತ್ಯದ ವಿರಾಟ್ ಸ್ವರೂಪ ಮುಂತಾದ ವಿಮರ್ಶನ ಕೃತಿಗಳು; ಮಾತೆಲ್ಲ ಜ್ಯೋತಿ, ಮತಧರ್ಮ ಮತ್ತು ಆಧುನಿಕ ಮಾನವ ಎಂಬ ಮುದ್ರಿತ ಭಾಷಣಗಳಿಂದ ಬೇಂದ್ರೆಯವರು ಪ್ರಸಿದ್ಧರಾಗಿದ್ದಾರೆ. ೧೯೭೪ರಲ್ಲಿ ಬೇಂದ್ರೆಯವರ 'ನಾಕುತಂತಿ' ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಭಾರತ ಸರ್ಕಾರವು ನೀಡುವ 'ಪದ್ಮಶ್ರೀ' ಗೌರವಕ್ಕೆ ಇವರು ಭಾಜನರಾಗಿದ್ದಾರೆ.

### ೩) ಶಿವರಾಮ ಕಾರಂತ

ಹೊಸಗನ್ನಡ ಸಾಹಿತ್ಯ ನಿರ್ಮಾಣದಲ್ಲಿ ಅನ್ಯಾದೃಶ ಕೊಡುಗೆ ನೀಡಿದ ಕೋಟ ಶಿವರಾಮ ಕಾರಂತರು, ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸಾಧನೆ ಮಾಡಿದ್ದಾರೆ. ಕತೆ, ಕಾದಂಬರಿ, ನಾಟಕ, ವಿಮರ್ಶೆ, ಪ್ರವಾಸ ಸಾಹಿತ್ಯ, ಆತ್ಮಚರಿತ್ರೆ, ಜೀವನಚರಿತ್ರೆ, ಗೀತ ರೂಪಕ, ಪ್ರಬಂಧ, ಗ್ರಂಥ ಸಂಪಾದನೆ, ಪತ್ರಿಕೋದ್ಯಮ, ನಿಘಂಟು ರಚನೆ, ವಿಶ್ವಕೋಶ, ಮಕ್ಕಳ ಸಾಹಿತ್ಯ – ಹೀಗೆ ಯಾರೂ ಕೂಡ ನಿಬ್ಬೆರಗಿನಿಂದ ಗಮನಿಸುವಂತಹ ವೈವಿಧ್ಯಪೂರ್ಣ, ಸತ್ವಪೂರ್ಣ ಸಾಹಿತ್ಯ ರಚಿಸಿದ್ದಾರೆ. 'ಆಡು ಮುಟ್ಟದ ಸೊಪ್ಪಿಲ್ಲ. ಕಾರಂತರು ಕೈ ಹಾಕದ ಕನ್ನಡ ಸಾಹಿತ್ಯ ಪ್ರಕಾರವಿಲ್ಲ' ಎಂಬ ಮೆಚ್ಚು ನುಡಿಗೆ ಪಾತ್ರರಾಗಿದ್ದಾರೆ. ಚೋಮನ ದುಡಿ, ಬೆಟ್ಟದ ಜೀವ, ಅಳಿದ ಮೇಲೆ, ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು ಮೊದಲಾದ ಕಾದಂಬರಿಗಳು, ಅಬುವಿನಿಂದ ಬರಾಮಕ್ಕೆ, ಅಪೂರ್ವ ಪಶ್ಚಿಮ ಪ್ರವಾಸ ಕಥನಗಳು, ಹುಚ್ಚು ಮನಸ್ಸಿನ ಹತ್ತು ಮುಖಗಳು ಎಂಬ ಆತ್ಮಚರಿತ್ರೆ, ಕಿಸಾಗೌತಮಿ, ಬುದ್ಧೋದಯ ಎಂಬ ಗೀತನಾಟಕಗಳು, ವಿಜ್ಞಾನ ಪ್ರಪಂಚ, ಬಾಲಪ್ರಪಂಚ ವಿಶ್ವಕೋಶಗಳು – ಇವೇ ಮೊದಲಾದುವು ಕಾರಂತರ ಕೆಲವು ವಿಶಿಷ್ಟ ಕೃತಿಗಳು.

ಇವರ ಸಾಧನೆ, ಸಿದ್ಧಿಗಳನ್ನು ಗಮನಿಸಿ ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾಲಯಗಳು ಗೌರವ 'ಡಿ.ಲಿಟ್' ಪ್ರಶಸ್ತಿ ನೀಡಿ ಗೌರವಿಸಿವೆ. ಕೇಂದ್ರ ಸರಕಾರ 'ಪದ್ಮಭೂಷಣ' ನೀಡಿದೆ. ೧೯೭೭ರಲ್ಲಿ ಇವರ ಮೂಕಜ್ಜಿಯ ಕನಸುಗಳು ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. 'ಯಕ್ಷಗಾನ ಬಯಲಾಟ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಸ್ವೀಡನ್ ದೇಶದ ಪ್ರಶಸ್ತಿ

ಲಭಿಸಿವೆ. ಯಕ್ಷಗಾನ, ಗೀತನಾಟಕ ಕ್ಷೇತ್ರಗಳಲ್ಲಿ ಇವರು ನಡೆಸಿದ ಪ್ರಯೋಗಗಳು ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರವಾಗಿವೆ.

### ೪) ಮಾಸ್ತಿ ವೆಂಕಟೇಶ ಅಯ್ಯಂಗಾರ್

'ಶ್ರೀನಿವಾಸ' ಎಂಬುದು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಾವ್ಯನಾಮ. ಕನ್ನಡ ಸಣ್ಣ ಕಥೆಗಳ ಜನಕ ಎಂದೇ ಪ್ರಸಿದ್ಧರಾದವರು. ಇವರು ನವೋದಯ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸ ರೂಪ ಚೈತನ್ಯ ಕೊಡುವಲ್ಲಿ ಇವರ ಕಾಣಿಕೆ ಅಮೋಘ. ಮೈಸೂರು ಸಂಸ್ಥಾನದ ಸಿವಿಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಇವರು ಸರಕಾರದಲ್ಲಿ ವಿವಿಧ ಉನ್ನತ ಹುದ್ದೆಗಳನ್ನು ನಿರ್ವಹಿಸಿದರು.

ಸಣ್ಣಕಥೆ, ನಾಟಕ, ಪ್ರಬಂಧ, ಕಾದಂಬರಿ, ಅನುವಾದ, ವಿಮರ್ಶೆ, ಜೀವನ ಚರಿತ್ರೆ, ಆತ್ಮಚರಿತ್ರೆ – ಈ ಕ್ಷೇತ್ರದಲ್ಲಿ ಇವರ ಸಾಧನೆ ಅಪಾರ. ಚಿಕ್ಕವೀರರಾಜೇಂದ್ರ, ಚೆನ್ನಬಸವನಾಯಕ (ಕಾದಂಬರಿ), ಕಾಕನಕೋಟೆ, ಯಶೋಧರ (ನಾಟಕಗಳು), ಭಾವ (ಆತ್ಮ ಕಥನ), ಸುಬ್ಬಣ್ಣ (ನೀಳ್ಗತೆ), ಆದಿಕವಿ ವಾಲ್ಮೀಕಿ, ಭಾರತತೀರ್ಥ (ವಿಮರ್ಶೆ) — ಈ ಮುಂತಾದ ಇವರ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಚಿರಂತನ ಸ್ಥಾನ ಪಡೆದಿವೆ. 'ಜೀವನ' ಮಾಸಪತ್ರಿಕೆ ಸಾಹಿತ್ಯಿಕ ಪತ್ರಿಕಾ ಲೋಕಕ್ಕೆ ಇವರು ಕೊಟ್ಟ ಕಾಣಿಕೆ. ಶ್ರೀಯುತರಿಗೆ ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿವೆ. ೧೯೮೩ ರಲ್ಲಿ ಇವರ ಸಮಗ್ರ ಸಾಧನೆಗಾಗಿ 'ಜ್ಞಾನಪೀಠ ಪ್ರಶಸ್ತಿ' ಲಭಿಸಿದೆ.

### ೫) ವಿ.ಕೃ.ಗೋಕಾಕ

'ವಿನಾಯಕ' ಎಂದೇ ಪ್ರಸಿದ್ಧರಾಗಿರುವ ವಿನಾಯಕ ಕೃಷ್ಣ ಗೋಕಾಕರು ಕನ್ನಡ ನವ್ಯಕಾವ್ಯದ ಪ್ರವರ್ತಕರಲ್ಲಿ ಪ್ರಮುಖರು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಗೋಕಾಕರು ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳೆರಡರ ಸಂಗಮ. ಕಲೋಪಾಸಕ, ಪಯಣ, ಅಭ್ಯುದಯ, ಉಗಮ, ದ್ಯಾವಾಪೃಥ್ವಿ ಮೊದಲಾದ ಈ ಕವನಸಂಕಲನಗಳು, ಜನನಾಯಕ, ಯುಗಾಂತರ, ಮುನಿದ ಮಾರಿ ಮುಂತಾದ ನಾಟಕಗಳು, ಸಮರಸವೇ ಜೀವನ, ಸಮುದ್ರಯಾನ ಎಂಬ ಕಾದಂಬರಿಗಳು, ನವ್ಯತೆ ಹಾಗೂ ಕಾವ್ಯ ಜೀವನ; ಕಲೆಯ ನೆಲೆ, ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು ಇತ್ಯಾದಿ ವಿಮರ್ಶಾ ಕೃತಿಗಳು ಹಾಗೂ ಸಮುದ್ರದಾಚೆಯಿಂದ ಮತ್ತು ಸಮುದ್ರದೀಚೆಯಿಂದ ಎಂಬ ಪ್ರವಾಸ ಕಥನಗಳಿಂದ ಇವರು ಪ್ರಸಿದ್ಧರಾಗಿದ್ದಾರೆ. ಇವರು ರಚಿಸಿದ ಭಾರತಸಿಂಧುರಶ್ಮಿ ಎಂಬ ಮಹಾಕಾವ್ಯಕ್ಕೆ ೧೯೯೦ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ದ್ಯಾವಾ ಪೃಥವೀ ಕೃತಿಗೆ ಕೇಂದ್ರ ಸಾಹಿತ್ಯ ಪ್ರಶಸ್ತಿಯನ್ನು, '೧೯೬೧ರಲ್ಲಿ ಪದ್ಮಶ್ರೀ ಗೌರವವನ್ನೂ ಇವರು ಪಡೆದುಕೊಂಡರು.

### ೬) ಯು.ಆರ್.ಅನಂತಮೂರ್ತಿ

ತಮ್ಮ ಸಮಗ್ರ ಸಾಹಿತ್ಯ ಸಾಧನೆಗಾಗಿ ೧೯೯೪ರಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡ ಯು.ಆರ್. ಅನಂತಮೂರ್ತಿಯವರು ಖ್ಯಾತ ಕವಿ, ಕಥೆಗಾರ ಹಾಗೂ ಚಿಂತಕರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಹಾಗೂ ಕೊಟ್ಟಾಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿರುವ ಇವರು ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ ಹಾಗೂ ದಿವ್ಯ ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ಎಂದೂ ಮುಗಿಯದ ಕಥೆ, ಪ್ರಶ್ನೆ, ಮೌನಿ ಮುಂತಾದವು ಕಥಾ ಸಂಕಲನಗಳು. ಸನ್ನಿವೇಶ, ಸಮಕ್ಷಮ, ಪೂರ್ವಾಪರ, ಪ್ರಜ್ಞೆ ಮತ್ತು ಪರಿಸರ ಮುಂತಾದವು ಇವರ ಲೇಖನ ಸಂಕಲನಗಳು. ೧೯೯೮ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ಲಭಿಸಿದೆ.

### ೭) ಗಿರೀಶ ಕಾರ್ನಾಡ

ಗಿರೀಶ ಕಾರ್ನಾಡರು ಮಹಾರಾಷ್ಟ್ರದಲ್ಲಿ ಜನಿಸಿ ಧಾರವಾಡದ ಕರ್ನಾಟಕ ಮತ್ತು ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿದರು. ಮದರಾಸಿನ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್‌ನಲ್ಲಿ ಕಾರ್ಯನಿರ್ವಹಿಸಿದರು. ಅನಂತರ ಪುಣೆಯ ಫಿಲಂ ಇನ್ಸ್‌ಸ್ಟಿಟ್ಯೂಟ್‌ನ ನಿರ್ದೇಶಕರಾದರು. ಕರ್ನಾಟಕ ನಾಟಕ ಅಕಾಡೆಮಿ ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿಗಳ ಅಧ್ಯಕ್ಷರಾಗಿದ್ದರು. ಚಿಕಾಗೊ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ೧೯೭೪ರಲ್ಲಿ 'ಪದ್ಮಶ್ರೀ' ೧೯೯೨ರಲ್ಲಿ 'ಪದ್ಮಭೂಷಣ', ೧೯೭೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ೧೯೭೨ರಲ್ಲಿ 'ಹಯವದನ' ನಾಟಕಕ್ಕೆ 'ಕಮಲಾದೇವಿ ಚಟ್ಟೋಪಾಧ್ಯಾಯ' ಪ್ರಶಸ್ತಿ ದೊರೆಯಿತು.

'ತಲೆದಂಡ', 'ನಾಗಮಂಡಲ' ನಾಟಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆಕಿವೆ. ೧೯೯೮ರಲ್ಲಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆಯಿತು. ಗಿರೀಶ ಕಾರ್ನಡ ಅವರ 'ತುಘಲಕ್' ಮತ್ತು 'ಹಯವದನ' ನಾಟಕಗಳು ತುಂಬ ಪ್ರಸಿದ್ಧವಾಗಿವೆ. ಎಲ್ಲಾ ಭಾರತೀಯ ಭಾಷೆಗಳಿಗೆ ಮತ್ತು ಪ್ರಪಂಚದ ಪ್ರಮುಖ ಭಾಷೆಗಳಿಗೆ ಅನುವಾದಗೊಂಡಿವೆ. ಯಯಾತಿ, ಹಿಟ್ಟಿನ ಹುಂಜ, ಅಂಜುಮಲ್ಲಿಗೆ, ಮಾನಿಷಾದ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ ಎಂಬ ನಾಟಕಗಳನ್ನು ರಚಿಸಿದ್ದಾರೆ. 'ಆಡಾಡತಾ ಆಯುಷ್ಯ' ಇವರ ಆತ್ಮಕಥೆ. ನಟ ಹಾಗೂ ನಿರ್ದೇಶಕರಾಗಿಯೂ ಇವರು ಚಲನಚಿತ್ರ ಕ್ಷೇತ್ರದಲ್ಲಿ ಶ್ರಮಿಸಿದ್ದಾರೆ.

### ೮) ಚಂದ್ರಶೇಖರ ಕಂಬಾರ

ಚಂದ್ರಶೇಖರ ಕಂಬಾರರು ಬೆಳಗಾವಿ ಜಿಲ್ಲೆಯ ಘೋಡಗೇರಿಯವರು. ಕವಿಯಾಗಿ, ನಾಟಕಕಾರರಾಗಿ — ಮತ್ತು ವಿಮರ್ಶಕರಾಗಿ ಹೊಸ ಪೀಳಿಗೆಯ ಬರಹಗಾರರಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಬೇಂದ್ರೆಯವರ ನಂತರ ಕನ್ನಡ ಕಾವ್ಯ ಹಾಗೂ ನಾಟಕಗಳಿಗೆ ಜಾನಪದ ಸೊಗಡನ್ನು ತುಂಬಿ ಹೊಸತನವನ್ನು ತಂದುಕೊಟ್ಟವರಲ್ಲಿ ಪ್ರಮುಖರು.

'ಮುಗುಳು', 'ಹೇಳತೇನ ಕೇಳ', 'ಸಾವಿರ ನೆರಳು', 'ಬೆಳ್ಳಿಮೀನು', 'ತಕರಾರಿನವರು' ಇವು ಶ್ರೀಕಂಬಾರರ ಕೆಲವು ಕವನ ಸಂಕಲನಗಳು. 'ಜೋಕುಮಾರಸ್ವಾಮಿ', 'ಋಷ್ಯಶೃಂಗ', 'ಸಿರಿಸಂಪಿಗೆ' ಇವರ ಮುಖ್ಯ ನಾಟಕಗಳು. 'ಕರಿಮಾಯಿ', 'ಸಿಂಗಾರೆವ್ವ ಮತ್ತು ಅರಮನೆ' ಇವು ಕಾದಂಬರಿಗಳು. 'ಕೇಂದ್ರ ಸಾಹಿತ್ಯ ಅಕಾಡೆಮಿ', ಮತ್ತು 'ಕಮಲಾದೇವಿ ಚಟ್ಟೋಪಾಧ್ಯಾಯ' ಪ್ರಶಸ್ತಿ ಇವೇ ಮೊದಲಾದ ಅನೇಕ ಗೌರವಗಳಿಗೆ ಭಾಜನರಾಗಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಥಮ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ೨೦೧೨ರಲ್ಲಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

### ಸರಸ್ವತೀ ಸಮ್ಮಾನ್

#### ೧) ಎಸ್.ಎಲ್.ಭೈರಪ್ಪ

ಅತ್ಯಂತ ಜನಪ್ರಿಯ ಭಾರತೀಯ ಕಾದಂಬರಿಕಾರರು ಎಂಬ ಕೀರ್ತಿಗೆ ನಿಸ್ಸಂದೇಹವಾಗಿ ಭಾಜನರಾಗಿರುವವರು ಎಸ್.ಎಲ್.ಭೈರಪ್ಪನವರು. ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇವರ ಕೃತಿಗಳಲ್ಲಿ ದಟ್ಟವಾದ ಜೀವನಾನುಭವವನ್ನು ಕಾಣಬಹುದು. ಧರ್ಮಶ್ರೀ, ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮತದಾನ, ನಾಯಿನೆರಳು, ಪರ್ವ, ಆವರಣ ಮುಂತಾದ ಕಾದಂಬರಿಗಳಿಂದಾಗಿ ಇವರು ಪ್ರಸಿದ್ಧರು. ಇವರ ಕೃತಿಗಳು ಮರಾಠಿ, ಗುಜರಾತಿ, ಸಂಸ್ಕೃತ ಮುಂತಾದ ಭಾರತೀಯ ಭಾಷೆಗಳಲ್ಲದೆ ಇಂಗ್ಲಿಷ್‌ಗೂ ಅನುವಾದಗೊಂಡು ಜನಪ್ರಿಯವಾಗಿವೆ. ೨೦೧೧ರಲ್ಲಿ ತಮ್ಮ 'ಮಂದ್ರ' ಕೃತಿಗಾಗಿ ಸರಸ್ವತೀ ಸಮ್ಮಾನ್ ಪ್ರಶಸ್ತಿಯನ್ನು ಪಡೆಯುವ ಮೂಲಕ ಭೈರಪ್ಪನವರು ಆ ಪ್ರಶಸ್ತಿಗೆ ಭಾಜನರಾದ ಮೊದಲ ಕನ್ನಡಿಗರೆನಿಸಿದ್ದಾರೆ. ೨೦೧೬ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿ ಸಂದಿದೆ.

#### ೨) ಎಂ.ವೀರಪ್ಪ ಮೊಯ್ಲಿ

ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿ ಹಾಗೂ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಸೇವೆಸಲ್ಲಿಸಿರುವ ವೀರಪ್ಪ ಮೊಯ್ಲಿಯವರು ಸಾಹಿತಿಯಾಗಿಯೂ ಪ್ರಸಿದ್ಧರಾಗಿದ್ದಾರೆ. ತೆಂಬೆರೆ, ಕೊಟ್ಟ, ಸುಳಿಗಾಳಿ, ಹಾಗೂ ಸಾಗರದೀಪಗಳು ಇವರು ರಚಿಸಿರುವ ಕಾದಂಬರಿಗಳು, ಮಿಲನ, ಪರಾಜಿತ, ಪ್ರೇಮವೆಂದರೆ ನಾಟಕಗಳು. ಹಾಲು ಜೇನು, ಮತ್ತೆನಡೆಯಲಿ ಸಮರ, ಯಕ್ಷಪ್ರಶ್ನೆ – ಇವು ಕವನ ಸಂಕಲನಗಳು. ಇವರ ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯಕ್ಕೆ ೨೦೦೭ರಲ್ಲಿ ಮೂರ್ತಿದೇವಿ ಪ್ರಶಸ್ತಿ ಹಾಗೂ ೨೦೧೪ರಲ್ಲಿ ಸರಸ್ವತೀ ಸಮ್ಮಾನ್ ಪ್ರಶಸ್ತಿ ದೊರೆತಿದೆ. ಮೊಯ್ಲಿಯವರು ಈ ಎರಡೂ ಪ್ರಶಸ್ತಿಗಳನ್ನು ಪಡೆದಿರುವ ಎರಡನೆಯ ಕನ್ನಡಿಗ.

### ಮೂರ್ತಿದೇವಿ ಪ್ರಶಸ್ತಿ

ಭಾರತೀಯ ಜ್ಞಾನಪೀಠ ಸಂಸ್ಥೆಯು ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದು ಇದರ ಸ್ಥಾಪನೆಯ ವರ್ಷದಲ್ಲಿಯೇ (೧೯೮೩) ಸಿ.ಕೆ.ನಾಗರಾಜ ರಾವ್‌ರವರು ತಮ್ಮ 'ಪಟ್ಟ ಮಹಾದೇವಿ ಶಾನ್ತಲಾದೇವಿ' ಕೃತಿಗೆ ಈ ಪ್ರಶಸ್ತಿಯನ್ನು ಪಡೆದರು. ನಾಗರಾಜರಾವ್‌ರವರು ಇದನ್ನು ಪಡೆದ ಮೊಟ್ಟಮೊದಲ ಕನ್ನಡಿಗರಾಗಿದ್ದಾರೆ (ಎರಡನೆಯವರು ಎಂ.ವಿ.ವೀರಪ್ಪಮೊಯ್ಲಿ). ಇವುಗಳಲ್ಲದೇ ಪ್ರತಿಭಾವಂತ ಕನ್ನಡಿಗರು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಗಳಿಗಾಗಿ ಕಾಳಿದಾಸ ಸಮ್ಮಾನ್, ತಾನಸೇನ್ ಸಮ್ಮಾನ್, ಕಬೀರ ಸಮ್ಮಾನ್, ದಾದಾಸಾಹೇಬ್ ಫಾಲ್ಕೆ, ಬಿಲ್ವಾರ, ರಾಜಾಜಿ, ಕುಮಾರನ್ ಆಶನ್, ಶಂಕರದೇವ, ಗೋದಾವರಿ, ಸುರಸಿಂಗಾರ್, ಮ್ಯಾಗ್ಸೆಸೆ, ರೈಟ್ ಲೈವ್‌ಲಿಹುಡ್, ಸರಸ್ವತಿ ಸಮ್ಮಾನ್ ಮೊದಲಾದ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. ಡಾ.ಗೀತಾ ನಾಗಭೂಷಣ ರವರಿಗೆ ಕೊಲ್ಕೊತ್ತಾದ ಭಾರತೀಯ ಭಾಷಾ ಪರಿಷತ್‌ನಿಂದ ೨೦೧೧–೧೨ನೇ ಸಾಲಿನ 'ರಚನಾ' ಸಮಗ್ರ ಸಾಹಿತ್ಯ ಪುರಸ್ಕಾರ ದೊರೆತಿದ್ದು, ರೂ. ಒಂದು ಲಕ್ಷ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಇವರು ಈ ಪ್ರಶಸ್ತಿ ಪಡೆದ ಕನ್ನಡದ ಪ್ರಥಮ ಮಹಿಳೆಯಾಗಿದ್ದಾರೆ.

### ಕರ್ನಾಟಕ ಸರ್ಕಾರವು ನೀಡುವ ಪ್ರಶಸ್ತಿಗಳು

#### ಕರ್ನಾಟಕ ರತ್ನ ಪ್ರಶಸ್ತಿ:

ಕರ್ನಾಟಕ ಸರ್ಕಾರವು ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಧೀಮಂತ ಸಾಧನೆಗೈದವರಿಗೆ ನೀಡುವ ಅತ್ಯುನ್ನತ ಪ್ರಶಸ್ತಿಯಾಗಿದೆ. ೧೯೯೨ರಲ್ಲಿ ಇದನ್ನು ಸ್ಥಾಪಿಸಲಾಯಿತು. ಈ ಪ್ರಶಸ್ತಿಯು ೫೦ ಗ್ರಾಂ ಚಿನ್ನದ ಪದಕ, ಪ್ರಶಸ್ತಿ, ಪುತ್ಥಳಿ, ಫಲಕವನ್ನೊಳಗೊಂಡಿರುತ್ತದೆ. ಈ ಕೆಳಕಂಡ ಮಹನೀಯರು ಈ ಪ್ರಶಸ್ತಿ ಪಡೆದಿದ್ದಾರೆ. ಕೆ.ವಿ. ಪುಟ್ಟಪ್ಪ ಮತ್ತು ಡಾ. ರಾಜಕುಮಾರ್ (೧೯೯೨); ಎಸ್.ನಿಜಲಿಂಗಪ್ಪ (೧೯೯೯), ಪ್ರೊ.ಸಿ.ಎನ್.ಆರ್.ರಾವ್ (೨೦೦೦), ಪಂಡಿತ ಭೀಮಸೇನ ಜೋಶಿ (೨೦೦೪), ಡಾ.ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ (೨೦೦೭), ಡಾ.ದೇ. ಜವರೇಗೌಡ (೨೦೦೮), ಡಾ.ವೀರೇಂದ್ರ ಹೆಗ್ಗಡೆ (೨೦೦೯).

#### ಬಸವ ಪುರಸ್ಕಾರ:

ರಾಜ್ಯ ಸರ್ಕಾರ ಬಸವ ಜಯಂತಿ ಅಂಗವಾಗಿ ೨೦೦೦ರಲ್ಲಿ ಸ್ಥಾಪಿಸಲಾದ ಈ ಪ್ರಶಸ್ತಿಯನ್ನು ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ನೀಡುತ್ತಾ ಬಂದಿದೆ. 'ಬಸವ ಪುರಸ್ಕಾರ' ಹೆಸರಿನ ಈ ರಾಷ್ಟ್ರೀಯ ಪುರಸ್ಕಾರವು ರೂ. ೧.೫೦ ಲಕ್ಷ ಒಳಗೊಂಡಿದೆ. ಈಗ ೧೦ ಲಕ್ಷಕ್ಕೆ ಏರಿಸಲಾಗಿದೆ. ಇದುವರೆಗೂ ಈ ಪುರಸ್ಕಾರವನ್ನು ಕೆಳಕಂಡವರಿಗೆ ನೀಡಲಾಗಿದೆ. ಸರಸ್ವತಿ ಗೋರಾ (೨೦೦೦), ಎಚ್. ನರಸಿಂಹಯ್ಯ (೨೦೦೧), ಪುಟ್ಟರಾಜ ಗವಾಯಿ (೨೦೦೨), ಎಸ್.ಜಿ.ಸುಶೀಲಮ್ಮ (೨೦೦೪), ಎಲ್. ಬಸವರಾಜು (೨೦೦೫), ಡಾ. ಎ.ಪಿ.ಜೆ.ಅಬ್ದುಲ್ ಕಲಾಂ (೨೦೦೬) ಹಾಗೂ ಶಿವಕುಮಾರಸ್ವಾಮಿ (೨೦೦೭) ಮಹಾಂತಪ್ಪ ಚಿತ್ತರಗಿ (೨೦೦೮), ತೋಂಟದ ಸಿದ್ಧಲಿಂಗಸ್ವಾಮೀಜಿ (೨೦೦೯), ದೇಜಗೌ (೨೦೧೦), ರಂಜಾನ್ ದರ್ಗಾ (೨೦೧೧), ಯು.ಆರ್. ಅನಂತಮೂರ್ತಿ (೨೦೧೨), ಎಂ.ಎಂ.ಕಲಬುರ್ಗಿ (೨೦೧೩), ವೀರಭದ್ರ ಚೆನ್ನಮಲ್ಲ ಸ್ವಾಮೀಜಿ (೨೦೧೪), ಗೊ.ರು.ಚೆನ್ನಬಸಪ್ಪ (೨೦೧೫) ಪಡೆದಿದ್ದಾರೆ.

#### ಕನಕಶ್ರೀ ಪ್ರಶಸ್ತಿ:

ಶ್ರೀ ಕನಕದಾಸರ ನೆನಪಿನಲ್ಲಿ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಕನಕದಾಸರ ಜೀವನ, ಸಾಹಿತ್ಯ, ಸಂದೇಶ, ಸಮಾಜಕ್ಕೆ ಅವರು ಸಲ್ಲಿಸಿದ ಅನನ್ಯ ಸೇವೆಗಾಗಿ ಲೇಖಕರು ವಿದ್ವಾಂಸರು ಹಾಗೂ ಸಂಶೋಧಕರಿಗೆ ಕನಕ ಜಯಂತಿ ಸಂದರ್ಭದಲ್ಲಿ ನೀಡಿ ಗೌರವಿಸಲಾಗುತ್ತದೆ. ೨೦೦೮ರಲ್ಲಿ ಪ್ರಾರಂಭಿಸಲಾದ ಈ ಪ್ರಶಸ್ತಿಯು ರೂ. ಐದು ಲಕ್ಷ ನಗದು, ಕನಕದಾಸರ ಕಂಚಿನ ಪುತ್ಥಳಿ, ಪ್ರಶಸ್ತಿ ಫಲಕಗಳನ್ನೊಳಗೊಂಡಿದ್ದು ಇದುವರೆಗೂ ಈ ಕೆಳಕಂಡವರು ಪ್ರಶಸ್ತಿ ಪಡೆದಿರುತ್ತಾರೆ. ಪ್ರೊ. ಸುಧಾಕರ (೨೦೦೮), ಡಾ.ಟಿ.ಎನ್.ನಾಗರತ್ನ (೨೦೦೯), ಡಾ. ಹೆಚ್.ಜೆ.ಲಕ್ಕಪ್ಪಗೌಡ

(೨೦೧೦), ಪ್ರೊ. ಜ್ಯೋತಿ ಹೊಸೂರು (೨೦೧೧). ಕಾ.ತಾ. ಚಿಕ್ಕಣ್ಣ (೨೦೧೨), ಕೆ.ಎಚ್.ಕುಲಕರ್ಣಿ (೨೦೧೩), ಎ.ವಿ.ನಾವಡ (೨೦೧೪), ಸ್ವಾಮಿರಾವ್ ಕುಲಕರ್ಣಿ (೨೦೧೫), ಸಿದ್ದಣ್ಣ ಫಕೀರಪ್ಪ ಜಕಬಾಳ (೨೦೧೬).

### ಸಂಯಮ ಪ್ರಶಸ್ತಿ:

ಒಂದು ಲಕ್ಷ ನಗದು ಹಾಗೂ ಸ್ಮರಣಿಕೆಯನ್ನೊಳಗೊಂಡ ಈ ಪ್ರಶಸ್ತಿಯನ್ನು ವಾರ್ತಾ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಮದ್ಯಪಾನ ಸಂಯಮ ಮಂಡಳಿಯು ನೀಡಲು ಪ್ರಾರಂಭಿಸಿದ್ದು ೨೦೧೧ರ ಮೊದಲ ಪ್ರಶಸ್ತಿಯನ್ನು ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರಿಗೆ ನೀಡಲಾಗಿದೆ. ೨೦೧೨ರಲ್ಲಿ ಇಳಕಲ್ಲಿನ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಮಠಾಧೀಶರಾದ ಶ್ರೀ ನಿ.ಪ್ರ.ಮಹಾಂತಸ್ವಾಮಿಗಳಿಗೆ ದೊರಕಿದೆ. ೨೦೧೩ರಲ್ಲಿ ಈ ಪ್ರಶಸ್ತಿಯನ್ನು ಪಡೆದವರು ಉಡುಪಿಯ ವೈದ್ಯ ಪಿ.ವಿ.ಭಂಡಾರಿಯವರು.

### ಪಂಪ ಪ್ರಶಸ್ತಿ

ಭಾರತಕ್ಕೆ ಸ್ವಾತಂತ್ರ್ಯ ಬಂದು ನಲವತ್ತು ವರ್ಷಗಳು ಸಂದ ಸಂದರ್ಭದಲ್ಲಿ ಪ್ರತಿ ವರ್ಷವೂ ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಯೊಂದಕ್ಕೆ ಪ್ರಶಸ್ತಿ ನೀಡಲು ಕರ್ನಾಟಕ ಸರ್ಕಾರ ನಿರ್ಧರಿಸಿ ೧೯೮೭ನೇ ಸಾಲಿನಿಂದ ಪ್ರಾರಂಭ ಮಾಡಿತು. ಪ್ರಶಸ್ತಿ, ಪುತ್ಥಳಿ, ಪ್ರಶಸ್ತಿ ಪತ್ರ ಹಾಗೂ ' ಒಂದು ಲಕ್ಷ ನಗದು ಬಹುಮಾನವನ್ನೊಳಗೊಂಡಿದ್ದು, ಆದಿಕವಿ ಪಂಪನ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡಮಾಡಿತು. ಪ್ರಶಸ್ತಿ ನೀಡಲು ಅರ್ಹ ಕೃತಿಯನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯನ್ನು ರಚನೆ ಮಾಡಲಾಗುತ್ತದೆ. ಕೆ.ವಿ.ಪುಟ್ಟಪ್ಪ (೧೯೮೭) ತೀ.ನಂ. ಶ್ರೀಕಂಠಯ್ಯ(೧೯೮೮) ಡಾ.ಕೆ. ಶಿವರಾಮ ಕಾರಂತ (೧೯೮೯) ಎಸ್. ಎಸ್. ಭೂಸನೂರಮಠ (೧೯೯೦) ಪು.ತಿ. ನರಸಿಂಹಾಚಾರ್(೧೯೯೧) ಎ.ಎನ್. ಮೂರ್ತಿರಾವ್ (೧೯೯೨) ಎಂ.ಗೋಪಾಲಕೃಷ್ಣ ಅಡಿಗ(೧೯೯೩) ಸೇಡಿಯಾಪು ಕೃಷ್ಣಭಟ್ಟ (೧೯೯೪) ಕೆ.ಎಸ್.ನರಸಿಂಹಸ್ವಾಮಿ (೧೯೯೫) ಎಂ.ಎಂ. ಕಲಬುರ್ಗಿ (೧೯೯೬) ಜಿ.ಎಸ್. ಶಿವರುದ್ರಪ್ಪ(೧೯೯೭) ದೇ. ಜವರೇಗೌಡ(೧೯೯೮) ಎಂ. ಚೆನ್ನವೀರಕಣವಿ (೧೯೯೯) ಎಲ್.ಬಸವರಾಜು (೨೦೦೦) ಕೆ.ಪಿ.ಪೂರ್ಣಚಂದ್ರ ತೇಜಸ್ವಿ (೨೦೦೧) ಎಂ. ಚಿದಾನಂದಮೂರ್ತಿ (೨೦೦೨) ಚಂದ್ರಶೇಖರ ಕಂಬಾರ(೨೦೦೩) ಎಚ್.ಎಲ್.ನಾಗೇಗೌಡ (೨೦೦೪) ಎಸ್. ಎಲ್.ಭೈರಪ್ಪ (೨೦೦೫) ಜಿ.ಎಸ್. ಅಮೂರ (೨೦೦೬) ಯಶವಂತ ಚಿತ್ತಾಲ (೨೦೦೭) ಮತ್ತು ಟಿ.ವಿ. ವೆಂಕಟಾಚಲಶಾಸ್ತ್ರಿ (೨೦೦೮) ಚಂದ್ರಶೇಖರ ಪಾಟೀಲ (೨೦೦೯), ಜಿ.ಎಚ್.ನಾಯಕ (೨೦೧೦), ಬರಗೂರು ರಾಮಚಂದ್ರಪ್ಪ (೨೦೧೧), ಡಿ.ಎನ್.ಶಂಕರಭಟ್ (೨೦೧೨), ಕಯ್ಯಾರ ಕಿಞ್ಞಣ್ಣ ರೈ (೨೦೧೩), ಜಿ.ವೆಂಕಟಸುಬ್ಬಯ್ಯ (೨೦೧೪), ಬಿ.ಎ. ಸನದಿ (೨೦೧೫) ಇದುವರೆಗೂ ಪ್ರಶಸ್ತಿ ಪಡೆದ ಗೌರವಾನ್ವಿತರು.

### ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ

ಜೈನಗ್ರಂಥದ ಸಹಸ್ರ ಪುಸ್ತಕಗಳನ್ನು ಬರೆಯಿಸಿ ಧರ್ಮ ಹಾಗೂ ಸಾಹಿತ್ಯ ಪ್ರಚಾರಗೈದ ಅತ್ತಿಮಬ್ಬೆಗೆ ದಾನ ಚಿಂತಾಮಣಿ ಎಂಬ ಬಿರುದಿದೆ. ಇವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಹಿಳಾ ಸಾಹಿತಿಗಳಿಗೆ ಜೀವಮಾನದ ಸಾಧನೆಯನ್ನು ಪರಿಗಣಿಸಿ ೧೯೯೫ರಿಂದ ಈ ಪ್ರಶಸ್ತಿ ನೀಡುತ್ತಾ ಬಂದಿದೆ. ಪ್ರಶಸ್ತಿ, ಪುತ್ಥಳಿ, ಫಲಕ ಹಾಗೂ ' ಒಂದು ಲಕ್ಷ ನಗದು ಒಳಗೊಂಡಿದೆ. ೨೦೦೮ನೇ ಸಾಲಿನಿಂದ ಈ ಮೊತ್ತವನ್ನು ' ಮೂರು ಲಕ್ಷಗಳಿಗೇರಿಸಲಾಗಿದೆ. ಇದುವರೆಗೂ ಕೆಳಕಂಡವರು ಪ್ರಶಸ್ತಿ ಪಡೆದಿರುತ್ತಾರೆ. ಟಿ.ಸುನಂದಮ್ಮ (೧೯೯೫), ಶಾಂತಾದೇವಿ ಮಾಳವಾಡ(೧೯೯೬), ವೈದೇಹಿ (೧೯೯೭), ಕಮಲಾ ಹಂಪನಾ (೧೯೯೮), ಮಲ್ಲಿಕಾ (೧೯೯೯), ಜಯಲಕ್ಷ್ಮಿ ಶ್ರೀನಿವಾಸನ್ (೨೦೦೦), ಸಾರಾ ಅಬೂಬಕ್ಕರ್ (೨೦೦೧), ಗೀತಾ ನಾಗಭೂಷಣ (೨೦೦೨), ಶೈಲಜಾ ಉಡುಚಣ (೨೦೦೩), ಎಮ್.ಸುನೀತಶೆಟ್ಟಿ (೨೦೦೪), ವೀಣಾ ಶಾಂತೇಶ್ವರ (೨೦೦೫), ಬಿ.ಟಿ.ಲಲಿತಾ ನಾಯಕ್ (೨೦೦೬), ಶಶಿಕಲಾ ವೀರಯ್ಯ ಸ್ವಾಮಿ (೨೦೦೭), ಡಾ. ವಿಜಯಾದಬ್ಬೆ (೨೦೦೮). ಶಾಂತಾದೇವಿ ಕಣವಿ (೨೦೦೯), ಸುಧಾಮೂರ್ತಿ(೨೦೧೦) ಸರಸ್ವತಿ ಚಿಮ್ಮಲಗಿ (೨೦೧೧), ಬಿ.ಎನ್.ಸುಮಿತ್ರಾಬಾಯಿ (೨೦೧೨), ಎಂ.ಸರಸ್ವತಿಗೌಡ (೨೦೧೩), ಎಚ್.ಎಸ್.ಶ್ರೀಮತಿ (೨೦೧೪), ನೇಮಿಚಂದ್ರ (೨೦೧೫).

### ಜಾನಪದಶ್ರೀ ಪ್ರಶಸ್ತಿ

ಜಾನಪದ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಕಲಾವಿದರಿಗೆ ಈ ಉನ್ನತ ಪ್ರಶಸ್ತಿಯನ್ನು ೧೯೯೪ರಿಂದ ನೀಡಿ ಗೌರವಿಸಲಾಗುತ್ತಿದೆ. ಒಂದು ಲಕ್ಷ ರೂಪಾಯಿಗಳುಳ್ಳ ಈ ಪ್ರಶಸ್ತಿಯನ್ನು ಇದುವರೆಗೂ ಕೆಳಕಂಡ ಕಲಾವಿದರು ಪಡೆದಿದ್ದಾರೆ. ಎಸ್.ಕೆ.ಕರೀಂಖಾನ್ (೧೯೯೪), ಕಂಸಾಳೆ ಮಹದೇವಯ್ಯ (೧೯೯೫), ಯಡ್ರಾಮನಹಳ್ಳಿ ದೊಡ್ಡ ಭರಮಪ್ಪ (೧೯೯೬), ಫಕೀರವ್ವ ಗುಡಿಸಾಗರ (೧೯೯೭), ಹಿರಿಯಡ್ಕ ಗೋಪಾಲರಾವ್ (೧೯೯೮), ಸುಕ್ರಿ ಬೊಮ್ಮಗೌಡ (೧೯೯೯), ತಕ್ಕಳಿಕೆ ವಿಠಲರಾವ್ (೨೦೦೦), ಹಮ್ಮಿ ಮುದಿಮಲ್ಲಪ್ಪ (೨೦೦೧). ಎಂ.ಆರ್. ಬಸಪ್ಪ (೨೦೦೨), ಚಿಟ್ಟಾಣಿ ರಾಮಚಂದ್ರ ಹೆಗ್ಡೆ (೨೦೦೩). ಚನ್ನಪ್ಪ ವೀರಭದ್ರಪ್ಪ ಕರಡಿ (೨೦೦೪), ಸಿರಿಯಜ್ಜಿ (೨೦೦೫) ಈಶ್ವರಪ್ಪ ಗುರಪ್ಪ ಅಂಗಡಿ (೨೦೦೬), ಬೆಳಗಲ್ಲು ವೀರಣ್ಣ (೨೦೦೭), ಸಿದ್ದಪ್ಪ ಮೇಟಿ(೨೦೦೮). ಪುಟ್ಟಮಲ್ಲೇಗೌಡ (೨೦೦೯), ದರೋಜಿ ಈರಮ್ಮ (೨೦೧೦), ಕಾಶಿಬಾಯಿ ದಾದನಟ್ಟಿ (೨೦೧೧), ಸೋಮಲಿಂಗಪ್ಪ ಫಕೀರಪ್ಪ ದೊಡವಾಡ (೨೦೧೨), ಮುಖವೀಣೆ ಆಂಜನಪ್ಪ (೨೦೧೩), ಕಲ್ಮನೆ ಎಸ್. ನಂಜಪ್ಪ (೨೦೧೪), ಸತ್ತೂರ ಇಮಾಂ ಸಾಬ್ (೨೦೧೫).

### ರಾಷ್ಟ್ರಕವಿ ಪ್ರಶಸ್ತಿ

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸರ್ಕಾರದ ಹಿರಿಯ ಗೌರವಕ್ಕೆ ಪಾತ್ರವಾದ ಕವಿಯನ್ನು 'ರಾಷ್ಟ್ರಕವಿ' ಎಂದು ಕರೆಯುವರು. ಸ್ವಾತಂತ್ರ್ಯಾ ನಂತರ ರಾಜ್ಯ ಸರ್ಕಾರಗಳು ತಮ್ಮ ತಮ್ಮ ರಾಜ್ಯಗಳಲ್ಲಿಯೂ ರಾಷ್ಟ್ರಕವಿಗಳನ್ನು ಆಯ್ಕೆ ಮಾಡಲಾರಂಭಿಸಿದವು. ೧೯೪೯ರಲ್ಲಿ ಮದರಾಸು ರಾಜ್ಯ ಸರ್ಕಾರ ಎಂ.ಗೋವಿಂದ ಪೈ ಅವರಿಗೆ ರಾಷ್ಟ್ರಕವಿ ಪ್ರಶಸ್ತಿ ನೀಡಿತ್ತು. ಆಗ ದಕ್ಷಿಣ ಕನ್ನಡ ಜಿಲ್ಲೆ ಮದರಾಸು ಪ್ರಾಂತಕ್ಕೆ ಸೇರಿತ್ತು. ೧೯೬೪ರಲ್ಲಿ ಕುವೆಂಪು ಅವರಿಗೂ ಮತ್ತು ೨೦೦೬ರಲ್ಲಿ ಕನ್ನಡದ ಪ್ರಸಿದ್ಧ ಕವಿ ಜಿ.ಎಸ್.ಶಿವರುದ್ರಪ್ಪನವರಿಗೆ ಈ ಪ್ರಶಸ್ತಿಯನ್ನು ಕರ್ನಾಟಕ

ಸರ್ಕಾರವು ನೀಡಿದೆ. ಪ್ರಶಸ್ತಿಯೊಂದಿಗೆ ನೀಡಲಾಗುವ ಗೌರವ ಧನದ ಮೊತ್ತ ` ೧೦ ಲಕ್ಷಗಳು.

### ರಾಜ್ಯೋತ್ಸವ ಪ್ರಶಸ್ತಿ

ರಾಜ್ಯದಲ್ಲಿ ವಿವಿಧ ಆಯಾಮಗಳಲ್ಲಿ ಸಾಂಸ್ಕೃತಿಕ ಪ್ರಗತಿ ಮತ್ತು ವಿಕಸನವನ್ನು ಉತ್ತೇಜಿಸಲು ಸರ್ಕಾರ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈದ ವಿದ್ವಾಂಸರು, ಕಲಾವಿದರು, ಸಮಾಜ ಸೇವಕರು, ನ್ಯಾಯವಾದಿಗಳು, ವೈದ್ಯರು ಮತ್ತು ಸಂಘ ಸಂಸ್ಥೆಗಳನ್ನು ಗುರುತಿಸಿ ಪ್ರತಿವರ್ಷವೂ ರಾಜ್ಯೋತ್ಸವ ದಿನದಂದು (ನವೆಂಬರ್ ೧) ರಾಜ್ಯೋತ್ಸವ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುತ್ತಿದೆ.

### ಪ್ರೊ॥ ಕೆ.ಜಿ. ಕುಂದಣಕಾರ ಗಡಿನಾಡ ಸಾಹಿತ್ಯ ಪ್ರಶಸ್ತಿ

ಕರ್ನಾಟಕದ ಗಡಿ ಭಾಗದಲ್ಲಿದ್ದು ಸಾಹಿತ್ಯ ಮತ್ತು ಶಂಶೋಧನೆಯಲ್ಲಿ ಅಪರಿಮಿತವಾದ ಸೇವೆ ಸಲ್ಲಿಸಿದ ವಿದ್ವಾಂಸರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಪ್ರಶಸ್ತಿಯು ಪುತ್ಥಳ, ಫಲಕ, ಶಾಲು, ಹಾರ ಹಾಗೂ ೩ ಲಕ್ಷ ರೂ ನಗದನ್ನು ಹೊಂದಿರುತ್ತದೆ.

### ಸಂಗೊಳ್ಳಿ ರಾಯಣ್ಣ ಪ್ರಶಸ್ತಿ

ಕನ್ನಡ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿಯ ಆವಿಗಾಗಿ ಹೋರಾಡಿದುರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಪ್ರಶಸ್ತಿಯು ಪುತ್ಥಳ, ಫಲಕ, ಶಾಲು, ಹಾರ ಹಾಗೂ ೩ ಲಕ್ಷ ರೂ ನಗದನ್ನು ಹೊಂದಿರುತ್ತದೆ. ಇದುವರೆಗೂ ಕೆಳಕಂಡರು ಪಡೆದಿದ್ದಾರೆ. ಶ್ರೀ ವಾಟಾಳ್ ನಾಗರಾಜ್ (೨೦೧೩), ಶ್ರೀಮತಿ ಬಿ.ಟಿ.ಲಲಿತಾನಾಯಕ್ (೨೦೧೪), ಶ್ರೀ ಜಂಬಣ್ಣ ಅಮರಚಿಂತ (೨೦೧೫).

ಕರ್ನಾಟಕ ಸರ್ಕಾರವು ೨೦೧೬ರಲ್ಲಿ ಒಂದು ಆದೇಶವನ್ನು ಹೊರಡಿಸಿ ಅಹಿಂಸೆ, ಶಾಂತಿ–ಸೌಹಾರ್ದ, ಜನಕಲ್ಯಾಣ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪ್ರತಿಪಾದನೆ ಹಾಗೂ ಅನುಷ್ಠಾನಕ್ಕಾಗಿ ಶ್ರಮಿಸುತ್ತಿರುವ ಸಂಸ್ಥೆ, ವ್ಯಕ್ತಿಗಳಿಗೆ 'ಭಗವಾನ್ ಮಹಾವೀರ ಪ್ರಶಸ್ತಿ'ಯನ್ನು ಮತ್ತು ಶಿವಶರಣೆಯರ ಆಗಮಗಳಿಗೆ ಅನುಗುಣವಾಗಿ ಸೇವೆ ಸಲ್ಲಿಸುತ್ತಿರುವ ಯಾವುದೇ ಕ್ಷೇತ್ರದ ಮಹಿಳಾ ಸಾಧಕರಿಗೆ ಹಾಗೂ ಸಂಸ್ಥೆಗಳಿಗೆ 'ಅಕ್ಕಮಹಾದೇವಿ ಪ್ರಶಸ್ತಿ'ಯನ್ನು ನೀಡಲು ನಿರ್ಧರಿಸಿದೆ. ಇವುಗಳ ಮೊತ್ತ ತಲಾ ೩ ಲಕ್ಷ ರೂಗಳು.

### ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಕೃತಿಗಳು

| ಕ್ರ. ಸಂ | ಲೇಖಕರ ಹೆಸರು | ಕೃತಿಯ ಹೆಸರು | ಪ್ರಶಸ್ತಿ ಪಡೆದ ವರ್ಷ |
|---|---|---|---|
| ೧ | ಕುವೆಂಪು | ಶ್ರೀ ರಾಮಾಯಣ ದರ್ಶನಂ | ೧೯೫೫ |
| ೨ | ರಂ.ಶ್ರೀ.ಮುಗಳಿ | ಕನ್ನಡ ಸಾಹಿತ್ಯ ಚರಿತ್ರೆ | ೧೯೫೬ |
| ೩ | ದ.ರಾ.ಬೇಂದ್ರೆ | ಅರಳು ಮರಳು | ೧೯೫೮ |
| ೪ | ಶಿವರಾಮ ಕಾರಂತ | ಯಕ್ಷಗಾನ ಮತ್ತು ಬಯಲಾಟ | ೧೯೫೯ |
| ೫ | ವಿ.ಕೃ.ಗೋಕಾಕ್ | ದ್ಯಾವಾ–ಪೃಥಿವೀ | ೧೯೬೦ |
| ೬ | ಎ.ಆರ್.ಕೃಷ್ಣಶಾಸ್ತ್ರಿ | ಬಂಕಿಮಚಂದ್ರ | ೧೯೬೧ |
| ೭ | ದೇವುಡು ನರಸಿಂಹಶಾಸ್ತ್ರಿ | ಮಹಾಕ್ಷತ್ರಿಯ | ೧೯೬೨ |
| ೮ | ಬಿ.ಪುಟ್ಟಸ್ವಾಮಯ್ಯ | ಕ್ರಾಂತಿಕಲ್ಯಾಣ | ೧೯೬೪ |
| ೯ | ಎಸ್.ವಿ.ರಂಗಣ್ಣ | ರಂಗಬಿನ್ನಪ | ೧೯೬೫ |
| ೧೦ | ಪು.ತಿ.ನರಸಿಂಹಾಚಾರ್ | ಹಂಸ ದಮಯಂತಿ ಮತ್ತು ಇತರ ರೂಪಕಗಳು | ೧೯೬೬ |
| ೧೧ | ಡಿ.ವಿ.ಗುಂಡಪ್ಪ | ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ | ೧೯೬೭ |
| ೧೨ | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಸಣ್ಣ ಕಥೆಗಳು (ಸಂಪುಟ ೧೨&೧೩) | ೧೯೬೮ |
| ೧೩ | ಎಚ್.ತಿಪ್ಪೇರುದ್ರಸ್ವಾಮಿ | ಕರ್ನಾಟಕ ಸಂಸ್ಕೃತಿ ಸಮೀಕ್ಷೆ | ೧೯೬೯ |
| ೧೪ | ಶಂ.ಬಾ. ಜೋಶಿ | ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಭಾಗ–೧ | ೧೯೭೦ |
| ೧೫ | ಶ್ರೀರಂಗ | ಕಾಳಿದಾಸ | ೧೯೭೧ |
| ೧೬ | ಭೂಸನೂರಮಠ | ಶೂನ್ಯ ಸಂಪಾದನೆಯ ಪರಾಮರ್ಶೆ | ೧೯೭೨ |
| ೧೭ | ವಿ.ಸೀತಾರಾಮಯ್ಯ | ಅರಲು–ಬರಲು | ೧೯೭೩ |

| | | | |
|---|---|---|---|
| ೧೮ | ಎಂ.ಗೋಪಾಲಕೃಷ್ಣ ಅಡಿಗ | ವರ್ಧಮಾನ | ೧೯೭೪ |
| ೧೯ | ಎಸ್.ಎಲ್.ಭೈರಪ್ಪ | ದಾಟು | ೧೯೭೫ |
| ೨೦ | ಎಂ.ಶಿವರಾಂ | ಮನಮಂಥನ | ೧೯೭೬ |
| ೨೧ | ಕೆ.ಎಸ್.ನರಸಿಂಹಸ್ವಾಮಿ | ತೆರೆದ ಬಾಗಿಲು | ೧೯೭೭ |
| ೨೨ | ಬಿ.ಜಿ.ಎಲ್.ಸ್ವಾಮಿ | ಹಸಿರು ಹೊನ್ನು | ೧೯೭೮ |
| ೨೩ | ಎ.ಎನ್.ಮೂರ್ತಿರಾವ್ | ಚಿತ್ರಗಳು–ಪತ್ರಗಳು | ೧೯೭೯ |
| ೨೪ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಅಮೆರಿಕದಲ್ಲಿ ಗೊರೂರು | ೧೯೮೦ |
| ೨೫ | ಚೆನ್ನವೀರ ಕಣವಿ | ಜೀವಧ್ವನಿ | ೧೯೮೧ |
| ೨೬ | ಚದುರಂಗ | ವೈಶಾಖ | ೧೯೮೨ |
| ೨೭ | ಯಶವಂತ ಚಿತ್ತಾಲ | ಕತೆಯಾದಳು ಹುಡುಗಿ | ೧೯೮೩ |
| ೨೮ | ಜಿ.ಎಸ್.ಶಿವರುದ್ರಪ್ಪ | ಕಾವ್ಯಾರ್ಥ ಚಿಂತನ | ೧೯೮೪ |
| ೨೯ | ತ.ರಾ.ಸುಬ್ಬರಾವ್ | ದುರ್ಗಾಸ್ತಮಾನ | ೧೯೮೫ |
| ೩೦ | ವ್ಯಾಸರಾಯ ಬಲ್ಲಾಳ | ಬಂಡಾಯ | ೧೯೮೬ |
| ೩೧ | ಪೂರ್ಣಚಂದ್ರ ತೇಜಸ್ವಿ | ಚಿದಂಬರ ರಹಸ್ಯ | ೧೯೮೭ |
| ೩೨ | ಶಂಕರ ಮೊಕಾಶಿ ಪುಣೇಕರ | ಅವಧೇಶ್ವರಿ | ೧೯೮೮ |
| ೩೩ | ಹಾ.ಮಾ. ನಾಯಕ | ಸಂಪ್ರತಿ | ೧೯೮೯ |
| ೩೪ | ದೇವನೂರು ಮಹಾದೇವ | ಕುಸುಮಬಾಲೆ | ೧೯೯೦ |
| ೩೫ | ಚಂದ್ರಶೇಖರ ಕಂಬಾರ | ಸಿರಿಸಂಪಿಗೆ | ೧೯೯೧ |
| ೩೬ | ಸು.ರಂ.ಎಕ್ಕುಂಡಿ | ಬಕುಲದ ಹೂವುಗಳು | ೧೯೯೨ |
| ೩೭ | ಪಿ.ಲಂಕೇಶ್ | ಕಲ್ಲು ಕರಗುವ ಸಮಯ | ೧೯೯೩ |
| ೩೮ | ಗಿರೀಶ್ ಕರ್ನಾಡ್ | ತಲೆದಂಡ | ೧೯೯೪ |
| ೩೯ | ಕೀರ್ತಿನಾಥ ಕುರ್ತಕೋಟಿ | ಉರಿಯ ನಾಲಗೆ | ೧೯೯೫ |
| ೪೦ | ಜಿ.ಎಸ್.ಆಮೂರ | ಭುವನದ ಭಾಗ್ಯ | ೧೯೯೬ |
| ೪೧ | ಎಂ.ಚಿದಾನಂದ ಮೂರ್ತಿ | ಹೊಸತು ಹೊಸತು | ೧೯೯೭ |
| ೪೨ | ಬಿ.ಸಿ.ರಾಮಚಂದ್ರಶರ್ಮ | ಸಪ್ತಪದಿ | ೧೯೯೮ |
| ೪೩ | ಡಿ.ಆರ್.ನಾಗರಾಜ್ | ಸಾಹಿತ್ಯ ಕಥನ | ೧೯೯೯ |
| ೪೪ | ಶಾಂತಿನಾಥ ದೇಸಾಯಿ | ಓಂ ಣಮೋ | ೨೦೦೦ |
| ೪೫ | ಎಲ್.ಎಸ್.ಶೇಷಗಿರಿ ರಾವ್ | ಇಂಗ್ಲಿಷ್ ಸಾಹಿತ್ಯ ಚರಿತ್ರೆ | ೨೦೦೧ |
| ೪೬ | ಸುಜನಾ | ಯುಗಸಂಧ್ಯಾ | ೨೦೦೨ |
| ೪೭ | ಕೆ.ವಿ.ಸುಬ್ಬಣ್ಣ | ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು | ೨೦೦೩ |
| ೪೮ | ಗೀತಾ ನಾಗಭೂಷಣ | ಬದುಕು | ೨೦೦೪ |
| ೪೯ | ರಾಘವೇಂದ್ರ ಪಾಟೀಲ | ತೇರು | ೨೦೦೫ |
| ೫೦ | ಎಂ.ಎಂ.ಕಲ್ಬುರ್ಗಿ | ಮಾರ್ಗ ೪ | ೨೦೦೬ |
| ೫೧ | ಕುಂ.ವೀರಭದ್ರಪ್ಪ | ಅರಮನೆ | ೨೦೦೭ |
| ೫೨ | ಶ್ರೀನಿವಾಸ ವೈದ್ಯ | ಹಳ್ಳ ಬಂತು ಹಳ್ಳ | ೨೦೦೮ |
| ೫೩ | ವೈದೇಹಿ | ಕ್ರೌಂಚ ಪಕ್ಷಿಗಳು | ೨೦೦೯ |

| | | | |
|---|---|---|---|
| ೫೪ | ರಹಮತ್ ತರೀಕೆರೆ | ಕತ್ತಿಯಂಚಿನ ದಾರಿ | ೨೦೧೦ |
| ೫೫ | ಗೋಪಾಲಕೃಷ್ಣ ಪೈ | ಸ್ವಪ್ನ ಸಾರಸ್ವತ | ೨೦೧೧ |
| ೫೬ | ಎಚ್.ಎಸ್.ಶಿವಪ್ರಕಾಶ್ | ಮಬ್ಬಿನಹಾಗೆ ಕಣಿವೆಯಾಸೆ | ೨೦೧೨ |
| ೫೭ | ಸಿ.ಎನ್.ರಾಮಚಂದ್ರನ್ | ಆಖ್ಯಾನ-ವ್ಯಾಖ್ಯಾನ | ೨೦೧೩ |
| ೫೮ | ಜಿ.ಎಚ್.ನಾಯಕ್ | ಉತ್ತರಾರ್ಧ | ೨೦೧೪ |
| ೫೯ | ಕೆ.ವಿ.ತಿರುಮಲೇಶ್ | ಅಕ್ಷಯಕಾವ್ಯ | ೨೦೧೫ |
| ೬೦ | ಭೋಳುವಾರು ಮಹಮದ್ | ಸ್ವಾತಂತ್ರ್ಯದ ಓಟ | ೨೦೧೬ |

## ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ

| ಕ್ರ. ಸಂ. | ಕನ್ನಡಕ್ಕೆ ಅನುವಾದಗೊಂಡ ಕೃತಿ | ಅನುವಾದಕರ ಹೆಸರು | ಪ್ರಶಸ್ತಿ ನೀಡಿದ ವರ್ಷ | ಮೂಲ ಕೃತಿಯ ಹೆಸರು | ಭಾಷೆ | ಕೃತಿಕಾರ |
|---|---|---|---|---|---|---|
| ೧ | ಕನ್ನಡ ಕಾಳಿದಾಸ ಮಹಾಸಂಪುಟ | ಎಸ್.ವಿ.ಪರಮೇಶ್ವರ ಭಟ್ಟ | ೧೯೯೦ | ಕಾಳಿದಾಸ ಕೃತಿ ಸಂಗ್ರಹ ಕಾವ್ಯ ಮತ್ತು ನಾಟಕ | ಸಂಸ್ಕೃತ ಕಾವ್ಯ | ಕಾಳಿದಾಸ |
| ೨ | ಋತು ವಿಲಾಸ | ಹೆಚ್.ಎಸ್.ವೆಂಕಟೇಶ ಮೂರ್ತಿ | ೧೯೯೧ | ಋತು ಸಂಹಾರಂ | ಸಂಸ್ಕೃತ ಕಾವ್ಯ | ಕಾಳಿದಾಸ |
| ೩ | ವಾಲ್ಮೀಕಿ ರಾಮಾಯಣ ಶಾಪ ಮತ್ತು ವರ | ಸರಸ್ವತಿ ಗಜಾನನ ರಿಸಬೂಡ | ೧೯೯೨ | ವಾಲ್ಮೀಕಿ ರಾಮಾಯಣ ಸಾಪ ಆನಿವರ | ಮರಾಠಿ ಮಹಾಕಾವ್ಯ | ಶ್ರೀಪಾದ್ ರಘುನಾಥ್ |
| ೪ | ಮರಾಠಿ ಸಂಸ್ಕೃತಿ ಕೆಲವು ಸಮಸ್ಯೆಗಳು | ಕೀರ್ತಿನಾಥ ಕುರ್ತಕೋಟಿ | ೧೯೯೩ | ಮರಾಠಿ ಸಂಸ್ಕೃತಿ | ಮರಾಠಿ (ವಿಮರ್ಶೆ) | ಶ್ಯಾಂ.ಬಿ.ಜೋಶಿ |
| ೫ | ಜಯಯೌಧೇಯ | ಪ್ರಧಾನ್ ಗುರುದತ್ತ | ೧೯೯೪ | ಜಯ ಯೌಧೇಯ | ಹಿಂದಿ ಕಾದಂಬರಿ | ರಾಹುಲ್ ಸಾಂಕೃತ್ಯಾಯನ |
| ೬ | ನಿರ್ಮಲ | ತಿಪ್ಪೇಸ್ವಾಮಿ | ೧೯೯೫ | ನಿರ್ಮಲ | ಹಿಂದಿ ಕಾದಂಬರಿ | ಪ್ರೇಂಚಂದ್ |
| ೭ | ಹದಿನೆಂಟನೆಯ ಅಕ್ಷರೇಖೆ | ಶೇಷನಾರಾಯಣ | ೧೯೯೬ | ಪದಿನೆಟ್ಟವಡು ಅಕ್ಷಕ್ಕೋಡು | ತಮಿಳು ಕಾದಂಬರಿ | ಅಶೋಕ ಮಿತ್ರನ್ |
| ೮ | ಕಲ್ಹಣನ ರಾಜ ತರಂಗಿಣಿ ೧, ೨ | ನೇರ್ಪಜೆ ಭೀಮಾಭಟ್ | ೧೯೯೭ | ರಾಜತರಂಗಿಣಿ | ಸಂಸ್ಕೃತ ಕಾವ್ಯ | ಕಲ್ಹಣ |
| ೯ | ಇಂದು ಲೇಖ | ಸಿ.ರಾಘವನ್ | ೧೯೯೮ | ಇಂದು ಲೇಖ | ಮಲಯಾಳಂ ಕಾದಂಬರಿ | ಓ. ಚಂದು-ಮೆನನ್ |
| ೧೦ | ಕೋಸಲ | ವಾಮನ ಡಿ ಬೇಂದ್ರೆ | ೧೯೯೯ | ಕೋಸಲ | ಮರಾಠಿ ಕಾದಂಬರಿ | ಬಾಲಚಂದ್ರ ನೇಮಡೆ |
| ೧೧ | ಬುದ್ಧಚರಿತೆ | ಎಲ್.ಬಸವರಾಜು | ೨೦೦೦ | ಬುದ್ಧ ಚರಿತಂ | ಸಂಸ್ಕೃತ | ಅಶ್ವಘೋಷ ಮಹಾಕಾವ್ಯ |
| ೧೨ | ಆವೆಯ ಮಣ್ಣಿನ ಆಟದ ಬಂಡಿ | ಬನ್ನಂಜೆ ಗೋವಿಂದಾಚಾರ್ಯ | ೨೦೦೧ | ಮೃಚ್ಛಕಟಿಕಂ | ಸಂಸ್ಕೃತ | ಶೂದ್ರಕ |
| ೧೩ | ನದಿ ದ್ವೀಪಗಳು | ವೀಣಾಶಾಂತೇಶ್ವರ | ೨೦೦೨ | ನದಿಕೆ ದ್ವೀಪ್ | ಹಿಂದಿಕಾದಂಬರಿ | ಆಗ್ನೇಯಾ |
| ೧೪ | ವಿಚಿತ್ರ ವರ್ಣ | ಸ್ನೇಹಲತಾ ರೋಹಿಡೇಕರ್ | ೨೦೦೩ | ಬಿಚಿತ್ರಬರ್ಣ | ಬೆಂಗಾಲಿ | ರಬಿಪಟ್ನಾಯಕ್ |
| ೧೫ | ಮಹಾನಾಯಕ್ | ಚಂದ್ರಕಾಂತಎಂ. ಪೋಕಳೆ | ೨೦೦೪ | ಮಹಾನಾಯಕ್ | ಮರಾಠಿ ಕಾದಂಬರಿ | ವಿಶ್ವಾಸ್ ಪಾಟೀಲ್ |

| | | | | | | |
|---|---|---|---|---|---|---|
| ೧೬ | ಹೇಮಂತ ಋತುವಿನ ಸ್ವರಗಳು | ಪಂಚಾಕ್ಷರಿ ಹಿರೇಮಠ್ | ೨೦೦೫ | ಪತ್‌ಜ್‌ಬಾರ್ ಕಿ ಆವಾಜ್. | ಉರ್ದು ಸಣ್ಣ ಕಥೆಗಳು | Qurratulain ಹೈದರ್ |
| ೧೭ | ಕನ್ನಡ ಜ್ಞಾನೇಶ್ವರಿ | ಆರ್.ಎಸ್.ಲೋಕಾಪುರ್ | ೨೦೦೬ | ಜ್ಞಾನೇಶ್ವರಿ | ಮರಾಠಿ ಕಾವ್ಯ | ಜ್ಞಾನೇಶ್ವರ್ |
| ೧೮ | ಕನ್ನಡ ವಕ್ರೋಕ್ತಿ ಜೀವಿತ | ಆರ್.ಲಕ್ಷ್ಮೀನಾರಾಯಣ | ೨೦೦೭ | ವಕ್ರೋಕ್ತಿ ಜೀವಿತ | ಸಂಸ್ಕೃತ | ಕುಂತಕ |
| ೧೯ | ರಸೀದಿ ಟಿಕೇಟು | ಹಸನ್‌ನಯೀಮ್ ಸುರಕೋಡ | ೨೦೦೮ | ರಸೀದಿ ಟಿಕೇಟ್ | ಪಂಜಾಬಿ(ಆತ್ಮ ಚರಿತ್ರೆ) | ಅಮೃತಾ ಪ್ರೀತಂ |
| ೨೦ | ಭೀಷ್ಮಸಹಾನಿಯವರ ಪ್ರಾತಿನಿಧಿಕ ಕಥೆಗಳು | ಡಿ.ಎನ್.ಶ್ರೀನಾಥ್ | ೨೦೦೯ | ಭೀಷ್ಮ ಸಹಾನಿಕೆ ಕಹಾನಿಯಾ | ಹಿಂದಿ ಕಥೆಗಳು | ಭೀಷ್ಮಸಹಾನಿ |
| ೨೧ | ಗೋದಾನ್ | ಎ.ಜಾನಕಿ | ೨೦೧೦ | ಗೋದಾನ್ | ಹಿಂದಿ ಕಾದಂಬರಿ | ಪ್ರೇಂಚಂದ್ |
| ೨೨ | ನಾನು ಅವನಲ್ಲ, ಅವಳು | ತಮಿಳ್ ಸೆಲ್ವಿ | ೨೦೧೧ | ನಾನ್ ಶರವಣನ್ ಇಲ್ಲೈ, ವಿದ್ಯಾ | ತಮಿಳು ಆತ್ಮಕಥೆ | ಲಿವಿಂಗ್ ಸ್ಮೈಲ್ ವಿದ್ಯಾ |
| ೨೩ | ಹಗ್ಗ (ಭಾಗ ೧, ೨, ೩) | ಕೆ.ಕೆ.ನಾಯರ್ ಮತ್ತು ಅಶೋಕ್ ಕುಮಾರ್ | ೨೦೧೨ | ಕಯರ್ | ಮಲೆಯಾಳಂ ಕಾದಂಬರಿ | ತಕಳ ಶಿವಶಂಕರ ಪಿಳ್ಳೈ |
| ೨೪ | ಮಹಾತ್ಮ ಜ್ಯೋತಿರಾವ್ ಫುಲೆ | ಜೆ.ಪಿ.ದೊಡ್ಡಮನಿ | ೨೦೧೩ | ಮಹಾತ್ಮ ಜ್ಯೋತಿರಾವ್ ಫುಲೆ | ಮರಾಠಿ ಜೀವನಚರಿತ್ರೆ | ಧನಂಜಯ ಕೀರ್ |
| ೨೫ | ಮೋಹನದಾಸ್ ಒಂದು ಸತ್ಯಕಥೆ | ಜಿ.ಎನ್.ರಂಗನಾಥರಾವ್ | ೨೦೧೪ | ಮೋಹನ್‌ದಾಸ್ ಎಟ್ರೂ ಸ್ಟೋರಿ | ಇಂಗ್ಲಿಷ್ ಜೀವನಚರಿತೆ | ರಾಜಮೋಹನ್ ಗಾಂಧಿ |
| ೨೬ | ಕೊಚೇರಿ | ನಾ.ದಾಮೋದರ ಶೆಟ್ಟಿ | ೨೦೧೫ | ಕೋಚೇರಿ | ಮಲೆಯಾಳಂ ಕಾದಂಬರಿ | ನಾರಾಯಣನ್ |

**ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಅನುವಾದ ಪ್ರಶಸ್ತಿ ಪಡೆದಿರುವ ಇತರ ಭಾಷೆಗೆ ಅನುವಾದಗೊಂಡ ಕನ್ನಡ ಕೃತಿಗಳು**

| ಕ್ರ. ಸಂ | ಮೂಲಕೃತಿ ಹೆಸರು | ಲೇಖಕರು | ಅನುವಾದ ಗೊಂಡ ವಿವರ | | | ಪ್ರಶಸ್ತಿ ಪಡೆದ ವರ್ಷ |
|---|---|---|---|---|---|---|
| | | | ಹೆಸರು | ಭಾಷೆ | ಲೇಖಕರು | |
| ೧ | ೧೦೮ ವಚನಗಳು | ಬಸವೇಶ್ವರ | ಘಾಮೂದತ್ | ಉರ್ದು | ಹಮೀದ್ ಅಲ್ಮಾಸ್ | ೧೯೮೯ |
| ೨ | ವಂಶವೃಕ್ಷ (ಕಾದಂಬರಿ) | ಎಸ್.ಎಲ್.ಭೈರಪ್ಪ | ವಂಶವೃಕ್ಷ | ಮರಾಠಿ | ಉಮಾ-ವಿರೂಪಾಕ್ಷ ಕುಲಕರ್ಣಿ | ೧೯೮೯ |
| ೩ | ಮರಳಿ ಮಣ್ಣಿಗೆ(ಕಾದಂಬರಿ) | ಕೆ.ಶಿವರಾಮಕಾರಂತ | ಮನ್ನಂ ಮನಿತರಂ | ತಮಿಳು | ಟಿ.ಬಿ.ಸಿದ್ಧಲಿಂಗಯ್ಯ | ೧೯೯೦ |
| ೪ | ಮೃತ್ಯುಂಜಯ (ಕಾದಂಬರಿ) | ನಿರಂಜನ | ಮೃತ್ಯುಂಜಯ್ | ಹಿಂದಿ | ಕಾಂತಿದೇಬ್ | ೧೯೯೨ |
| ೫ | ವೈಶಾಖ (ಕಾದಂಬರಿ) | ಚದುರಂಗ | ಮೌನ ಓಲಮ್ | ತಮಿಳು | ಕೆ.ವೆಂಕಟಾಚಲಂ | ೧೯೯೨ |
| ೬ | ಫಣಿಯಮ್ಮ (ಕಾದಂಬರಿ) | ಎಂ.ಕೆ.ಇಂದಿರಾ | ಫಣಿಯಮ್ಮ | ಇಂಗ್ಲೀಷ್ | ತೇಜಸ್ವಿನಿ ನಿರಂಜನ | ೧೯೯೩ |
| ೭ | ಸಂಸ್ಕಾರ (ಕಾದಂಬರಿ) | ಯು.ಆರ್. ಅನಂತಮೂರ್ತಿ | ಸಂಸ್ಕಾರ್ | ಕೊಂಕಣಿ | ಪ್ರಕಾಶ್ ಜಿ.ತಾಲ | ೧೯೯೪ |
| ೮ | ಹಯವದನ (ನಾಟಕ) | ಗಿರೀಶ್ ಕಾರ್ನಾಡ್ | ಹಯವದನ | ಮಣಿಪುರಿ | ಇ.ದಿನಮಣಿ ಸಿಂಗ್ | ೧೯೯೪ |
| ೯ | ಕ್ಷಿತಿಜ(ಕಾದಂಬರಿ) | ಶಾಂತಿನಾಥ ದೇಸಾಯಿ | ಕ್ಷಿತಿಜ್ | ಹಿಂದಿ | ಬಿ.ಆರ್.ನಾರಾಯಣ್ | ೧೯೯೪ |
| ೧೦ | ತಲೆದಂಡ (ನಾಟಕ) | ಗಿರೀಶ್ ಕಾರ್ನಾಡ್ | ತಲೆದಂಡಮ್ | ತೆಲುಗು | ಭಾರ್ಗವಿ ಪಿ.ರಾವ್ | ೧೯೯೫ |

| | | | | | | |
|---|---|---|---|---|---|---|
| ೧೧ | ಮರಳ ಮಣ್ಣಿಗೆ(ಕಾದಂಬರಿ) | ಕೆ.ಶಿವರಾಮಕಾರಂತ | ಮತೀಚೋಮೊಗ್ | ಕೊಂಕಣಿ | ಯಶವಂತ್ ಪಾಳೇಕಾರ್ | ೧೯೯೭ |
| ೧೨ | ಮರಳ ಮಣ್ಣಿಗೆ (ಕಾದಂಬರಿ) | ಕೆ.ಶಿವರಾಮಕಾರಂತ | ಮಾಟಿಮಂಗಲ್ | ಮರಾಠಿ | ನವೀನ್ ಚೌಧರಿ | ೧೯೯೭ |
| ೧೩ | ಚಂದ್ರಗಿರಿಯ ತೀರದಲ್ಲಿ | ಸಾರಾಅಬೂಬಕ್ಕರ್ | ಚಂದ್ರಗಿರಿ ಅಟ್ರಾಂಗರೈಯಿಲ್ | ತಮಿಳು | ಟಿ.ಎಸ್.ಸದಾಶಿವಮ್ | ೧೯೯೭ |
| ೧೪ | ದುರ್ಗಾಸ್ತಮಾನ (ಕಾದಂಬರಿ) | ತ.ರಾ.ಸು | ದುರ್ಗದ ಪತನ್ | ಪಂಜಾಬಿ | ಲವ್ ಆಲ್ ಜಾಲಿ | ೧೯೯೮ |
| ೧೫ | ತಲೆದಂಡ (ನಾಟಕ) | ಗಿರೀಶ್ ಕಾರ್ನಾಡ್ | ರಕ್ತಕಲ್ಯಾಣ್ | ಬೆಂಗಾಲಿ | ಸಂಖಘೋಶ್ | ೧೯೯೯ |
| ೧೬ | ಭಾರತೀಪುರ (ಕಾದಂಬರಿ) | ಯು.ಆರ್. ಅನಂತಮೂರ್ತಿ | ಭಾರತೀಪುರ | ಇಂಗ್ಲೀಷ್ | ಪಿ.ಶ್ರೀನಿವಾಸ್ ರಾವ್ | ೨೦೦೦ |
| ೧೭ | ಕನ್ನಡ ವಚನ ಸಂಗ್ರಹ | ವಿವಿಧ ಲೇಖಕರು | ಮಾತನ್ನದಿ–ಜ್ಯೋಲೆರ್ಲಿಂಗಂ | ತೆಲುಗು | ದೀವಿ ಸುಬ್ಬರಾವ್ | ೨೦೦೨ |
| ೧೮ | ಪರ್ವ (ಕಾದಂಬರಿ) | ಎಸ್.ಎಲ್.ಭೈರಪ್ಪ | ಪರುವಮ್ | ತಮಿಳು | ಪಾವನನ್ | ೨೦೦೪ |
| ೧೯ | ಪರ್ವ (ಕಾದಂಬರಿ) | ಎಸ್.ಎಲ್.ಭೈರಪ್ಪ | ಪರ್ವ | ತೆಲುಗು | ಗಂಗಿ ಸೆಟ್ಟಿ–ಲಕ್ಷ್ಮೀನಾರಾಯಣ | ೨೦೦೪ |
| ೨೦ | ಸಣ್ಣ ಕಥೆಗಳು (ಕಥಾಸಂಗಮ) | ಮಾಸ್ತಿ | ಮೊಟವಿಯೋ ಕತಾ | ಕೊಂಕಣಿ | ರಮೇಶ್ ಲಾಡ್ | ೨೦೦೫ |
| ೨೧ | ಧರ್ಮಶ್ರೀ(ಕಾದಂಬರಿ) | ಎಸ್.ಎಲ್.ಭೈರಪ್ಪ | ಧರ್ಮಶ್ರೀ | ಸಂಸ್ಕೃತ | ಜನಾರ್ಧನ್ ಹೆಗಡೆ | ೨೦೦೫ |
| ೨೨ | ಚಿದಂಬರ ರಹಸ್ಯ (ಕಾದಂಬರಿ) | ಕೆ.ಪಿ.ಪೂರ್ಣ ಚಂದ್ರ ತೇಜಸ್ವಿ | ಚಿದಂಬರ ರಹಸ್ಯಂ | ತಮಿಳು | ಪ.ಕೃಷ್ಣ ಮೂರ್ತಿ | ೨೦೦೫ |
| ೨೩ | ಸಣ್ಣ ಕಥೆಗಳು ೧೨–೧೩ | ಮಾಸ್ತಿ ವೆಂಕಟೇಶ್ ಅಯ್ಯಂಗಾರ್ | ಮಾಸ್ತಿ ಚಿನ್ನ ಕಥೆಗಳು | ತೆಲುಗು | ಜಿ.ಎಸ್.ಮೋಹನ್ | ೨೦೦೫ |
| ೨೪ | ಸಾರ್ಥ(ಕಾದಂಬರಿ) | ಎಸ್.ಎಲ್.ಭೈರಪ್ಪ | ಸಾರ್ಥ | ಸಂಸ್ಕೃತ | ಎಚ್.ವಿ. ನಾಗರಾಜರಾವ್ | ೨೦೦೬ |
| ೨೫ | ಸಂಸ್ಕಾರ | ಯು.ಆರ್. ಅನಂತಮೂರ್ತಿ | ಸಂಸ್ಕಾರ್ | ಮಣಿಪುರಿ | ವೈ.ಇಬೊಂಚ ಸಿಂಗ್ | ೨೦೦೮ |
| ೨೬ | ಹಯವದನ | ಗಿರೀಶ್ ಕಾರ್ನಾಡ್ | ಹಯವದನ್ | ನೇಪಾಳಿ | ಓಂ ನಾರಾಯಣ ಗುಪ್ತ | ೨೦೦೯ |
| ೨೭ | ಕಾವ್ಯಾರ್ಥ ಚಿಂತನ | ಜಿ.ಎಸ್.ಶಿವರುದ್ರಪ್ಪ | ಕಾವ್ಯಾರ್ಥ ಚಿಂತನ್ | ಹಿಂದಿ | ಬಾಲಚಂದ್ರ ಜೈ ಶೆಟ್ಟಿ | |
| ೨೮ | ಮರಳ ಮಣ್ಣಿಗೆ | ಶಿವರಾಮ ಕಾರಂತ | ಓಪ್ಜಾಯಾರ್ತಿ ಹಾಲ್ ಬೌಲಿ | ಅಸ್ಸಾಮಿ | ಅನುಪಮಾ ದತ್ತ ಸೈಕಿಯಾ | |
| ೨೯ | ದಾಟು | ಎಸ್.ಎಲ್.ಭೈರಪ್ಪ | ಶೀಮ್ ಹುಸ್ತಾನ | ಕೊಂಕಣಿ | ಅಲಕಾಸಿನಾಯ್ ಅಸೋಲ್ಡೇಕರ್ | |
| ೩೦ | ಆವರಣ | ಎಸ್.ಎಲ್.ಭೈರಪ | ಆವರಣಮ್ | ಸಂಸ್ಕೃತ | ಎಚ್.ಆರ್.ವಿಶ್ವಾಸ್ | |
| ೩೧ | ಸಿರಿಸಂಪಿಗೆ | ಚಂದ್ರಶೇಖರ ಕಂಬಾರ | ಸಿರಿಸಂಪಿಗೆ | ಉರ್ದು | ಮಹೆರ್ ಮನ್ಸೂರ್ | |
| ೩೨ | ಮಹಾಕವಿ ಗೋವಿಂದ ಪೈ | ಕಯ್ಯಾರ ಕಿಞ್ಞಣ್ಣರೈ | ಮಹಾಕವಿ ಗೋವಿಂದ ಪೈ | ಕೊಂಕಣ | ಎಲ್.ಸುನೀತಾ ಬಾಯಿ | |
| ೩೩ | ಅವಧೇಶ್ವರಿ | ಶಂಕರಲೋಕಾಶಿ ಪುಣೇಕರ | ಅವಧೇಶ್ವರಿ | ತಮಿಳು | ಇರೈಯಾದಿಯನ್ (ದಾಸ್) | |
| ೩೪ | ಭಾರತೀಪುರ | ಯು.ಆರ್. ಅನಂತಮೂರ್ತಿ | ಭಾರತೀಪುರ | ಇಂಗ್ಲಿಷ್ | ಸುಶೀಲಾ ಪುನೀತಾ | |

## ಪದ್ಮಶ್ರೀ

| ಕ್ರಮ ಸಂಖ್ಯೆ | ಪ್ರಶಸ್ತಿಗಳು ಮತ್ತು ಪ್ರಶಸ್ತಿ ವಿಜೇತರು | ವರ್ಷ |
|---|---|---|
| ೧ | ಶ್ರೀ ಹುಮಾಯೂನ್ ಮಿರ್ಜಾ | ೧೯೫೫ |
| ೨ | ಡಾ.ಎಂ.ಸಿ.ಮೋದಿ | ೧೯೫೬ |
| ೩ | ಡಾ. ಶಯ್ಯಾಲ ರಾಮಾಮೃತ ರಂಗನಾಥನ್ | ೧೯೫೭ |
| ೪ | ಶ್ರೀಮತಿ ದೇವಿಕಾರಾಣಿ ರೋರಿಕ್ | ೧೯೫೮ |
| ೫ | ಡಾ.ಮೇರಿ ರತ್ನಮ್ಮ ಐಸಾಕ್ | ೧೯೫೯ |
| ೬ | ಶ್ರೀ ಗಣೇಶ ಗೋವಿಂದ ಕಾರ್ನಿಸ್ | ೧೯೫೯ |
| ೭ | ಶ್ರೀ ಮ್ಯಾಥ್ಯು ಕಾಂಡತ್ತೈಲ್ ಮಥುಲ್ಲಾ | ೧೯೫೯ |
| ೮ | ಡಾ.ವೈದ್ಯನಾಥ ಸುಬ್ರಹ್ಮಣ್ಯನ್ | ೧೯೬೧ |
| ೯ | ಶ್ರೀ ಬಳ್ಳಾರಿ ಶಾಮಣ್ಣ ಕೇಶವನ್ | ೧೯೬೧ |
| ೧೦ | ಮಿಸ್ ಈವೆಂಜಿಲೈನ್ ಲಾಜರಸ್ | ೧೯೬೧ |
| ೧೧ | ಶ್ರೀ ಅಗರಂ ಕೃಷ್ಣಮಾಚಾರ್ | ೧೯೬೧ |
| ೧೨ | ಶ್ರೀ ವೀರಣ್ಣಗೌಡ ವೀರಬಸವನಗೌಡ ಪಾಟೀಲ | ೧೯೬೧ |
| ೧೩ | ಶ್ರೀ ವಿನಾಯಕ ಕೃಷ್ಣ ಗೋಕಾಕ್ | ೧೯೬೧ |
| ೧೪ | ಶ್ರೀ ಚನ್ನಪ್ಪ ಕೃಷ್ಣಪ್ಪ ವೆಂಕಟರಾಮಯ್ಯ | ೧೯೬೨ |
| ೧೫ | ಡಾ.ತಾನ್ಸೆ ಮಾಧವ ಅನಂತ ಪೈ | ೧೯೬೫ |
| ೧೬ | ಡಾ.ವಿಷ್ಣು ಮಾಧವ ಘಾಟ್ಗೆ | ೧೯೬೫ |
| ೧೭ | ಡಾ.ಸತೀಶ ಧವನ್ | ೧೯೬೬ |
| ೧೮ | ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ | ೧೯೬೬ |
| ೧೯ | ಶ್ರೀ ಸಂಗನ ಬಸಪ್ಪ ಮಲ್ಲನಗೌಡ ಪಾಟೀಲ | ೧೯೬೬ |
| ೨೦ | ಶ್ರೀ ಶಂಕರ್ ಲಕ್ಷ್ಮಣ್ | ೧೯೬೭ |
| ೨೧ | ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ | ೧೯೬೮ |
| ೨೨ | ಶ್ರೀ ದೊಂತಿ ನಾ.ಕೃಷ್ಣಯ್ಯ ಶೆಟ್ಟಿ | ೧೯೬೮ |
| ೨೩ | ಶ್ರೀಮತಿ ಸುಧಾ ವೆಂಕಟ ಶಿವರೆಡ್ಡಿ | ೧೯೬೮ |
| ೨೪ | ಡಾ.ಆರ್.ಬಸಪ್ಪಗೌಡ ಪಾಟೀಲ್ | ೧೯೬೯ |
| ೨೫ | ಶ್ರೀಮತಿ ಭೈರಪ್ಪ ಸರೋಜಾದೇವಿ ಶ್ರೀ ಹರ್ಷ | ೧೯೬೯ |
| ೨೬ | ಡಾ.ಪಿ.ನರಸಿಂಹಯ್ಯ | ೧೯೭೦ |
| ೨೭ | ಶ್ರೀ ಇ.ಅನಂತರಾವ್ ಎಸ್.ಪ್ರಸನ್ನ | ೧೯೭೦ |
| ೨೮ | ಶ್ರೀ ಘನಶ್ಯಾಮ್ ದಾಸ್ ಗೋಯಲ್ | ೧೯೭೦ |
| ೨೯ | ಶ್ರೀ ಮಲ್ಲಿಕಾರ್ಜುನ್ ಮನ್ಸೂರ್ | ೧೯೭೦ |
| ೩೦ | ಶ್ರೀ ಬಸಪಟ್ಟಣ ನಾ.ಬಾಲಕೃಷ್ಣರಾವ್ | ೧೯೭೧ |
| ೩೧ | ಕು.ಶಾಂತಾರಾವ್ | ೧೯೭೧ |
| ೩೨ | ಶ್ರೀ ರಾಯ್ ಮದನ್ ಮೇರಿ ಥಿಯೋದೇಸಾಯ್ | ೧೯೭೧ |
| ೩೩ | ಶ್ರೀ ಗುಂಡಪ್ಪ ರಂಗನಾಥ ವಿಶ್ವನಾಥ್ | ೧೯೭೧ |
| ೩೪ | ಡಾ.ಗುಬ್ಬಿ ಹಂಪಣ್ಣ ವೀರಣ್ಣ | ೧೯೭೨ |
| ೩೫ | ಡಾ.ರವಿವರ್ಮ ಮಾರ್ತಾಂಡವರ್ಮ | ೧೯೭೨ |
| ೩೬ | ಶ್ರೀ ಸುಬ್ರಮಣ್ಯ ಚಂದ್ರಶೇಖರ್ | ೧೯೭೨ |
| ೩೭ | ಶ್ರೀ ಹರಿಪ್ರಸಾದ್ ಜಸ್ವಾಲ್ | ೧೯೭೨ |
| ೩೮ | ಶ್ರೀ ಪಾಲಹಳ್ಳಿ ಸೀತಾರಾಮಯ್ಯ | ೧೯೭೨ |
| ೩೯ | ಕು.ಕೋದಂಡ ರೋಹಿಣಿ ಪೂವಯ್ಯ | ೧೯೭೩ |
| ೪೦ | ಪ್ರೋ.ಗೋವಿಂದ ಸ್ವರೂಪ್ | ೧೯೭೩ |
| ೪೧ | ಶ್ರೀ ಚಿನ್ನಸ್ವಾಮಿ ರಾಜನ್ ಸುಬ್ರಹ್ಮಣ್ಯ | ೧೯೭೩ |
| ೪೨ | ಶ್ರೀ ಹರಿಶ್ಚಂದ್ರ ಕಾಶಾಂತ್ ಕರ್ವೆ | ೧೯೭೩ |
| ೪೩ | ಡಾ.ಸೀತಾರಾಮರಾವ್ ವಲ್ಲೂರಿ | ೧೯೭೪ |
| ೪೪ | ಶ್ರೀ ಗಿರೀಶ್ ಕಾರ್ನಾಡ್ | ೧೯೭೪ |
| ೪೫ | ಶ್ರೀ ಕಲ್ಲೂರಿ ಗೋಪಾಲರಾವ್ | ೧೯೭೪ |
| ೪೬ | ಡಾ. ಸ್ಟಾನ್ ಲೆ ಜಾನ್ | ೧೯೭೫ |
| ೪೭ | ಶ್ರೀ ಬಸವರಾಜ ರಾಜಗುರು | ೧೯೭೫ |
| ೪೩ | ಡಾ.ಸೀತಾರಾಮರಾವ್ ವಲ್ಲೂರಿ | ೧೯೭೪ |
| ೪೪ | ಶ್ರೀ ಗಿರೀಶ್ ಕಾರ್ನಾಡ್ | ೧೯೭೪ |
| ೪೫ | ಶ್ರೀ ಕಲ್ಲೂರಿ ಗೋಪಾಲರಾವ್ | ೧೯೭೪ |
| ೪೬ | ಡಾ. ಸ್ಟಾನ್ ಲೆ ಜಾನ್ | ೧೯೭೫ |
| ೪೭ | ಶ್ರೀ ಬಸವರಾಜ ರಾಜಗುರು | ೧೯೭೫ |
| ೪೮ | ಶ್ರೀ ನಾಗೇಂದ್ರ ರಟ್ಟೀಹಳ್ಳರಾವ್ | ೧೯೭೬ |
| ೪೯ | ಡಾ.ಮಾಧವ ಧನಂಜಯ ಗಾಡ್ಗಿಲ್ | ೧೯೮೧ |
| ೫೦ | ಶ್ರೀ ಬಿ.ವಿ.ಕಾರಂತ | ೧೯೮೧ |
| ೫೧ | ಡಾ.ಕೃಷ್ಣಸ್ವಾಮಿ ಕಸ್ತೂರಿ ರಂಗನ್ | ೧೯೮೨ |
| ೫೨ | ಶ್ರೀ ಪ್ರಕಾಶ್ ರಮೇಶ್ ಪಡುಕೋಣೆ | ೧೯೮೨ |
| ೫೩ | ಶ್ರೀ ಸಯ್ಯದ್ ಎಂ.ಎಚ್.ಕಿರ್ಮಾನಿ | ೧೯೮೨ |
| ೫೪ | ಶ್ರೀ ವಕ್ಕಲೇರಿ ನಾರಾಯಣರಾವ್ | ೧೯೮೨ |
| ೫೫ | ಶ್ರೀ ನೀಲಾಂಬರ್ ಪಂತ್ | ೧೯೮೪ |
| ೫೬ | ಮೇಜರ್ ಸೋಮನಾಥ್ ಭಾಸ್ಕರ್ | ೧೯೮೫ |
| ೫೭ | ಶ್ರೀ ಗೋವಿಂದ ಭೀಮಾಚಾರ್ಯ ಜೋಶಿ | ೧೯೮೬ |
| ೫೮ | ಡಾ.ದೇವಿ ಪ್ರಸನ್ನ ಪಟ್ನಾಯಕ್ | ೧೯೮೭ |
| ೫೯ | ಡಾ.ರಾಮದಾಸ್ ಪಾಣಿ ಮಂಗಳೂರು ಶೆಣೈ | ೧೯೮೭ |
| ೬೦ | ಶ್ರೀಮತಿ ಚಿಂದೋಡಿ ಲೀಲಾ | ೧೯೮೮ |
| ೬೧ | ಕು.ಕಿರಣ್ ಮಜುಂದಾರ್ | ೧೯೮೯ |
| ೬೨ | ಪ್ರೋ.ಮಲ್ಲಪ್ಪ ಕೃಷ್ಣಭಾರ್ಗವ | ೧೯೯೦ |
| ೬೩ | ಡಾ.ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ | ೧೯೯೧ |
| ೬೪ | ಡಾ.ಪುರೋಹಿತ ತಿರುನಾರಾಯಣ ಅಯ್ಯಂಗಾರ್ | ೧೯೯೧ |
| ೬೫ | ಪ್ರೋ.ಗೋವಿಂದರಾಜನ್ ಪದ್ಮನಾಭನ್ | ೧೯೯೧ |
| ೬೬ | ಶ್ರೀ ಬಿ.ಕೆ.ಸುಂದರರಾಜ ಅಯ್ಯಂಗಾರ್ | ೧೯೯೧ |
| ೬೭ | ಶ್ರೀ ರಮೇಶ್ ಗಿಲ್ಲಿ | ೧೯೯೧ |
| ೬೮ | ಶ್ರೀ ರುದ್ರಾರಾಧ್ಯ ಮುದ್ದು ಬಸವಾರಾಧ್ಯ | ೧೯೯೧ |
| ೬೯ | ಡಾ.ಮನಮೋಹನ್ ಅತ್ತಾವರ್ | ೧೯೯೮ |
| ೭೦ | ಸಿಸ್ಟರ್ ಲಿಯೋನಾರ್ಡ ಅಂಜೇಲಾ ಕಾಸಿರಾಗಿ | ೧೯೯೮ |

| | | |
|---|---|---|
| ೭೧ | ಡಾ.ಹನುಮಪ್ಪ ಸುದರ್ಶನ್ | ೨೦೦೦ |
| ೭೨ | ಶ್ರೀ ಅಲ್ಯುಸೀಸ್ ಪ್ರಕಾಶ್ ಫರ್ನಾಂಡಿಸ್ | ೨೦೦೦ |
| ೭೩ | ಶ್ರೀ ನಾಗವಾರ ರಾಮರಾವ್ ನಾರಾಯಣಮೂರ್ತಿ | ೨೦೦೦ |
| ೭೪ | ಡಾ.ಚಂದ್ರಶೇಖರ ಬಸವಣ್ಣಪ್ಪ ಕಂಬಾರ್ | ೨೦೦೧ |
| ೭೫ | ಡಾ ಚಂದ್ರದಿಲ್ ಗೌರಿ ಕೃಷ್ಣದಾಸ್ ನಾಯರ್ | ೨೦೦೧ |
| ೭೬ | ಡಾ.ದೇವೇಗೌಡ ಜನರೇಗೌಡ | ೨೦೦೧ |
| ೭೭ | ಡಾ.ಪ್ರೇಮಶಂಕರ್ ಗೋಯಲ್ | ೨೦೦೧ |
| ೭೮ | ಮಿಸ್.ಮಾಲತಿ ಕೃಷ್ಣಮೂರ್ತಿ ಹೊಳ್ಳ | ೨೦೦೧ |
| ೭೯ | ಪ್ರೋ.ಗೋವರ್ಧನ ಮೆಹತಾ | ೨೦೦೧ |
| ೮೦ | ಪ್ರೊ.ತಿರುಪ್ಪಾತ್ತೂರ್ ವೆಂಕಟಾಚಲಮೂರ್ತಿ ರಾಮಕೃಷ್ಣ | ೨೦೦೧ |
| ೮೧ | ಶ್ರೀ ಮಹೇಶ್ ಭೂಪತಿ | ೨೦೦೧ |
| ೮೨ | ಡಾ.ಕೋಟಾ ಹರಿನಾರಾಯಣ | ೨೦೦೨ |
| ೮೩ | ಪ್ರೋ ನಾರಾಯಣಸ್ವಾಮಿ ಬಾಲಕೃಷ್ಣನ್ | ೨೦೦೨ |
| ೮೪ | ಪ್ರೋ.ಪದ್ಮನಾಭನ್ ಬಲರಾಂ | ೨೦೦೨ |
| ೮೫ | ಪ್ರೋ.ರಾಮನಾಥ್ ಕೌಶಿಕ್ | ೨೦೦೨ |
| ೮೬ | ಶ್ರೀ ವಾದಿರಾಜ ರಾಘವೇಂದ್ರ ಕಟ್ಟಿ | ೨೦೦೨ |
| ೮೭ | ಡಾ.ದೇವಿಪ್ರಸಾದ ಶೆಟ್ಟಿ | ೨೦೦೪ |
| ೮೮ | ಡಾ.ಸಾಮ್ಯುಯಲ್ ಪೌಲ್ | ೨೦೦೪ |
| ೮೯ | ಡಾ.ಸಯ್ಯದ್ ಷಾ ಮೊಹಮದ್ ಹುಸೇನಿ | ೨೦೦೪ |
| ೯೦ | ಡಾ. ತುಮಕೂರು ಸೀತಾರಾಮಯ್ಯ ಪ್ರಹ್ಲಾದ್ | ೨೦೦೪ |
| ೯೧ | ಡಾ.ವಿಶ್ವೇಶ್ವರಯ್ಯ ಪ್ರಕಾಶ | ೨೦೦೪ |
| ೯೨ | ಪ್ರೋ.ಮಮನ್ನಮನ ವಿಜಯನ್ | ೨೦೦೪ |
| ೯೩ | ಶ್ರೀ ಬಚ್ಚು ಲಚ್ಚಮಯ್ಯ ಶ್ರೀನಿವಾಸಮೂರ್ತಿ | ೨೦೦೪ |
| ೯೪ | ಶ್ರೀ ಕದ್ರಿ ಗೋಪಾಲನಾಥ್ | ೨೦೦೪ |
| ೯೫ | ನಳಿನಿ ರಂಜನ್ ಮೊಹಂತಿ | ೨೦೦೪ |
| ೯೬ | ಶ್ರೀ ರಾಹುಲ್ ದ್ರಾವಿಡ್ | ೨೦೦೪ |
| ೯೭ | ಪ್ರೋ.ಭಗವತುಲ ದತ್ತಗುರು | ೨೦೦೫ |
| ೯೮ | ಪ್ರೋ.ಮಾದಪ್ಪ ಮಹದೇವಪ್ಪ | ೨೦೦೫ |
| ೯೯ | ಶ್ರೀ ಅನಿಲ್ ಕುಂಬ್ಳೆ | ೨೦೦೫ |
| ೧೦೦ | ಶ್ರೀ ಕೆ.ಸಿ.ರೆಡ್ಡಿ | ೨೦೦೫ |
| ೧೦೧ | ಶ್ರೀಮತಿ ಕವಿತಾ ಕೃಷ್ಣಮೂರ್ತಿ | ೨೦೦೫ |
| ೧೦೨ | ಡಾ.ದೇವಪ್ಪಗೌಡ ಚಿನ್ನಯ್ಯ | ೨೦೦೬ |
| ೧೦೩ | ಪ್ರೋ.ನರೇಂದ್ರಕುಮಾರ್ | ೨೦೦೬ |
| ೧೦೪ | ಶ್ರೀಮತಿ ಸುಧಾ ಮೂರ್ತಿ | ೨೦೦೬ |
| ೧೦೫ | ಶ್ರೀ ಅಭಿನೇಶ್ ಮೈಕಲ್ ಫರ್ನಾಂಡಿಸ್ | ೨೦೦೬ |

| | | |
|---|---|---|
| ೧೦೬ | ಡಾ.ಮಂಜುನಾಥ್‌ಚೋಳೇನಹಳ್ಳಿ ನಂಜಪ್ಪ | ೨೦೦೭ |
| ೧೦೭ | ಡಾ.ತೆಕ್ಕಿಡಲ್ ಕೋಚಂಡಿ ಅಲೆಕ್ಸ್ | ೨೦೦೭ |
| ೧೦೮ | ಪ್ರೊ.(ಡಾ) ಖುರಾಕ್ಸಿಂಗ್ ವಾಲ್ದಿಯಾ | ೨೦೦೭ |
| ೧೦೯ | ಶ್ರೀ ವಿ.ಆರ್. ಗೌರಿಶಂಕರ್ | ೨೦೦೮ |
| ೧೧೦ | ಪ್ರೊ.(ಡಾ) ಕೆ.ಎಸ್.ನಿಸಾರ್ ಅಹಮದ್ | ೨೦೦೮ |
| ೧೧೧ | ಶ್ರೀ ಶಶಿ ದೇಶಪಾಂಡೆ | ೨೦೦೯ |
| ೧೧೨ | ಶ್ರೀ ಪಂಕಜ್ ಅದ್ವಾನಿ | ೨೦೦೯ |
| ೧೧೩ | ಡಾ.ಬನ್ನಂಜೆ ಗೋವಿಂದಾಚಾರ್ಯ | ೨೦೦೯ |
| ೧೧೪ | ಡಾ.ಮತ್ತೂರು ಕೃಷ್ಣಮೂರ್ತಿ | ೨೦೦೯ |
| ೧೧೫ | ಡಾ.ಬವಗುತ್ತು ರಘುರಾಮ್ ಶೆಟ್ಟಿ | ೨೦೦೯ |
| ೧೧೬ | ಶ್ರೀಮತಿ ಅರುಂಧತಿ ನಾಗ್ | ೨೦೧೦ |
| ೧೧೭ | ಡಾ.ಬಿ.ರಮಣರಾವ್ | ೨೦೧೦ |
| ೧೧೮ | ಪ್ರೋ.ಕೊಡಗನೂರುಎಸ್.ಗೋಪಿನಾಥ್ | ೨೦೧೦ |
| ೧೧೯ | ಪ್ರೋ. ಎಂ.ಆರ್.ಸತ್ಯನಾರಾಯಣರಾವ್ | ೨೦೧೦ |
| ೧೨೦ | ಡಾ.ವಿಜಯಲಕ್ಷ್ಮಿ ರವಿಂದ್ರನಾಥ್ | ೨೦೧೦ |
| ೧೨೧ | ಗಿರೀಶ್ ಕಾಸರವಳ್ಳಿ | ೨೦೧೧ |
| ೧೨೨ | ಸೂಮಿತಾ ಚಂಡಿ | ೨೦೧೧ |
| ೧೨೩ | ಅನಿತಾ ರೆಡ್ಡಿ | ೨೦೧೧ |
| ೧೨೪ | ಅನಂತ್ ದರ್ಶನ್ ಶಂಕರ್ | ೨೦೧೧ |
| ೧೨೫ | ಪ್ರೊ.ಎಂ.ಅಣ್ಣಾಮಲೈ | ೨೦೧೧ |
| ೧೨೬ | ಆರ್.ನಾಗರತ್ನಮ್ಮ | ೨೦೧೨ |
| ೧೨೭ | ಡಾ.ಯಜ್ಞಸ್ವಾಮಿ ಸುಂದರರಾಜನ್ | ೨೦೧೨ |
| ೧೨೮ | ಡಾ.ಕೆ.ಉಲ್ಲಾಸ ಕಾರಂತ್ | ೨೦೧೨ |
| ೧೨೯ | ರಾಮಚಂದ್ರಸುಬ್ಬರಾಯ ಹೆಗಡೆ ಚಿಟ್ಟಾಣಿ | ೨೦೧೨ |
| ೧೩೦ | ಬಿ.ಜಯಶ್ರೀ | ೨೦೧೩ |
| ೧೩೧ | ಕೃಷ್ಣಸ್ವಾಮಿ ವಿಜಯ ರಾಘವನ್ | ೨೦೧೩ |
| ೧೩೨ | ಎಚ್.ಎನ್.ಗಿರೀಶ್ | ೨೦೧೩ |
| ೧೩೩ | ಪ್ರೊ. ಅಜಯ್ ಕೆ. ಸೂದ್ | ೨೦೧೩ |
| ೧೩೪ | ಡಾ॥ ಕಾಮಿನಿ ರಾವ್ | ೨೦೧೪ |
| ೧೩೫ | ಪ್ರೊ. ಎಳುವತ್ತಿಂಗಲ್ ದೇವಸ್ಯೆ ಜೆಮ್ಮಿಸ್ | ೨೦೧೪ |
| ೧೩೬ | ಹೆಚ್.ಬೋನಿಫೇಸ್ ಪ್ರಭು | ೨೦೧೪ |
| ೧೩೭ | ಎಚ್.ಅರುಣನ್ | ೨೦೧೫ |
| ೧೩೮ | ವಸಂತಶಾಸ್ತ್ರೀ | ೨೦೧೫ |
| ೧೩೯ | ಎಸ್.ಎಸ್.ರಾಜಮೌಳಿ | ೨೦೧೬ |
| ೧೪೦ | ಎಂ.ವೆಂಕಟೇಶಕುಮಾರ್ | ೨೦೧೬ |
| ೧೪೧ | ಡಾ॥ ಎಸ್.ಎಲ್.ಭೈರಪ್ಪ | ೨೦೧೬ |
| ೧೪೨ | ಡಾ॥ ಜಾನ್ ಎಟನೈಜರ್ | ೨೦೧೬ |
| ೧೪೩ | ಡಾ॥ ಎಚ್.ಆರ್. ನಾಗೇಂದ್ರ | ೨೦೧೬ |
| ೧೪೪ | ಡಾ॥ ಎಂ.ಅಣ್ಣಾಮಲೈ | ೨೦೧೬ |
| ೧೪೫ | ಎಂ.ಪಂಡಿತದಾಸ | ೨೦೧೬ |

## ಪದ್ಮಭೂಷಣ


| ಕ್ರಮ ಸಂಖ್ಯೆ | ಪ್ರಶಸ್ತಿಗಳು ಮತ್ತು ಪ್ರಶಸ್ತಿ ವಿಜೇತರು | ವರ್ಷ |
|---|---|---|
| ೧ | ಶ್ರೀ ಕೆ.ಎಸ್.ತಿಮ್ಮಯ್ಯ | ೧೯೫೪ |
| ೨ | ಶ್ರೀ ವಿ.ನರಹರಿರಾವ್ | ೧೯೫೪ |
| ೩ | ಶ್ರೀ ಕೆ.ವಿ.ಪುಟ್ಟಪ್ಪ (ಕುವೆಂಪು) | ೧೯೫೮ |
| ೪ | ಶ್ರೀ ನಾರಾಯಣ ಸುಬ್ಬರಾವ್ ಹರ್ಡಿಕರ್ | ೧೯೫೮ |
| ೫ | ಶ್ರೀ ಮೈಸೂರು ವಾಸುದೇವಾಚಾರ್ಯ | ೧೯೫೯ |
| ೬ | ಶ್ರೀ ಸ್ವೆತೋಸ್ಲಾವ್ ರೋರಿಕ್ | ೧೯೬೧ |
| ೭ | ಶ್ರೀ ಆರ್.ಕೆ.ನಾರಾಯಣ್ | ೧೯೬೪ |
| ೮ | ಡಾ.ಡಿ.ಸಿಪಾವಟೆ | ೧೯೬೭ |
| ೯ | ಡಾ.ಕೆ.ಶಿವರಾಮ ಕಾರಂತ | ೧೯೬೮ |
| ೧೦ | ಡಾ.ಮುರುಗೆಪ್ಪ ಚನ್ನವೀರಪ್ಪ ಮೋದಿ | ೧೯೬೮ |
| ೧೧ | ಡಾ.ಪ್ರಭುಲಾಲ್ ಭಟ್ನಾಗರ್ | ೧೯೬೮ |
| ೧೨ | ಶ್ರೀಮತಿ ಗಂಗೂಬಾಯಿ ಹಾನಗಲ್ | ೧೯೭೧ |
| ೧೩ | ಡಾ.ಸತೀಶ್ ದವನ್ | ೧೯೭೧ |
| ೧೪ | ಶ್ರೀ ಸಿ.ಸಿ.ಬೇವೂರ್ | ೧೯೭೨ |
| ೧೧ | ಶ್ರೀ ಕೃಷ್ಣಸ್ವಾಮಿ ಕಸ್ತೂರಿರಂಗನ್ | ೨೦೦೦ |
| ೧೨ | ಶ್ರೀಮತಿ ಗಂಗೂಬಾಯಿ ಹಾನಗಲ್ | ೨೦೦೨ |
| ೧೩ | ಮನಪಲ್ಲಿ ನಾರಾಯಣರಾವ್ ವೆಂಕಟಾಚಲಯ್ಯ | ೨೦೦೪ |
| ೧೪ | ಶ್ರೀ ಮಾರ್ತಾಂಡವರ್ಮ ಶಂಕರಮ್ ವಲ್ಲಿತಾನ್ | ೨೦೦೫ |
| ೧೫ | ಶ್ರೀಮೊಹಮ್ಮದ್ ಹಯಾತ್ | ೧೯೭೨ |
| ೧೬ | ಶ್ರೀ ಆದ್ಯರಂಗಾಚಾರ್ಯ | ೧೯೭೨ |
| ೧೭ | ಶ್ರೀ ಟಿ.ಎಂ.ಎ.ಪೈ | ೧೯೭೨ |
| ೧೮ | ಯಶೋಧರ ದಾಸಪ್ಪ | ೧೯೭೨ |
| ೧೯ | ಶ್ರೀ ಆರ್.ಎಂ.ಮಜುಂದಾರ್ | ೧೯೭೩ |
| ೨೦ | ಡಾ.ಅರುಣಾಚಲ ಶ್ರೀನಿವಾಸನ್ | ೧೯೭೪ |
| ೨೧ | ಡಾ.ಡಿ.ವಿ.ಗುಂಡಪ್ಪ | ೧೯೭೪ |
| ೨೨ | ಶ್ರೀ ಮಲ್ಲಿಕಾರ್ಜುನ ಮನ್ಸೂರ್ | ೧೯೭೬ |
| ೨೩ | ಪ್ರೋ.ಉಡುಪಿ ರಾಮಚಂದ್ರರಾವ್ | ೧೯೭೬ |
| ೨೪ | ಡಾ.ಮೈಸೂರು ನರಸಿಂಹಾಚಾರ್ ಶ್ರೀನಿವಾಸ | ೧೯೭೭ |
| ೨೫ | ಡಾ.ವಿ.ದೊರೈಸ್ವಾಮಿ ಐಯ್ಯಂಗಾರ್ | ೧೯೮೩ |
| ೨೬ | ಡಾ.ರಾಜಕುಮಾರ | ೧೯೮೩ |
| ೨೭ | ಡಾ.ಹೆಚ್.ನರಸಿಂಹಯ್ಯ | ೧೯೮೪ |
| ೨೮ | ಪ್ರೊ.ಶಿವರಾಜ್ ರಾಮಶೇಷನ್ | ೧೯೮೫ |
| ೨೯ | ಶ್ರೀ ರೊದ್ದಮ್ ನರಸಿಂಹ | ೧೯೮೭ |
| ೩೦ | ಶ್ರೀ ಕ್ಲೋಸ್ ಪೇಟ್ ದಾಸಪ್ಪ ನರಸಿಂಹಯ್ಯ | ೧೯೯೦ |
| ೩೧ | ಡಾ.ಬಸವರಾಜ ರಾಜಗುರು | ೧೯೯೧ |
| ೩೨ | ಡಾ.ಕಡೂರು ವೆಂಕಟಲಕ್ಷ್ಮಮ್ಮ | ೧೯೯೨ |
| ೩೩ | ಶ್ರೀಮತಿ ಬಿ.ಸರೋಜದೇವಿ | ೧೯೯೨ |
| ೩೪ | ಡಾ.ಗಿರೀಶ್ ಕಾರ್ನಾಡ್ | ೧೯೯೨ |
| ೩೫ | ಡಾ.ಕೃಷ್ಣಸ್ವಾಮಿ ಕಸ್ತೂರಿ ರಂಗನ್ | ೧೯೯೨ |
| ೩೬ | ಡಾ.ಯು.ಆರ್.ಅನಂತಮೂರ್ತಿ | ೧೯೯೮ |
| ೩೭ | ಪ್ರೋ.ವೈದೇಶ್ವರನ್ ರಾಜಾರಾಮ್ | ೧೯೯೮ |
| ೩೮ | ಶಿವರಾಮಕೃಷ್ಣ ಚಂದ್ರಶೇಖರ | ೧೯೯೮ |
| ೩೯ | ಶ್ರೀ. ಡಿ.ವೀರೇಂದ್ರ ಹೆಗಡೆ | ೨೦೦೦ |
| ೪೦ | ಶ್ರೀ ಫಕ್ಕೀರಿ ಸ್ವಾಮಿ ಚಂದ್ರಶೇಖರನ್ | ೨೦೦೦ |
| ೪೧ | ಶ್ರೀ ಲಕ್ಷ್ಮೀ ನಾರಾಯಣ ಸುಬ್ರಹ್ಮಣ್ಯಂ | ೨೦೦೧ |
| ೪೨ | ಶ್ರೀ ಆರ್ಕಾಟ್ ರಾಮಚಂದ್ರನ್ | ೨೦೦೩ |
| ೪೩ | ಪ್ರೋ.ರಾಜೇಂದರ್ ಕುಮಾರ್ | ೨೦೦೩ |
| ೪೪ | ಶ್ರೀ ಗೋವಿಂದರಾಜನ್ ಪದ್ಮನಾಭನ್ | ೨೦೦೪ |
| ೪೫ | ಶ್ರೀಮತಿ ಕಿರಣ್ ಮಜುಮ್ ದಾರ್ ಶಹಾ | ೨೦೦೫ |
| ೪೬ | ಶ್ರೀ ಅಜೀಜ್ ಪ್ರೇಮ್ ಜಿ | ೨೦೦೫ |
| ೪೭ | ಡಾ.ನರಸಿಂಹಯ್ಯ ಶೇಷಗಿರಿ | ೨೦೦೫ |
| ೪೮ | ಶ್ರೀ ಮನ್ನಾಡೆ | ೨೦೦೫ |
| ೪೯ | ಶ್ರೀ ಸತೀಶ್ ಚಂದ್ರನ್ | ೨೦೦೫ |
| ೫೦ | ಡಾ.ದೇವಕಿ ಜೈನ್ | ೨೦೦೬ |
| ೫೧ | ಡಾ.ಎನ್.ಎಸ್.ರಾಮಸ್ವಾಮಿ | ೨೦೦೬ |
| ೫೨ | ಶ್ರೀ ಕೆ.ಪಿ.ಪಿ.ನಂಬಿಯಾರ್ | ೨೦೦೬ |
| ೫೩ | ಶ್ರೀ ಪಿ.ಎಸ್.ಅಪ್ಪು | ೨೦೦೬ |
| ೫೪ | ಶ್ರೀ ನಂದನ್ ನೀಲೇಕಣಿ | ೨೦೦೬ |
| ೫೫ | ಶ್ರೀ ಕೆ.ವಿ.ಕಾಮತ್ | ೨೦೦೮ |
| ೫೬ | ಶ್ರೀ ರಾಮಚಂದ್ರ ಗುಂಗ | ೨೦೦೯ |
| ೫೭ | ಶ್ರೀ ಪುಟ್ಟರಾಜ ಗ್ವಾಯಿ | ೨೦೧೦ |
| ೫೮ | ಶ್ರೀ ಬೆಳ್ಳೆ ಮೊನಪ್ಪ ಹೆಗಡೆ | ೨೦೧೦ |
| ೫೯ | ಶ್ರೀ ಬಾಲಗಂಗಾಧರನಾಥ ಸ್ವಾಮಿಜಿ | ೨೦೧೦ |
| ೬೦ | ಶ್ರೀ ರುದ್ರಪಟ್ಟಣ ಕೃಷ್ಣ ಎಸ್.ಶ್ರೀಕಂಠನ್ | ೨೦೧೧ |
| ೬೧ | ಶ್ರೀ ಕ್ರಿಸ್ ಗೋಪಾಲಕೃಷ್ಣನ್ | ೨೦೧೧ |
| ೬೨ | ಟಿ.ಜೆ.ಎಸ್ ಜಾರ್ಜ್ | ೨೦೧೧ |
| ೬೩ | ರಾಮದಾಸ್ ಮಾಧವ ಪೈ | ೨೦೧೧ |
| ೬೪ | ಡಾ.ದೇವಿಪ್ರಸಾದ್ ಶೆಟ್ಟಿ | ೨೦೧೨ |
| ೬೫ | ಡಾ|| ಬಿ.ಎನ್.ಸುರೇಶ್ | ೨೦೧೩ |
| ೬೬ | ರಾಹುಲ್ ದ್ರಾವಿಡ | ೨೦೧೩ |
| ೬೭ | ಪ್ರೊ. ಪದ್ಮನಾಭನ್ ಬಲರಾಂ | ೨೦೧೪ |
| ೬೮ | ಡಾ|| ಮಾದಪ್ಪ ಮಹದೇವಪ್ಪ | ೨೦೧೪ |
| ೬೯ | ಡಾ|| ರಾಧಾಕೃಷ್ಣನ್.ಕೆ | ೨೦೧೪ |
| ೭೦ | ಡಾ|| ಶಿವಕುಮಾರ ಸ್ವಾಮಿ | ೨೦೧೫ |
| ೭೧ | ಡಾ|| ಖರಗ್ ಸಿಂಗ್ ವಾಲ್ದಿಯಾ | ೨೦೧೫ |
| ೭೨ | ಟಿ.ವಿ.ಲೋಹನ ದಾಸ ಪೈ | ೨೦೧೫ |

## ಪದ್ಮ ವಿಭೂಷಣ

| ಕ್ರ. ಸಂ. | ಪ್ರಶಸ್ತಿ ವಿಜೇತರು | ವರ್ಷ |
|---|---|---|
| ೧ | ಡಾ.ವಿ.ಕಸ್ತೂರಿರಂಗ ವರದರಾಜರಾವ್ | ೧೯೭೪ |
| ೨ | ಡಾ.ರಾಜಾರಾಮಣ್ಣ | ೧೯೭೫ |
| ೩ | ಡಾ.ಸತೀಶ್ ದವನ್ | ೧೯೮೧ |
| ೪ | ಪ್ರೋ.ಸಿ.ಎನ್.ಆರ್.ರಾವ್ | ೧೯೮೫ |
| ೫ | ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ | ೧೯೮೭ |
| ೬ | ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು) | ೧೯೮೮ |
| ೭ | ಶ್ರೀ ಕುಮಾರ ಗಂಧರ್ವ | ೧೯೯೦ |
| ೮ | ಶ್ರೀ ತ್ರಿಲೋಕನಾಥ ಚತುರ್ವೇದಿ | ೧೯೯೦ |
| ೯ | ಡಾ.ಮಲ್ಲಿಕಾರ್ಜುನ ಭೀಮರಾಯಪ್ಪ ಮನ್ಸೂರ್ | ೧೯೯೨ |
| ೧೦ | ಶ್ರೀ ಭೀಮಸೇನ ಜೋಶಿ | ೧೯೯೯ |
| ೧೧ | ಶ್ರೀ ಕೃಷ್ಣಸ್ವಾಮಿ ಕಸ್ತೂರಿರಂಗನ್ | ೨೦೦೦ |
| ೧೨ | ಶ್ರೀಮತಿ ಗಂಗೂಬಾಯಿ ಹಾನಗಲ್ | ೨೦೦೨ |
| ೧೩ | ಮನಪಲ್ಲಿ ನಾರಾಯಣರಾವ್ ವೆಂಕಟಾಚಲಯ್ಯ | ೨೦೦೪ |
| ೧೪ | ಶ್ರೀ ಮಾರ್ತಾಂಡವರ್ಮ ಶಂಕರಮ್ ವಲ್ಲಿತಾನ್ | ೨೦೦೫ |
| ೧೫ | ಶ್ರೀ ಒಬೈಡ್ ಸಿದ್ಧೀಖಿ | ೨೦೦೬ |
| ೧೬ | ಶ್ರೀ ರಾಜಾರಾವ್ | ೨೦೦೭ |
| ೧೭ | ಶ್ರೀ ನಾರಾಯಣ ಮೂರ್ತಿ | ೨೦೦೮ |
| ೧೮ | ಶ್ರೀ ಜಿ.ಮಾಧವ ನಾಯರ್ | ೨೦೦೯ |
| ೧೯ | ಶ್ರೀ ಅಜೀಮ್ ಪ್ರೇಮ್‌ಜಿ | ೨೦೧೧ |
| ೨೦ | ಪ್ರೊ॥ ರೊದ್ದಂ ನರಸಿಂ | ೨೦೧೩ |
| ೨೧ | ಬಿ.ಕೆ.ಎಸ್. ಅಯ್ಯಂಗಾರ್ | ೨೦೧೪ |
| ೨೨ | ಡಿ.ವೀರೇಂದ್ರ ಹೆಗ್ಗಡೆ | ೨೦೧೫ |
| ೨೩ | ವಿ.ಕೆ.ಅತ್ರೆ | ೨೦೧೬ |
| ೨೪ | ಶ್ರೀ.ಶ್ರೀ.ರವಿಶಂಕರ್ | ೨೦೧೬ |


ಆದಿಕವಿ ಪಂಪ



ಮಹಾಕವಿ ರನ್ನ



ಕವಿ ಹರಿಹರ

## ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದ ದಿಗ್ಗಜರು


ಡಾ. ಕುವೆಂಪು
ಶ್ರೀರಾಮಾಯಣ ದರ್ಶನಂ–1967


ಡಾ. ದ.ರಾ.ಬೇಂದ್ರೆ
ನಾಕುತಂತಿ – 1973


ಡಾ. ಶಿವರಾಮ ಕಾರಂತ
ಮೂಕಜ್ಜಿಯ ಕನಸುಗಳು–1977


ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್
ಚಿಕ್ಕವೀರ ರಾಜೇಂದ್ರ – 1983


ಡಾ. ವಿ.ಕೃ.ಗೋಕಾಕ್
ಸಮಗ್ರ ಸಾಹಿತ್ಯ – 1990


ಡಾ. ಯು.ಆರ್.ಅನಂತಮೂರ್ತಿ
ಸಮಗ್ರ ಸಾಹಿತ್ಯ – 1994


ಡಾ. ಗಿರೀಶ್ ಕಾರ್ನಾಡ್
ಸಮಗ್ರ ಸಾಹಿತ್ಯ – 1998


ಡಾ. ಚಂದ್ರಶೇಖರ ಕಂಬಾರ
ಸಮಗ್ರ ಸಾಹಿತ್ಯ – 2009

* * * * *